# ಕರ್ನಾಟಕದ ಇತಿಹಾಸ



ಸಂಪಾದಕರು

ಧನಂಜಯ ಪಿ.ಎಸ್

**M.A, B.Ed.**

ಪುರವರ, ಮಧುಗಿರಿ ತಾ||. ತುಮಕೂರು ಜಿಲ್ಲೆ

# ಪರಿವಿಡಿ

ಇತಿಹಾಸದ ಅರ್ಥ ಮತ್ತು ವ್ಯಾಖ್ಯೆ.

ಕರ್ನಾಟಕದ  ಇತಿಹಾಸ-ಪೂರ್ವ

ಮೌರ್ಯರು

ಶಾತವಾಹನರು

ಹೊಯ್ಸಳರು

ಕಂಚಿಯ ಪಲ್ಲವರು

ಕದಂಬರು

ಗಂಗರು

ವಿಜಯ ನಗರ ಸಾಮ್ರಾಜ್ಯ

ರಾಷ್ಟ್ರಕೂಟರು

ಕಲ್ಯಾಣಿ ಚಾಲುಕ್ಯರು

ಕಲಚೂರಿಗಳು

ಬಹಮನಿ ಸಾಮ್ರಾಜ್ಯ

ಕರ್ನಾಟಕ ಏಕೀಕರಣ

# ಇತಿಹಾಸದ ಅರ್ಥ ಮತ್ತು ವ್ಯಾಖ್ಯೆ.

History ಎಂಬ ಪದವು ಗ್ರೀಕ್ ಭಾಷೆಯ Historia ದಿಂದ ಉಗಮವಾಗಿದೆ.

History ಎಂದರೆ ವಿಚಾರಣೆ ಅಥವಾ ತನಿಖೆ ಮಾಡು ಎಂದರ್ಥ.

ಇತಿಹಾಸವು ಸಂಸ್ಕೃತದ ಪದವಾಗಿದೆ.

ಇತಿಹಾಸವನ್ನು ಬರೆದವರಲ್ಲಿ ಗ್ರೀಕರು ಮೊದಲಿಗರು.

ಇತಿಹಾಸದ ಪಿತಾಮಹಾ - ಹೆರಡೊಟಸ್ .

Parshion war ಕೃತಿಯ ಕರ್ತೃ - ಹೆರಡೊಟಸ್ .

City of God ಕೃತಿಯ ಕರ್ತೃ-ಸಂತ ಅಗಸ್ಟನ್.

ಚರ್ಚು ಹಾಗೂ ರಾಜ್ಯದ ನಡುವಿನ ಸಂಬಂಧವನ್ನು ಪ್ರಥಮವಾಗಿ ಚಿಂತಿಸಿದವರು - ಸಂತ ಅಗಸ್ಟನ್.

ಪ್ರಮುಖ ಹೇಳಿಕೆಗಳು.

ಭೂತ ಕಾಲದ ರಾಜಕೀಯವೇ ವರ್ತಮಾನ ಕಾಲದ ಇತಿಹಾಸ, ಇಂದಿನ ರಾಜಕೀಯವೇ ಭವಿಷ್ಯತ್ತಿನ ಇತಿಹಾಸ- Freeman.

ವ್ಯಕ್ತಿಗಳ ಜೀವನ ಚರಿತ್ರೆಯೇ ಇತಿಹಾಸ - ಥಾಮಸ್ ಕಾರ್ಲೈಲ್ .

ಉಳ್ಳವರು ಹಾಗೂ ಇಲ್ಲದವರ ನಡುವಿನ ಹೋರಾಟವೇ ಇತಿಹಾಸ - ಕಾರ್ಲ್ ಮಾರ್ಕ್ಸ್ . Das Capital ಈತನ ಕೃತಿ.

ಜದುನಾಥ್ ಸರ್ಕಾರರವರ ಪ್ರಮುಖ ಕೃತಿಗಳು .

Declaine and Fall of the Maghal Empire

Shivaji and His Times.

India Through the ages.

ಇತಿಹಾಸದ ಎಂದರೆ ನಾಗರೀಕತೆಗಳ ಏಳು ಬೀಳಿನ ಕತೆ- ಆರ್ನಾಲ್ಡ್ ಟಾಯ್ನ್ ಬಿ.

A study of History- ಕೃತಿಯ ಕರ್ತೃ- Arnald Toynbi.

ವಿಶ್ವದ 26 ನಾಗರೀಕತೆಗಳ ಸಮಗ್ರ ಅಧ್ಯಯನ ಕೃತಿಯೇ Taynbi ವಿರಚಿತ A study of History.

ಅನಾಗರೀಕತೆಯಿಂದ ನಾಗರೀಕತೆಯೆಡೆಗೆ ಸಾಗಿದ ಮಾನವನ ಕತೆಯೇ ಇತಿಹಾಸ- ಜವಾಹರಲಾಲ್ ನೆಹರೂ ರವರು.

ಮಾನವ ಕುಲದ ಕತೆಯೇ ಇತಿಹಾಸ - ಹೆನ್ರಿಕ್ ವಾನ್ ಲೂನ್

ಯುಗ ಯುಗದಲ್ಲಿ ನಡೆದ ಮಾನವನ ಹೋರಾಟವೇ ಇತಿಹಾಸ ಪಿಯರ್ಸ್.

ಇತಿಹಾಸ ಲೇಖನಾ ಕಲೆಯ ತವರು ಮನೆ- ಗ್ರೀಕ್.

ಹೆರೋಡೋಟಸ್ ನು - ಪೆರಿಕ್ಲಿಸ್ ನ ಆಸ್ಥಾನದಲ್ಲಿದ್ದನು.

Historia ಎಂಬ ಕೃತಿಯ ಕರ್ತು - ಹೆರೋಡೋಟಸ್ .

Felopanedian war ಕೃತಿಯ ಕರ್ತು- ಥುಸಿಡೈಡಸ್.

ಜರ್ಮನ್ನರು ಇತಿಹಾಸವನ್ನು - ಗೆಸ್ ಚಿಸ್ಟೆ-ಎನ್ನುತ್ತಿದ್ದರು.

ಇತಿಹಾಸವು ಒಂದು ಅನ್ವೇಷಣೆ ಅಥವಾ ಮಹಾನ್ ವೀರರ ಕಥಾನಕ್ ಎಂದವರು- ಹೆರೋಡೋಟಸ್ .

ಇತಿಹಾಸ ಬದಲಾಗದ ಗತಕಾಲ ಎಂದವರು- ಅರಿಸ್ಟಾಟಲ್.

ದಾಸ್ ಕ್ಯಾಪಿಟಲ್ ಹಾಗೂ ಕಮ್ಯೂನಿಸ್ಟ್ ಮ್ಯಾನಿಫ್ಯಾಸ್ಟೋ ಕೃತಿಗಳ ಕರ್ತು- ಕಾರ್ಲ್ ಮಾರ್ಕ್ಸ್.

ಜಗತ್ ಕಥಾವಲ್ಲರಿ- ಕೃತಿಯ ಕರ್ತು ಜವಾಹರಲಾಲ್ ನೆಹರು.

ಇತಿಹಾಸವು ಸಮಾಜಗಳ ನೆನಪುಗಳು ಎಂದವರು - ರೀನಿಯರ್.

ಇತಿಹಾಸ ಜಯಭೇರಿ ಹೊಡೆದ ಯುದ್ಧಗಳ ವರ್ಣನೆ- ಎಂದವರು ಹಿಟ್ಲರ್.

ಸದ್ಗುಣ ಹಾಗೂ ದುರ್ಗುಣಗಳ ನಡುವಿನ ಹೋರಾಟ ಇತಿಹಾಸ ಎಂದವರು- ಅಗಸ್ಟೆನ್.

ಎಲ್ಲಾ ಸಮಾಜ ವಿಜ್ಞಾನಗಳ ಪಿತೃ ಅಥವಾ ಮಾತೃ-ಇತಿಹಾಸ

ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು ಎಂದವರು - ಡಾ. ಬಿ.ಆರ್.ಅಂಬೇಡ್ಕರ್.

ಸಿಂಧೂ ಬಯಲಿನ ನಾಗರೀಕತೆಯನ್ನು ಪತ್ತೆ ಹಚ್ಚಲಾದ ವರ್ಷ-1921.

ಇತಿಹಾಸದ ಅರ್ಥವನ್ನು ಕೇವಲ ರಾಜಕೀಯಕ್ಕೆ ಸೀಮಿತಗೊಳಿಸಿದವರು- Freeman

ಇತಿಹಾಸವನ್ನು ವ್ಯಕ್ತಿಗಳಿಗೆ ಹೋಲಿಸಿದವರು ಕಾರ್ಲೈಲ್ ರವರು.

ಇತಿಹಾಸವನ್ನು ಆರ್ಥಿಕ ವಿಶ್ಲೇಷಣೆಗೆ ಸೀಮಿತಗೊಳಿಸಿದವರು ಕಾರ್ಲ್ ಮಾರ್ಕ್ಸ್.

ಪ್ರಾಚೀನ ಕಾಲದಲ್ಲಿ ಇತಿಹಾಸ ಕೇವಲ - ದಂತಕತೆಗಳಿಗೆ ಸೀಮಿತವಾಗಿತ್ತು.

19 ನೇ ಶತಮಾನದವರೆಗೆ-ರಾಜಕೀಯ ಅಂಶಗಳು ಪ್ರಧಾನವಾಗಿತ್ತು.ಇತಿಹಾಸ ಸತ್ತವರ ಮೇಲೆ ಹೆಣೆದ ಸುಳ್ಳಿನ ಕಂತೆ ಎಂದವರು-ನೆಪೋಲಿಯನ್

*******************************************************************************

# ಕರ್ನಾಟಕದ ಇತಿಹಾಸ-ಪೂರ್ವ

ಕರ್ನಾಟಕದ ಇತಿಹಾಸದ ದಾಖಲೆ 2000 ವರ್ಷಕ್ಕೂ ಹೆಚ್ಚಿನದು. ಹಲವು ಮಹಾ ಸಾಮ್ರಾಜ್ಯಗಳು ಹಾಗು ರಾಜವಂಶದವರು ಕರ್ನಾಟಕವನ್ನು ಆಳಿ ಇಲ್ಲಿಯ ಇತಿಹಾಸ, ಸಂಸ್ಕೃತಿ ಹಾಗು ಬೆಳವಣಿಗೆಗೆ ಕಾರಣರಾಗಿದ್ದಾರೆ. ಕರ್ನಾಟಕ ಮೂಲದ ಸಾಮ್ರಾಜ್ಯಗಳ ಪ್ರಭಾವ ಭಾರತದ ಎಲ್ಲ ಭಾಗಳಲ್ಲೂ ಕಂಡು ಬರುತ್ತದೆ. ಬಂಗಾಳದ ಸೇನ ರಾಜವಂಶ ತಮ್ಮನ್ನು ಕರ್ನಾಟ ಕ್ಷತ್ರಿಯ ರುಗಳೆಂದು ಕರೆದು ಕೊಳ್ಳುತಿದ್ದರು. ಮಿಥಿಲಯಾ ಕರ್ನಾಟ ಕರು ಇಂದಿನ ಬಿಹಾರದ ಮೇಲೆ ರಾಜ್ಯ ಅಳುತಿದ್ದರು. ಅವರು ಕೂಡ ತಮ್ಮನು ತಾವು

ಕರ್ನಾಟವಂಶ ಹಾಗು ಕರ್ನಾಟಕ ಕ್ಷತ್ರಿಯ ರೆಂದು ಕರೆದುಕೊಳ್ಳುತಿದ್ದರು. . ಮಧ್ಯ ಭಾರತದ ಚಿಂದಕ ನಾಗರು, ಕಳಿಂಗದ ಗಂಗರು (ಒರಿಸ್ಸಾ) , ಮಾನ್ಯಖೇಟದ ರಾಷ್ಟ್ರಕೂಟರು,

ವೆಂಗಿ ಚಾಲುಕ್ಯರು ದೇವಗಿರಿಯ ಯಾದವ ವಂಶ ಇವರೆಲ್ಲರೂ ಕನ್ನಡ ಮೂಲದವರೇ

ಆದರೂ ಕ್ರಮೇಣ ಪ್ರಾದೇಶಿಕ ಭಾಷೆಗಳನ್ನು ಪ್ರೋತ್ಸಾಹಿಸಿದರು.

## ಇತಿಹಾಸ-ಪೂರ್ವ

ಕರ್ನಾಟಕದ ಇತಿಹಾಸ ಪೂರ್ವದ ಅಥವಾ ಪೂರ್ವೇತಿಹಾಸದ ವಿಸ್ತಾರವಾದ ಅಧ್ಯಯನ ಪ್ರಾರಂಭ ಮಾಡಿದ ಹೆಗ್ಗಳಿಕೆ ರಾಬರ್ಟ್ ಬ್ರೂಸ್ ಫೂಟ್ ಅವರದು. ಇವರ ಈ ಕಾರ್ಯವನ್ನು ನಂತರ ಬೇರೆ ವಿದ್ವಾಂಸರು ಮುಂದುವರಿಸಿದರು.

ಕರ್ನಾಟಕ (ಹಾಗು ಸಾಮಾನ್ಯವಾಗಿ ದಕ್ಷಿಣ ಭಾರತದ) ಇತಿಹಾಸ ಪೂರ್ವ ಸಂಸ್ಕೃತಿಯನ್ನು 'ಕೈ-ಕೊಡಲಿ'(hand-axe) ಸಂಸ್ಕೃತಿಯೆಂದು ಕರೆಯಲಾಗುತ್ತದೆ. ಉತ್ತರ ಭಾರತದ ಸಂಸ್ಕೃತಿಯನ್ನು 'ಸೋಹನ್ ಸಂಸ್ಕೃತಿ'ಯೆನ್ನಲಾಗುತದೆ. ಪೂರ್ವಶಿಲಾಯುಗದ ಬೆಣಚಿಯ ಉರುಳುಗಲ್ಲು ಆಕಾರದ ಕೈ ಕೊಡಲಿ ಹಾಗು ತಡಕತ್ತಿ

ಚಿಕ್ಕಮಗಳೂರುನ ಲಿಂಗದಹಳ್ಳಿ ಹಾಗು ಗುಲ್ಬರ್ಗದ ಹುಣಸಿಗಿ ಯಲ್ಲಿ ಕಂಡು ಬಂದಿದೆ ಹಾಗು ತುಮಕೂರಿನ ಕಿಬ್ಬನಹಳ್ಳಿಯಲ್ಲಿ ಮರದ ಕತ್ತಿ ಸಿಕ್ಕಿರುವುದು ಹಳೆ ಕಲ್ಲುಯುಗದ ಸಾಮಗ್ರಿಯ ಉದಾಹರಣೆಗಳು

ರಾಯಚೂರಿನ ಲಿಂಗಸೂಗೂರಿನಲ್ಲಿ ನುಣುಪಾದ ಕಲ್ಲು ಕೊಡಲಿ ಸಿಕ್ಕಿರುವ ವರದಿ ಕೂಡ ಬಂದಿದೆ. ಹೊಸ ಶಿಲಾಯುಗದ ಉದಾಹರಣೆ.

## ರಾಯಚೂರು ಜಿಲ್ಲೆಯ ಮಸ್ಕಿ,

ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ ಮುಂತಾದವು. ಮನುಷ್ಯ ಪ್ರಾಣಿಗಳನ್ನು (ಹಸು,ನಾಯಿ ಹಾಗು ಕುರಿ) ಪಳಗಿಸಲು ಆರಂಭಿಸಿರುವ ಹಾಗು ತಾಮ್ರದ ಹಾಗು ಕಂಚಿನ ಆಯುಧಗಳನ್ನು ಬಳಸಿರುವ ಬಳೆ, ಉಂಗುರ, ಮಣಿಗಳ ಸರ ಹಾಗು ಕಿವಿ ಓಲೆ ಧರಿಸಿರುವುದಕ್ಕೆ ಹಲವು ಪುರಾವೆಗಳು ಸಿಕ್ಕಿವೆ ಮತ್ತು ಸಮಾಧಿಗಳು ಕೂಡ ಕಂಡು ಬಂದಿವೆ. ನವಶಿಲಾಯುಗದ ಕೊನೆಯಲ್ಲಿ, ಬೃಹತ್ ಶಿಲೆಯಯುಗದಲ್ಲಿ , ಕರ್ನಾಟಕದಲ್ಲಿ ಜನರು ಕಬ್ಬಿಣದ ಅಯುಧಗಳನ್ನು ದೊಡ್ಡ ಖಡ್ಗಗಳು, ಕುಡುಗೋಲು, ಕೊಡಲಿ, ಸುತ್ತಿಗೆ, ತೆನೆ, ಉಳಿ ಹಾಗು ಬಾಣಗಳನ್ನು ಉಪಯೋಗಿಸಲು ಆರಂಭಿಸಿದರು. ಹಳೆಯ ಮೈಸೂರು ಪ್ರದೇಶದ ಚಿತ್ರದುರ್ಗ ಜಿಲ್ಲೆಯ ತಾಳ್ಯ, ಜ್ಯಾಂಕಲ್,

## ಶಿವಮೊಗ್ಗ ಜಿಲ್ಲೆಯ ನ್ಯಾಮತಿ ,

ಚಿಕ್ಕಮಗಳೂರು ಜಿಲ್ಲೆಯ ಲಿಂಗದಹಳ್ಳಿ ಮುಂತಾದೆಡೆಗಳಲ್ಲಿ ರಾಬರ್ಟ್ ಬ್ರೂಸ್ಫುಟ್ ಕೆಲವು ಪೂರ್ವ ಶಿಲಾಯುಧಗಳನ್ನು ಶೇಖರಿಸಿದ್ದರು. ಶೇಷಾದ್ರಿಯವರು ತುಮಕೂರು ಜಿಲ್ಲೆಯ ಕಿಬ್ಬನಹಳ್ಳಿಯ ಬಳಿಯಲ್ಲಿ ಈ ಸಂಸ್ಕೃತಿಯ ನೆಲೆಯೊಂದನ್ನು ಗುರುತಿಸಿದ್ದಾರೆ. ಇದು ಬಾಣಸಂದ್ರ ಬೆಟ್ಟಗಳ ಶ್ರೇಣಿಯ ಬುಡದಲ್ಲಿದೆ. ಹಳೆಯ ಮೈಸೂರು ಪ್ರದೇಶದಲ್ಲಿ ಇದೇ

ಅತಿಮುಖ್ಯವೂ ವಿಸ್ತಾರವೂ ಆದ ನೆಲೆ. ರೋಸ್ಟ್ರೋಕ್ಯಾರಿನೇಟ್ ಎಂಬ ಬಹಳ ಹಳೆಯ ರೀತಿಯ ಉಪಕರಣಗಳಿಂದ ಹಿಡಿದು ಅಬ್ಬೆವಿಲಿಯನ್ ಮತ್ತು ಮುಂದುವರಿದ ಅಷ್ಯೂಲಿಯನ್ ಹಂತದ ಕೈಗೊಡಲಿಗಳ ಹಾಗೂ ಕೊಕ್ಕಿನಂತೆ ಮೊನೆಯುಳ್ಳ ಕ್ಲಾಕ್ಟನ್ ರೀತಿಯ ಚಕ್ಕೆಕಲ್ಲಿನ ಉಪಕರಣಗಳವರೆಗೆ ಹಲವಾರು ಉಪಕರಣಗಳು ಇಲ್ಲಿ ದೊರಕಿವೆ. ಆ ಕಾಲದಲ್ಲಿ ಮರಗೆಲಸಕ್ಕೆ ಉಪಯೋಗಿಸುತ್ತಿದ್ದ ಡೊಂಕಾದ ಒರೆಯುವ ಆಯುಧಗಳು ಹೆಚ್ಚು ಸಂಖ್ಯೆಯಲ್ಲಿ ದೊರಕಿವೆ. ಆದ್ದರಿಂದ ಆಗ ಮರದ ಉಪಕರಣಗಳು ಹೆಚ್ಚಾಗಿ ಬಳಕೆಯಲ್ಲಿದ್ದುವೆಂದು ಭಾವಿಸಲಾಗಿದೆ.

ಬಳ್ಳಾರಿ ಜಿಲ್ಲೆಯ ಹಲಕುಂಡಿ, ಕುರಿಕುಪ್ಪ, ಗಾದಿಗನೂರು , ದಾರೋಜಿ ಮತ್ತು ಅಂಗೂರುಗಳಲ್ಲೂ ರಾಬರ್ಟ್ ಬ್ರೂಸ್ಫುಟ್ ಪೂರ್ವ ಶಿಲೋಪಕರಣಗಳನ್ನು ಸಂಗ್ರಹಿಸಿದ್ದ. ಜೋಷಿಯವರು ಉತ್ತರ ಕರ್ನಾಟಕದ ಮಲಪ್ರಭಾ ಘಟಪ್ರಭಾ ನದೀ ಕಣಿವೆಗಳಲ್ಲಿ ಈ ಸಂಸ್ಕೃತಿಯ ಹಲವಾರು ನೆಲೆಗಳನ್ನು ಬೆಳಕಿಗೆ ತಂದಿದ್ದಾರೆ. ಮಲಪ್ರಭಾ ದಂಡೆಯ ೨೧ ನೆಲೆಗಳಲ್ಲಿ ಮೆಣಸ್ಗಿ ಮತ್ತು ಖ್ಯಾಡ್ ಮುಖ್ಯವಾದವು. ಖ್ಯಾಡ್ ನೆಲೆಯಲ್ಲಿ ಅಷ್ಯೂಲಿಯನ್ ಸಂಸ್ಕೃತಿ ಯ ಅಂತ್ಯಕಾಲಕ್ಕೆ ಸೇರುವ, ಚಕ್ಕೆ ಕಲ್ಲಿನ ಉತ್ತಮ ಕೆಲಸಗಾರಿಕೆಯ ಕೈಗೊಡಲಿಗಳೂ ಕ್ಲೀವರ್ ರೀತಿಯ ಕೈಗೊಡಲಿಗಳೂ ಗಮನಾರ್ಹ. ಘಟಪ್ರಭಾ ನದೀ ದಂಡೆಯಲ್ಲಿ ನಿಕ್ಷಿಪ್ತವಾದ ಗುಂಡುಕಲ್ಲುಗಳ ಪದರದಲ್ಲಿ ಮರಳುಕಲ್ಲಿನಲ್ಲಿ ಮಾಡಿದ ಅಬ್ಬೆವಿಲಿಯನ್-ಅಷ್ಯೂಲಿಯನ್ ಹಂತದ ಉಪಕರಣಗಳು ಹೇರಳವಾಗಿ ದೊರಕಿವೆ. ಅಷ್ಯೂಲಿಯನ್ ಹಂತದ ಅಂತ್ಯಭಾಗಕ್ಕೆ ಸೇರುವ ಉಪಕರಣಗಳು ಸಹ ಅಲ್ಪಸಂಖ್ಯೆಯಲ್ಲಿ ಕಂಡುಬಂದಿವೆ. ಕರ್ನಾಟಕದಲ್ಲಿ ಆದಿಮಾನವ ಕಷ್ಟಜೀವಿಯಾಗಿದ್ದು, ಬೇಟೆ ಮತ್ತು ಮೀನುಗಾರಿಕೆ ಯಿಂದ ತನ್ನ ಮತ್ತು ತನ್ನವರ ಜೀವನ ನಿರ್ವಹಣೆ ಮಾಡುತ್ತಿದ್ದನೆಂಬುದು ಮೇಲಿನ ವಿವರಗಳಿಂದ ತಿಳಿದು ಬರುತ್ತದೆ. ಪಾಂಡಿತ್ಯಪೂರ್ಣ ಸಿದ್ಧಾಂತ ಊಹೆ ಪ್ರಕಾರ ೩೦೦೦ ಕ್ರಿ.ಪೂ ದಲ್ಲೇ

ಹರಪ್ಪದ ಸಿಂಧೂ ಕಣಿವೆ ನಗರಗಳು ಹಾಗೂ ಲೋಥಾಲ್ನ ನಡುವೆ ಸಂಪರ್ಕ ಇರುವುದಾಗಿ ಹಾಗು ಇದಕ್ಕೆ ಪುರಾವೆ ಹರಪ್ಪದ ತಾಣಗಳಲ್ಲಿ ಸಿಕ್ಕಿರುವ ಬಂಗಾರ ಕರ್ನಾಟಕದ ಗಣಿಗಳಿಂದ ತರಿಸಲ್ಪಟ್ಟಿತು ಎನ್ನಲಾಗುತ್ತದೆ.

## ಆಧುನಿಕ ಕರ್ನಾಟಕದಲ್ಲಿ

## ನವಶಿಲಾಯುಗ ವಸತಿಯಿದ್ದ ಹಾಗು

ಕ್ರಿ.ಪೂ ೨ನೆಯ ಶತಮಾನದ ಪ್ರಾಚೀನ ಕಾಲದ ಕಲ್ಲಿನ ಅಥವಾ ಲೋಹದ ಆಯುಧಗಳನ್ನೂ ಮೊದಲಿಗೆ ೧೮೭೨ರಲ್ಲಿ ಶೋಧಿಸಲಾಯಿತು. ವರದಿಗಳ ಪ್ರಕಾರ ಕಲ್ಲು ಕೊಡಲಿಯನ್ನು ರಾಯಚೂರು ಜಿಲ್ಲೆಯ ಲಿಂಗಸೂಗೂರನಲ್ಲಿ ಸಿಕ್ಕಿವೆ; ಆದರೆ ಈ ವರದಿಯನ್ನು ಖಚಿತ ಪಡಿಸಲು ಇನ್ನೂ ಆಗಿಲ್ಲ.  ಬೃಹತ್ ಶಿಲೆಯ ರಚನೆಗಳು ಹಾಗು ಸಮಾದಿಗಳನ್ನೂ ೧೮೬೨ರಲ್ಲಿ ಕೊಡಗು ಹಾಗು

ಮೂರೆಯ್ ಬೆಟ್ಟದಲ್ಲಿ ಶೋದಿಸಲಾಗಿದೆ, ಆಗೆಯೇ ನವಶಿಲಾಯುಗದ ತಾಣಗಳು ಉತ್ತರ ಕರ್ನಾಟಕದಲ್ಲಿ ಸಿಕ್ಕಿವೆ.

## ಮಧ್ಯ ಶಿಲಾಯುಗ

ಆಹಾರ ಸಂಗ್ರಹಣೆಯ

ಪೂರ್ವಶಿಲಾಯುಗ ಮತ್ತು ಆಹಾರೋತ್ಪಾದನೆಯ

ನವಶಿಲಾಯುಗ ಗಳ ಮಧ್ಯೆ

ಯುರೋಪ್ ಮತ್ತಿತರೆಡೆಗಳಲ್ಲಿ ಮಧ್ಯಶಿಲಾಯುಗಕ್ಕೆ ಸೇರಿದ ಸಂಸ್ಕೃತಿಯ ಅವಶೇಷಗಳು ಕಂಡುಬಂದಿವೆ. ಭಾರತದಲ್ಲಿ ಆ ಹಂತದ ಸಂಸ್ಕೃತಿ ಇರಲಿಲ್ಲವೆಂದು ಇದುವರೆಗೂ ಭಾವಿಸಲಾಗಿದ್ದರೂ ಇತ್ತೀಚೆಗೆ ಹಲವೆಡೆಗಳಲ್ಲಿ ಆ ಕಾಲಕ್ಕೆ ನಿಯೋಜಿಸಬಹುದಾದ ಅವಶೇಷಗಳು ದೊರಕಿರುವುದು ಗಮನಾರ್ಹ. ಬಿಜಾಪುರ ಜಿಲ್ಲೆಯ ಸಾಲ್ವಡಗಿಯಲ್ಲಿ ದೊರಕಿರುವ ಸೂಕ್ಷ್ಮ ಶಿಲಾಯುಧಗಳಲ್ಲಿ ಒರೆಯುವ ಮತ್ತು ಕೊರೆಯುವ ಉಪಕರಣಗಳೂ ಚಕ್ಕೆ ಕಲ್ಲಿನ ಚಾಕುಗಳೂ ಅಲ್ಲದೆ ಹರಪ್ಪ ಸಂಸ್ಕೃತಿಯ ವಿಶಿಷ್ಟ ಅಂಶವಾದ ಉದ್ದನೆಯ ಚಕ್ಕೆ ಕಲ್ಲಿನ ಪಟ್ಟಿಕೆಗಳೂ ಇರುವುದರಿಂದ ಇಲ್ಲಿಯ ಸಂಸ್ಕೃತಿಯೊಂದಿಗೆ ತಾಮ್ರಶಿಲಾಯುಗ ಸಂಸ್ಕೃತಿಯ ಸಂಪರ್ಕವಿದ್ದಿರಬಹುದೆಂದೂ ಊಹಿಸಿದ್ದಾರೆ.

## ನವಶಿಲಾಯುಗ

ನವಶಿಲಾಯುಗ ಸಂಸ್ಕೃತಿಯ ಅವಶೇಷಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ಭಾರತದ ಇತರ ಪ್ರದೇಶಗಳಿಗಿಂತ ಹೇರಳವಾಗಿ ದೊರಕಿರುವುದರಿಂದ ನವಶಿಲಾಯುಗ ಕಾಲದಲ್ಲಿ ಕರ್ನಾಟಕ ಮಾನವನ ಪ್ರಮುಖ ಕಾರ್ಯಕ್ಷೇತ್ರವಾಗಿತ್ತೆಂದು ಹೇಳಬಹುದಾಗಿದೆ. ಈ ಸಂಸ್ಕೃತಿಗೆ ಸೇರಿದ ಕೊಡಲಿ , ಬಾಚಿ ಮತ್ತು ಇತರ ಆಯುಧಗಳನ್ನು ಮಾಡಲು ಪ್ರಮುಖವಾಗಿ ಉಪಯೋಗಿಸುತ್ತಿದ್ದ ಟ್ರಾಪ್ ಶಿಲೆಗಳು ಹೆಚ್ಚಾಗಿ ಸಿಕ್ಕುತ್ತಿದ್ದುದೂ ಪಶುಸಂಗೋಪನೆ, ಬೇಟೆ ಮತ್ತು ಪ್ರಾರಂಭದೆಶೆಯ ವ್ಯವಸಾಯ ವೃತ್ತಿಗಳಿಗೆ ಬೇಕಾದ ಸೌಲಭ್ಯಗಳು ಇಲ್ಲಿದ್ದುದರಿಂದಲೂ ನವಶಿಲಾಯುಗದ ಮಾನವ ಈ ಪ್ರದೇಶದಲ್ಲಿ ಹೆಚ್ಚು ಸಂಖ್ಯೆಯಲ್ಲಿ ವಾಸಿಸಿದ್ದಿರಬಹುದು. ಉಪಕರಣಗಳ ಅಂಚುಗಳನ್ನು ಉಜ್ಜಿ ನಯಗೊಳಿಸಲು ಉಪಯೋಗಿಸಿದ ಹಳ್ಳಗಳು ಬಳ್ಳಾರಿ ಮತ್ತು ಅಕ್ಕಪಕ್ಕದ ಜಿಲ್ಲೆಗಳ ಹಲವೆಡೆಗಳಲ್ಲಿ, ಅದರಲ್ಲೂ ಮುಖ್ಯವಾಗಿ ಬಳ್ಳಾರಿಯ ಉತ್ತರ ಬೆಟ್ಟದಲ್ಲಿ, ಕಂಡುಬಂದಿವೆ. ಈ ಜನರು ಕೇವಲ ಅಂಚುಗಳನ್ನು ಅಥವಾ ಇಡೀ ಉಪಕರಣವನ್ನು ಬಂಡೆಗಳ ಮೇಲೆ ಉಜ್ಜಿ ನಯಗೊಳಿಸಿ ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡುತ್ತಿದ್ದುದರಿಂದ ಈ ಸಂಸ್ಕೃತಿಗೆ ನಯಗೊಳಿಸಿದ ಶಿಲೋಪಕರಣ ಸಂಸ್ಕೃತಿಯೆಂದೂ ಹೆಸರಿದೆ. ಈ ಸಂಸ್ಕೃತಿಯಲ್ಲಿ ಕೊಡಲಿ, ಬಾಚಿ, ಉಳಿ,

ಸುತ್ತಿಗೆಕಲ್ಲುಗಳು, ಮಧ್ಯದಲ್ಲಿ ರಂಧ್ರವಿದ್ದು ಅಗೆಯುವ ಮರದ ಕೋಲುಗಳಿಗೆ ಭಾರವನ್ನೊದಗಿಸುತ್ತಿದ್ದ ಚಕ್ರಾಕಾರದ ಕಲ್ಲುಗಳು ಮತ್ತು ಚಕ್ಕೆಕಲ್ಲುಗಳನ್ನು ಮುಖ್ಯ ಉಪಕರಣಗಳಾಗಿ ಉಪಯೋಗಿಸಲಾಗುತ್ತಿತ್ತು.

ಪಶುಪಾಲನೆ, ಬೇಟೆ , ಮೀನು ಹಿಡಿಯುವಿಕೆ, ಮೂಲಭೂತ ಅಥವಾ ಹಿಂದುಳಿದ ವ್ಯವಸಾಯ- ಇವು ಈ ಜನರ ಮುಖ್ಯ ವೃತ್ತಿಗಳಾಗಿದ್ದುವು. ತಮ್ಮ ಆಹಾರಧಾನ್ಯಗಳನ್ನು ಹಿಟ್ಟು ಮಾಡಲು ಅವರು ಬೀಸುವ-ಅರೆಯುವ ಕಲ್ಲುಗಳನ್ನು ಉಪಯೋಗಿಸುತ್ತಿದ್ದರು. ಮೊತ್ತಮೊದಲಿಗೆ ಈ ಜನರು ಮಣ್ಣಿನ ಪಾತ್ರೆಗಳನ್ನು ಉಪಯೋಗಿಸಲಾರಂಭಿಸಿ, ನಯಗೊಳಿಸಿದ ಬೂದುಬಣ್ಣದ ಮಡಕೆ-ಕುಡಿಕೆಗಳನ್ನು ಕೈಯಿಂದಲೇ ರೂಪಿಸಿ ಅನಂತರ ಸುಡುತ್ತಿದ್ದರು. ಕ್ರಮೇಣ ಈ ಸಂಸ್ಕೃತಿಯ ಅಂತ್ಯಕಾಲದ ಹೊತ್ತಿಗೆ ನಿಧಾನವಾಗಿ ಸುತ್ತುವ ಮಣಿ ಅಥವಾ ಚಕ್ರಗಳನ್ನು ಮಣ್ಣಿನ ಪಾತ್ರೆಗಳನ್ನು ಮಾಡಲು ಉಪಯೋಗಿಸಿರಬಹುದಾದರೂ ಈಗ ಉಪಯೋಗದಲ್ಲಿರುವ

ಕುಂಬಾರಚಕ್ರ ಬಳಕೆಗೆ ಬಂದಿದ್ದಂತೆ ಕಾಣುವುದಿಲ್ಲ. ಮೇಲೆ ಹೇಳಿದ ಬೂದು ಬಣ್ಣದ ಮಡಕೆಗಳಲ್ಲದೆ ಕ್ರಮೇಣ ಕಂದು, ಕೆಂಪು ಮತ್ತು ಕಪ್ಪು ಬಣ್ಣದ ಮಡಕೆಗಳು ಉಪಯೋಗಕ್ಕೆ ಬಂದವು. ಈ ಸಂಸ್ಕೃತಿಯ ಕೊನೆಗಾಲದಲ್ಲಿ ದೊರಕುವ ಮಡಕೆಗಳ ಆಕಾರ ಮತ್ತು ಅಲಂಕಾರ ವಿಧಾನಗಳಿಂದ ಮಧ್ಯ ಭಾರತದ ತಾಮ್ರ-ಶಿಲಾಯುಗ ಸಂಸ್ಕೃತಿ ಯೊಂದಿಗೆ ಸಂಪರ್ಕ ಬೆಳೆದುಬಂದಿತ್ತೆಂದೂ ತಿಳಿದುಬಂದಿದೆ. ಈ ಸಂಸ್ಕೃತಿಯ ಅವಶೇಷಗಳು ಕರ್ನಾಟಕದ ಅನೇಕ ಪ್ರದೇಶಗಳಲ್ಲಿ ದೊರಕಿವೆ. ಉತ್ಖನನದ್ವಾರಾ ಶೋಧಿಸಲಾಗಿರುವ ನೆಲೆಗಳಲ್ಲಿ

ಬ್ರಹ್ಮಗಿರಿ , ಸಂಗನಕಲ್ಲು, ಪಿಕ್ಲಿಹಾಳ್,

ಮಸ್ಕಿ , ತೆಕ್ಕಲಕೋಟೆ ಮತ್ತು

ತಿರುಮಕೂಡಲ ನರಸೀಪುರ ಮುಖ್ಯವಾದವು. ತಾಮ್ರ-ಶಿಲಾಯುಗ ಸಂಸ್ಕೃತಿ ದಕ್ಷಿಣ ಭಾರತದಲ್ಲಿ ಇರಲಿಲ್ಲವೆಂಬ ವಾದ ನಿಜವಲ್ಲ. ಬ್ರಹ್ಮಗಿರಿ, ಸಂಗನಕಲ್ಲು, ಮಸ್ಕಿ, ಅನಂತರದಲ್ಲಿ ಸಂಶೋಧಿಸಲಾದ ತೆಕ್ಕಲಕೋಟೆ, ಹಳ್ಳೂರು ಮುಂತಾದೆಡೆಗಳಲ್ಲಿ ನವಶಿಲಾಯುಗದ ಉತ್ತರಾರ್ಧದಲ್ಲಿ ತಾಮ್ರ-ಶಿಲಾಯುಗ ಸಂಸ್ಕೃತಿಯ ಪ್ರಭಾವ ತಾಮ್ರ ಮತ್ತು ಕಂಚು, ಕಪ್ಪು ಬಣ್ಣದಿಂದ ಚಿತ್ರಿತವಾದ ಕೆಂಪು ಮಡಕೆಗಳು ಮತ್ತು ಕಲ್ಲುಪಟ್ಟಿಕೆಗಳ ಬಳಕೆಯಿಂದ ಕಂಡುಬರುತ್ತದೆ. ಕರ್ನಾಟಕದಲ್ಲಿ ಈ ಸಂಸ್ಕೃತಿ ಮಧ್ಯ ಮತ್ತು ಪಶ್ಚಿಮ ಭಾರತ ಅಥವಾ ಸಿಂಧೂನದಿ ಪ್ರದೇಶಗಳಲ್ಲಿದ್ದಷ್ಟು ಪ್ರಬಲವಾಗಿಲ್ಲದಿದ್ದರೂ, ವಾಣಿಜ್ಯ ಸಂಪರ್ಕಗಳ ಪ್ರಭಾವದಿಂದ ಲೋಹದ ಬಳಕೆ, ಕುಂಬಾರಚಕ್ರದ ಉಪಯೋಗ, ಮುಂದುವರಿದ ವ್ಯವಸಾಯ ಪದ್ಧತಿ ಮತ್ತು ಗ್ರಾಮೀಣ ಜೀವನ ರೀತಿಗಳನ್ನು ಕ್ರಮೇಣ ಅಳವಡಿಸಿಕೊಂಡುದಕ್ಕೆ ಸಾಕಷ್ಟು ಪುರಾವೆಗಳು ದೊರಕಿವೆ. ಕೇಂದ್ರಸರ್ಕಾರದ ಪ್ರಾಕ್ತನಶಾಸ್ತ್ರ ಇಲಾಖೆಯ ಆಶ್ರಯದಲ್ಲಿ ನಡೆದ ಸಂಶೋಧನೆಗಳಿಂದ ಬಿಜಾಪುರ ,

ಧಾರವಾಡ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಈ ಸಂಸ್ಕೃತಿಯ ಹದಿಮೂರಕ್ಕೂ ಹೆಚ್ಚು ನೆಲೆಗಳು ಕಂಡುಬಂದಿವೆ. ತಾಮ್ರ-ಶಿಲಾಯುಗದ ಅನಂತರ ಕರ್ನಾಟಕದಲ್ಲಿ ಕಬ್ಬಿಣಯುಗದ ಸಂಸ್ಕೃತಿಗೆ ಸೇರುವ ಬೃಹತ್ ಶಿಲಾಸಮಾಧಿ ಸಂಸ್ಕೃತಿ ಪ್ರಾಮುಖ್ಯ ಪಡೆಯಿತು.

ಮೆಡಿಟರೇನಿಯನ್ ಸಮುದ್ರ ಪ್ರದೇಶದಲ್ಲಿ ಪ್ರ.ಶ.ಪು. ಸು. ೧ನೆಯ ಸಹಸ್ರಮಾನದಲ್ಲಿ ಹುಟ್ಟಿ, ಕ್ರಮೇಣ

ಯುರೋಪ್, ಆಫ್ರಿಕ ಮತ್ತು ಪಶ್ಚಿಮ ಏಷ್ಯಗಳಲ್ಲಿ ಹರಡಿ, ವಿವಿಧ ಸಂಸ್ಕೃತಿಗಳು ಮತ್ತು ಪ್ರಾದೇಶಿಕ ಹಿನ್ನೆಲೆಗಳಿಂದ ಪ್ರಭಾವಿತವಾಗಿ ದಕ್ಷಿಣ ಭಾರತವನ್ನು ತಲಪುವ ವೇಳೆಗೆ ಕಬ್ಬಿಣಯುಗೀನ ಸಂಸ್ಕೃತಿಯ ಹಂತವನ್ನು ಮುಟ್ಟದ್ದೇ ಅಲ್ಲದೆ, ಅನೇಕ ಆಂತರಿಕ ಬದಲಾವಣೆಗಳಿಗೂ ಒಳಗಾಗಿ ದಕ್ಷಿಣ ಭಾರತದ ಆದ್ಯ ಐತಿಹಾಸಿಕ ಸಂಸ್ಕೃತಿಯಾಗಿ ರೂಪುಗೊಂಡಿತು. ಕರ್ನಾಟಕದಲ್ಲಿ ನವಶಿಲಾ-ತಾಮ್ರಶಿಲಾಯುಗಗಳ ಅನಂತರ ತ್ವರಿತಗತಿಯಲ್ಲಿ ಪ್ರಭಾವಶಾಲಿಯಾಗಿ ಹಬ್ಬಿದ ಈ ಸಂಸ್ಕೃತಿಯ ಮುಖ್ಯ ಲಕ್ಷಣಗಳೆಂದರೆ, ಸತ್ತವರ ಅವಶೇಷಗಳನ್ನು ದೊಡ್ಡ ಕಲ್ಲುಗಳಿಂದ ರಚಿತವಾದ

ಸಮಾಧಿ ಗಳಲ್ಲಿ ಹೂಳುವುದು, ಉಪಕರಣಗಳಿಗೆ ಕಬ್ಬಿಣವನ್ನು ಉಪಯೋಗಿಸುವುದು, ಮೇಲ್ಭಾಗದಲ್ಲಿ ಕೆಂಪು ಅಥವಾ ಕಂದಾಗಿಯೂ ತಳ ಮತ್ತು ಒಳಭಾಗಗಳಲ್ಲಿ ಕಪ್ಪಾಗಿಯೂ ಇರುವ (ಕಪ್ಪು ಮತ್ತು ಕೆಂಪು) ಮಡಕೆಗಳನ್ನು ಉಪಯೋಗಿಸುವುದು,

ನೀರಾವರಿ ಯ ಸಹಾಯದಿಂದ ಪ್ರಗತಿಪರ ವ್ಯವಸಾಯ, ನಗರೀಕರಣಕ್ಕೆ ಪೂರ್ವಭಾವಿಯಾದ ವಿಶಾಲ ಗ್ರಾಮೀಣ ಜೀವನ ಮುಂತಾದವು. ಈ ಸಂಸ್ಕೃತಿಯ ಪ್ರಾರಂಭದಿಂದ ದಕ್ಷಿಣ ಭಾರತದಲ್ಲಿ ಚಾರಿತ್ರಿಕ ಯುಗದ ಆರಂಭವಾಯಿತೆಂದು ಹೇಳಬಹುದು. ಈ ಸಂಸ್ಕೃತಿಯ ನಿರ್ಮಾತೃಗಳಾದ, ದ್ರಾವಿಡ ಭಾಷೆಯನ್ನು ಬಳಸುತ್ತಿದ್ದ, ಜನ ಈ ಸಮಯದಲ್ಲಿ ದಕ್ಷಿಣ ಭಾರತಕ್ಕೆ ಬಂದು ನೆಲಸಿದುದಾಗಿ ತಿಳಿದುಬರುತ್ತದೆ.

ಚೇರ , ಪಾಂಡ್ಯ ,

ಚೋಳ ರಾಜ್ಯಗಳು ದಕ್ಷಿಣದಲ್ಲೂ ಸಾತವಾಹನ ಚಕ್ರಾಧಿಪತ್ಯ ದಖನ್ ಪ್ರಸ್ಥಭೂಮಿಪ್ರದೇಶದಲ್ಲೂ ಶೀಘ್ರದಲ್ಲಿಯೇ ಸ್ಥಾಪಿತವಾಗಿ ಚಾರಿತ್ರಿಕ ಯುಗ ನೆಲೆಗೊಂಡಿತು. ಈ ಸಂಸ್ಕೃತಿಯ ಅವಶೇಷಗಳು ಅನೇಕ ನೆಲೆಗಳಲ್ಲಿ ಕಂಡುಬಂದಿದ್ದರೂ ವೈಜ್ಞಾನಿಕ ಸಂಶೋಧನೆಗಳು ಬ್ರಹ್ಮಗಿರಿ, ಸಂಗನಕಲ್ಲು, ಮಸ್ಕಿ, ಜಡಿಗೇನಹಳ್ಳಿ ಮುಂತಾದೆಡೆಗಳಲ್ಲಿ ಮಾತ್ರ ನಡೆದಿವೆ.

ಕರ್ನಾಟಕದ ಹುತ್ರಿದುರ್ಗ ಕಬ್ಬಿಣದ ಯುಗದ ಅವಶೇಷಗಳು

ಸುಮಾರು ಮೂರು ಸಾವಿರ ವರ್ಷಗಳ ಹಿಂದಿನ ಕಬ್ಬಿಣ ಯುಗಕ್ಕೆ ಸೇರಿರಬಹುದಾದ ಸಮಾಧಿಯ ಅವಶೇಷಗಳು ಕುಣಿಗಲ್ ತಾಲೂಕಿನ ಹುತ್ರಿದುರ್ಗ ಕೋಟೆ ಸಮೀಪ ಪತ್ತೆಯಾಗಿವೆ.(Jul 12, 2014,)

ಕೆಂಪೇಗೌಡರ ಕಾಲದ ಇತಿಹಾಸ ಪ್ರಸಿದ್ಧ ಕೋಟೆಗಳಲ್ಲಿ ಹುತ್ರಿದುರ್ಗ ಕೋಟೆಯೂ ಒಂದು.

ಸೀಗೆಹಳ್ಳಿಯ ಸರಕಾರಿ ಪದವಿಪೂರ್ವ ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಹಂ.ಗು. ರಾಜೇಶ್ ಮತ್ತು ಡಾ.ಪುಟ್ಟರಾಜು ಅವರು ಇತ್ತೀಚೆಗೆ ಕೈಗೊಂಡ ಕ್ಷೇತ್ರಕಾರ್ಯ ಸಮಯದಲ್ಲಿ ಇವುಗಳು ಪತ್ತೆಯಾಗಿವೆ.

ಹುತ್ರಿದುರ್ಗ ಕೋಟೆಯ ಪೂರ್ವ ದಿಕ್ಕಿನ ಮಾಗಡಿ ದ್ವಾರ ಮುಚ್ಚಾಲಮ್ಮನ ಗುಡಿ ಮುಂಭಾಗದಿಂದ ಅಲ್ಲಿಯ ಬಿಸಿಲು-ಬಸವಣ್ಣ ಮಂಟಪದವರೆಗಿನ ಸರ್ವೆ ನಂ.59ರಲ್ಲಿ ಈ ಅವಶೇಷಗಳು ಕಂಡುಬಂದಿವೆ.

ಕಬ್ಬಿಣಯುಗದ ಈ ಸಮಾಧಿಗಳು ವೃತ್ತಾಕಾರದಲ್ಲಿ ಜೋಡಿಸಿದ ಕಪ್ಪು ಮತ್ತು ಗ್ರಾನೈಟ್ ಶಿಲೆಗಳಿಂದ ಕೂಡಿದ್ದು, ಶಿಲಾವೃತ್ತಗಳು 12 ಅಡಿ ವ್ಯಾಸ ಹೊಂದಿವೆ. ಈ ಸಮಾಧಿಗಳಲ್ಲಿ ಪ್ರಾಚೀನ ಕಾಲದ ಮಾನವರ ದೇಹ/ಅಸ್ಥಿ ಪಂಜರಗಳನ್ನು ಇರಿಸಿ ಅವುಗಳ ಜತೆಗೆ ಮುಂದಿನ ಜನ್ಮಕ್ಕೆ ಉಪಯೋಗವಾಗಲಿ ಎಂಬ ನಂಬಿಕೆಯಿಂದ ಅವರು ಬಳಸಿದ ಪಾತ್ರೆ, ಮಡಕೆ, ಕುಡಿಕೆ ಮತ್ತು ಆಯುಧಗಳನ್ನು ಸಮಾಧಿಯಲ್ಲಿ ಇರಿಸುತ್ತಿದ್ದರು. ಈ ಸಮಾಧಿಗಳು ಅತ್ಯಂತ ಪ್ರಾಚೀನವಾಗಿದ್ದು, ಹುತ್ರಿದುರ್ಗದ ಇತಿಹಾಸವನ್ನು ಸುಮಾರು 3 ಸಾವಿರ ವರ್ಷಗಳ ಹಿಂದಕ್ಕೆ ತೆಗೆದುಕೊಂಡು ಹೋಗುತ್ತದೆ.

ಮಾಗಡಿ ಮತ್ತು ಹುತ್ರಿದುರ್ಗದ ಪರಿಸರದಲ್ಲಿ 'ಕಲ್ಲುಸೇವೆ' ಎಂಬ ವಿಶಿಷ್ಟ ಶವಸಂಸ್ಕಾರ ಪದ್ಧತಿಯೊಂದಿತ್ತು. ಶವಗಳನ್ನು ಸುಡುವುದಾಗಲೀ, ಹೂಳುವುದಾಗಲೀ ಮಾಡದೆ ಬೆಟ್ಟದ ಬಂಡೆಗಳ ಮೇಲೆ ಇರಿಸಿ ಪ್ರಾಣಿ, ಪಕ್ಷಿಗಳಿಗೆ ಆಹಾರವಾಗಿಸಲಾಗುತ್ತದೆ. ಕೆಲ ದಿನಗಳ ನಂತರ ಗ್ರಾಮದವರು ಅಳಿದುಳಿದ ಮೂಳೆಗಳನ್ನು ಸಂಗ್ರಹಿಸಿ ಶವ ಸಂಸ್ಕಾರದ ಪದ್ಧತಿಯಂತೆ ಹೂಳುತ್ತಿದ್ದರು. ಹುತ್ರಿದುರ್ಗದಲ್ಲಿ ಹಿಂದೆ ಇಂತಹ ಪದ್ಧತಿ ಆಚರಣೆಯಲ್ಲಿತ್ತು ಎಂಬುದು ಸ್ಥಳೀಯರಿಂದ ತಿಳಿಯುತ್ತದೆ. ಈ ರೀತಿಯ ಕಲ್ಲುಸೇವೆ ನಡೆಯುತ್ತಿದ್ದ ಬೆಟ್ಟದ ಪಕ್ಕದಲ್ಲಿಯೇ ಕಬ್ಬಿಣ ಯುಗದ ಸಮಾಧಿಗಳು ದೊರೆತಿರುವುದು ವಿಶೇಷ.

ಕಬ್ಬಿಣ ಯುಗದ ಶವ ಸಂಸ್ಕಾರ ಪದ್ಧತಿಗೂ, ಕಲ್ಲುಸೇವೆ ಶವ ಸಂಸ್ಕಾರ ಪದ್ಧತಿಗೂ ಸಾಮ್ಯತೆಗಳಿರುವುದರಿಂದ ಕಲ್ಲುಸೇವೆಯೂ ಸುಮಾರು 3 ಸಾವಿರ ವರ್ಷಗಳ ಹಿಂದಿನ ಪದ್ಧತಿಯ ಮುಂದುವರಿಕೆಯಾಗಿರುವ ಸಾಧ್ಯತೆಗಳಿವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಈ ಕುರಿತು ಭಾರತೀಯ ಐತಿಹಾಸಿಕ ಸಂಶೋಧನಾ ಪರಿಷತ್ತು (ಐಸಿಎಚ್ಆರ್) ಉಪನಿರ್ದೇಶಕಿ ಡಾ.ಎಸ್.ಕೆ. ಅರುಣಿ

ಹುತ್ರಿದುರ್ಗ ಐತಿಹಾಸಿಕ ಸ್ಥಳ. ನಾಡಪ್ರಭು ಕೆಂಪೇಗೌಡರ ಕಾಲದ 1534ರ ಶಾಸನವಿರುವ ಕೋಟೆ ಇಲ್ಲಿದೆ. ಅಲ್ಲದೆ, ಟಿಪ್ಪು ಸುಲ್ತಾನ್ ಈ ಕೋಟೆಯನ್ನು ಬ್ರಿಟಿಷರ ವಿರುದ್ಧ ಹೋರಾಡಲು ಬಳಸಿಕೊಂಡಿದ್ದ. ಈ ಬಗೆಯ ಅನೇಕ ಐತಿಹಾಸಿಕ ದಾಖಲೆಗಳಿರುವ ಈ ಕೋಟೆ ಪಕ್ಕದಲ್ಲಿ ಯುವ ಸಂಶೋಧಕರು ಕಬ್ಬಿಣಯುಗದ ಅವಶೇಷಗಳನ್ನು ಪತ್ತೆ ಮಾಡಿರುವುದು ಬಹಳ ಮಹತ್ವದ್ದಾಗಿದೆ, ಎಂದು ಹೇಳಿದ್ದಾರೆ 40, . ([ [೧] ]ವರದಿ ವಿಜಯ ಕರ್ನಾಟಕ Jul 12, 2014, )

## ಪುರಾಣೇತಿಹಾಸ ಕಾಲದಲ್ಲಿ ಕರ್ನಾಟಕ

ದಕ್ಷಿಣಭಾರತಕ್ಕೆ ಆರ್ಯರ ಪ್ರವೇಶವಾದ ಕಾಲದಿಂದ ಈ ಪ್ರದೇಶದ ಇತಿಹಾಸ ಆರಂಭವಾಗುತ್ತದೆ. ಅಗಸ್ತ್ಯರು ದಕ್ಷಿಣದಲ್ಲಿ ಆರ್ಯ ಸಂಸ್ಕೃತಿ ಹರಡಿದರೆಂಬ ಸಂಗತಿ ಕಾವ್ಯ ಪುರಾಣಗಳಲ್ಲಿ ವಿಸ್ತೃತವಾಗಿದೆ.

ಮಹಾಭಾರತ ದ ರೀತ್ಯಾ ಅಗಸ್ತ್ಯರು ಕರ್ನಾಟಕದ ಉತ್ತರಭಾಗದಲ್ಲಿದ್ದ ವಾತಾಪಿ ಇಲ್ವಲರೆಂಬ ಆರ್ಯಕುಲದ್ವೇಷಿಗಳಾದ ದೈತ್ಯಸೋದರರಲ್ಲಿ ಕಿರಿಯನಾದ ಇಲ್ವಲನನ್ನು ಭಂಜಿಸಿ ವಾತಾಪಿಯ ಗರ್ವಭಂಗ ಮಾಡಿದರು. ಚಾಳುಕ್ಯ ರಾಜಧಾನಿಯಾದ ವಾತಾಪಿ (ಈಗಿನ ಬಾದಾಮಿ) ಈ ದೈತ್ಯಸೋದರರ ಸ್ಥಳವಾಗಿತ್ತೆಂದು ಇತಿಹಾಸಕಾರರ ನಂಬಿಕೆ. ಜಮದಗ್ನಿ ಪುತ್ರ

ಪರಶುರಾಮರು ಕ್ಷತ್ರಿಯ ನಿಗ್ರಹದ ಅನಂತರ ಇಡೀ ಭೂಮಿಯನ್ನು ಬ್ರಾಹ್ಮಣರಿಗೆ ದಾನಮಾಡಿ ಅನಂತರ ತನ್ನ ವಾಸಕ್ಕಾಗಿ ವರುಣದೇವನ ಪ್ರಸಾದದ ಫಲವಾಗಿ ಸಮುದ್ರದವರೆಗಿನ ಪಶ್ಚಿಮ ಕರಾವಳಿ ಕ್ಷೇತ್ರವನ್ನು ಪಡೆದರಂತೆ.. ಇದು ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಐತಿಹ್ಯ. ೧೨ನೆಯ ಶತಮಾನದ ಈ ಪ್ರದೇಶದ ಶಾಸನಗಳಲ್ಲೂ ಇದು ಉಕ್ತವಾಗಿದೆ.

ರಾಮಾಯಣ ದ ದಂಡಕಾರಣ್ಯ ಪ್ರದೇಶವೇ ಅನಂತರದ ಕರ್ನಾಟಕದ ಭೂಭಾಗ. ವಾನರಪ್ರಭುಗಳಾದ

ವಾಲಿ- ಸುಗ್ರೀವ ರ ಕಿಷ್ಕಿಂಧಾರಾಜ್ಯ ತುಂಗಭದ್ರಾ ತೀರದ ಈಗಿನ ಹಂಪೆ ಯ ಬಳಿಯಿರುವ ಪಂಪಾಸರೋವರದ ಪ್ರದೇಶವೆಂದು ಹೇಳಲಾಗಿದೆ. ಅಭಿನವ ಪಂಪನೆಂದು ಹೆಸರಾದ ನಾಗಚಂದ್ರನಿಂದ (ಸು.೧೧೦೦) ರಚಿತವಾದ ರಾಮಚಂದ್ರಚರಿತ ಪುರಾಣದಲ್ಲಿ ಕಿಷ್ಕಿಂಧೆಯ ರಾಜನೂ ಪ್ರಜೆಗಳೂ ವಾನರರಲ್ಲವೆಂದೂ ಅವರ ಧ್ವಜದ ಲಾಂಛನ ವಾನರಸಂಕೇತ ಹೊಂದಿದ್ದುದರಿಂದ ಅವರನ್ನು ಹಾಗೆಂದು ವರ್ಣಿಸಲಾಗಿದೆಯೆಂದೂ ಹೇಳಿದೆ.

ಇತಿಹಾಸ ದೃಷ್ಟಿಯಿಂದ ಕರ್ಣಾಟಕದ ಪ್ರಸ್ತಾಪ ಮೊಟ್ಟಮೊದಲಿಗೆ ಮಹಾಭಾರತದಲ್ಲಿ ಬಂದಿದೆ. ಮಹಿಷಕ, ವನವಾಸಕ ಮತ್ತು ಕುಂತಳಗಳು ಉಕ್ತವಾಗಿವೆ. ಮಹಿಷಕವೆಂದರೆ ಅನಂತರ ಕಾಲದ ಮಹಿಷಮಂಡಲ (ಈಗಿನ ಮೈಸೂರು); ಈಗಿನ ಬನವಾಸಿ ಪ್ರಾಂತ್ಯವೇ ವನವಾಸಕವೆಂದೂ ಅನಂತರ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿದ್ದ ರಾಜ್ಯವೇ

ಕುಂತಳವೆಂದೂ ಗುರುತಿಸಬಹುದಾಗಿದೆ. ರಾಮಾಯಣ ಮಹಾಭಾರತಗಳ ಘಟನಾವಳಿಗಳ ಕಾಲ ಚರ್ಚಾಸ್ಪದವಾಗಿದ್ದರೂ ಈಗಿನ ರೂಪದಲ್ಲಿ ಅವನ್ನು ಪ್ರ.ಶ.ಪು. ೨೦ ರಿಂದ ೧೦ನೆಯ ಶತಮಾನಗಳ ಕಾಲಕ್ಕೆ ವಿದ್ವಾಂಸರು ನಿರ್ದೇಶಿಸಿರುತ್ತಾರೆ. ಆದುದರಿಂದ ಕ್ರಿಸ್ತಶಕೆಗೂ ಮುನ್ನವೇ ಕರ್ನಾಟಕ ಅಸ್ತಿತ್ವಕ್ಕೆ ಬಂದಿತ್ತು.

*********************************************************************************************

# ಮೌರ್ಯರು

ಪ್ರ.ಶ.ಪು. ನಾಲ್ಕನೆಯ ಶತಮಾನದಲ್ಲಿ

ಮಗಧ ರಾಜ್ಯದ ನಂದ ಸಾರ್ವಭೌಮರ ಕಾಲದಲ್ಲಿ ಅವರ ಪ್ರಭಾವ ಕರ್ನಾಟಕದವರೆಗೂ ಹಬ್ಬಿತ್ತೆಂದು ತಿಳಿಸುವ ಐತಿಹಾಸಿಕ ಮಾಹಿತಿಗಳು ದೊರಕುತ್ತವೆ. ಮೌರ್ಯ ವಂಶದ ಸ್ಥಾಪಕನಾದ ಚಂದ್ರಗುಪ್ತ (ಪ್ರ.ಶ.ಪು.ಸು. ೩೨೪-೩೦೦) ಕರ್ನಾಟಕದ

ಶ್ರವಣಬೆಳಗೊಳ ದಲ್ಲಿ ತನ್ನ ಗುರುವಿನೊಡನೆ ಬಂದು ನೆಲೆಸಿದುದಾಗಿ ಐತಿಹ್ಯಗಳೂ ಮಧ್ಯಕಾಲೀನ ಶಾಸನಗಳೂ ತಿಳಿಸುತ್ತವೆ. ಆತನ ಮೊಮ್ಮಗನಾದ

ಅಶೋಕನ ಶಿಲಾಶಾಸನಗಳು ಈ ರಾಜ್ಯದ ಮಸ್ಕಿ, ಕೊಪ್ಪಳ ,

ಬ್ರಹ್ಮಗಿರಿ , ಸಿದ್ಧಾಪುರ ಮತ್ತು ಜಟಿಂಗ ರಾಮೇಶ್ವರಗಳಲ್ಲಿ ದೊರಕಿರುವುದಲ್ಲದೆ ಮಸ್ಕಿಯ ಬಳಿಯ ಸುವರ್ಣಗಿರಿ ಮತ್ತು ಬ್ರಹ್ಮಗಿರಿಯ ಬಳಿಯ ಇಸಿಲ ನಗರಗಳು ಆತನ ಪ್ರಾದೇಶಿಕ ಮುಖ್ಯ ನಗರಗಳಾಗಿದ್ದುವೆಂಬ ಅಂಶವನ್ನು ತಿಳಿಸುತ್ತವೆ. ಇದರಿಂದ ಕರ್ನಾಟಕದ ಬಹುಭಾಗ ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ್ದಿತೆಂದು ತಿಳಿದುಬರುತ್ತದೆ. ಅಶೋಕನ ರಾಜ್ಯ ಕಂಚಿಯವರೆಗೂ ಹಬ್ಬಿದ್ದು ಇಡೀ ಕರ್ನಾಟಕ ಅದರಲ್ಲಿ ಸೇರಿತ್ತೆಂಬುದು ನೀಲಕಂಠಶಾಸ್ತ್ರಿಯವರ ಅಭಿಪ್ರಾಯ.

*********************************************************************************************

# ಶಾತವಾಹನರು

ಕರ್ನಾಟಕವನ್ನಾಳಿದ ಮೊದಲ ಹಿರಿಯ ಐತಿಹಾಸಿಕ ಸಾಮ್ರಾಜ್ಯ - ಶಾತವಾಹನರು .

ಆರಂಭದಲ್ಲಿ ಶಾತವಾಹನರು ಇವರ ಸಾಮಂತರಾಗಿದ್ದರು - ಮೌರ್ಯರು .

ಶಾತವಾಹನರ ರಾಜಧಾನಿ - ಪೈಥಾನ್ ಅಥವಾ ಪ್ರತಿಷ್ಠಾನ್.

ಶಾತವಾಹನರು ಸುಮಾರು - 460 ವರ್ಷ ಸಾಮ್ರಾಜ್ಯ ಆಳಿದರು .

ಶಾತವಾಹನರು ಈ ಮೂಲದವರು - ಆಂಧ್ರ ಮೂಲದವರು .

ಪ್ರಸ್ತುತ ಪೈಥಾನ್ ಈ ಪ್ರದೇಶದಲ್ಲಿದೆ - ಮಹಾರಾಷ್ಟ್ರ ಔರಂಗಬಾದ್ ಜಿಲ್ಲೆಯಲ್ಲಿದೆ .

ರಾಜಕೀಯ ಇತಿಹಾಸ

ಶಾತವಾಹನ ವಂಶದ ಸ್ಥಾಪಕ ದೊರೆ - ಸಿಮುಖ .

ಸಿಮುಖನ ರಾಜಧಾನಿ - ಪೈಥಾನ್ .

ಸಿಮುಖ ಮೌರ್ಯ ದೊರೆ ನಿಶಿರ್ಮನನ್ನು ಕೊಂದು ಸ್ವತಂತ್ರನಾದ.

ಸಿಮುಖನನ್ನು " ರಾಜ ಸಿಮುಖ ಶಾತವಾಹನ " ಎಂದು ವರ್ಣಿಸಿರುವ ಶಾಸನ - ನಾನಾ ಘಾಟ್ ಶಾಸನ .

ಸಿಮುಖನಿಗೆ " ಶಾತವಾಹನ " ಎಂಬ ಹೆಸರನ್ನು ಕೊಟ್ಟಿರುವ ಗ್ರಂಥ - ಜೈನ ಗ್ರಂಥ .

ಸಿಮುಖನ ನಂತರ ಅಧಿಕಾರಕ್ಕೆ ಬಂದವರು - ಇವನ ತಮ್ಮ ಕೃಷ್ಣ .

ಒಂದನೇ ಶಾತಕರ್ಣಿ ಈತ - ಸಿಮುಖನ ಮಗ .

ನಾನಾ ಘಾಟ್ ಶಾಸನದ ಕರ್ತೃ - ನಾಗನೀಕ .

" ದಕ್ಷಿಣ ಪಥ ಸಾರ್ವಬೌಮ " ಹಾಗೂ ಅಪ್ರತ್ರಿಹಿತ ಎಂಬ ಬಿರುದುಳ್ಳ ಅರಸ - ಒಂದನೇ ಶಾತಕರ್ಣಿ .

ಶಾತವಾಹನರ ಏಳನೇ ದೊರೆ - ಹಾಲ .

ಪ್ರಾಕೃತದ ಶೃಂಗಾರ ಕಾವ್ಯದ ಹೆಸರು - ಗಥಾಸಪ್ತಸತಿ .

ಗಥಾಸಪ್ತಸತಿ ಕೃತಿಯ ಕರ್ತೃ - ಹಾಲ

“ ಬೃಹತ್ ಕಥಾ ಅಥವಾ ವಡ್ಡ ಕಥಾ “ ಕೃತಿಯ ಕರ್ತೃ - ಗುಣಾಢ್ಯ .

ಹಾಲನ ಪತ್ನಿಯ ಹೆಸರು - ಲೀಲಾವತಿ .

ಹಾಲನ ರಾಜ್ಯ ಭಾಷೆ - ಪ್ರಾಕೃತ,

ಶಾತವಾಹನರ ಪ್ರಸಿದ್ಧ ದೊರೆ - ಗೌತಮೀಪುತ್ರ ಶಾತಕರ್ಣಿ

ಗೌತಮೀಪುತ್ರ ಶಾತಕರ್ಣಿಯ ತಾಯಿಯ ಹೆಸರು - ಗೌತಮೀ ಬಾಲಾಶ್ರೀ

ಗುಹಾಂತರ ನಾಸಿಕ್ ಶಾಸನದ ಕರ್ತೃ -ಗೌತಮೀ ಬಾಲಾಶ್ರೀ

ತ್ರೈ ಸಮುದ್ರ ತೋಯಾ ಪಿತಾವಾಹನ ಹಾಗೂ ಶಾತವಾಹನ ಕುಲ ಪ್ರತಿಷ್ಠಾಪಿತ ಎಂಬ ಬಿರುದುಳ್ಳ ಅರಸ - ಗೌತಮೀಪುತ್ರ ಶಾತಕರ್ಣಿ

ದಕ್ಷಿಣ ಪಥೇಶ್ವರ ಎಂಬ ಬಿರುದನ್ನು ಹೊಂದಿದ್ದ ಶಾತವಾಹನ ದೊರೆ -ಪುಲುಮಾವಿ

ಶಾತವಾಹನರ ಸಾಂಸ್ಕೃತಿಕ ಕೊಡುಗೆಗಳು

ಆಡಳಿತ:-

ಶಾತವಾಹನರ ಆಡಳಿತದ ಮುಖ್ಯಸ್ಥ -ರಾಜ

ಪ್ರಾಂತ್ಯದ ರಾಜ್ಯಪಾಲ - ಅಮಾತ್ಯ

ರಾಜನ ಆಪ್ತ ಸಲಹೆಗಾರ ಹಾಗೂ ಸಹಾಯಕ -ರಾಜಮಾತ್ಯ

ಮುಖ್ಯಕಾರ್ಯದ ನಿರ್ವಾಹಕ ಅಧಿಕಾರಿ -ಮಹಾಮಾತ್ಯ

ಸರಕು ಸರಂಜಾಮುಗಳ ಮೇಲ್ವಚಾರಕ -ಬಂಡಾರಿಕ

ಕೋಶಾಧ್ಯಕ್ಷ - ಹೆರಾಣಿಕ

ವಿದೇಶಾಂಗ ವ್ಯವಹಾರದ ರಾಯಭಾರಿ -ಮಹಾಸಂಧಿ ವಿಗ್ರಾಹಿತ

ರಾಜನ ಆಜ್ಞೆಗಳನ್ನು ಬರೆಯುವವನು - ಲೇಖಕ

ಸಾಮ್ರಾಜ್ಯವನ್ನು ಅಹರ ,ವಿಷಯ,ನಿಗಮ ಮತ್ತು ಗ್ರಾಮಗಳಾಗಿ ವಿಂಗಡಿಸಲಾಗಿತ್ತು

ಅಹರದ ಮುಖ್ಯಸ್ಥ -ಅಮಾತ್ಯ

ಪಟ್ಟಣಗಳ ಆಡಳಿತ ವ್ಯವಸ್ಥೆ -ನಿಗಮದ ಅಧೀನದಲ್ಲಿ

ಗ್ರಾಮದ ಮೇಲ್ವಿಚಾರಕ -ಗ್ರಾಮೀಣಿ

ಸಾಮಾಜಿಕ ಸ್ಥಿತಿಗತಿ

ಸಮಾಜದಲ್ಲಿದ್ದ ಕುಟುಂಬದ ಪದ್ದತಿ -ಅವಿಭಕ್ತ ಕುಟುಂಬ ಪದ್ದತಿ

ಸಮಾಜದಲ್ಲಿ ಮಹಿಳೆಯರು ಪಡೆಯುತ್ತಿದ್ದ ಬಿರುದುಗಳು - ಮಹಾಭೋಜ, ಮಹಾರತಿ,ಸೇನಾಪತಿ,

ಶಾತವಾಹನರ ರಾಜವಂಶ -ಮಾತೃ ಪ್ರಧಾನ

ಸಮಾಜದ ವಿಭಾಗಗಳು -ಮಹಾರತಿ ,ಮಹಾಭೋಜಕ , ಸೇನಾಪತಿ ,ಹಾಗೂ ಸಾಮಾನ್ಯ ವರ್ಗ

ಆರ್ಥಿಕ ಸ್ಥಿತಿಗತಿ

ಶಾತವಾಹನರ ಮುಖ್ಯ ಕಸುಬು -ಕೃಷಿ

ರಾಜ್ಯದ ಆದಾಯದ ಮೂಲ - ಭೂಕಂದಾಯ

ಜನತೆ ರಾಜ್ಯಕ್ಕೆ ಕೊಡಬೇಕಾದ ಭಾಗ - 1/6

ಈ ದೇಶಗಳೊಂದಿಗೆ ವ್ಯಾಪಾರ ಸಂಬಂಧವನ್ನು ಹೊಂದಿದ್ದರು, - ಯುರೋಪ್ ಹಾಗೂ ರೋಮ್

ಇವರ ಕಾಲದ ವೃತ್ತಿ ಸಂಘಗಳನ್ನು ಈ ಹೆಸರಿನಿಂದ ಕರೆಯಲಾಗಿದೆ. - ಶ್ರೇಣಿ .

ವೃತ್ತಿ ಸಂಘದ ಮುಖ್ಯಸ್ಥನನ್ನ ಈ ಹೆಸರಿನಿಂದ ಕರೆಯಲಾಗಿದೆ - ಶೇಠಿ .

ಶಾತವಾಹನರ ಪ್ರಮುಖ ನಾಣ್ಯಗಳು - ದಿನಾರ , ಸುವರ್ಣ ( ಚಿನ್ನ ) ಕುಷಣ ( ಬೆಳ್ಳಿ ) ಹಾಗೂ ಕರ್ಷಣ , ದ್ರಮ್ಮ , ಪಣ ಗದ್ಯಾಣ .

ಹಾಲನ ಗಾಥಸಪ್ತ ಸತಿಯು ಈ ದೇವರ ಸ್ತುತಿಯೊಂದಿಗೆ ಪ್ರಾರಂಭವಾಗುತ್ತದೆ - ಶಿವ .

ಶಾತವಾಹನರ ಪೋಷಣೆಯಲ್ಲಿದ್ದ ಭಾಷೆ - ಪ್ರಾಕೃತ ಮತ್ತು ಸಂಸ್ಕೃತ .

ಶಾತವಾಹನರ ಆಡಳಿತ ಭಾಷೆ - ಪ್ರಾಕೃತ .

ಪ್ರಭೂತಸಾರ , ರಾಯನಸಾರ , ಸಮಯಸಾರ , ಪ್ರವಚನಸಾರ ಮತ್ತು ದ್ವಾದಶನು ಪ್ರೇಕ್ಷ ಕೃತಿಗಳ ಕರ್ತೃ - ಜೈನ ಪಂಡಿತ ಕಂದಾಚಾರ್ಯ .

“ ಕವಿ ಪುಂಗವ “ ಎಂಬ ಬಿರುದು ಪಡೆದ ದೊರೆ - ಹಾಲ .

ಹಾಲನ ಸಿಲೋನ್ ದಂಡೆ ಯಾತ್ರೆಗಳನ್ನು ತಿಳಿಸುವ ಕೃತಿ - ಲೀಲಾವತಿ .

ಗುಣಾಡ್ಯನ ಬೃಹತ್ ಕಥಾ ಈ ಭಾಷೆಯಲ್ಲಿದೆ - ಪೈಶಾಚ .

“ ಮಾಧ್ಯಮಿಕ ಸೂತ್ರ “ ಕೃತಿಯ ಕರ್ತೃ - ನಾಗಾರ್ಜುನ .

“ಕಾತಂತ್ರ ಸಂಸಕೃತದ “ ವ್ಯಾಕರಣ ಕೃತಿಯ ಕರ್ತೃ - ಸರ್ವವರ್ಮ.

“ ಅಮರಾವತಿಯ ಸ್ಥೂಪ “ ಇವರ ಕಾಲಕ್ಕೆ ಸೇರಿದ್ದು - ಶಾತವಾಹನರು .

ಶಾತವಾಹನರ ನಿರ್ಮಿಸಿದ ಸ್ಥೂಪಗಳಲ್ಲಿ ಅತ್ಯಂತ ದೊಡ್ಡದ್ದು - ಅಮರಾವತಿ ಸ್ಥೂಪ .

ಅಜಂತಾ ಗುಹಾಂತರ ದೇವಾಲಯ ಇವರ ಕಾಲದಿಂದ ಆರಂಭಗೊಂಡಿತು - ಶಾತವಾಹನರು .

Extra Tips :-

ಶಾತವಾಹನರನ್ನು “ ಕುಂತಲ ದೊರೆ “ ಎಂದು ಸಂಭೋದಿಸಿದ ಕೃತಿಯ ಹೆಸರೇನು - ರಾಜ ಶೇಖರ ಕವಿಯ “ಕಾವ್ಯ ಮಿಮಾಂಸೆ “ .

ಹಾಲ ದೊರೆಯ ಇನ್ನೊಂದು ಹೆಸರು - ಹಾಲಾಯುಧ .

ಬನವಾಸಿಯ ಪ್ರಾಚೀನ ಹೆಸರು - ವೈಜಯಂತಿ ಪುರ ( ವಿಜಯ ಪಕಾಕೆಪುರ ) .

ಪುಲುಮಾಯಿಯ ರಾಜಧಾನಿ - ಬನವಾಸಿ .

ಶಾತವಾಹನರ ರಾಜ್ಯದ ವಿಭಾಗಗಳಳು - ಜನಪದ ( ಡಿವಿಷನ್ ) ವಿಷಯ ( ಜಿಲ್ಲೆ ) ಸೀಮೆ ( ತಾಲ್ಲೂಕ್ ).

ಶಾತವಾಹನರ ಸಾಗರೋತ್ತರ ವ್ಯಾಪಾರದ ಕುರಿತು ಬೆಳಕು ಚೆಲ್ಲುವ ಗ್ರೀಕ್ ಕೃತಿ - ಅನಾಮದೇಯ - Periples of the Erithriyan Sea .

ಗುಪ್ತರು ಮತ್ತು ಚೋಳರ ಕಾಲದ " ಬೃಹತ್ ಭಾರತದ " ಸಾಧನೆಗೆ ನಾಂದಿ ಹಾಡಿದವರು - ಶಾತವಾಹನರು .

" ಬಾರತದ ಪ್ರಪ್ರಥಮ ಶಿವದೇವಾಲಯ " ಎಂದು ಪ್ರಸಿದ್ದಿಯನ್ನು ಪಡೆದ ದೇವಾಲಯ - ತಾಳಗುಂದದ ಏಕ ಮಂಟಪದ ಶಿವ ದೇವಾಲಯ " .

- ತಾಳಗುಂದದ ಏಕ ಮಂಟಪದ ಶಿವ ದೇವಾಲಯ ಇವರ ಕಾಲಕ್ಕೆ ಸೇರಿದೆ - ಶಾತವಾಹನರು .

ಶಾತವಾಹನರ ವರ್ತಕರನ್ನು ಈ ಹೆಸರಿನಿಂದ ಕರೆಯಲಾಗಿದೆ - ನೈಗಾಮ .

ಆಂದ್ರ ಭೃತೃಗಳು ಎಂದು ಕರೆಯಲ್ಪಟ್ಟವರು - ಶಾತವಾಹನರು .

ಶಾತವಾಹನ ಶಕೆಯ ಆರಂಭ - ಕ್ರಿ.ಶ.78.

ಶಾತವಾಹನ ಶಕೆಯನ್ನು ಆರಂಭಿಸಿದವರು - ಶಾತವಾಹನರು ( ಹಾಲ ) .

ತ್ರೈಸಮುದ್ರತೋಯ ಪೀತವಾಹನದ ಅರ್ಥ - ಮೂರು ಸಮುದ್ರಗಳ ನೀರನ್ನು ಕುಡಿದು ಕುದುರೆಯನ್ನು ವಾಹನವಾಗಿ ಪಡೆದವ .

ಶಾತವಾಹನರ ಪ್ರಸಿದ್ಧ ಕಲಾ ಕೇಂದ್ರಗಳು - ಕರ್ಲೆ , ಅಜಂತ . ಅಮರಾವತಿ , ನಾಗರ್ಜುನ ಕೊಂಡ , ಘಂಟಸಾಲಾ ,ನಾಸಿಕ್ , ಪೈಟಾನ್ .

ಮೌರ್ಯರ ಪತನಾ ನಂತರ ದಖನ್ ಪ್ರಸ್ಥಭೂಮಿಯಲ್ಲಿ ಪ್ರಪ್ರಥಮ ಐತಿಹಾಸಿಕ ಹಿರಿಯ ಸಾಮ್ರಾಜ್ಯ ವನ್ನು ಸ್ಥಾಪಿಸಿದವರು - ಶಾತವಾಹನರು .

ಮೂರು ಸಾಗರಗಳ ಒಡೆಯರು ಎಂದು ಕರೆಯಲ್ಪಟ್ಟವರು - ಶಾತವಾಹನರು .

ಶಾತವಾಹನರು ಪ್ರಾರಂಭದಲ್ಲಿ - ಮೌರ್ಯರ ಸಾಮಂತರಾಗಿದ್ದರು .

ಎಲ್.ಡಿ.ಬಾರ್ನೆಟ್ ಪ್ರಕಾರ ಶಾತವಾಹನರ ಮೊದಲ ರಾಜಧಾನಿ ಶೀ ಕಾಕುಲು ಹಾಗೂ ನಂರದ ರಾಜಧಾನಿ - ಧನ್ಯ ಕಟಕ .

ಶಾತವಾಹನರ ಲಾಂಛನ - ಕುದುರೆ .

ಶಾತವಾಹನರ ಏಳಿಗೆಗೆ ಕಾರಣ :-

ಮೌರ್ಯರ ಸಾಮ್ರಾಜ್ಯದ ಪತನ

ದಖನ್ನ್ ನಲ್ಲಿ ಉಂಟಾದ ಆರ್ಥಿಕ ಸಾಮಾಜಿಕ ಬದಲಾವಣೆ .

ಮೌರ್ಯರ ಸಂಬಂಧದಿಂದಾಗಿ ಉಂಟಾದ ಕಬ್ಬಿಣದ ಬಳಕೆ ಹಾಗೂ ಅದರ ಪರಿಚಯ .

ದಕ್ಷಿಣ ಭಾರತದಲ್ಲಿ ಹೆಚ್ಚಾದ ಕೃಷಿ ವಿಸ್ತರಣೆ .

ಶಾತವಾಹನ ಎಂಬ ಪದವು " ಆಸ್ಟ್ರೋ ಏಷ್ಯಾಟಿಕ್ " ಭಾಷೆಯ ಪದವೆಂದೂ ಪರ್ಶಿಯ ಅಥವಾ ಸಾತ ಎಂದರೆ ಕುದುರೆ ಎಂದು ಹಾಗೂ ್ದರಿಂದ ಅವರು ವಾಹನವಾಗುಳ್ಳವರೆಂದು ಅಭಿಪ್ರಾಯ ಪಡಲಾಗಿದೆ .

ಶಾತವಾಹನರ ಮೂಲ ನೆಲೆ - ಸಾತ ನಿಹಾರ ವಾಗಿತ್ತು ಎಂದು ತಿಳಿಸುವ ಶಾಸನಗಳು ಮಾಯಾಕಮೋನಿ ಮತ್ತು ಹಿರೇಹಡಗಲಿ ಶಾಸನ .

ಪುರಾಣಗಳಲ್ಲಿ ಸಿಮುಖನನ್ನು ಈ ಹೆಸರಿನಿಂದ ಕರೆಯಲಾಗಿದೆ - ವೃಷಲ .

ಸಿಮುಖನ್ನ "ಏಕ ಬ್ರಾಹ್ಮಣ " ಎಂದು ಕರೆದ ಶಾಸನ - ನಾಸಿಕ್ ಶಾಸನ .

ಗೌತಮಿ ಪುತ್ರ ಶಾತಕರ್ಣಿಯ ಕಾಲಾವಧಿ - ಕ್ರಿ.ಪೂ.202 ಗಿಂದ 186 ರವರೆಗೆ .

ದಕ್ಷಿಣ ಪಥೇಶ್ವರ ಎಂಬ ಬಿರುದ್ದನ್ನು ತನ್ನ ಪ್ರಭುತ್ವದ ಸಂಕೇತವಾಗಿ ಧರಿಸಿದ್ದ ಶಾತವಾಹನ ದೊರೆ - ಗೌತಮಿಪುತ್ರ ಶಾತಕರ್ಣಿ .

ಹಾಲನ ದಂಡ ನಾಯಕನ ಹೆಸರು - ವಿಜಯಾನಂದ .

ತಾನೊಬ್ಬನೆ ಬ್ರಾಹ್ಮಣ ಎಂದು ಹೇಳಿಕೊಂಡ ಶಾತವಾಹನ ಅರಸ - ಗೌತಮಿ ಪುತ್ರ ಶಾತಕರ್ಣಿ .

ಗೋವರ್ದನ ಜಿಲ್ಲೆಯಲ್ಲಿ " ಬೆನಕಟಕ " ಎಂಬ ಪಟ್ಟಣಕ್ಕೆ ತಳಹದಿಯನ್ನು ಹಾಕಿದವರು - ಗೌತಮಿ ಪುತ್ರ ಶಾತಕರ್ಣಿ .

“ ನವನಗರ “ ಎಂಬ ಪಟ್ಟವನ್ನು ನಿರ್ಮಿಸಿದವರು – ಎರಡೆನೇ ಪುರುಮಾಯಿ .

‘ ನವನಗರ ಸ್ವಾಮಿ “ ಎಂದು ಬಿರುದನ್ನು ಪಡೆದವನು – 2 ನೇ ಪುಲುಮಾಯಿ .

ಶಾತವಾಹನರ ಪತನಕ್ಕೆ ಕಾರಣಗಳು :-

ಶಕರ ದಾಳಿ

ಬುಡಕಟ್ಟಿನವರಿಂದ ಶಾತವಾಹನ ಪ್ರದೇಶಗಳ ಮೇಲೆ ಆಕ್ರಮಣ.

ನಾಗಾಗಳ ದಾಳಿ

ಪಲ್ಲವರು ಮತ್ತು ವಾಕಾಟಕರ ಪ್ರಬಲತೆ .

EXTRA TIPS

ಶಾತವಾಹನರ ಕಾಲದ ಅತ್ಯಂತ ಕಿರು ಆಡಳಿತದ ಘಟಕ – ಗ್ರಾಮ

ಶಾತವಾಹನರ ಕಾಲದಲ್ಲಿ ಹೆಚ್ಚು ಪ್ರಚಲಿತದಲ್ಲಿದ್ದ ಸೇನಾ ನಿಯಂತ್ರಣ ವ್ಯವಸ್ಥೆ – ಗೌಲವೆಯಾ .

ಶಾತವಾಹನರ ಪ್ರಮುಖ ತೆರಿಗೆಗಳು – ದೆಯ , ಮೆಯ , ಭಾಗ , ಕರ

ರಾಜನನನ್ನು ತಾಯಿಯ ಹೆಸರಿನಿಂದ ಕರೆಯುವ ವಾಡಿಕೆಯನ್ನು ಇಟ್ಟು ಕೊಂಡಿದ್ದ ಅರಸರು – ಶಾತವಾಹನರು .

ಗ್ರೀಕರು ಹಾಗೂ ಶಕರಿಂದ ಪ್ರಭಾವಿತವಾದ ಶಾತವಾಹನರು ಟಂಕಿಸಿದ ಬೆಳ್ಳಿಯ ನಾಣ್ಯದ ಹೆಸರು – ಕಾರ್ಷಣ

ಶಾತವಾಹನರ ರಾಜಕುಮಾರ ಗುರುವಾಗಿದ್ದ ಜೈನರು – ಕಂದಕಂದಚಾರ್ಯ .

“ ಚತ್ಸುಸ್ಸಮಯ ಸಮುದ್ದರಣ “ ಎಂಬ ಕೀರ್ತಿಗೆ ಪಾತ್ರರಾದ ಅರಸರು – ಶಾತವಾಹನರು .

ತಾಳಗುಂದ ಅಗ್ರಹಾರದ ನಿರ್ಮಾತೃಗಳು – ಶಾತವಾಹನರು .

ಶಾತವಾಹನರ ಕಾಲದಲ್ಲಿ ಪ್ರಸಿದ್ಧಿಯಲ್ಲಿದ್ದ ಲಿಪಿ – ಬ್ರಾಹ್ಮಿಲಿಪಿ .

ಜನಪ್ರಿಯತೆಯಲ್ಲಿ ರಾಮಯಾಣ ಮತ್ತು ಮಹಾ ಭಾರತಗಳಿಗೆ ಸರಿಸಮಾನವಾಗಿ ನಿಲ್ಲ ಬಲ್ಲ ಶಾತವಾಹನರ ಕಾಲದ ಕೃತಿ – ಬೃಹತ್ ಕಥಾ .

“ಕಾತಂತ್ರ “ ವ್ಯಾಕರಣ ಗ್ರಂಥದ ಕರ್ತೃ - ಸರ್ವಧರ್ಮ

ಶಾತವಾಹನರ ಕಾಲದ ಚೈತ್ಯಗಳು ವಿಹಾರಗಳು ಹಾಗೂ ಸ್ಥೂಪಗಳನ್ನು “ಶಿಲಾವಾಸ್ತುಶಿಲ್ಪ “ ಎಂದು ಕರೆದ ಯಾಂತ್ರಿಕ - ಪೆರ್ಸಿ ಬ್ರೌನ್ .

ಚೈತ್ಯ ಎಂದರೆ - ಪ್ರಾರ್ಥನಾ ಗೃಹ .

ಶಾತವಾಹನರ ಕಾಲದಲ್ಲಿ ಉಗಮವಾದ ಚಿತ್ರಕಲಾ ಶೈಲಿ - ಅಜಾಂತ ಚಿತ್ರ ಕಲಾ ಶೈಲಿ .

ವಿಹಾರ ಎಂದರೆ - ಬೌದ್ಧ ಬಿಕ್ಷುಗಳ ನಿವಾಸ .

ಸ್ಥೂಪ ಎಂದರೆ - ಬುದ್ಧನ ಯಾವುದಾದರೊಂದು ಅವಶೇಷಗಳ ಮೇಲೆ ನಿರ್ಮಾಣವಾದ ವೃತ್ತಾಕಾರದ ನಿರ್ಮಾಣ .

ಸಿಮುಖನು ಯಾವ ಸಂತತಿಯ ದೊರೆ, ಯಾರನ್ನು ಸೋಲಿಸಿ ಸಾಮ್ರಾಜ್ಯ ಸ್ಥಾಪಿಸಿದ -ಕಣ್ವ ಸಂತತಿಯ ಕೊನೆಯ ಅರಸ , ಸುಶರ್ಮ

ಶಾತವಾಹನರು ಈ ಜಾತಿಗೆ ಸೇರಿದವರು - ಬ್ರಾಹ್ಮಣ

ಶಾತವಾಹನರ ಮೂಲದ ಕುರಿತು ಮಾಹಿತಿ ನೀಡಿರುವ ಪುರಾಣಗಳು - ಮತ್ಸ್ಯ ಪುರಾಣ ವಿಷ್ಣು ಪುರಾಣ

ಶಾತವಾಹನರ ಕೊನೆಯ ಪ್ರಮುಖ ದೊರೆ - ಯಜ್ಞಶ್ರೀ ಶಾತಕರ್ಣಿ

ಶಾತವಾಹನರ ಕೊನೆಯ ದೊರೆ - ಎರಡನೇ ಪುಲಿಮಾಯಿ

ಸಿಮುಖನ ಆರಂಭದ ರಾಜಧಾನಿ - ಶ್ರೀ ಕಾಕುಲಂ

ಡಾ, ಭಂಡಾರ್ಕರ್ ರವರ ಪ್ರಕಾರ ಆಂಧ್ರದಲ್ಲಿನ ಶಾತವಾಹನರ ರಾಜಧಾನಿ - ಧಾನ್ಯಕಟಿಕಾ /ಧರಣಿಕೋಟೆ

ಶಾತವಾಹನರ ಸಾಹಿತಿ ದೊರೆ - ಹಾಲ

ದಖ್ಖನ್ ಭಾರತದಲ್ಲಿ ಮೊದಲು ನಾಣ್ಯಗಳನ್ನು ಟಂಕಿಸಿದ ಮನೆತನ - ಶಾತವಾಹನ

ಪ್ರೇಷ ಎಂಬ ಕೃತಿಯ ಕರ್ತೃ - ದ್ವಾದಸನ

ದಿ ಜಿಯೋಗ್ರಫಿ ಕೃತಿಯ ಕರ್ತೃ - ಟಾಲೆಮಿ

ಶಾತವಾಹನರ ಕುಲ ,ಯಶಸ್ಸು ಪ್ರತಿಷ್ಠಾಪನಾಕಾರ ಎಂಬ ಬಿರುದನ್ನು ಹೊಂದಿದ್ದ ದೊರೆ,- ಗೌತಮೀಪುತ್ರಶಾತಕರ್ಣಿ

ದಕ್ಷಿಣ ಪತಾಪತಿ ಎಂಬ ಬಿರುದನ್ನು ಹೊಂದಿದ್ದ ದೊರೆ - 1ನೇ ಶಾತಕರ್ಣಿ

ಇವರ ಮೊದಲ ಆಡಳಿತ ವಿಭಾಗ - ಆಹಾರ /ಪ್ರಾಂತ್ಯ

ಆಹಾರವನ್ನು ನೋಡಿಕೊಳ್ಳುತ್ತಿದ್ದವರು - ಅಮಾತ್ಯ

ಶಾತವಾಹನರ ಅತ್ಯಂತ ಕಿರಿಯ ಆಡಳಿತ ಘಟಕ - ಗ್ರಾಮ

ಇವರ ಕಾಲದ ಮುಖ್ಯ ಬಂದರುಗಳು - ಕಲ್ಯಾಣ, ಸೋಪಾರ, ಬಲಿಗಜ ,ಠಣಕ,

ವಿಹಾರವನ್ನು ಈ ಹೆಸರಿನಿಂದ ಕರೆಯುತ್ತಿದ್ದರು - ಸಂಘಾರಾಮ

ಕಾರ್ಲೇಯ ಚೈತ್ಯದ ನಿರ್ಮಾತೃ - ಭೂತಪಾಲಶೆಟ್ಟಿ

ಆಂಧ್ರದ ನಾಗಾರ್ಜುನಕೊಂಡದ ಪ್ರಸ್ತುತ ಹೆಸರು - ವಿಜಯಪುರಿ

ಶಾತವಾಹನ ಸಾಮ್ರಾಜ್ಯದ ಸ್ಥಾಪನೆಯಾದ ವರ್ಷ - ಕ್ರಿ.ಪೂ. 235

ಶಾತವಾಹನರ ನಂತರ ದ.ಭಾರತದಲ್ಲಿ ಪ್ರಸಿದ್ಧರಾದವರು - ಕದಂಬರು

ಇವರು ಈ ಧರ್ಮವನ್ನು ಅನುಸರಿಸಿದರು - ವೈದಿಕ ಧರ್ಮ

ಈ ಕಾಲದ ರಾಜ್ಯಗಳು ಇವರ ಆಡಳಿತದಲ್ಲಿತ್ತು - ಅಮಾತ್ಯ

ಮೊದಲ ಶಾತಕರ್ಣಿಯ ಪತ್ನಿಯ ಹೆಸರು - ನಾಗವಿಕ

ಮೊದಲ ಶಾತಕರ್ಣಿಯೊಂದಿಗೆ ಯುದ್ಧ ಮಾಡಿದ ಕಳಿಂಗ ಅರಸ - ಖಾರವೇಲ

ಗೌತಮೀಪುತ್ರ ಶಾತಕರ್ಣಿ ಶಾತವಾಹನರ - 23 ನೇ ಅರಸ

ಏಕಬ್ರಾಹ್ಮಣ , ಆಗಮನಿಲಯ ,ಏಕಶೂರ ,ಏಕಧನುರಾರ್ಧ ಎಂಬ ಬಿರುದನ್ನು ಹೊಂದಿದ ಶಾತವಾಹನ ದೊರೆ.- ಗೌತಮೀಪುತ್ರ ಶಾತಕರ್ಣಿ

ಕಾಂಬೋಜ ರಾಜ್ಯವನ್ನು ಸ್ಥಾಪಿಸಿದ ದೊರೆ - ಕೌಂಡಿನ್ಯ

ಮೌಕದಾನಿ ಶಾಸನದ ಕರ್ತೃ - ಮೂರನೇ ಪುಲುಮಾರು

ಇವರ ಕಾಲದಲ್ಲಿ ಚಿನ್ನದ ನಾಣ್ಯವನ್ನು ಈ ಹೆಸರಿನಿಂದ ಕರೆಯುತ್ತಿದ್ದರು - ಸುವರ್ಣ

ಕಾಮಸೂತ್ರದ ಕರ್ತೃ - ವಾತ್ಸಾಯನ ( ಸಂಸ್ಕೃತ ಕವಿ)

ಪ್ರಾಕೃತ ಭಾಷಾ ಇತಿಹಾಸದಲ್ಲಿ ಇವರ ಕಾಲ ಸುವರ್ಣಯುಗವಾಗಿದೆ. - ಶಾತವಾಹನರ

ಇವರ ಕಾಲದ ಸೇನಾ ಶಿಬಿರಗಳನ್ನು ಈ ಹೆಸರಿನಿಂದ ಕರೆಯಲಾಗಿದೆ. - ಕಟಕ

ಇವರ ಕಾಲದ ಪ್ರಮುಖ ಪ್ರಯಾಣಸಾಧನ - ಎತ್ತಿನಗಾಡಿ

ಕಾಲದಲ್ಲಿ ರಾಜ್ಯಾಡಳಿತದಲ್ಲಿ ಭಾಗವಹಿಸಿದ ಮಹಿಳೆಯರು -ಗೌತಮೀಬಾಲಶ್ರೀ, ನಾಗನಿಕ

'The Guide to Geography' ಕೃತಿಯ ಕರ್ತೃ - ಟಾಲೆಮಿ

ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಭೂಮಿಯನ್ನು ದಾನವಾಗಿ ನೀಡಿದ ವಂಶ -ಶಾತವಾಹನರು

ಶಕಯವನ ಪಲ್ಲವ ನಿಸೂಧನ ಎಂಬ ಬಿರುದನ್ನು ಹೊಂದಿದವರು - ಗೌತಮೀಪುತ್ರ ಶಾತಕರ್ಣಿ

ಅಶೋಕನ ಈ ಶಾಸನದಲ್ಲಿ ಶಾತವಾಹನರು ಆಂಧ್ರ ಭೃತ್ಯರು ಎಂದು ಕರೆದಿದೆ. - 12 ನೇ ಶಾತವಾಹನ

ಅಶೋಕನ ಸಮಕಾಲೀನ ಶಾತವಾಹನ ದೊರೆ. - ಕೃಷಣ

ಇವರ ಕಾಲದ ಗ್ರಾಮಾಧಿಕಾರಿಗಳನ್ನು ಈ ಹೆಸರಿನಿಂದ ಕೆರಯುತ್ತಿದ್ದರು - ಮಹಾ ಆರ್ಯಕರು

ಶಾತವಾಹನ ಕಾಲದ ಉಗ್ರಾಣಾಧಿಕಾರಿಗಳು -ಭಂಡಾರಕರು

ಇವರ ಕಾಲದ ಹಣಕಾಸಿನ ಆಡಳಿತಾದಿಕಾರಿಗಳು - ಹಿರಣ್ಯಕರು

ಭೂ ದಾಖಲಾತಿ ಅಧಿಕಾರಿಗಳು -ನಿಬಂಧಕರು

ಇವರ ಸಮಾಜದಲ್ಲಿ ವಿಜೋತ್ತಮರೆಂದು ಕರೆಯಲ್ಪಡುತ್ತಿದ್ದವರು - ಬ್ರಾಹ್ಮಣರು .

ವರ್ಣ ಸಂತರ ಎಂದರೆ - ಶೂದ್ರರ ನಡುವಿನ ವಿವಾಹ ಸಂಬಧ ಶಾತವಾಹನರ ಚಿತ್ರಕಲೆಗೆ ಬೆಳಕು ಚೆಲ್ಲುವ ಕೃತಿ – ಕುಲ್ಲವಗ

*********************************************************************************

# ಹೊಯ್ಸಳರು

ಹೊಯ್ಸಳ ಸಾಮ್ರಾಜ್ಯದ ಆಶ್ರಯದಲ್ಲಿದ್ದ ಕನ್ನಡ ಕವಿಗಳು ಮತ್ತು ಬರಹಗಾರರು

(೧೧೦೦-೧೩೪೩ ಕ್ರಿ.ಶ)

ನಾಗಚಂದ್ರ 1105

ಕಾಂತಿ 1108

ರಾಜಾದಿತ್ಯ 12th. c

ಹರಿಹರ 1160-1200

ಉದಯಾದಿತ್ಯ 1150

ವೃತ್ತ ವಿಲಾಸ 1160

ಕೆರೆಯ ಪದ್ಮರಸ 1165

ನೇಮಿಚಂದ್ರ 1170

ಸುಮನೋಬನ 1175

ರುದ್ರಭಟ್ಟ 1180

ಅಗ್ಗಳ 1189

ಪಾಲ್ಕುರಿಕಿ ಸೋಮನಾಥ 1195

ಸುಜನೋತ್ತಮ್ಸ(ಬೋಪಣ್ಣ) 1180

ಕವಿ ಕಾಮ 12th c.

ದೇವಕವಿ 1200

ರಾಘವಾಂಕ 1200-1225

ಭಂದುವರ್ಮ 1200

ಪಾರ್ಶ್ವ ಪಂಡಿತ 1205

ಮಘನಂದ್ಯಾಚಾರ್ಯ 1209

ಜನ್ನ 1209-1230

ಪುಲಿಗೆರೆ ಸೋಮನಾಥ 13th c.

ಹಸ್ತಿಮಲ್ಲ 13th c.

ಸೋಮರಾಜ 1222

ಗುಣವರ್ಮ 1235

ಪೊಳಲ್ವದಂಡನಾಥ 1224

ಆಂಡಯ್ಯ 1217-1235

ಸಿಸುಮಾಯಣ 1232

ಮಲ್ಲಿಕಾರ್ಜುನ 1245

ನರಹರಿ ತೀರ್ಥ 1281

ಕುಮಾರ ಪದ್ಮರಸ 13th c.

ಮಹಾಬಲ ಕವಿ 1254

ಕೇಶಿರಾಜ 1260

ಕುಮುದೇಂದು 1275

ರಟ್ಟ ಕವಿ 1300

ನಾಗರಾಜ 1331

ಪ್ರಸ್ತಾವನೆ

ಹೊಯ್ಸಳ ವಂಶ ಸುಮಾರು ಕ್ರಿ.ಶ.

೧೦೦೦ ದಿಂದ ಕ್ರಿ.ಶ. ೧೩೪೬ರ ವರೆಗೆ ದಕ್ಷಿಣ ಭಾರತದ ಕೆಲ ಭಾಗಗಳನ್ನು ಆಳಿದ ರಾಜವಂಶ. ಹೊಯ್ಸಳ ಸಾಮ್ರಾಜ್ಯದ ರಾಜಧಾನಿ ದ್ವಾರಸಮುದ್ರ (ಇಂದಿನ

ಹಳೇಬೀಡು ), ಹಾಸನ ಜಿಲ್ಲೆಯಲ್ಲಿದೆ. ಜಾನಪದ ನಂಬಿಕೆಯಂತೆ, 'ಹೊಯ್ಸಳ' ಎಂಬ ಹೆಸರು ಈ ವಂಶದ ಸಂಸ್ಥಾಪಕ

ಸಳನಿಂದ ವ್ಯುತ್ಪತ್ತಿಯಾದದ್ದು. ಚಾರಿತ್ರಿಕವಾಗಿ ಈ ಸಂಸ್ಥಾಪಕನ ಹೆಸರು ನೃಪಕಾಮ ಎಂದು ಊಹಿಸಲಾಗಿದೆ. ಹೊಯ್ಸಳ ಸಾಮ್ರಾಜ್ಯವನ್ನು ವಿಸ್ತರಿಸಿದ ಅರಸರಲ್ಲಿ ಮೊದಲಿಗ ವಿನಯಾದಿತ್ಯ (ಆಡಳಿತ: ೧೦೪೭ - ೧೦೯೮ ).

## ಹೊಯ್ಸಳ ಅರಸ

ಹೊಯ್ಸಳ ಸಾಮ್ರಾಜ್ಯದ ಅತ್ಯಂತ ಪ್ರಸಿದ್ಧ ಅರಸು ಬಿಟ್ಟಿಗ/ಬಿಟ್ಟಿದೇವ, ಈತನ ನಂತರದ ಹೆಸರು ವಿಷ್ಣುವರ್ಧನ (ಆಡಳಿತ: ಸು ೧೧೧೦-೧೧೪೨). ವಿಷ್ಣುವರ್ಧನನ ಆಡಳಿತದ ಕಾಲದಲ್ಲಿ ಹೊಯ್ಸಳ ಸಾಮ್ರಾಜ್ಯ ಇಂದಿನ

ಕರ್ನಾಟಕ ರಾಜ್ಯದ ಬಲಿಷ್ಠ ಸಾಮ್ರಾಜ್ಯವಾದ ದ್ದಲ್ಲದೆ ಪಕ್ಕದ ರಾಜ್ಯಗಳಲ್ಲಿಯೂ ವಿಸ್ತರಿಸಿತು. ವಿಷ್ಣುವರ್ಧನನ ಕಾಲದಲ್ಲಿ ಕಲೆ ಮತ್ತು ಶಿಲ್ಪಕಲೆಗೆ ಬಹಳ ಪ್ರೋತ್ಸಾಹ ನೀಡಲಾಯಿತು. ಈತನ ರಾಣಿ ಶಾಂತಲೆ ಪ್ರಸಿದ್ಧ ಭರತನಾಟ್ಯ ನರ್ತಕಿ ಮತ್ತು ಶಿಲ್ಪಕಲೆಯಲ್ಲಿ ಆಸಕ್ತಿಯಿದ್ದವಳೆಂದು ಹೆಸರಾಗಿದ್ದಾಳೆ. ಈ ಕಾಲದಲ್ಲಿಯೇ ಹೊಯ್ಸಳ ಶಿಲ್ಪಕಲೆ ಯ ಅತ್ಯುನ್ನತ ಉದಾಹರಣೆಗಳು ಮೂಡಿ ಬಂದವು.

ಹಳೆಬೀಡಿನ ಹೊಯ್ಸಳೇಶ್ವರ ದೇವಾಲಯವನ್ನು ಕಟ್ಟಲು ೮೬ ವರ್ಷಗಳು ಬೇಕಾದವು! ಹಾಗೆಯೇ

ಬೇಲೂರಿನ ಚನ್ನಕೇಶವ ದೇವಸ್ಥಾನ ೧೦೩ ವರ್ಷಗಳ ಪರಿಶ್ರಮದ ಫಲ. ಹೊಯ್ಸಳ ಶಿಲ್ಪ ಕಲೆ ದ್ರಾವಿಡ ಶೈಲಿ ಮತ್ತು ಆರ್ಯ ಶೈಲಿಗಳೆರಡರ ಗುಣಗಳನ್ನೂ ತನ್ನದಾಗಿಸಿಕೊಂಡಿದೆ. ಹೊಯ್ಸಳ ದೇವಾಲಯಗಳಲ್ಲಿ ಸಹಸ್ರಾರು ಸುಂದರ ಕೆತ್ತನೆಗಳನ್ನು ಕಾಣಬಹುದು. ರಾಮಾಯಣ

ಮಹಾಭಾರತಗಳ ದೃಶ್ಯಗಳು, ಸುಂದರ ನರ್ತಿಸುವ ಶಿಲಾಬಾಲಿಕೆ ಯರಿಂದ ಕೂಡಿದ ಈ ದೇವಾಲಯಗಳು ಹೊಯ್ಸಳ ಸಾಮ್ರಾಜ್ಯ ಬಿಟ್ಟು ಹೋದ ಮುಖ್ಯ ಸಂಪ್ರದಾಯ. ವೀರ ಬಲ್ಲಾಳನ (ಆಡಳಿತ: ೧೧೭೩-೧೨೨೦) ಕಾಲದಲ್ಲಿ ಹೊಯ್ಸಳ ಸಾಮ್ರಾಜ್ಯ ದಕ್ಷಿಣ ಭಾರತದಲ್ಲಿ ಅತ್ಯಂತ ಬಲಿಷ್ಠವಾದುದೆಂದು ಹೆಸರಾಯಿತು. ನಂತರದ ದಶಕಗಳಲ್ಲಿ ಹೊಯ್ಸಳ ಸಾಮ್ರಾಜ್ಯ ವಿಜಯನಗರ ಸಾಮ್ರಾಜ್ಯ ಮತ್ತು ದೆಹಲಿಯ ಸುಲ್ತಾನರುಗಳೊಂದಿಗೆ ಪೈಪೋಟಿಗೆ ಸಿಲುಕಿತು. ಅಂತಿಮವಾಗಿ ಹೊಯ್ಸಳ ವಂಶದ ಆಡಳಿತ ಕ್ರಿ.ಶ. ೧೩೪೬ ರಲ್ಲಿ ಕೊನೆಗೊಂಡಿತು.

## ಇತಿಹಾಸ

ದಂತಕತೆಯ ಪ್ರಕಾರ ಜೈನ ಗುರು ಸುದತ್ತಚಾರ್ಯನು ಸೊಸೆಯೂರಿನ ವಾಸಂತಿಕಾ ಮಂದಿರದಲ್ಲಿ ಹುಲಿಯು ಬರಲು, ಅದನ್ನು ಹೊಡೆಯಲು ತನ್ನ ಶಿಷ್ಯ ಸಳನಿಗೆ "ಹೊಯ್ ಸಳ" ಎಂದು ಆಜ್ಞಾಪಿಸಿದನು. ಇದೆ ಹೊಯ್ಸಳ ಶಬ್ದದ ಮೂಲ ಎನ್ನುತ್ತಾರೆ. ೧೧೧೭ರ ವಿಷ್ಣುವರ್ಧನನ ಶಾಸನದಲ್ಲಿ ಈ ಕಥೆ ಮೊದಲು ಕಾಣಬರುತ್ತದೆ. ಆದರೆ ಇದರ ತಥ್ಯ ಅನುಮಾನಾಸ್ಪದವಾಗಿದ್ದು ಇನ್ನೂ ದಂತಕಥೆಯ ರೂಪದಲ್ಲಿಯೇ ಉಳಿದಿದೆ. ವಿಷ್ಣುವರ್ಧನನು ತಲಕಾಡಿನಲ್ಲಿ ಚೋಳರನ್ನು ಸೋಲಿಸಿದ ಮೇಲೆ ಬಹುಷಃ ಈ ಕಥೆ ಹುಟ್ಟಿರಬಹುದು ಅಥವಾ ಹೆಚ್ಚು ಪ್ರಚಲಿತವಾಗಿರಬಹುದು. ಹೊಯ್ಸಳರ ಲಾಂಛನವು ಸಳನು ಹುಲಿಯನ್ನು ಕೊಲ್ಲುತ್ತಿರುವ ಚಿತ್ರವಾಗಿದ್ದು, ಚೋಳರ ಲಾಂಛನವು ಹುಲಿಯಾಗಿತ್ತು ಎಂಬ ಅಂಶಗಳು ಈ ಊಹೆಗೆ ಕಾರಣ. ೧೦೭೮ ಮತ್ತು ೧೭೯೦ರ ಶಾಸನಗಳು ಹೊಯ್ಸಳರನ್ನು ಯಾದವ ವಂಶದವರು ಎಂದು ಸಂಬೋಧಿಸಿವೆ. ಆದರೆ ಹೊಯ್ಸಳರಿಗೂ ಉತ್ತರದ ಯಾದವರಿಗೂ ಸಂಬಂಧ ಕಲ್ಪಿಸುವ ಯಾವುದೇ ದಾಖಲೆಗಳಿಲ್ಲ. ಹೊಯ್ಸಲರು ಹಾಲುಮತಕ್ಕೆ(ಕುರುಬ ಗೌಡ ಸಮಾಜ)ಸರಿದವರು ಎಂದು ಕೆಲವರು ವಾದಿಸುತಾರೆ.

ಹೊಯ್ಸಳ ವಂಶವೃಕ್ಷ

ಸಳ

ಎರಡನೆಯ ನೃಪಕಾಮ

ಎರಡನೆಯ ವಿನಯಾದಿತ್ಯ

ಎರೆಯಂಗ

ಒಂದನೆಯ ಬಲ್ಲಾಳ

ವಿಷ್ಣುವರ್ಧನ

ಉದಯಾದಿತ್ಯ

ಕುಮಾರಬಲ್ಲಾಳ

ಒಂದನೆಯ ನರಸಿಂಹ

ವಿಜಯನಾರಾಯಣ ಏಚಲದೇವಿ

ಎರಡನೆಯ ಬಲ್ಲಾಳ

ಎಱೆಯಂಗದೇವ

ಎರಡನೆಯ ನರಸಿಂಹ

ಎರಡನೆಯ ನರಸಿಂಹ

ಮೂರನೆಯ ನರಸಿಂಹ

ರಾಮನಾಥ

ಮೂರನೆಯ ಬಲ್ಲಾಳ

ವಿರೂಪಾಕ್ಷ (ನಾಲ್ಕನೆಯ ಬಲ್ಲಾಳ)

ಹೊಯ್ಸಳ ಆಡಳಿತದ ಮುಖ್ಯ ಆದಾಯ ಮೂಲ ಕೃಷಿ ಆಧಾರಿತ ಅರ್ಥವ್ಯವಸ್ಥೆಯಾಗಿತ್ತು. ತಮಗೆ ಸಲ್ಲಿಸಿದ ಸೇವೆಗೆ ಪ್ರತಿಯಾಗಿ ರಾಜರುಗಳು ಜಮೀನುಗಳನ್ನು ಜಹಗೀರು ನೀಡುತ್ತಿದ್ದರು. ಈ ಜಹಗೀರದಾರರು ಆ ಜಮೀನಿನ ಒಕ್ಕಲುಗಳು ಉತ್ಪಾದಿಸಿದ ಕೃಷಿ ಮತ್ತು ವನೋತ್ಪನ್ನಗಳ ಒಡೆತನ ಗಳಿಸಿಕೊಳ್ಳುತ್ತಿದ್ದರು. ಈ ಜಮೀನುದಾರರಲ್ಲಿ ಎರಡು ವಿಧಗಳಿದ್ದವು. ಪ್ರಜಾ ಗವುಂಡರು ಅಂತಸ್ತಿನಲ್ಲಿ , ಧನಾಢ್ಯ ಪ್ರಭು ಗವುಂಡರಿಗಿಂತ ಕೆಳಗಿದ್ದರು. ಮಲೆನಾಡು ಪ್ರದೇಶದಲ್ಲಿ , ಸೂಕ್ತ ಹವಾಮಾನದ ಕಾರಣ, ಪಶುಪಾಲನೆ, ತೋಟಗಾರಿಕೆ ಮತ್ತು ಸಾಂಬಾರ ಪದಾರ್ಥಗಳ ಕೃಷಿ

ನಡೆಯುತ್ತಿತ್ತು. ಬಯಲುನಾಡಿನಲ್ಲಿ ಭತ್ತ ಮತ್ತು ಜೋಳವನ್ನು ಬೆಳೆಯಲಾಗುತ್ತಿತ್ತು. ಸ್ಥಳೀಯರ ಖರ್ಚಿನಲ್ಲಿ ಕಟ್ಟಿ , ದುರಸ್ತಿ ಮಾಡಲಾಗುತ್ತಿದ್ದ ಕೆರೆ ಕಟ್ಟೆಗಳು, ಕಾಲುವೆಗಳು , ಬಾವಿಗಳು ಇವುಗಳ ಮೇಲೆ ಹೊಯ್ಸಳ ರಾಜರು ಸುಂಕ ವಿಧಿಸಿದ್ದರು. ದೊಡ್ಡ ನೀರಾವರಿಗೆ ವಿಷ್ಣುಸಾಗರ,ಶಾಂತಿಸಾಗರ, ಬಲ್ಲಾಳರಾಯಸಾಗರ ಇತ್ಯಾದಿ ಕೆರೆಗಳನ್ನು ರಾಜ್ಯದ ಖರ್ಚಿನಲ್ಲಿ ಕಟ್ಟಿಸಲಾಗಿತ್ತು.

ಪಶ್ಚಿಮ ಕರಾವಳಿಯಲ್ಲಿ , ಜನಸಾಮಾನ್ಯರ ಪ್ರಯಾಣಕ್ಕೆ ಮತ್ತು ಅಶ್ವಸೇನೆಗಳಿಗೆ , ಕುದುರೆಗಳನ್ನು ಆಮದು ಮಾಡಿ ಸರಬರಾಜು ಮಾಡುವುದು ದೊಡ್ಡ ವ್ಯಾಪಾರೋದ್ಯಮವಾಗಿತ್ತು. ಕಾಡುಗಳಲ್ಲಿನ ಬೆಲೆಬಾಳುವ ತೇಗವೇ ಮೊದಲಾದ ಮರಗಳ ನಾಟಾ ತಯಾರಿಸಿ , ಇಂದಿನ ಕೇರಳದಲ್ಲಿದ್ದ ಬಂದರುಗಳ ಮೂಲಕ ರಫ್ತು ಮಾಡಲಾಗುತ್ತಿತ್ತು. ಚೀನಾದಲ್ಲಿ ದೊರೆತ ಶುಂಗ ಸಾಮ್ರಾಜ್ಯದ ದಾಖಲೆಗಳ ಪ್ರಕಾರ, ಉತ್ತರ ಚೀನಾದಲ್ಲಿ ಭಾರತದ ವ್ಯಾಪಾರಿಗಳು ಕಾಣಸಿಗುತ್ತಿದ್ದು , ಇದು ಸಮುದ್ರದಾಚೆಯ ಪ್ರದೇಶಗಳೊಂದಿಗೆ ಸಕ್ರಿಯ ವ್ಯಾಪಾರ ಸಂಪರ್ಕವಿದ್ದುದನ್ನು ಸೂಚಿಸುತ್ತದೆ. ದಕ್ಷಿಣ ಭಾರತದಿಂದ ಜವಳಿ, ಸಾಂಬಾರ ಪದಾರ್ಥಗಳು, ಔಷದೀಯ ಸಸ್ಯಗಳು, ರತ್ನಗಳು, ಮಣ್ಣಿನ ಸಾಮಗ್ರಿಗಳು, ಉಪ್ಪು, ಆಭರಣಗಳು, ಬಂಗಾರ, ದಂತ, ಖಡ್ಗಮೃಗದ ಕೊಂಬು, ಸುವಾಸನಾ ದ್ರವ್ಯಗಳು, ಶ್ರೀಗಂಧ, ಕರ್ಪೂರ ಮೊದಲಾದ ವಸ್ತುಗಳು ಚೀನಾ, ಧೋಫರ್, ಏಡನ್ ಮತ್ತು ಸಿರಾಫ್ ( ಈಜಿಪ್ಟ್, ಅರೇಬಿಯಾ ಮತ್ತು ಪರ್ಶಿಯಾ ದೇಶಗಳಿಗೆ ಹೋಗಲು ಪ್ರವೇಶಬಂದರು)ಗಳಿಗೆ ರಫ್ತಾಗುತ್ತಿತ್ತು. ವಾಸ್ತುತಜ್ಞರು (ವಿಶ್ವಕರ್ಮರು), ಶಿಲ್ಪಿಗಳು, ಕಲ್ಲು ಕಡೆಯುವವರು, ಚಿನಿವಾರರು ಇತ್ಯಾದಿ ದೇವಾಳಯಕ್ಕೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಸಂಬಂಧಿಸಿದ ಕುಶಲಕರ್ಮಿಗಳು, ಬಿರುಸಿನಿಂದ ನಡೆಯುತ್ತಿದ್ದ ದೇವಾಲಯ ನಿರ್ಮಾಣದ ಕಾರ್ಯದಿಂದ , ಸಾಕ್ಷು ಸ್ಥಿತಿವಂತರಾಗಿದ್ದರು.

ನೆಲಗಂದಾಯವನ್ನು ಒಟ್ಟುಮಾಡುವ ಜವಾಬ್ದಾರಿ ಗ್ರಾಮ ಪಂಚಾಯತಿಗಳದ್ದಾಗಿತ್ತು. ಸಿದ್ದಾಯ ಎಂದು ಕರೆಯಲಾಗುತ್ತಿದ್ದ ನೆಲಗಂದಾಯದಲ್ಲಿ ಕುಲ ಎಂಬ ಮೂಲತಃ ಬೆಲೆಕಟ್ಟಿದ್ದಲ್ಲದೇ, ವಿವಧ ಮೇಲುಗಂದಾಯವೂ ಅಡಕವಾಗಿತ್ತು. ವಿವಿಧ ವ್ಯವಸಾಯಗಳು, ವಿವಾಹಗಳು, ಗಾಡಿ ಅಥವಾ ರಥಗಳ ಮೇಲೆ ಒಯ್ಯಲಾಗುತ್ತಿದ್ದ ಸರಕುಗಳು, ಸಾಕುಪ್ರಾಣಿಗಳು ಇವೆಲ್ಲದರ ಮೇಲೂ ಸುಂಕ ಹೇರಲಾಗಿತ್ತು. ಬಂಗಾರ, ರತ್ನಗಳು, ಸುವಾಸನಾ ದ್ರವ್ಯಗಳು, ಶ್ರೀಗಂಧ, ಹಗ್ಗಗಳು, ನಾರು, ಮನೆ, ಕುಲುಮೆ, ಅಂಗಡಿ, ಪಶುಮಂದೆಗಳು, ಕಬ್ಬಿನ ಗಾಣಗಳು ಇಂಥಾ ಪದಾರ್ಥಗಳಲ್ಲದೆ ಕರಿಮೆಣಸು,

ವೀಳ್ಯದೆಲೆ , ತುಪ್ಪ , ಭತ್ತ ,ಸಾಂಬಾರ ದಿನಸಿಗಳು, ತಾಳೆಗರಿ, ತೆಂಗಿನಕಾಯಿ, ಸಕ್ಕರೆ ಇತ್ಯಾದಿ ಕೃಷ್ಯುತ್ಪನ್ನಗಳ ಮೇಲೂ ಸುಂಕ ವಸೂಲಿ ಮಾಡಿದ ಹಳ್ಳಿ ದಾಖಲೆಗಳು ದೊರೆಯುತ್ತವೆ. ಕೆರಗಳ ನಿರ್ಮಾಣ ಮೊದಲಾದ ನಿರ್ದಿಷ್ಟ ಕೆಲಸಗಳಿಗಾಗಿ ಗ್ರಾಮ ಪಂಚಾಯತಿಗೆ ಸುಂಕ ವಿಧಿಸುವ ಹಕ್ಕಿತ್ತು.

ರಾಮಾನುಜಾಚಾರ್ಯ , ಬಸವಣ್ಣ ,

ಮಧ್ವಾಚಾರ್ಯ ೧೧ನೆಯ ಶತಮಾನದ ಮೊದಲಭಾಗದಲ್ಲಿ ಚೋಳರಿಂದ ಜೈನಧರ್ಮೀಯರಾಗಿದ್ದ ಪಶ್ಚಿಮ ಗಂಗರ ಪರಾಭವ ಹಾಗೂ ೧೨ನೆಯ ಶತಮಾನದಲ್ಲಿ ವೀರಶೈವ ಮತ್ತು

ವೈಷ್ಣವ ಮತಗಳಲ್ಲಿ ಅನುಯಾಯಿಗಳ ಏರುತ್ತಿದ್ದ ಸಂಖ್ಯೆ , ಇವುಗಳಿಂದಾಗಿ

ಜೈನಧರ್ಮದಲ್ಲಿ ಆಸಕ್ತಿ ಇಳಿಮುಖವಾಯಿತು. ಕಂಬದಹಳ್ಳಿ ಮತ್ತು ಶ್ರವಣಬೆಳಗೊಳ ಹೊಯ್ಸಳ ರಾಜ್ಯದ ಎರಡು ಉಲ್ಲೇಖನಾರ್ಹ ಜೈನ ಧರ್ಮಕೇಂದ್ರಗಳು. ೮ನೆಯ ಶತಮಾನದಲ್ಲಿ ಆದಿ ಶಂಕರರ ಅದ್ವೈತ ಮತ ಪ್ರಸಾರದೊಂದಿಗೆ ದಕ್ಷಿಣ ಭಾರತದಲ್ಲಿ ಬೌದ್ಧಧರ್ಮದ ಅವನತಿ ಪ್ರಾರಂಭವಾಯಿತು. ಹೊಯ್ಸಳರ ಕಾಲದಲ್ಲಿ ಬಳ್ಳಿಗಾವಿ ಮತ್ತು ಡಂಬಳ ಇವೆರಡೇ ಬೌದ್ಧರ ಧಾರ್ಮಿಕ ಸ್ಥಳಗಳಾಗಿದ್ದವು. ವಿಷ್ಣುವರ್ಧನನ ರಾಣಿ ಶಾಂತಲಾದೇವಿ ,ಸ್ವತಃ ಜೈನಧರ್ಮೀಯಳಾಗಿದ್ದರೂ , ವಿಷ್ಣುವಿನ ಕಪ್ಪೆ ಚೆನ್ನಿಗರಾಯನ ದೇವಾಲಯವನ್ನು ಕಟ್ಟಿಸಿದ್ದು , ರಾಜಮನೆತನದ ಪರಮತ ಸಹಿಷ್ಣುತೆಗೆ ಉದಾಹರಣೆಯಾಗಿದೆ. ಬಸವಣ್ಣ ,

ಮಧ್ವಾಚಾರ್ಯ ಮತ್ತುರಾಮಾನುಜಾಚಾರ್ಯರಿಂದ ಪ್ರೇರಿತರಾದ ಮೂರು ಮುಖ್ಯ ಧಾರ್ಮಿಕ ಬೆಳವಣಿಗೆಗಳು ಹೊಯ್ಸಳರ ಆಡಳಿತದ ಕಾಲದಲ್ಲಿ ಘಟಿಸಿದವು.

ವೀರಶೈವ ಮತದ ಉಗಮ ಚರ್ಚಾಸ್ಪದವಾಗಿದ್ದರೂ, ೧೨ನೆಯ ಶತಮಾನದಲ್ಲಿ ಬಸವಣ್ಣನವರ ಆಗಮನದೊಂದಿಗೆ ಇದು ಪ್ರವರ್ಧಮಾನಕ್ಕೆ ಬಂದಿತು.

ಬಸವಣ್ಣಮತ್ತು ಇತರ ವೀರಶೈವ ಶರಣರು ಜಾತಿರಹಿತ ಸಮಾಜವನ್ನು ಪ್ರತಿಪಾದಿಸಿದರು. "ಕಾಯಕವೇ ಕೈಲಾಸ" ಎಂದು ಬೋಧಿಸಿದ

ಬಸವಣ್ಣನವರು ಸರಳರೀತಿಯಲ್ಲಿ ವಚನಗಳನ್ನು ಜನಸಾಮಾನ್ಯರಿಗಾಗಿ ಬರೆದರು. ಆದಿ ಶಂಕರರ ಬೋಧನೆಗಳನ್ನು ಒಪ್ಪದ

ಮಧ್ವಾಚಾರ್ಯರು ಜೀವಾತ್ಮ ಮತ್ತು ಪರಮಾತ್ಮ ಬೇರೆ ಬೇರೆ ಎಂದು ಪ್ರತಿಪಾದಿಸಿದರು (ದ್ವೈತ ಸಿದ್ಧಾಂತ). ಈ ಸಿದ್ಧಾಂತವು ಜನಪ್ರಿಯವಾಗಿ, ಮುಂದೆ

ಮಧ್ವಾಚಾರ್ಯರು ಉಡುಪಿಯಲ್ಲಿ ಎಂಟು ಮಠಗಳನ್ನು ಸ್ಥಾಪಿಸಿದರು. ಶೀರಂಗದ ವೈಷ್ಣವ ಮಠದ ಗುರುಗಳಾಗಿದ್ದ

ರಾಮಾನುಜಾಚಾರ್ಯರು ಭಕ್ತಿ ಮಾರ್ಗವನ್ನು ಬೋಧಿಸಿ, ಆದಿ ಶಂಕರರ ಅದ್ವೈತ ಸಿದ್ಧಾಂತದ ಮೇಲೆ ಶ್ರೀಭಾಷ್ಯ ಎಂಬ ಭಾಷ್ಯವನ್ನು ಬರೆದರು.

ಈ ಧಾರ್ಮಿಕ ಸಿದ್ಧಾಂತಗಳು ಆ ಕಾಲದ ದಕ್ಷಿಣ ಭಾರತದ ಸಂಸ್ಕೃತಿ, ಸಾಹಿತ್ಯ, ಕಾವ್ಯ ಮತ್ತು ಶಿಲ್ಪಕಲೆಗಳ ಮೇಲೆ ಅಪಾರ ಪ್ರಭಾವ ಬೀರಿದವು. ಈ ತತ್ವಜ್ಞಾನಿಗಳ ಬೋಧನೆಯನ್ನು ಆಧರಿಸಿ ಮುಂದಿನ ಶತಮಾನಗಳಲ್ಲಿ ಮಹತ್ವದ ಸಾಹಿತ್ಯ ಮತ್ತು ಕಾವ್ಯ ಕೃತಿಗಳನ್ನು ರಚಿಸಲಾಯಿತು. ವಿಜಯನಗರದ ಸಾಳ್ವ, ತುಳುವ ಮತ್ತು ಅರವೀಡು ರಾಜಮನೆತನಗಳು ವೈಷ್ಣವರಾಗಿದ್ದವು. ವಿಜಯನಗರದ ವಿಠ್ಠಲಪುರ ಪ್ರದೇಶದ ವೈಷ್ಣವ ದೇವಾಲಯವೊಂದರಲ್ಲಿ

ರಾಮಾನುಜಾಚಾರ್ಯರರಾಮಾನುಜಾಚಾರ್ಯ್ ವಿಗ್ರಹವಿದೆ.ಮುಂದೆ ಮೈಸೂರು ಸಂಸ್ಥಾನದಲ್ಲಿದ್ದ ವಿದ್ವಾಂಸರುಗಳು

ರಾಮಾನುಜಾಚಾರ್ಯರ ಸಿದ್ಧಾಂತಗಳನ್ನು ಎತ್ತಿ ಹಿಡಿಯುವ ಗ್ರಂಥಗಳನ್ನು ಬರೆದರು.

ಜೈನಧರ್ಮದಿಂದ ಮತಾಂತರ ಹೊಂದಿ ವೈಷ್ಣವನಾದ ಮೇಲೆ ಹೊಯ್ಸಳ ರಾಜ ವಿಷ್ಣುವರ್ಧನನು ಅನೇಕ ವೈಷ್ಣವ ದೇವಾಲಯಗಳನ್ನು ಕಟ್ಟಿಸಿದನು. ಮಧ್ವಾಚಾರ್ಯರ ಪರಂಪರೆಯಲ್ಲಿ ಅವರ ನಂತರ ಬಂದ ಜಯತೀರ್ಥ, ವ್ಯಾಸತೀರ್ಥ, ಶ್ರೀಪಾದರಾಯ, ವಾದಿರಾಜತೀರ್ಥ ಮತ್ತು ದಾಸ ಪರಂಪರೆಯ ವಿಜಯದಾಸ, ಗೋಪಾಲದಾಸ ಮತ್ತಿತರರು

ಮಧ್ವಾಚಾರ್ಯರ ಬೋಧನೆಗಳನ್ನು ದೂರದೂರಕ್ಕೆ ಪ್ರಸಾರ ಮಾಡಿದರು. ನಂತರದ ತತ್ವಜ್ಞಾನಿಗಳಾದ

ಗುಜರಾತಿ ನ ವಲ್ಲಭಾಚಾರ್ಯ ಮತ್ತು ಬಂಗಾಳದ ಚೈತನ್ಯ ಇವರೂ ಕೂಡ ಮಧ್ವಾಚಾರ್ಯರ ತತ್ವಗಳಿಂದ ಪ್ರಭಾವಿತರಾಗಿದ್ದರು. ಮಧ್ವಾಚಾರ್ಯರ ಬೋಧನೆಗಳಿಂದ ಪ್ರಭಾವಿತವಾದ ಮತ್ತೊಂದು ಭಕ್ತಿ ಮಾರ್ಗದ ಅಲೆ ೧೭-೧೮ನೆಯ ಶತಮಾನದಲ್ಲಿ ಬಂದಿತು.

## ಸಾಹಿತ್ಯ

ಹೊಯ್ಸಳ ಸಾಮ್ರಾಜ್ಯದ ಆಶ್ರಯದಲ್ಲಿದ್ದ ಕನ್ನಡ ಕವಿಗಳು ಮತ್ತು ಬರಹಗಾರರು

(೧೧೦೦-೧೩೪೩ ಕ್ರಿ.ಶ)

ನಾಗಚಂದ್ರ 1105

ಕಾಂತಿ 1108

ರಾಜಾದಿತ್ಯ 12th. c

ಹರಿಹರ 1160-1200

ಉದಯಾದಿತ್ಯ 1150

ವೃತ್ತ ವಿಲಾಸ 1160

ಕೆರೆಯ ಪದ್ಮರಸ 1165

ನೇಮಿಚಂದ್ರ 1170

ಸುಮನೋಬನ 1175

ರುದ್ರಭಟ್ಟ 1180

ಅಗ್ಗಳ 1189

ಪಾಲ್ಕುರಿಕಿ ಸೋಮನಾಥ 1195

ಸುಜನೋತ್ತಮ್ಸ(ಬೋಪಣ್ಣ) 1180

ಕವಿ ಕಾಮ 12th c.

ದೇವಕವಿ 1200

ರಾಘವಾಂಕ 1200-1225

ಭಂದುವರ್ಮ 1200

ಪಾರ್ಶ್ವ ಪಂಡಿತ 1205

ಮಘನಂದ್ಯಾಚಾರ್ಯ 1209

ಜನ್ನ 1209-1230

ಪುಲಿಗೆರೆ ಸೋಮನಾಥ 13th c.

ಹಸ್ತಿಮಲ್ಲ 13th c.

ಸೋಮರಾಜ 1222

ಗುಣವರ್ಮ 1235

ಪೊಳಲ್ವದಂಡನಾಥ 1224

ಆಂಡಯ್ಯ 1217-1235

ಸಿಸುಮಾಯಣ 1232

ಮಲ್ಲಿಕಾರ್ಜುನ 1245

ನರಹರಿ ತೀರ್ಥ 1281

ಕುಮಾರ ಪದ್ಮರಸ 13th c.

ಮಹಾಬಲ ಕವಿ 1254

ಕೇಶಿರಾಜ 1260

ಕುಮುದೇಂದು 1275

ರಟ್ಟ ಕವಿ 1300

ನಾಗರಾಜ 1331

ಹೊಯ್ಸಳ ಆಡಳಿತದ ಕಾಲದಲ್ಲಿ

ಸಂಸ್ಕೃತ ಸಾಹಿತ್ಯ ಜನಪ್ರಿಯವಾಗಿದ್ದರೂ, ಕನ್ನಡ ವಿದ್ವಾಂಸರಿಗೆ ರಾಜಾಶ್ರಯ ಹೆಚ್ಚಾಯಿತು. ೧೨ನೆಯ ಶಶತಮಾನದಲ್ಲಿ ಕೆಲ ಸಾಹಿತ್ಯ ಕೃತಿಗಳು ಚಂಪೂ ಶೈಲಿಯಲ್ಲಿ ಬರೆಯಲ್ಪಟ್ಟರೂ , ಇತರ ವಿಶಿಷ್ಟ ಶೈಲಿಗಳೂ ಜನಪ್ರಿಯವಾಗಿದ್ದವು. ಸಾಂಗತ್ಯ,

ಷಟ್ಪದಿ, ತ್ರಿಪದಿ ಮತ್ತು ರಗಳೆ ಶೈಲಿಗಳು ಆಧುನಿಕವೆನಿಸಿದ್ದವು. ತೀರ್ಥಂಕರರ (ಜೈನ ಮುನಿಗಳು)ಮಹಿಮೆಯನ್ನು ಎತ್ತಿಹಿಡಿಯುವುದನ್ನು ಜೈನ ಕೃತಿಗಳು ಮುಂದುವರಿಸಿದವು.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಇಂದಿಗೂ ಹಸಿರಾಗಿರುವ

ಜನ್ನ , ರುದ್ರಭಟ್ಟ, ನಾಗಚಂದ್ರ, ಹರಿಹರ ಮತ್ತು ,ಅವನ ಸೋದರಸಂಬಂಧಿ,

ರಾಘವಾಂಕ ಇವರೆಲ್ಲರಿಗೂ ಹೊಯ್ಸಳ ರಾಜಾಸ್ಥಾನವು ಆಶ್ರಯವಿತ್ತು ಪ್ರೋತ್ಸಾಹಿಸಿತು. ೧೨೦೯ರಲ್ಲಿ ಜೈನ ಕವಿ ಜನ್ನನು

ಯಶೋಧರಚರಿತೆ ಎಂಬ ಪ್ರಸಿದ್ಧ ಕೃತಿಯನ್ನು ರಚಿಸಿದನು. ಊರ ದೇವರು ಮಾರಿಗೆ ಇಬ್ಬರು ಬಾಲಕರನ್ನು ಬಲಿಕೊಡಲು ಹೊರಟ ರಾಜನೊಬ್ಬನ ಕಥೆಯಿದು. ಆ ಬಾಲಕರ ಮೇಲೆ ಕನಿಕರ ಬಂದು , ರಾಜನು ಅವರಿಬ್ಬರನ್ನೂ ಬಿಡುಗಡೆ ಮಾಡಿ , ನರಬಲಿಯ ಪದ್ಧತಿಗೆ ವಿದಾಯ ಹೇಳುತ್ತಾನೆ. ಈ ಕೃತಿಗಾಗಿ ಹೊಯ್ಸಳ ರಾಜ ವೀರಬಲ್ಲಾಳನಿಂದ ಜನ್ನನಿಗೆ ಕವಿಚಕ್ರವರ್ತಿ ಎಂಬ ಬಿರುದು ಪ್ರಾಪ್ತವಾಯಿತು.

ಎರಡನೆಯ ವೀರಬಲ್ಲಾಳನ ಆಸ್ಥಾನದಲ್ಲಿಯ ಮಂತ್ರಿ ಚಂದ್ರಮೌಳಿಯ ಆಶ್ರಯದಲ್ಲಿದ್ದ ಸ್ಮಾರ್ಥ ಬ್ರಾಹ್ಮಣ ರುದ್ರಭಟ್ಟನು ಹೆಸರಾಂತ ಬ್ರಾಹ್ಮಣ ಕವಿಗಳಲ್ಲಿ ಮೊದಲನೆಯವನು. ಆತನ ಪ್ರಸಿದ್ಧ ಚಂಪೂ ಶೈಲಿಯ ಜಗನ್ನಾಥ ವಿಜಯ ಕೃತಿಯು ವಿಷ್ಣು ಪುರಾಣ ಆಧಾರಿತವಾಗಿದ್ದು ಇದರ ಕಥಾವಸ್ತು ಶ್ರೀಕೃಷ್ಣನಿಂದ ಬಾಣಾಸುರನ ಸಂಹಾರ.

ಒಂದನೆಯ ನರಸಿಂಹನ ಆಸ್ಥಾನದಲ್ಲಿದ್ದ

ವೀರಶೈವ ಕವಿ ಹರಿಹರ , (ಹರೀಶ್ವರ ಎಂದೂ ಕರೆಯುವುದುಂಟು ) ಹಳೆಯ

ಜೈನ ಚಂಪೂ ಶೈಲಿಯಲ್ಲಿ ಗಿರಿಜಾಕಲ್ಯಾಣ ಕೃತಿಯನ್ನು ರಚಿಸಿದನು. ಹತ್ತು ಭಾಗಗಳಿರುವ ಇದರ ಕಥಾವಸ್ತು ಶಿವ ಪಾರ್ವತಿಯರ ಪರಿಣಯ.

ವಚನ ಸಾಹಿತ್ಯ ಪರಂಪರೆಯ ಭಾಗವಾಗಿರದಿದ್ದ ಮೊದಮೊದಲ

ವೀರಶೈವ ಕವಿಗಳಲ್ಲಿ ಇವನೂ ಒಬ್ಬ.

ಹಳೇಬೀಡಿನ ಕರಣಿಕರ ಕುಟುಂಬದಿಂದ ಬಂದ ಹರಿಹರನು

ಹಂಪೆಯಲ್ಲಿ ಅನೇಕ ವರ್ಷಗಳನ್ನು ಕಳೆದು , ನೂರಕ್ಕೂ ಹೆಚ್ಚು ರಗಳೆಗಳನ್ನು ರಚಿಸಿದನು. ಇವು ವಿರೂಪಾಕ್ಷ ದೇವರ ಗುಣಗಾನ ಮಾಡುವ ರಗಳೆಗಳಾಗಿವೆ. ರಾಘವಾಂಕ ತನ್ನ ಹರಿಶ್ಚಂದ್ರ ಕಾವ್ಯದ ಮೂಲಕ

ಷಟ್ಪದಿಯ ಬಳಕೆಯನ್ನು ಮೊಟ್ಟಮೊದಲ ಬಾರಿಗೆ ಮಾಡಿದ.

ಕನ್ನಡ ವ್ಯಾಕರಣದ ನಿಯಮಗಳನ್ನು ಕೆಲವೊಮ್ಮೆ ಉಲ್ಲಂಘಿಸಿದ್ದರೂ, ಇದು ಕನ್ನಡ ಸಾಹಿತ್ಯದ ಅತಿಶ್ರೇಷ್ಟ ಕೃತಿಗಳಲ್ಲಿ ಒಂದೆಂದು ಪರಿಗಣಿಸಲ್ಪಡುತ್ತದೆ.

ಇನ್ನು ಸಂಸ್ಕೃತದಲ್ಲಿ , ಮಧ್ವಾಚಾರ್ಯರು , ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆದರು. ಇದಲ್ಲದ, ಇತರ ವೈದಿಕ ಶಾಖೆಗಳನ್ನು ಟೀಕಿಸುವ ವಿಮರ್ಶೆಗಳನ್ನೂ ಅವರು ಬರೆದರು. ತಮ್ಮ ತತ್ವಗಳಿಗೆ ಪ್ರಮಾಣಗ್ರಂಥಗಳಾಗಿ , ವೇದಗಳ ಬದಲಾಗಿ , ಪುರಾಣಗಳನ್ನು ಆರಿಸಿಕೊಂಡರು. ವಿದ್ಯಾತೀರ್ಥ ಬರೆದ ರುದ್ರಪ್ರಶ್ಣಾಭಾಷ್ಯವು ಆ ಕಾಲದ ಮತ್ತೊಂದು ಪ್ರಸಿದ್ಧ ಗ್ರಂಥ.

## ಶಿಲ್ಪಕಲೆ

ಸೋಮನಾಥಪುರದಲ್ಲಿ ಹೊಯ್ಸಳ ಶಿಲ್ಪಕಲೆ

ಹೊಯ್ಸಳರ ಸಾಮ್ರಾಜ್ಯ ವಿಸ್ತರಣೆಗಿಂತಲೂ , ಕಲೆ ಮತ್ತು ಶಿಲ್ಪಕೆಲಗಳಿಗೆ ಅವರಿತ್ತ ಪ್ರೋತ್ಸಾಹಕ್ಕಾಗಿ ಈ ಸಾಮ್ರಾಜ್ಯದ ಬಗ್ಗೆ ಆಧುನಿಕ ಸಂಶೋಧನೆ ಬಹು ಮುಖ್ಯವಾಗುತ್ತದೆ. ದಕ್ಷಿಣದಿಂದ ಪಾಂಡ್ಯರು ಮತ್ತು ಉತ್ತರದ ಸೇವುಣರಿಂದ ಸದಾ ದಾಳಿಯ ಅಪಾಯವಿದ್ದರೂ, ಹೊಯ್ಸಳ ರಾಜ್ಯದಾದ್ಯಂತ ದೇವಾಲಯನಿರ್ಮಾಣ ಕಾರ್ಯ ಬಿರುಸಿನಿಂದ ನಡೆಯುತ್ತಿತ್ತು. ಪಷ್ಚಿಮ ಚಾಲುಕ್ಯರ ಶಿಲ್ಪಕಲಾಶೈಲಿಯ ಶಾಖೆಯಾಗಿ ಬೆಳೆದ ಈ ಕಾಲದ ಶೈಲಿಯಲ್ಲಿ ದ್ರಾವಿಡ ಪ್ರಭಾವ ಸ್ಪಷ್ಟವಾಗಿ ಕಂಡುಬರುತ್ತದೆ. ಸಾಂಪ್ರದಾಯಿಕ ದ್ರಾವಿಡ ಶೈಲಿಗಿಂತಲೂ ವಿಶಿಷ್ಟವಾಗಿದ್ದ ಈ ಶೈಲಿಯನ್ನು ಕರ್ನಾಟ ದ್ರಾವಿಡ ಎಂಬ ಹೆಸರಿನಿಂದ ಗುರುತಿಸಲಾಗುತ್ತದೆ.

ಹೊಯ್ಸಳರ ದೇವಸ್ಥಾನ ಶಿಲ್ಪಕಲೆಯಲ್ಲಿ ಕುಶಲತೆಗೆ ಪ್ರಾಮುಖ್ಯತೆಯನ್ನು ನೀಡಲಾಗುತ್ತಿತ್ತು. ದೇಗುಲದ ಗೋಪುರದ ವಿಮಾನಗಳಲ್ಲಿ ಎತ್ತರ ಮತ್ತು ಗಾತ್ರಕ್ಕಿಂತ ಅತ್ಯಂತ ನೈಪುಣ್ಯಶೀಲ ಕಲೆಯನ್ನು ಸೃಷ್ಟಿಸುವುದಕ್ಕೆ ಒತ್ತು ನೀಡಲಾಗುತ್ತಿತ್ತು. ಮೃದುವಾದ ಕಲ್ಲಾಗಿದ್ದ ಬಳಪದ ಕಲ್ಲನ್ನು (Soapstone - Chloritic schist) ದೇಗುಲಗಳನ್ನು ಕಟ್ಟಲು ಉಪಯೋಗಿಸಲ್ಪಡುತ್ತಿತ್ತು.

ಬೇಲೂರಿನ ಚೆನ್ನಕೇಶವ ದೇವಸ್ಥಾನ (೧೧೧೭), ಹಳೇಬೀಡಿನ ಹೊಯ್ಸಳೇಶ್ವರ ದೇವಸ್ಥಾನ (೧೧೨೧), ಸೋಮನಾಥಪುರದ ಚೆನ್ನಕೇಶವ ದೇವಸ್ಥಾನ (೧೨೭೯),

ಅರಸೀಕೆರೆ (೧೨೨೦), ಅಮೃತಪುರ (೧೧೯೬), ಯಳೇಶಪುರದ ಎಳ್ಳೇಶ್ವರ್ ದೇವಾಲಯವು (೧೨೩೮ರ ಜನವರಿ ೨೭),

ಬೆಳವಾಡಿ (೧೨೦೦) ಮತ್ತು

ನುಗ್ಗೇಹಳ್ಳಿ (೧೨೪೬) ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ನಾಡಕಲಸಿ (೧೨೧೮) ದೇವಸ್ಥಾನಗಳು ಹೊಯ್ಸಳ ಶಿಲ್ಪಕಲೆಯ ಪ್ರಮುಖ ಉದಾಹರಣೆಗಳು. ಇವೇ ಅಲ್ಲದೆ ಹಾಸನ ಜಿಲ್ಲೆಯ

ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮಿಯ ದೇವಾಲಯ, ಕೋರವಂಗಲದ ಬೂಚೇಶ್ವರ, ಹಾರನಹಳ್ಳಿಯ ಲಕ್ಷ್ಮೀನರಸಿಂಹ,ಮೊಸಳೆಯ ಚೆನ್ನಕೇಶವ-ನಾಗೇಶ್ವರ ಜೋಡಿ ದೇವಾಲಯ ಮತ್ತು ಮಂಡ್ಯ ಜಿಲ್ಲೆಯ ಹೊಸಹೊಳಲಿನಲ್ಲಿರುವ ದೇವಾಲಯ ಹೊಯ್ಸಳರ ಕಾಲದ ಕಲಾಕೌಶಲಕ್ಕೆ ನಿದರ್ಶನವಾಗಿವೆ.ಅನೇಕ ದೇವಾಲಯಗಳ ಹೊರಗಿನ ಗೋಡೆಗಳಲ್ಲಿ ಹಿಂದೂ ಪುರಾಣಗಳ ಕಥನಗಳನ್ನು ನಿರೂಪಿಸಲಾಗಿದೆ. ಪ್ರದಕ್ಷಣೆಯ ದಿಕ್ಕಿನಲ್ಲಿ ಈ ಕಥನಗಳ ನಿರೂಪಣೆ ಸಾಗುತ್ತದೆ.

ಕನ್ನಡ ಮತ್ತು ಸಂಸ್ಕೃತ ಭಾಷೆಗಳನ್ನು ವ್ಯಾಪಕವಾಗಿ ಬಳಸಲಾಗುತ್ತಿತ್ತು. ಪಾಠಶಾಲೆಗಳಾಗಿಯೂ ಉಪಯೋಗಿಸಲಾಗುತ್ತಿದ್ದ ದೇವಾಲಯಗಳಲ್ಲಿ ಬ್ರಾಹ್ಮಣ ಪಂಡಿತರು ಸಂಸ್ಕೃತದಲ್ಲಿ ಕಲಿಸಿದರೆ, ಜೈನ ಮತ್ತು ಬೌದ್ಧ ವಿಹಾರಗಳಲ್ಲಿ, ಮುನಿಗಳು ಶಿಷ್ಯರಿಗೆ ವಿದ್ಯೆ ಕಲಿಸುತ್ತಿದ್ದರು. ಉಚ್ಚ ವಿದ್ಯಾಕೇಂದ್ರಗಳಿಗೆ ಘಟಿಕಾ ಎಂದು ಹೆಸರಿತ್ತು. ಪ್ರವರ್ಧಮಾನಕ್ಕೆ ಬರುತ್ತಿದ್ದ ಭಕ್ತಿ ಪಂಥವು ವಚನಗಳು ಮತ್ತು ದೇವರನಾಮಗಳಿಗೆ ಕನ್ನಡ ಭಾಷೆಯನ್ನು ಬಳಸಿತು. ಸಾಹಿತ್ಯ ಕೃತಿಗಳನ್ನು ತಾಳೆಗರಿಯ ಮೇಲೆ ರಚಿಸಲಾಗುತ್ತಿತ್ತು. ಹಿಂದಿನ ಶತಮಾನಗಳಲ್ಲಿ ಜೈನ ಸಾಹಿತ್ಯ ಕೃತಿಗಳು ಪ್ರಧಾನವಾಗಿದ್ದರೂ, ಹೊಯ್ಸಳರ ಕಾಲದಲ್ಲಿ ಶೈವ ಮತ್ತು ಬ್ರಾಹ್ಮಣ ಕೃತಿಗಳು ಹೆಚ್ಚು ಹೆಚ್ಚಾಗಿ ಬರಲಾರಂಭಿಸಿದವು. ಸಂಸ್ಕೃತ ಸಾಹಿತ್ಯದಲ್ಲಿ ಕಾವ್ಯ, ವ್ಯಾಕರಣ , ವಿಶ್ವಕೋಶ , ಕೈಪಿಡಿಗಳು , ಹಿಂದಿನ ಕೃತಿಗಳ ಮೇಲೆ ಭಾಷ್ಯಗಳು,

ನಾಟಕಗಳು, ಗದ್ಯ ಕಥೆಗಳು ಇತ್ಯಾದಿಗಳು ರಚನೆಯಾದವು. ತಾಮ್ರ ಮತ್ತು ಶಿಲಾಶಾಸನಗಳು ಕನ್ನಡ, ಸಂಸ್ಕೃತ ಅಥವಾ ಇವೆರಡೂ ಭಾಷೆಯಲ್ಲಿರುತ್ತಿದ್ದವು. ಹಿನ್ನೆಲೆ , ರಾಜರ ಬಿರುದು ಬಾವಲಿಗಳು ಇತ್ಯಾದಿಗಳು ಸಂಸ್ಕೃತದಲ್ಲಿದ್ದರೆ, ಉಂಬಳಿಯ ವಿವರಗಳು, ಭೂಮಿಯ ತಪಶೀಲು, ಸರಹದ್ದು, ಸ್ಥಳೀಯ ಆಡಳಿತಾಧಿಕಾರಿಗಳು, ಕಂದಾಯ , ಉಂಬಳಿ ಪಡೆದವನ ಹಕ್ಕು ಮತ್ತು ಕರ್ತವ್ಯಗಳು, ಸಾಕ್ಷಿಗಳು ಈ ವಿವರಗಳು ಕನ್ನಡದಲ್ಲಿರುತ್ತಿದ್ದವು.ಈ ಮೂಲಕ ಶಾಸನದ ವಿವರಗಳು ಜನಸಾಮಾನ್ಯರಿಗೂ ಅರ್ಥವಾಗುವಂತೆ ನೋಡಿಕೊಳ್ಳಲಾಗುತ್ತಿತ್ತು.

**********************************************************************************************

# ಕಂಚಿಯ ಪಲ್ಲವರು

ಕ್ರಿ.ಶ.6 – ೯ ನೇ ಶತಮಾನದವರೆಗೆ ದಕ್ಷಿಣ ಭಾರತದ ಇತಿಹಾಸದಲ್ಲಿ ಮಹತ್ತರ ಪಾತ್ರ ವಹಿಸಿದ ಮನೆತನ – ಕಂಚಿಯ ಪಲ್ಲವರು .

ಕಂಚಿಯ ಪಲ್ಲವರು ಮೊದಲು – ಶಾತವಾಹನರ ಮಂಡಲಾಧಿಪತಿಗಳಾಗಿದ್ದರು .

ಶಾತವಾಹನರ ನಂತರ ದಕ್ಷಿಣದಲ್ಲಿ ಸ್ವತಂತ್ರರಾದ ಮನೆತನ – ಪಲ್ಲವರು .

ಕಂಚಿಯ ಪಲ್ಲವರ ಸ್ಥಾಪಕ ದೊರೆ – ಬಪ್ಪ .

ಬಪ್ಪನ ನಂತರ ಅಧಿಕಾರಕ್ಕೆ ಬಂದವರು – ವಿಷ್ಣುಗೋಪ .

ಪಲ್ಲವರ ರಾಜಧಾನಿ – ಕಂಚಿ .

ಪಲ್ಲವರ ಕಾಲದಲ್ಲಿ ಸ್ಥಾಪನೆಯಾದ ನಲಂದ ವಿ.ವಿ. ನಿಲಯಕ್ಕೆ ಸರಿಸಮಾನವಾದ ವಿ.ವಿ. ನಿಲಯ – ಕಂಚಿ ವಿಶ್ವ ವಿದ್ಯಾ ನಿಲಯ .

ಮತ್ತವಿಲಾಸ ಪ್ರಹಸನದ ಎಂಬ ಸಂಸ್ಕೃತ ನಾಟಕದ ಕರ್ತೃ – ಒಂದನೇ ಮಹೇಂದ್ರ ವರ್ಮನ್ .

“ ಭಾರವಿ ” ಕವಿಗೆ ಆಶ್ರಯ ನೀಡಿದ್ದ ಪಲ್ಲವ ದೊರೆ – ಸಿಂಹ ವಿಷ್ಣು .

“ ನ್ಯಾಯ ಭಾಷ” ಕೃತಿಯ ಕರ್ತೃ - ವಾತ್ಸಾಯನ .

ಪಲ್ಲವರ ಆಸ್ಥಾನದಲ್ಲಿದ್ದ ತ್ರಿವಳಿಗಳು - ಅಪ್ಪಾರ್ , ಸಂಬಂಧರ್ , ಸುಂದರರ್ .

“ ಧರ್ಮಪಾಲ ” ಈ ವಿ.ವಿ ನಿಲಯದ ಕುಲಪತಿಯಾಗಿದ್ದ - ನಲಂದಾ ವಿ.ವಿ. ನಿಲಯ .

“ ತಿರುವಾಚಗಂ ” ಕೃತಿಯ ಕರ್ತೃ - ಮಣಿಕ್ಕೈ ವಸಗರ್ .

ಪಲ್ಲವರ ಕಾಲದಲ್ಲಿದ ಧಾರ್ಮಿಕ ಪಂಥಗಳು - ಭಾಗವ ಹಾಗೂ ಪಾಶುಪತ .

ಭಾಗವತ ಇದು - ವೈಷ್ಣವ ಪಂಥ .

ಕಂಚಿಯ ಪಲ್ಲವರ ಕಾಲದಲ್ಲಿ ಭಕ್ತಿ ಚಳವಳಿಯನ್ನು ಪ್ರಖ್ಯಾತಗೊಳಿಸಿದವರು - ನಯನಾರರು .

ತಿರುಮೂಲರ್ ಕೃತಿಯ ಕರ್ತೃ - ತಿರುಮಂದಿರಂ

ಪಲ್ಲವರ ಕಾಲದಲ್ಲಿ ಜನ್ಮತಾಳಿದ ಕಲೆ ಮತ್ತು ವಾಸ್ತುಶಿಲ್ಪ ಶೈಲಿ - ದ್ರಾವಿಡ ಶೈಲಿ .

ಪಲ್ಲವರ ವಾಸ್ತುಶಿಲ್ಪದ ಭಾಗಗಳು - ಗುಹಾ ದೇವಾಲಯ ಹಾಗೂ ದೇವಾಲಯ .

ಗುಹಾದೇವಾಲಯದ ಎರಡು ಉಪ ವಿಭಾಗಗಳು - ಸ್ಥಂಭ ಮಂಟಪ ಹಾಗೂ ಏಕಶಿಲೆಯ ದೇವಾಲಯಗಳು .

ಸ್ಥಂಭ ಮಂಟಪದಲ್ಲಿದ್ದ ಮಹೇಂದ್ರ ಶೈಲಿಯ ಕರ್ತೃ - 1 ನೇ ಮಹೇಂದ್ರ ವರ್ಮ .

ಏಕಶಿಲಾ ದೇವಾಲಯದ್ಲಿದ್ದ ನರಸಿಂಹ ವರ್ಮನ್ ಶೈಲಿಯ ಕರ್ತೃ - 1 ನೇ ನರಸಿಂಹ ವರ್ಮನ್ .

ಪಲ್ಲವರ ಕಾಲದ ಏಕಶಿಲ ರಥಗಳು ಈ ಪ್ರದೇಶದಲ್ಲಿದೆ - ಮಾಮ್ಲ ಪುರ .

ಪಲ್ಲವರ ಕಾಲದ ಅತಿ ಉದ್ದವಾದ ಹಾಗೂ ಪೂರ್ಣಗೊಂಡ ರಥ ವಾಸ್ತು ಶಿಲ್ಪ - ಧರ್ಮರಾಜ ರಥ .

ರಾಜ ಸಿಂಹ ಶೈಲಿಯ ಕರ್ತೃ - ರಾಜ ನರಸಿಂಹನ್ .

“ ದೇವಾಲಯಗಳ ನಗರ ಅಥವಾ ಗೋಪುರಗಳ ನಗರ ” ಎಂದು ಕರೆಯಲ್ಪಟ್ಟಿರುವ ಪ್ರದೇಶ - ಕಂಚಿ .

ತೀರದ ದೇವಾಲಯದ ನಿರ್ಮಾತೃ - 2 ನೇ ನರಸಿಂಹ .

ಕಂಚಿಯ ಕೈಲಾಸ ದೇವಾಲಯದ ಕರ್ತೃ - ರಾಜ ಸಿಂಹ ಪಲ್ಲವ .

ಕಂಚಿಯ ಕೈಲಾಸ ದೇವಾಲಯವನ್ನು ಈ ಹೆಸರಿನಿಂದಲೂ ಕರೆಯಲಾಗಿದೆ - ರಾಜ ಸಿಂಹೇಶ್ವರ .

" ಅಪರಾಜಿತ ಶೈಲಿ"ಯು ಇವರ ಕಾಲಕ್ಕೆ ಸೇರಿದ್ದು - ಕಂಚಿಯ ಪಲ್ಲವರು .

" ದೇವಗಂಗೆಯ ಭೂಸ್ಪರ್ಷ ಅಥವಾ ಗಂಗವಾತರಣ " ಶಿಲ್ಪ ಿರುವ ಪ್ರದೇಶ - ಮಹಾಬಲಿಪುರಂ .

" ಚಿತ್ರಾಕ್ಕಾರಪುಳಿ " ಎಂಬ ಬಿರುದುಳ್ಳ ಕಂಚಿಯ ಪಲ್ಲವ ಅರಸ - 1 ನೇ ಮಹೇಂದ್ರ ವರ್ಮನ್ .

ಪಲ್ಲವ ಪದದ ಅರ್ಥ - ಬಳ್ಳಿ .

" ಪಲ್ಲವರ ನಾಡು " ಪದದ ಅರ್ಥ - ( ತಮಿಳಿನಲ್ಲಿ ) - ತಗ್ಗು ಪ್ರದೇಶ .

ಪಲ್ಲವರು ಎಂದರೇ - ತಗ್ಗು ಪ್ರದೇಶದ ಜನರು ಎಂದರ್ಥ.

ಮಹಿಪವೊಲು ತಾಮ್ರ ಶಾಸನದ ಕರ್ತೃ - ಶಿವಸ್ಕಂದ ವರ್ಮ .

ವಾಯಲೂರು ಸ್ತಂಭ ಶಾಸನದ ಕರ್ತೃ - ರಾಜ ಸಿಂಹ .

ಐಹೊಳೆ ಶಾಸನದ ಕರ್ತೃ - ರವಿಕೀರ್ತಿ .

ಕುಡಿಯ ಮಲೈ ಶಾಸನದ ಕರ್ತೃ - ಮಹೇಂದ್ರ ವರ್ಮ .

" ಮತ್ತವಿಲಾಸ ಪ್ರಹಸನದ " ಕೃತಿಯ ಕರ್ತೃ - ಮಹೇಂದ್ರ ವರ್ಮ .

ಪಲ್ಲವರ ಮೂಲ

ಪಾರ್ಥಿಯನ್ ಮೂಲ

ವಾಕಾಟಕರ ಮೂಲ

ಆಂಧ್ರದ ಮೂಲ

ಪುಲಿಂದರ ಮೂಲ

ಸ್ಥಳೀಯ ಮೂಲ

ರಾಜಕೀಯ ಇತಿಹಾಸ

ಪಲ್ಲವರ ಸ್ಥಾಪಕ - ಬಪ್ಪು .

ಪಲ್ಲವರ ಶಿವಸ್ಕಂದ ವರ್ಮ - ಮೊದಲ ಅರಸ .

ಪಲ್ಲವರ ಪ್ರಸಿದ್ಧ ದೊರೆ - ಶಿವ ಸ್ಕಂದ ವರ್ಮ .

" ಧರ್ಮ ಮಹಾ ರಾಜಾ " ಎಂಬ ಬಿರುದನ್ನು ಹೊಂದಿದ್ದ ಪಲ್ಲವ ದೊರೆ - ಶಿವಸ್ಕಂದ ವರ್ಮ .

ಬುದ್ಧ ವರ್ಮ - ಶಿವ ಸ್ಕಂದ ವರ್ಮನ ನಂತರ ಅಧಿಕಾರಕ್ಕೆ ಬಂದವನು .ನಂತರದ ಅರಸರು 1 ನೇ ನರಸಿಂಹ ವರ್ಮನ್ , 2 ನೇ ಸ್ಕಂದ ವರ್ಮನ್ , ವಿಷ್ಣು ಗೋಪ , ಮೂರನೇ ಸ್ಕಂದ ವರ್ಮನ್ .

ಕಂಚಿಯ ಪಲ್ಲವ ದೊರೆ ವಿಷ್ಣು ಗೋಪನನ್ನು ಸೋಲಿಸಿದ ಗುಪ್ತದೊರೆ - ಸಮುದ್ರ ಗುಪ್ತ .

ಪಲ್ಲವ ಸಂತತಿಯಲ್ಲಿ ಅತ್ಯಂತ ಪ್ರಸಿದ್ಧ ದೊರೆ - ಒಂದನೇ ಮಹೇಂದ್ರ ಮರ್ಮನ್ .

ಇಮ್ಮಡಿ ಪುಲಿಕೇಶಿ ಸಮಕಾಲಿನ ದೊರೆ .- ಒಂದನೇ ಮಹೇಂದ್ರ ಮರ್ಮನ್ .

ಎರಡನೇ ಪುಲಿಕೇಶಿಯೊಡನೆ ಯುದ್ಧ ಮಾಡಿದ ಪಲ್ಲವ ದೊರೆ - ಒಂದನೇ ಮಹೇಂದ್ರ ಮರ್ಮನ್ ..

ಮತ್ತ ವಿಲಾಸ , ವಿಚಿತ್ರ ಚಿತ್ತ , ಪರಮೇಶ್ವರ , ಚಿತ್ರಕಾರಪಲಿ , ಚೈತ್ಯಕಾರ ಗುಣಭಾರ , ಮುಂತಾದ ಬಿರುದುಳ್ಳ ಪಲ್ಲವ ಅರಸ - ಒಂದನೇ ಮಹೇಂದ್ರ ಮರ್ಮನ್ .

ಕಲಹ ಪ್ರೀಯ ಎಂದು ಕರೆಯಲ್ಪಡುವ ಪಲ್ಲವ ದೊರೆ - ಒಂದನೇ ಮಹೇಂದ್ರ ಮರ್ಮನ್ ..

ಸಂಸ್ಕೃತದಲ್ಲಿ ಭಗವದಚ್ಚುಕ ಕೃತಿಯ ಕರ್ತೃ - ಒಂದನೇ ಮಹೇಂದ್ರ ಮರ್ಮನ್ ..

ಒಂದನೇ ಮಹೇಂದ್ರ ಮರ್ಮನ್ ಸಂಗೀತದ ಗುರುಗಳ - ರುದ್ರಾಚಾರ್ಯ .

ಕರ್ನಾಟಕದ ಸಂಗೀತವನ್ನು ತಿಳಿಸುವ ಮೊಟ್ಟ ಮೊದಲ ಶಾಸನ - ಒಂದನೇ ಮಹೇಂದ್ರ ಮರ್ಮನ್ . "ಕುಡಿಮಿಯಾ ಮಲೈ ಶಾಸನ ."

ಚೆಟ್ಟಿಕಾರಿ ಎಂದರೆ - ದೇಗುಲಗಳ ನಿರ್ಮಾಪಕ ಎಂದರ್ಥ .

ಚೆಟ್ಟಿ ಕಾರಿ ಎಂಬ ಹೆಸರನ್ನು ಹೊಂದಿದ್ದ ಪಲ್ಲವ ದೊರೆ - ಒಂದನೇ ಮಹೇಂದ್ರ ಮರ್ಮನ್ ..

"ಚಿತ್ರಜೀಕತಕಾಟ " ಕೆರೆಯ ನಿರ್ಮಾತೃ - ಒಂದನೇ ಮಹೇಂದ್ರ ಮರ್ಮನ್ ..

ಈ ಕೆರೆಯು ಯಾವ ಊರಿನಲ್ಲಿ ನಿರ್ಮಿಸಲಾಗಿದೆ - ಮಾಮಂದೂರ್ .

'ವಾತಾಪಿ ಕೊಂಡ ಹಾಗೂ ಮಹಾಮಲ್ಲ ' ಎಂಬ ಬಿರುದನ್ನು ಹೊಂದಿದ್ದ ಪಲ್ಲವ ಅರಸ - ಒಂದನೇ ಮಹೇಂದ್ರ ಮರ್ಮನ್ .

ಒಂದನೇ ನರಸಿಂಹ ವರ್ಮನ ಕಾಲದಲ್ಲಿ ಕಂಚೆಗೆ ಬೇಟಿ ನೀಡದ ಚೀನಿಯಾತ್ರಿಕ - ಹ್ಯೂಯನ್ ತ್ಸಾಂಗ್ ,

ಒಂದನೇ ನರಸಿಂಹ ವರ್ಮನ ಸೇನಾ ನಾಯಕ - ಸಿರೋತ್ಪಂಡ ಅಥವಾ ಶಿರೋತ್ತುಂಡ ನಾಯನಾರ್ .

ಪುಲಿಕೇಶಿಯನ್ನು ಬಗ್ಗು ಬಡಿದ ಪಲ್ಲವ ಅರಸ - ಒಂದನೇ ನರಸಿಂಹ ವರ್ಮನ.

ಪುಲಿಕೇಶಿಯ ವಿರುದ್ದ ಜಯಗಳಿಸಿ ಒಂದನೇ ನರಸಿಂಹ ವರ್ಮನ ಧರಿಸಿದ ಬಿರುದು - ವಾತಾಪಿಕೊಂಡ .

ಪಲ್ಲವ ಅರಸ ಒಂದನೇ ನರಸಿಂಹ ವರ್ಮನ ನೊಂದಿಗೆ ಹೋರಾಡಿದ ಸಿಂಹಳದ ದೊರೆ - ಮಾನವವರ್ಮ .

ಒಂದನೇ ನರಸಿಂಹ ವರ್ಮನ ಎರಡನೇ ರಾಜಧಾನಿ - ಮಹಾಬಲಿಪುರಂ .

ಧರ್ಮರಾಜ ರಥವನ್ನು ಕೆತ್ತಿಸಿದ ಪಲ್ಲವ ದೊರೆ - ಒಂದನೇ ನರಸಿಂಹ ವರ್ಮನ .

ಪಲ್ಲವರ ಕೊನೆಯ ದೊರೆ - ಅಪರಾಜಿತ ವರ್ಮ .

ಪಲ್ಲವರ ಆಡಳಿತ ಈ ರಾಜರ ಆಡಳಿತವನ್ನು ಹೋಲುತ್ತಿತ್ತು - ಶಾತವಾಹನರು .

ಪಲ್ಲವರು ರಾಜನನ್ನು ಈ ಹೆಸರಿನಿಂದ ಕರೆಯುತ್ತಿದ್ದರು - ಮಹಾರಾಜ ಹಾಗೂ ಧರ್ಮ ಮಹಾರಾಜ .

ಪಲ್ಲವರು ಪ್ರಾಂತ್ಯಗಳನ್ನು - ನಾಡುಗಲಾಗಿ ವಿಂಗಡಿಸಿದರು .

ಪ್ರಾಂತ್ಯಗಳನನ್ನ - ಜಿಲ್ಲೆ ಅಥವಾ ಕೊಟ್ಟಂಗಳಾಗಿ ವಿಂಗಡಿಸಲಾಗಿತ್ತು .

ಕೊಟ್ಟಂಗಳನ್ನು - ಸ್ಥಳೀಯ ಸ್ವಾಯತ್ತ ಸಂಸ್ಥೆಗಳಾಗಿ ವಿಂಗಡಿ◌ಿದರು .

ಕೊಟ್ಟಂನ ಆಡಳಿತಾಧಿಕಾರಿಯನ್ನು ಈ ಹೆಸರಿನಿಂದ ಕರೆಯುತ್ತಿದ್ದರು - ದೇಶಾಟಿಕ .

ಆಡಳಿತದ ಚಿಕ್ಕ ಘಟಕ - ಗ್ರಾಮವಾಗಿತ್ತು .

ಗ್ರಾಮದ ಆಡಳಿತ ನೋಡಿಕೊಳ್ಳುತ್ತಿದ್ದವನು - ಗ್ರಾಮ ಬೋಜ .

ಗ್ರಾಮ ಸಭೆಯ ಸದಸ್ಯರನ್ನು ಈ ಹೆಸರಿನಿಂದ ಕರೆಯುತ್ತಿದ್ದರು - ಪೆರುಮಾಳ್ .

ಪಲ್ಲವರ ಕಾಲದ ನ್ಯಾಯದಾನ ವ್ಯವಸ್ಥೆಯ ಮುಖ್ಯಸ್ಥ - ರಾಜ .

ಗ್ರಾಮಾಂತರ ಪ್ರದೇಶಗಳಲ್ಲಿ ನ್ಯಾಯದಾನ ಮಾಡುತ್ತಿದ್ದ ಸಮಿತಿಗಳು - ಮರಿಯ ಸಮಿತಿ .

ಪಲ್ಲವರ ಕಾಲದಲ್ಲಿ ನದಿಯ ಕಾಲುವೆಗಳನ್ನು ಈ ಹೆಸರಿನಿಂದ ಕರೆಯುತ್ತಿದ್ದರು - ಅರಕ್ಕುಳ್ .

ಪಲ್ಲವರ ಕಾಲದ ಪ್ರಮುಖ ಬಂದರುಗಳು - ಮಹಾಬಲಿ ಪುರಂ ಹಾಗೂ ನಾಗಾಪಟ್ಟಣಂ .

ಕಂಚಿಯ ಪಲ್ಲವರ ಕಾಲದ ಶಿಕ್ಷಣ ಕೇಂದ್ರಗಳು - ಮಠಗಳು .

ಶಿಕ್ಷಣ ನೀಡುವ ಕೇಂದ್ರಗಳಿಗೆ ಈ ಹೆಸರಿನಿಂದ ಕರೆಯುತ್ತಿದ್ದರು - ಘಟಕಗಳು .

ತಮಿಳು ಸಾಹಿತ್ಯ ಬೆಳವಣಿಗೆಯ ದ್ವೀತಿಯ ಹಂತ - ಪಲ್ಲವರ ಕಾಲ .

" ಕಾವ್ಯದರ್ಶ ಹಾಗೂ ಅವಂತಿ ಸುಂದರ ಕಥಾ" ಕೃತಿಯ ಕರ್ತೃ - ದಂಡಿ .

ತಿರುಮಂದಿರಂ ಕೃತಿಯ ಕರ್ತೃ - ಮಾಮುಲರ್ .

" ನನ್ಮುಖ ತಿರುವಂದಾಡಿ ಮತ್ತು ತಿರುಚ್ಚಂದ್ರ ವಿರುತ್ತನ್ " ಎಂಬ ಕೃತಿಯ ಕರ್ತೃ - ತಿರುಮಲೇಶೈ .

ಮಹಾ ಭಾರತವನ್ನು ತಮಿಳು ಭಾಷೆಗೆ ತ್ರಜುಮೆ ಮಾಡಿದ ಕವಿ - ಪೆರುಂದೇವನಾರ್ .

ನಾಚಿಯಾರ್ ತಿರುಮಮಾಲಿ ಮತ್ತು ತಿರು ಪ್ಪಾವೈ ಕೃತಿಯ ಕರ್ತೃ - ಆಂಡಾಳ್ .

ಒಂದನೇ ಮಹೇಂದ್ರ ವರ್ಮನ ಕಾಲದಲ್ಲಿ ದಕ್ಷಿಣ ಭಾರತದ ಶಿಲ್ಪ ಕಲೆಗಳಿಗೆ ಹಾಗೂ ಮೂರ್ತಿ ಶಿಲ್ಪ ಕಲೆಯ ಉಗಮಸ್ಥಾನ - ಮಹಾಬಲಿಪುರಂ .

ಮಹಾಬಲಿಪುರಂ ಶಿಲಾ ರಥಗಳು ಈ ಹೆಸರಿನಿಂದ ಪ್ರಸಿದ್ಧಿಯಾಗಿದೆ - ಸಪ್ತ ಪಗೋಡ ,

ಪಲ್ಲವರ ರಾಜ್ಯ ಲಾಂಛನ – ಸಿಂಹ .

“ ಮಹಾಮಲ್ಲ ” ಎಂಬ ಬಿರುದ್ದನ್ನು ಹೊಂದಿದ್ದ ಪಲ್ಲವ ದೊರೆಯ ಹೆಸರು – ಒಂದನೇ ನರಸಿಂಹ ವರ್ಮನ.

ಪಲ್ಲವರ ಕಾಲದ ಪ್ರಸಿದ್ಧ ಕಲಾ ಕೃತಿಗಳ ಕೇಂದ್ರ – ಮಹಾಬಲಿಪುರಂ ಹಾಗೂ ಕಂಚಿ .

ದಶಕುಮಾರ ಚರಿತ ಕೃತಿಯ ಕರ್ತೃ – ದಂಡಿ .

ಹ್ಯೂಯನ್ ತ್ಸಾಂಗನು ಪಲ್ಲವ ರಾಜ್ಯಕ್ಕೆ ಬೇಟಿ ನೀಡಿದ್ದು – ಕ್ರಿ.ಶ. 640 ರಲ್ಲಿ .ಪಲ್ಲವರ ರಾಜ್ಯವನ್ನು “ ದ್ರಾವಿಡ ದೇಶ ” ಎಂದು ಕರೆದವರು – ಹ್ಯೂಯನ್ ತ್ಸಾಂಗ್

*******************************************************************************************

# ಕದಂಬರು

ಕರ್ನಾಟಕದಲ್ಲಿ ಮೊದಲು ಹುಟ್ಟು ಹಾಕಿದ ಕನ್ನಡ ಸಾಮ್ರಾಜ್ಯ – ಕದಂಬರು .

ಕದಂಬರು ಆಳಿದ್ದ ಕ್ರಿ.ಶ.4 ನೇ ಶತಮಾನದಿಂದ 6 ನೇ ಶತಮಾನದವರೆಗೆ

ಕದಂಬರ ರಾಜಧಾನಿ – ಬನವಾಸಿ .

ಬನವಾಸಿ ಪ್ರಸ್ತುತ ಈ ಜಿಲ್ಲೆಯಲ್ಲಿದೆ – ಉತ್ತರ ಕನ್ನಡ .

ಕದಂಬರ ವಂಶದ ಸ್ಥಾಪಕ ದೊರೆ – ಮಯೂರ ವರ್ಮ .

ಕದಂಬರ ಲಾಂಛನ – ಸಿಂಹ .

ಕದಂಬರ ಧ್ವಜ – ವಾನರ .

ಮಹಾಭಾರತ ಕಾಲದಲ್ಲಿ ಬನವಾಸಿಯನ್ನು ಈ ಹೆಸರಿನಿಂದ ಕರೆಯಲಾಗುತ್ತಿತ್ತು – ವೈಜಯಂತಿ ಅಥವಾ ವನವಾಸಿ .

ಟಾಲೆಮಿಯು ತನ್ನ ಕೃತಿ Geography ಯಲ್ಲಿ ಬನವಾಸಿಯನ್ನು ಈ ಹೆಸರಿನಿಂದ ಕರೆದಿದ್ದಾನೆ – ಬೈಜಾಂಟಿಯನ್ .

ಕದಂಬರ ಮೂಲ

ದೈವಾಂಶ ಸಿದ್ಧಾಂತ

ನಾಗ ಸಿದ್ಧಾಂತ

ಜೈನ ಸಿದ್ಧಾಂತ

ನಂದಾ ಮೂಲ

ತಮಿಳು ಮೂಲ

ಕನ್ನಡ ಮೂಲ

ಕದಂಬರ ಮೂಲ ಪುರುಷ - ಮಯೂರ ವರ್ಮ .

ಮಯೂರವರ್ಮನ ತಂದೆಯ ಹೆಸರು - ವೀರಶರ್ಮ .

ಮಯೂರವರ್ಮನ ಗುರುವಿನ ಹೆಸರು - ವೀರಶರ್ಮ .

ಮಯೂರವರ್ಮನನ್ನ ಅವಮಾನಿಸಿದ ಕಂಚಿಯ ಪಲ್ಲವ ದೊರೆ - ಶಿವಸ್ಕಂದ ವರ್ಮ .

ಚಂದ್ರವಳ್ಳಿ ಶಾಸನದ ಕರ್ತೃ - ಮಯೂರವರ್ಮ

ಚಂದ್ರವಳ್ಳಿಯ ಬಳಿ ಕೆರೆಯನ್ನು ನಿರ್ಮಿಸಿದ ಕದಂಬ ದೊರೆ - ಮಯೂರವರ್ಮ

ಮಯೂರವರ್ಮನ ಸೈನಿಕ ಸಾಧನೆಯನ್ನು ತಿಳಿಸುವ ಶಾಸನ - ಚಂದ್ರವಳ್ಳಿ ಶಾಸನ .

ಕರ್ನಾಟಕದ ಪ್ರಥಮ ಚಕ್ರವರ್ತಿ ಎಂಬ ಹೆಗ್ಗಳಿಕೆಗೆ ಪಾತ್ರನಾದ ಅರಸ - ಮಯೂರವರ್ಮ

ಮಯೂರವರ್ಮನ ನಂತರ ಕದಂಬ ವಂಶವನ್ನು ಆಳಿದವರು - ಕಂಗವರ್ಮ .

ಧರ್ಮರಾಜ , ಧರ್ಮಮಹಾರಾಜ ಎಂಬ ಬಿರುದನ್ನು ಧರಿಸಿದ್ದ ಕದಂಬ ದೊರೆ - ಕಾಕುಸ್ಥವರ್ಮ .

ಕನ್ನಡದ ಮೊಟ್ಟ ಮೊದಲ ಶಾಸನ - ಹಲ್ಮಿಡಿ ಶಾಸನ .

ಹಲ್ಮಿಡಿ ಶಾಸನದ ಕರ್ತೃ - ಕಾಕುಸ್ಥವರ್ಮ .

ತಾಳಗುಂದ ಶಾಸನದ ಕರ್ತೃ - ಕಾಕುಸ್ಥವರ್ಮ .

ಕದಂಬರ ರಾಜ್ಯಾಡಳಿತದಲ್ಲಿ ರಾಜನಿಗೆ ಆಡಳಿತದಲ್ಲಿ ಸಹಾಯ ಮಾಡುತ್ತಿದ್ದ ಮಂತ್ರಿಮಂಡಳವನ್ನು ಈ ಹೆಸರಿನಿಂದ ಕರೆಯುವರು - ಪಂಚಪ್ರಧಾನರು .

ಪ್ರಧಾನ ಮಂತ್ರಿ - ಪ್ರಧಾನ

ಅರಮನೆಯ ವ್ಯವಹಾರಗಳ ಮಂತ್ರಿ - ಮನೆಸೇರ್ಗಡೆ .

ವಿದೇಶಾಂಗ ವ್ಯವಹಾರಗಳ ಮಂತ್ರಿ - ತಂತ್ರ ಪಾಲ .

ತಾಂಬೂಲ ಪಾರು ಪತ್ಯಗಾರ - ಕ್ರಮುಖ ಪಾಲ .

ಮಂತ್ರಿಮಂಡಲದ ಪ್ರಧಾನ ಕಾರ್ಯ ದರ್ಶಿ - ಸಭಾಕಾರ್ಯ ಸಚಿವ .

ಕದಂಬರ ಆಡಳಿತದಲ್ಲಿ ಜಿಲ್ಲೆಯ ಮುಖ್ಯಸ್ಥನನ್ನು ಈ ಹೆಸರಿನಿಂದ ಕರೆಯುತ್ತಿದ್ದರು - ಮನ್ನೇಯ .

ಪಟ್ಟಣದ ಾಡಳಿತ ನೋಡಿಕೊಳ್ಳುತ್ತಿದ್ದವನು - ಪಟ್ಟಣ ಸ್ವಾಮಿ .

ಕದಂಬರು ಹೊರೆಗಳ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು ಈ ಹೆಸರಿನಿಂದ ಕರೆಯುತ್ತಿದ್ದರು - ಪೇರ್ಜುಂಕ .

ವ್ಯಾಪಾರ ತೆರಿಗೆಯನ್ನು ಈ ಹೆಸರಿನಿಂದ ಕರೆಯುತ್ತಿದ್ದರು - ಬಿಲ್ ಕೊಡೆ .

ಸಾರಿಗೆ ತೆರಿಗೆಯನ್ನು ಈ ಹೆಸರಿನಿಂದ ಕರೆಯುತ್ತಿದ್ದರು - ಕಿರುಕುಳ .

ಗೆರಿಲ್ಲಾಯುದ್ಧ ತಂತ್ರಕ್ಕೆ ಹೆಸರಾಗಿದ್ದ ದಕ್ಷಿಣ ಭಾರತದ ಮನೆತನ - ಕದಂಬರು .

ಕದಂಬರ ಕೂಟ ಯುದ್ದವನ್ನು ಈ ಹೆಸರಿನಿಂದ ಕರೆಯುತ್ತಿದ್ದರು - ಗೆರಿಲ್ಲಾ .

ಕದಂಬರ ಸಮಾಜದಲ್ಲಿದ್ದ ಕುಟುಂಬ ಪದ್ದತಿ - ಮಾತೃ ಪ್ರಧಾನ , ಅವಿಭಕ್ತ ಕುಟುಂಬ ಪದ್ದತಿ .

ಕದಂಬ ಸಾಮ್ರಾಜ್ಯವು ಈ ಲಕ್ಷಮಗಳನ್ನು ಹೊಂದಿತ್ತು - ಭಾರತೀಕರಣ .

ಕದಂಬರು ಈ ಧರ್ಮದ ಅವಲಂಬಿಗಳು - ವೈದಿಕ ಧರ್ಮ .

ಕದಂಬರ ಕುಲದೇವರು - ತಾಳಗುಂದದ ಪ್ರಾಣೇಶ್ವರ .

ಕದಂಬರ ಮನೆಯ ದೇವರು - ಬನವಾಸಿಯ ಮಧಕೇಶ್ವರ .

ಕದಂಬರ ಕಾಲದಲ್ಲಿ ಬನವಾಸಿಗೆ ಆಗಮಿಸಿದ ಚೀನೀಯಾತ್ರಿಕ - ಹ್ಯೂಯನ್ ತ್ಸಾಂಗ್ .

ಕದಂಬರ ಮುಖ್ಯ ವೃತ್ತಿ - ವ್ಯವಸಾಯ .

ಕದಂಬರ ಕಾಲದ ಭ ಕಂದಾಯ ಪದ್ದತಿ - ಸರ್ವ ನಮಸ್ಯ , ತ್ರೀಬೋಗ , ಹಾಗೂ ತಾಳವೃತ್ತಿ.

ಕದಂಬರ ರೇವು ಪಟ್ಟಣಗಳು - ಗೋವಾ , ಮಂಗಳೂರು , ಹೊನ್ನವರ , ಅಂಕೋಲ ಹಾಗೂ ಭಟ್ಕಳ

ಕದಂಬರ ವಿಶಿಷ್ಠ ಕೊಡುಗೆಗಳು - ನಾಣ್ಯ ಪದ್ದತಿ .

ಕದಂಬರು ಬಿಡುಗಡೆ ಮಾಡಿದ ಬೆಳ್ಳಿ ನಾಣ್ಯದ ಹೆಸರು - ಪದ್ಮಟಂಕ .

ಕದಂಬರ ಪ್ರಮುಖ ನಾಣ್ಯಗಳು - ಗದ್ಯಾಣ , ದ್ರುಮ್ಮ , ಪಮ , ಸುವರ್ಣ ,

ಕದಂಬರ ಕಾಲದ ಶಿಕ್ಷಣ ಪದ್ದತಿ - ಗುರುಕುಲ ಶಿಕ್ಷಮ ಪದ್ದತಿ ,

" ಘಟಿಕ ಸಾಹಸಿ " ಎಂಬ ಬಿರಿದನ್ನು ಪಡೆಯುತ್ತಿದ್ದವರು - ಘಟಕದಲ್ಲಿ ಓದಿದ ವಿಧ್ಯಾರ್ಥಿಗಳಿಗೆ .

ಇಲ್ಲಿ ಉಚಿತ ಊಟೋಪಚಾರದ ವ್ಯವಸ್ಥೆ ಇತ್ತು - ಬಳ್ಳಿಗಾಮೆ , ತಾಳಗುಂದ , ಬನವಾಸಿ ಹಾಗೂ ಅಗ್ರಹಾರ .

ಕದಂಬರ ಕಾಲದ ಪ್ರಸಿದ್ಧ ವಿದ್ಯಾ ಕೇಂದ್ರ - ಕಂಚಿ .

ಕದಂಬರ ಆರಂಭದ ಶಾಸನಗಳು ಈ ಭಾಷೆಯಲ್ಲಿದೆ - ಪ್ರಾಕೃತ .

ತಾಳಗುಂದ ಶಾಸನದ ಕರ್ತೃ - ಕವಿ ಕುಬ್ಜ ( ಶಾಂತಿ ವರ್ಮ ಬರೆಯಿಸಿದ )

" ಮದನ ತಿಲಕ " ಕೃತಿಯ ಕರ್ತೃ - ಚಂದ್ರರಾಜ .

ಚಂದ್ರ ಚೂಡಾ ಮಣಿ ಕೃತಿಯ ಕರ್ತೃ - ನಾಗವರ್ಮ .

" ಸುಕುಮಾರ ಚರಿತೆ " ಯ ಕರ್ತೃ - ಶಾಂತಿನಾಥ

" ಕೌಂತಳೇಶ್ವರ ದೌತ್ಯಂ " ಕೃತಿಯ ಕರ್ತೃ - ಎರಡನೇ ಕಾಳಿದಾಸ .

" ಕದಂಬ ಶೈಲಿ " ಎಂಬ ವಾಸ್ತುಶಿಲ್ಪ ಶೈಲಿಯನ್ನು ಸೃಷ್ಠಿಸಿದವರು - ಕದಂಬರು .

ಕದಂಬರ ಆರಂಭದ ರಚನೆ - ಮೃಗೇಶ ವರ್ಮನು ರಚಿಸಿದ ಜೈನ ಬಸದಿ .

ದಕ್ಷಿಣ ಭಾರತದಲ್ಲಿಯೆ ಮೊಟ್ಟ ಮೊದಲನೆಯ ಪ್ರಾಚೀನ ದೇವಾಲಯಗಳ ಕಲಾಕೃತಿ - ತಾಳಗುಂದದ ಪ್ರಣವೇಶ್ವರ ದೇವಾಲಯ .

ಹಲ್ಮಿಡಿ ಶಾಸನ ಈ ಜಿಲ್ಲೆಯಲ್ಲಿ ದೊರೆಯುತ್ತದೆ - ಹಾಸನ ಜಿಲ್ಲೆ ಬೇಲೂರು ತಾಲೂಕಿನ ಹಲ್ಮಿಡಿ ಗ್ರಾಮ .

ಮಯೂರ ವರ್ಮನನ್ನು " ದ್ವೀಜೋತಮ " ನೆಂದು ತಿಳಿಸಿರುವ ಶಾಸನದ ಹೆಸರು - ಮಳವಳ್ಳಿ ಶಾಸನ .

ಕಂಚಿಯಿಂದ ಹೊರನಡೆದ ಮಯೂರವರ್ಮನು ಮೊದಲು ಶಸ್ತ್ರಸ್ತ್ರ ಪಡೆಯನ್ನು ಕಟ್ಟಿದ ಪ್ರದೇಶ - ಶ್ರೀ ಶೈಲ

"ಧರ್ಮ ಮಹಾರಾಜಾಧಿರಾಜ " ಎಂಬ ಬಿರದ್ದನ್ನು ಹೊಂದಿದ್ದ ಕದಂಬರ ಅರಸ - ಕಂಗವರ್ಮ ಅಥಾವ ಕೊಂಗುಣಿ ವರ್ಮ .

ತಾಳಗುಂದ ಶಾಸನ ಈ ಜಿಲ್ಲೆಯಲ್ಲಿ ದೊರಕಿದೆ - ಶಿವಮೊಗ್ಗ .

ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿದ ಕದಂಬ ದೊರೆ - ಕಾಕುಸ್ಥವರ್ಮ .

ಮೃಗೇಶನ ಮತ್ತೊಂದು ರಾಜಧಾನಿ - ಹಲಸಿ .

ಕದಂಬರ ಪ್ರಾಂತ್ಯದ ಘಟಕಗಳು - ಕಂಪಣ .

ಟಂಕ ಹಾಗೂ ಗಧ್ಯಾಣ ಎಂಬ ನಾಣ್ಯಗಳನ್ನು ಚಲಾವಣಿಗೆ ತಂದ ಮೊದಲಿಗರು - ಕದಂಬರು .

ಚಂದ್ರವಳ್ಳಿಯ ಶಾಸನ ಈ ಜಿಲ್ಲೆಯಲ್ಲಿ ದೊರೆತಿದೆ - ಚಿತ್ರದುರ್ಗ .

ಬ್ರಾಹ್ಮಿಲಿಪಿಯಲ್ಲಿರುವ ಪ್ರಪ್ರಥಮ ಸಂಸ್ಕೃತ ಶಾಸನ - ಚಂದ್ರವಳ್ಳಿ ಶಾಸನ .

ಮಹಾಭಾರತದಲ್ಲಿ ಬನವಾಸಿಯನ್ನು ಈ ಹೆಸರಿನಿಂದಲೂ ಕರೆದ್ದಿದ್ದಾರೆ - ಕುಂತಲ ದೇಶ .

ಪ್ರಣವೇಶ್ವರನ ಹೆಸರಿನಲ್ಲಿ ಕೆರೆಯನ್ನ ಕಟ್ಟಿಸಿದ ದೊರೆ - ಕಾಕುಸ್ಥವರ್ಮ .

ಕದಂಬರು ಈ ನದಿಯ ದಡದಲ್ಲಿ ತಮ್ಮ ರಾಜ್ಯವನ್ನ ಸ್ಥಾಪಿಸಿದರು - ವರದಾ ನದಿ .

ತಾಳಗುಂದದ ಪ್ರಾಚೀನ ಹೆಸರು - ಸ್ಥಣ ಕುಂದೂರು

ಕರ್ನಾಟಕದ ಅತ್ಯಂತ ಪ್ರಾಚೀನ ಸಂಸ್ಕೃತ ಶಾಸನ - ಚಂದ್ರವಳ್ಳಿ ಶಾಸನ

ಮಯೂರವರ್ಮನು ವಿಧ್ಯಾಭ್ಯಾಸಕ್ಕಾಗಿ ಹೋದ ವಿದ್ಯಾಕೇಂದ್ರ - ಕಂಚಿ

ಕದಂಬರ ಈ ದೊರೆಯನ್ನು ಕುಂತಳ ರಾಜ್ಯದ ಏಕಮಾತ್ರ ದೊರೆ ಎಂದು ಹೇಳಲಾಗಿದೆ - ಭಗೀರಥ ವರ್ಮ

ಗುಪ್ತರೊಂದಿಗೆ ವೈವೈಹಿಕ ಸಂಬಂಧ ಹೊಂದಿದ್ದ ಕದಂಬ ದೊರೆ - ಕಾಕುಸ್ಥ ವರ್ಮ

ಕದಂಬರ ಕೊನೆಯ ದೊರೆ - ಹರಿವರ್ಮ -

ಕದಂಬರ ಆಳ್ವಿಕೆಯನ್ನು ಕೊನೆಗಾಣಿಸಿದ ಸಾಮ್ರಾಜ್ಯ - ಬಾದಾಮಿ ಚಾಲುಕ್ಯರು

ತಾಳಗುಂದ ಶಾಸನವು ಈ ಅರಸರನ್ನು " ಆಬರಣ " ಎಂದು ಬಣ್ಣಿಸಿದೆ - ಕಾಕುಸ್ಥ ವರ್ಮ

ಹಲ್ಮಿಡಿ ಶಾಸನದ ಕಾಲ - ಕ್ರಿ.ಶ.450

*****************************************************************************************

# ಗಂಗರು

ಗಂಗರು ಸುಮಾರು ಕರ್ನಾಟಕವನ್ನು " 600 ವರ್ಷ" ಗಳ ಕಾಲ ಆಳಿದರು

ಗಂಗರ ರಾಜ್ಯ ಕೋಲಾರ , ತುಮಕೂರು , ಬೆಂಗಳೂರು , ಮಂಡ್ಯ ಹಾಗೂ ಮೈಸೂರನ್ನ ಒಳಗೊಂಡಿತ್ತು .

ಗಂಗರು ಬಾದಾಮಿ ಚಾಲುಕ್ಯರು ಹಾಗೂ ರಾಷ್ಟ್ರಕೂಟರ ಸಾಮಾಂತರಾಗಿದ್ದರು .

“ಕೋಲಾರ ” ಅಥವಾ “ ಕುವಲಾಲ ” ಇವರ ಆರಂಭದ ರಾಜಧಾನಿ

ಗಂಗರ ಎರಡನೇ ರಾಜಧಾನಿ “ ತಲಕಾಡು “

ಗಂಗ ನಾಡಿನ ತಿರುಳು ಭಾಗವನ್ನು “ಗಂಗವಾಡಿ ” ಎಂದು ಕರೆಯಲಾಗುತ್ತಿತ್ತು .

ಗಂಗರಲ್ಲಿ ಪ್ರಸಿದ್ಧನಾದ ದೊರೆ “ ಶ್ರೀ ಪುರುಷ”

ರಾಚಮಲ್ಲನ ಮಂತ್ರಿಯಾದ “ಚಾವುಂಡ ರಾಯನು ” ಶ್ರವಣ ಬೆಳಗೋಳದಲ್ಲಿ ಕ್ರಿ.ಶ.980 ರಲ್ಲಿ “ಗೊಮ್ಮಟೇಶ್ವರನ ” ಏಕಶಿಲಾ ಮೂರ್ತಿಯನ್ನು ಕೆತ್ತಿಸಿದನು .

ಗಂಗ ಮನೆತನವು ಕ್ರಿ.ಶ.೧೦೦೦ಳರಲ್ಲಿ

ಚೋಳರಿಂದ ಸೋತು ಕೊನೆಗೊಂಡಿತು

ಚನ್ನಪಟ್ಟಣದ “ ಮಾಕುಂದ ” ಹಾಗೂ ಬೆಂಗಳೂರು ಜಿಲ್ಲೆಯ ನೆಲಮಂಗಲ ಬಳಿಯ “ ಮನ್ನೇಯ ” ಇವರ ◌ಿತರ ರಾಜಧಾನಿ .

ಗಂಗರನ್ನು “ ತಲಕಾಡಿನ ಗಂಗರು ” ಎಂದು ಪ್ರಸಿದ್ಧರಾಗಿದ್ದರು .

ಗಂಗರ ರಾಜ ಮುದ್ರೆ ಅಥವಾ ರಾಜ ಲಾಂಛನ “ ಮದಗಜ ”

ಗಂಗರು “ ಗಂಗಟಕಾರರು ” ಎಂದು ಹೆಸರುವಾಸಿಯಾಗಿದ್ದರು .

ಗಂಗರು ಆಳಿತದ ಪ್ರದೇಶವನ್ನು “ ಗಂಗವಾಡಿ ಅಥವಾ ಗಂಗನಾಡು ” ಎಂದು ಕರೆಯುತ್ತಿದ್ದರು .

ಗಂಗರು ಸ್ವತಂತ್ರರಾಗಿ ಕ್ರಿ.ಶ. 350 – 600 ರವರೆಗೆ ಆಳ್ವಿಕೆ ಮಾಡಿದ್ದಾರೆ .

ಗಂಗರು ಚಾಲುಕ್ಯರ ಸಾಮಂತರಾಗಿ ಕ್ರಿ.ಶ.600 – 758 ರವರೆಗೆ ಆಳ್ವಿಕೆ ಮಾಡಿದರು .

ಗಂಗರು ರಾಷ್ಟ್ರಕೂಟರ ಸಾಮಾಂತರಾಗಿ ಕ್ರಿ.ಶ.757 – 973 ರವರೆಗೆ ಆಳ್ವಿಕೆ ಮಾಡಿದರು .

ಗಂಗರು ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ಕ್ರಿ.ಶ. 973 – 990 ರವರೆಗೆ ಆಳ್ವಿಕೆ ಮಾಡಿದರು .

“ತಲಕಾಡು ” ಗಂಗರ ಪ್ರಧಾನ ಆಡಳಿತ ಕೇಂದ್ರವಾಗಿತ್ತು .

ಗಂಗರ ಮೂಲ

ದೈವಿ ಸಿದ್ಧಾಂತದ ಪ್ರಕಾರ ಇವರು ಇಕ್ಷಾಕು ವಂಶದವರೆಂದು

ಕಣ್ವ ಮೂವಗ ಪ್ರಕಾರ ಿವರು " ಕಣ್ವ " ವಂಶದವರು ಎಂದು

ತಮಿಳು ಮೂಲ - ಇವರು ಮೂಲತಃ "ಪೆರೂರು " ಆಗಿದ್ದು ( ಕೊಯಮತ್ತೂರು ) ಇವರು ತಮಿಳು ಮೂಲದಿಂದ ಬಂದವರೆಂದು ಹೇಳಲಾಗಿದೆ .

ಕನ್ನಡ ಸಿದ್ಧಾಂತದ ಪ್ರಕಾರ ಇವರು ಅಚ್ಚ ಕನ್ನಡಿಗರು - ಗಂಗರು ರಾಜಧಾನಿ ತಲಕಾಡು ದಕ್ಷಿಣ ಗಂಗೆ ಕಾವೇರಿ ನದಿಯ ದಡದಲ್ಲಿದ್ದರಿಂದ ಈ ವಂಶಕ್ಕೆ "ಗಂಗ " ಎಂದು ಹೆಸರು ಬಂದಿದೆ .

ಗಂಗ ಮನೆತನದ ರಾಜರುಗಳು

ದಡಿಗ

ಒಂದನೇ ಮಾಧವ

ಎರಡನೇ ಮಾಧವ

ಮೂರನೇ ಮಾಧವ

ಅವನೀತ

ದುರ್ವಿನೀತ

ಶ್ರೀಪುರುಷ

ಎರಡನೇ ಶಿವಮಾರ

ಒಂದನೇ ರಾಚ ಮಲ್ಲ

ಗಂಗರ ರಾಜಕೀಯ ಇತಿಹಾಸ ( ದಡಿಗ or ಕೊಂಗುಣಿ ವರ್ಮ )

ಇವನು ಗಂಗ ವಂಶದ ಸ್ಥಾಪಕ

“ ಕುವಲಾಲ ಅಥವಾ ಕೋಲಾರ ” ಇವನ ರಾಜಧಾನಿ .

ಬಾಣರನ್ನು ಸೋಲಿಸಿ ಗಂಗ ವಂಶಕ್ಕೆ ಅಡಿಪಾಯ ಹಾಕಿದ

ಧರ್ಮ ಮಹಾರಾಜ ಹಾಗೂ ಬಾಣ ವಂಶದವನ ದಾವಲನ ಎಂಬುದು ಇವನ ಬಿರುದುದಳು .

ಈತನ ಗುರುವಿನ ಹೆಸರು - ಸಿಂಹ ನಂದಿ ( ಜೈನಗುರು )

ಸಿಂಹ ನಂದಿಯ ಇಚ್ಛೆಯ ಮೇರೆಗೆ ಶಿವಮೊಗ್ಗದ “ ದುಂಡಲಿ ” ಎಂಬಲ್ಲಿ ಒಂದು ಚೈತ್ಯಲಾಯವನ್ನು ನಿರ್ಮಿಸಿದನು .

ಒಂದನೇ ಮಾಧವ

ದಡಿಗನ ನಂತರ ಅಧಿಕಾರಕ್ಕೆ ಬಂದವನು

ಈತ ಸ್ವತಃ ಕವಿಯಾಗಿದ್ದನು ಹಾಗೂ ಕವಿಗಳಿಗೆ ಆಶ್ರಯ ನೀಡಿದ್ದನು

ಈತ ರಚಿಸಿದ ಕೃತಿ - “ ದತ್ತ ಸೂತ್ರ ”

ಇವನ ನಂತರ ಹರಿವರ್ಮ ಹಾಗೂ 2 ನೇ ಮಾಧವ ಆಳಿದರು

ಮೂರನೇ ಮಾಧವ

ಇವನು ತಂಡಂಗಾಲ ಮಾಧವ ಎಂದು ಹೆಸರಾಗಿದ್ದಾನೆ .

ಈತ ಕದಂಬ ಅರಸ ಕಾಕುಸ್ಥವರ್ಮನ ಮಗಳನ್ನು ವಿವಾಹವಾಗಿದ್ದ

ವಿಜಯ ಕೀರ್ತಿ - ಿವನ ದೀಕ್ಷಾ ಗುರುಗಳಾಗಿದ್ದರು .

ಅವನೀತ

ಈತ ಮೂರನೇ ಮಾಧವನ ಮಗ

ಈತ ಶಿವನ ಆರಾಧಕನಾಗಿದ್ದನು .

ಈತ ಸರ್ವಧರ್ಮ ಸಮನ್ವಯಿಯಾಗಿದ್ದನ್ನು

ಇತನನ್ನ ಶಾಸನಗಳು " ಹರ ಚರಣಾರ ಎಂದ ಪ್ರಣಿಪಾತ " ಎಂದು ಉಲ್ಲೇಕಿಸಿದೆ

ದುರ್ವಿನೀತ

ಈತ ಗಂಗರಲ್ಲಿ ಅತ್ಯಂತ ಪ್ರಸಿದ್ಧ ದೊರೆ

ಈತನ ತಾಯಿ ಜೇಷ್ಠದೇವಿ ಹಾಗೂ ತಂದೆ ಅವಿನೀತ

ಈತ ವೈಷ್ಣವ ಮತಾವಲಂಬಿಯಾಗಿದ್ದನು

ಬಾರವಿಯ 15 ನೇ ದಗಂಕ್ಕೆ ಭಾಷ್ಯವನ್ನ ಬರೆದನು

ಇತ "ಗುಣಾಢ್ಯನ " " ವಡ್ಡ ಕಥಾವನ್ನು " ಪೈಶಾಚಿ ಭಾಷೇಯಿಂದ ಸಂಸ್ಕೃತಕ್ಕೆ ತರ್ಜುಮೆ ಮಾಡಿದರು

ಇತನ ಗುರು - ಪುಷ್ಯಪಾದ ಅಥವಾ ದೇವಾನಂದಿ

ಇತನ ಬಿರುದುಗಳು - ಅವನೀತ ಸ್ತರ ಪೂಜಾಲಾಯ . ಅಹೀತ , ಅನೀತ ಹಾಗೂ ಧರ್ಮ ಮಹಾರಾಜ ಕುಲೋಥರ , ನೀತಿಶಾಸ್ತ್ರ ವಕ್ತ , ಪ್ರಯೋಕ್ಷ ಕುಶಲ

ಈತನ ಗುರುಗಳಿಂದ ದೇವಾನಂದಿಯು ಸಂಸ್ಕೃತ ವ್ಯಾಕರಣ ಶಬ್ದಾವತಾರ ವನ್ನು ಬರೆದಿದ್ದಾನೆ .

ಶ್ರೀಪುರುಷ

ದುರ್ವಿನೀತ ನಂತರ ಅಧಿಕಾರಕ್ಕೆ ಬಂದವನು

ಈತ " ಗಜಶಾಸ್ತ್ರ " ಎಂಬ ಕೃತಿಯನ್ನ ರಚಿಸಿದರು

ಈತ ರಾಜಧಾನಿಯನ್ನು ಮಾಕುಂದದಿಂದ - ಮಾನ್ಯಪರಕ್ಕೆ ಬದಲಾಯಿಸಿದನು

ಒಂದನೇ ಶಿವಮಾರನಿಗೆ - ್ವನಿ ಮಹೇಂದ್ರ ಎಂಬ ಬಿರುದಿತ್ತು

"ತುಂಡಕ ಕದನ " ದಲ್ಲಿ ಪಲ್ಲವರನ್ನು ಸೋಲಿಸಿದವನು

ಇವನ ಕಾಲದಲ್ಲಿ ಗಂಗರಾಜ್ಯ "ಶ್ರೀರಾಜ್ಯ " ಎಂದು ಕರೆಸಿಕೊಂಡಿತು .

ಈತನ ಬಿರುದುಗಳು - ರಾಜಕೇಸರಿ , ಪೆರ್ಮಾಡಿ , ಶ್ರೀವಲ್ಲಭ , ಬೀಮಕೋಪ

ಎರಡನೇ ಶಿವಮಾರ

ಈತನ ಇನ್ನೊಂದು ಹೆಸರು - ಸೈಗೋತ

ಈತನ ಕೃತಿಗಳು - ಗಜಾಷ್ಮಕ , ಸೇತುಬಂಧ ಹಾಗೂ ಶಿವಮಾರ ತರ್ಕ

ಈತ ಶ್ರವಣಬೆಳಗೋಳದಲ್ಲಿ ಜೈನ ಬಸದಿಯನ್ನು ನಿರ್ಮಿಸಿದನು

ಈತನ ತಂದೆಯ ಹೆಸರು - ಶ್ರೀಪುರುಷ

ಎರಡನೇ ಬೂತುಗ

ಈತ " ತತ್ಕೋಳಂ ಕದನದಲ್ಲಿ " ಚೋಳರ ರಾಜಾದಿತ್ಯನನ್ನು ಕೊಂದನು .

ಆತನ ಬಿರುದು - ಮಹಾರಾಜಾದಿರಾಜ

ಮಂತ್ರಿ ಚಾವುಂಡರಾಯ

ಈತ ಗಂಗರ ಆಸ್ಥಾನದಲ್ಲಿ ಮಂತ್ರಿಯಾಗಿ ಹಾಗೂ ದಂಡನಾಯಕನಾಗಿದ್ದ

ಈತ ರ್ಜಿತಸೇನಾ ಭಟ್ಟರಕ ಹಾಗೂ ನೇಮಿಚಂದ್ರ ಮುನಿಯ ಅನುಯಾಯಿ

ಈತನ ಬಿರುದು - ಸತ್ಯವಿದಿಷ್ಠಿರ

ಈತನ ಕೃತಿಗಳು - ಸಂಸ್ಕೃತದಲ್ಲಿ "ಚರಿತ್ರಾಸಾರ " ಕನ್ನಡದಲ್ಲಿ ಚಾವುಂಡರಾಯ ಪುರಣ ಅಥವಾ ಅಥವಾ " ತ್ರಿಷಷ್ಠಿ ಲಕ್ಷಣ ಮಹಾಪುರರಣ " ಹಾಗೂ ಲೋಕೋಪಾಕರ ( ವಿಶ್ವಕೋಶ )

ಈತನ ಮೊದಲ ಹೆಸರು - ಚಾವುಂಡರಾಜ

ರಾಚಮಲ್ಲನು ಚಾವುಂಡರಾಯನಿಗೆ ನೀಡಿದ ಬಿರುದು - "ರಾಯ '

ಚಾವುಂಡರಾಯನ ಮಹಾತ್ಸಾಧಾನೆ - ಶ್ರವಣಬೆಳಗೋಳದ ಬಾಹುಬಲಿಯ ವಿಗ್ರಹ ನಿರ್ಮಾಣ

ಈತನ ಆಶ್ರಯ ಪಡೆದ ಕನ್ನಡದ ಹೆಸರಾಂತ ಕವಿ - ರನ್ನ

ಈತ ಗಂಗರ ಅರಸ 2ನೇ ಮಾರಸಿಂಹ ಆಳ್ವಿಕೆಯಲ್ಲಿ - ಪ್ರಧಾನ ಮಂತ್ರಿಯಾಗಿ ಹಾಗೂ ದಂಡನಾಯಕನಾಗಿ ನಿಯುಕ್ತಿಗೊಂಡ

4 ನೇ ರಾಚಮಲ್ಲ ಈತನಿಗೆ ನೀಡಿದ ಬಿರುದು - ಸಮರ ಪರಶುರಾಮ

ಗೋಣೂರು ಕದನದಲ್ಲಿ ಜಗದೇಕ ವೀರನನ್ನು ಸೋಲಿಸಿ “ವೀರ ಮಾರ್ತಂಡ ” ಎಂಬ ಬಿರುದು ಪಡೆದ .

ಪಾಂಡ್ಯ ಅರಸ ರಾಜಾದಿತ್ಯನನ್ನು ಸೋಲಿಸಿ “ರಣಸಂಗ ಸಿಂಗ ” ಎಂಬ ಬಿರುದನ್ನು ಪಡೆದ

ಈತನ ಬಿರುದು - ಭುಜ ವಿಕ್ರಮ , ಸಮರ ದುರಂಧರ

ಈತನ ತಾಯಿ - ಕಾಳಲಾದೇವಿ

ಗೊಮ್ಮಟೇಶ್ವರನನ್ನು ಕೆತ್ತಿನೆಯ ಮೇಲ್ವಿಚಾರಕ ಶಿಲ್ಪಿ - ಅರಿಷ್ಟಾನೇಮಿ

ಗೊಮ್ಮಟೇಶ್ವರ ವಿಗ್ರಹ ನಿರ್ಮಾಣವಾದದು - ಕ್ರಿ.ಶ.981 – 983

ಈತನ ಇನ್ನೊಂದು ಮಹಾನ್ ಕಾರ್ಯ - ಚಾವುಂಡರಾಯ ಬಸದಿಯ ನಿರ್ಮಾಣ

ಗಂಗರ ಆಢಳಿತ

ರಾಜ - ಆಡಳಿತದ ಮುಖ್ಯಸ್ಥ ಈತನನ್ನು “ ಧ್ಮಮಾಹಾರಾಜ” ರೆಂದು ಕರೆಯುತ್ತಿದ್ದರು .

ಮಂತ್ರಿ ಮಂಡಲ - ರಾಜನಿಗೆ ಸಹಾಯಕರಾಗಿದ್ದರು

ಪ್ರಧಾನ ಮಂತ್ರಿಯನ್ನು - ಸರ್ಮಾಧಿಕಾರಿ ಎಂದು ಕರೆಯುತ್ತಿದ್ದರು

ವಿದೇಶಾಂಗ ಮಂತ್ರಿಯನ್ನು - ಸಂಧಿ ವಿಗ್ರಹಿ ಎಂದು ಕರೆಯುತ್ತಿದ್ದರು

ಸೈನ್ಯದ ಮುಖ್ಯಸ್ಥ - ದಂಡನಾಯಕ ನಾಗಿರುತ್ತಿದ್ದ

ಖಜಾನೆ ಮುಖ್ಯಧಿಕಾರಿಯನ್ನು - ಹಿರಿಯ ಭಂಡಾರಿಕ ಎಂದು ಕರೆಯುತ್ತಿದ್ದರು

ರಾಜನ ಉಡುಪಗಳ ಉಸ್ತುವಾರಿಕ - ಮಹಾಪಸಾಯಿಕಿ

ಅರಮನೆಯ ಮೇಲ್ವಿಚಾರಕನನ್ನು - ಮನೆ ವರ್ಗಡೆ ಎಂದು ಕರೆಯುತ್ತಿದ್ದರು .

ಲೆಕ್ಕ ಪತ್ರಗಳ ವಿಭಾಗಾಧಿಕಾರಿಯನ್ನು - ಶ್ರೀಕರಣಿಕ ಎಂದು ಕರೆಯುತ್ತಿದ್ದರು

ರಾಜ್ಯವನ್ನು - ಪ್ರಾಂತ್ಯಗಳಾಗಿ ವಿಂಗಡಿಸಲಾಗಿತ್ತು

ಪ್ರಾಂತ್ಯಗಳ ಮುಖ್ಯಸ್ಥ - ಪ್ರಾಂತ್ಯಾಧಿಕಾರಿ

ಪ್ರಾಂತ್ಯಗಳ ವಿಭಾಗಗಳು - ವಿಭಾಗ ಹಾಗೂ ಕಂಪನ

ವಿಷಯಗಳ ಮುಖ್ಯಸ್ಥ - ವಿಷಯ ಪತಿ

ಕಂಪನಗಳ ಮುಖ್ಯಸ್ಥ - ಗೌಡ ಅಥವಾ ನಾಡ ಗೌಡ

ನಗರಾಡಳಿತ ಮುಖ್ಯಸ್ಥ - ನಾಗರೀಕ

ಪಟ್ಟಣದ ಮುಖ್ಯಸ್ಥ - ಪಟ್ಟಣ ಸ್ವಾಮಿ

ಗ್ರಾಮಾಢಳಿತ - ಗೌಡ ಮತ್ತು ಕರಣಿಕನಿಗೆ ಸೇರಿತ್ತು .

ಗಜದಳದ ಮುಖ್ಯಸ್ಥ - ಗಜ ಸಹನಿ

ಅಶ್ವ ಪಡೆಯ ಮುಖ್ಯಸ್ಥ - ಅಶ್ವಾಧ್ಯಕ್ಷ

ಗಂಗರ ಕಾಲದ ನಾಣ್ಯಗಳು - ಪೊನ್ನ , ಸುವರ್ಣ , ಗದ್ಯಾಣ , ನಿಷ್ಕ , ಹಾಗೂ ಬೆಳ್ಳಿಯ ಪಣ , ಹಾಗೂ ಹಗ , ಕಾಸು

ಇವರ ಸಮಾಜದಲ್ಲಿ ರಾಜರ ಸ್ವಾಮಿ ನಿಷ್ಠೆಗೆ ಪ್ರಾಣತ್ಯಾಗ ಮಾಡುವ ಪದ್ದತಿ - ಗರುಡ ಪದ್ದತಿ , ಅಸ್ಥಿತ್ವದಲ್ಲಿತ್ತು

ಸಾಂಸ್ಕೃತಿಕ ಸಾಧನೆ

ಶ್ರವಣಬೆಳಗೋಳ ಹಾಗೂ ತಲಕಾಡು ಅವರ ಪ್ರಸಿದ್ದ ಶಿಕ್ಷಮ ಕೇಂದ್ರಗಳು

ಕಾಳಮುಬಾ , ಕಪಾಲಿಕಾ ಹಾಗೂ ಪಾಶುಪಥಿ - ಇವರ ಶೈವ ಪಂಥಗಳು

ಇವರ ಕಾಲದಲ್ಲಿ ಪ್ರಬಲವಾಗಿ ಬೆಳೆದ ಧರ್ಮ - ಜೈನ ಧರ್ಮ

ಗಂಗ ರಾಜ್ಯ ಸ್ಥಾಪನೆಗೆ ಕಾರಣನಾದ ಜೈನ ಮುನಿ - ಸಿಂಹ ನಂದಿ

ಶ್ರವಣಬೆಳಗೋಳ ಜೈನರ ಕಾಶಿ ಎಂದು ಪ್ರಸಿದ್ದಿಯಾಗಿದೆ

ಗಂಗರ ಆಶ್ರಯದಲ್ಲಿ ಬರೆಯಲ್ಪಟ್ಟ ಮಹಾ ಕೃತಿಗಳು

ದತ್ತಕ ಸೂತ್ರ - 2 ನೇ ಮಾಧವ

ಶೂದ್ರಂತ ಹಾಗೂ ಹರಿವಂಶ - ಗುಣವರ್ಮ

ಛಂದೋಬುದಿ - 1ನೇ ನಾಗವರ್ಮ

ಗಜಾಷ್ಟಕ , ಸೇತುಬಂಧ ,ಶಿವಮಾರ ತರ್ಕ - 2 ನೇ ಶಿವಮಾರ

ಚಂದ್ರ ಪ್ರಭಾ ಪುರಾಮ - ವೀರನಂದಿ

ಬೃಹತ್ ಕಥಾವನ್ನು ಸಂಸ್ಕೃತ ಭಾಷೆಗೆ ಅನುವಾದ ಹಾಗೂ ಭಾರವಿಯ ಕಿರತಾರ್ಜುನಿಯ ಕೃತಿಗೆ ಭಾಷ್ಯ - ದುರ್ವೀನಿತ

ಗಜಶಾಸ್ತ್ರ - ಶ್ರೀಪುರುಷ

ಕಲೆ ಮತ್ತು ವಾಸ್ತುಶಿಲ್ಪಕ್ಕೆ ಗಂಗರ ಕೊಡುಗೆ :-

ಇವರ ವಾಸ್ತು ಶಿಲ್ಪ ಕದಂಬರು ಹಾಗೂ ಪಲ್ಲವರ ಕಲೆಯ ಮಿಶ್ರಣವಾಗಿದೆ

ಮನ್ನೇಯ ಕಪಿಲಶ್ವರ ದೇವಾಲಾಯ - ವಾಸ್ತು ಶಿಲ್ಪಿ ದೃಷ್ಠಿಯಿಂದ ಪ್ರಸಿದ್ದಿ

ಗಂಗರ ಕಾಲದ ಪ್ರಮುಖ ಬಸದಿಗಳು - ಪಾಶ್ವನಾಥ ಬಸದಿ ಹಾಗೂ ಚಾವುಂಡರಾಯ ಬಸದಿ

ಶ್ರಣಬೆಳಗೋಳದಲ್ಲಿರುವ ಪ್ರಮುಖ ಸ್ಥಂಭಗಳು - ಮಾನಸ್ತಂಭ , ಬ್ರಹ್ಮದೇವರ ಸ್ತಂಭ ಹಾಗೂ ತ್ಯಾಗದ ಬ್ರಹ್ಮ ದೇವರ ಸ್ತಂಭ

ಗಂಗರ ಕಾಲದ ಅಭೂತ ಪೂರ್ವ ಶಿಲ್ಪ ಕಲಾ ಕೆತ್ತನೆ - ಶ್ರವಮಬೆಳಗೋಳದ ಗೊಮ್ಮಟ

ಇವರ ಕಾಲದಲ್ಲಿ ಪ್ರಸಿದ್ದ ನೃತ್ಯಗಾತಿ - ಬಾಚಲು ದೇವಿ

ಬಾಚಲು ದೇವಿಗೆ ಇದ್ದ ಬಿರುದುಗಳು - ನೃತ್ಯವಿಶಾರದೆ ಹಾಗೂ ಪಾತ್ರ ಜಗದವಳೆ

Extra tips

ವಾದಿಮದ ಗಜೇಂದ್ರ ಎಂದು ಹೆಸರು ಗಳಿಸಿದ್ದ ಬೌದ್ಧ ಪಂಡಿತ - ಪರಿವ್ರಾಜಕ

ವಾದಿಭು ಸಿಂಹ ಎಂಬ ಬಿರುದನ್ನು ಹೊಂದಿದ್ದವನು - ಮಾಧವಭಟ್ಟ

ಮಾಧವ ಭಟ್ಟನಿಗೆ ವಾದಿಭು ಸಿಂಹ ಎಂಬ ಬಿರುದನ್ನು ನೀಡಿದ ಗಂಗರ ಅರಸ - ಹರಿವರ್ಮ

ಮೂರನೇ ಮಾಧವನ ಮತ್ತೊಂದು ಹೆಸರು - ತಡಂಗಾಲ ಮಾಧವ

" ಶಿಷ್ಯ ಪ್ರಿಯ ಹಾಗೂ ಅವನಿ ಮಹೇಂದ್ರ " ಎಂಬ ಬಿರುದನ್ನು ಪಡೆದಿದ್ದವರು - ಒಂದನೇ ಶಿವಮಾರ

ನೀತಿ ಮಾರ್ಗ , ರಣ ವಿಕ್ರಮ ಎಂಬ ಬಿರುದನ್ನು ಹೊಂದಿದ್ದ ಅರಸ - ಎರೆಯಾಂಗ

ಗರುಡ ಪದ್ದತಿಯ ಮೂಲಕ ಅಸುನಿಗಿದವರ ಕುಟುಂಬಕ್ಕೆ ಬಲಿದಾನವಾಗಿ ನೀಡುತ್ತಿದ್ದ ಭೂಮಿಯನ್ನು - ಕೀಳ್ಗುಂಟೆ ಎಂದು ಕರೆಯುವರು

ಮಹೇಂದ್ರ ಕತಕ ಎಂಬ ಬಿರುದನ್ನು ಪಡೆದಿದ್ದವನು - ಎರೆಯಪು

ಘೂರ್ಜ ರಾಜಾಧಿರಾಜ ಎಂಬ ಬಿರುದನ್ನು ಹೊಂದಿದವನು - ಎರಡನೇ ಮಾರಸಿಂಹ

ಗಂಗರ ಪ್ರಮುಖ ಕಲೆ ಮತ್ತು ವಾಸ್ತು ಶಿಲ್ಪ ಕೇಂದ್ರ - ತಲಕಾಡು

ಗೊಮ್ಮಟೇಶ್ವರನ ವಿಗ್ರಹವನ್ನು ನಿಖರವಾದ ಅಳತೆ - 58.8 ಅಡಿ ಎತ್ತರ ಎಂದು ಗೊತ್ತುಮಾಡಿದ ಉಪಕರಣ - 1980 ರಲ್ಲಿ ಕರ್ನಾಟಕ ವಿ.ವಿ. ನಿಲಯದ ಭಾರತೀಯ ಕಲಾ ಸಂಸ್ಥೆಯು - Theodolight or Institute of Indian art

ಕರ್ನಾಟಕವನ್ನಾಳಿದ ಮನೆತನಗಳಲ್ಲಿಯೇ ದೀರ್ಘಕಾಲ ಆಳ್ವಿಕೆ ನಡೆಸಿದ ಮನೆತನ - ತಲಕಾಡಿನ ಗಂಗರು

ಕೋಲಾರದ ಪ್ರಾಚೀನ ಹೆಸರು - ಕುವಾಲಾಲ

ತಲಕಾಡಿನ ಪ್ರಾಚೀನ ಹೆಸರು - ಕಳವನ ಪುರ

ಗಂಗರ ರಾಜಧಾನಿ ತಲಕಾಡು ಪ್ರಸ್ತುತ ಈ ಜಿಲ್ಲೆಯಲ್ಲಿದೆ - ಮೈಸೂರು

ಗಂಗ ರಾಜ್ಯದ ಸ್ಥಾಪಕರು - ದಡಿಗ ಮತ್ತು ಮಾಧವರು

ಗಂಗರ ಕೊನೆಯ ರಾಜಧಾನಿ - ಮಾನ್ಯ ಪುರ

ಮಾನ್ಯಪುರ ಪ್ರಸ್ತುತ - ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನಲ್ಲಿದೆ

ದುರ್ವೀನಿತನ ತಂದೆ ತಾಯಿಗಳು - ಅವನಿತ ಹಾಗೂ ಜೇಷ್ಠದೇವಿ

ದುರ್ವೀನಿತನ ಗುರುವಿನ ಹೆಸರು - ಪೂಜ್ಯಾಪಾದ

ಪೂಜ್ಯಪಾದನ ಕೃತಿ - ಶಬ್ದಾವತಾರ

ಪೆರ್ಮಾಡಿ ಎಂಬ ಬಿರುದು ಧರಿಸಿದ್ದ ಗಂಗರ ದೊರೆ - ಶ್ರೀಪುರುಷ

ಶ್ರೀಪುರುಷನ ಕಾಲದ ಗಂಗರ ರಾಜಧಾನಿ - ಮಾನ್ಯ ಪುರ

ಸೈಗೊಟ್ಟ ಶಿವಮಾರ ಎಂಬ ಬಿರುದುಳ್ಳ ಅರಸ - 2 ನೇ ಶಿವಮಾರ

ಗಂಗರ ಕೊನೆಯ ಪ್ರಮುಖ ದೊರೆ - 4 ನೇ ರಾಚಮಲ್ಲ

ವೀರ ಮಾರ್ತಾಂಡ ಎಂಬ ಬಿರುದ್ದನ್ನ ಹೊಂದಿದವರು - ಚಾವುಂಡರಾಯ

ಚಾವುಂಡ ರಾಯ ಪಾಂಡ್ಯ ಅರಸ ರಾಜ್ಯಾಧಿತ್ಯನನ್ನ ಸೋಲಿಸಿ ಧರಿಸಿದ್ದ ಬಿರುದು - ರಣಸಿಂಗ ಸಿಂಹ

ಚಾವುಂಡರಾಯನ ಕನ್ನಡ ಕೃತಿ ಚಾವುಂಡರಾಯ ಪುರಾಣದ ವಿಷಯ - ಜೈನ 24 ನೇ ತೀರ್ಥಂಕರನನ್ನು ಕುರಿತದ್ದಾಗಿದೆ

ಗಂಗರ ಕೊನೆಯ ಅರಸ - ರಕ್ಕಸ ಗಂಗ

ಗಂಗರ ಆಡಳಿತವನ್ನು ಕೊನೆಗಾಮಿಸಿದವನು - ಚೋಳ ದೊರೆ ಒಂದನೇ ರಾಜೇಂದ್ರ ಚೋಳ

ವರ್ಧಮಾನ ಪುರಾಣ ಕೃತಿಯ ಕರ್ತೃ - ಅಗಸ

ಸಮರಪರಶುರಾಮ ಹಾಗೂ ವೈರಿಕು ಕಾಲದಂಡ ಎಂಬ ಬಿರುದನ್ನು ಹೊಂದಿದ್ದವರು - ಚಾವುಂಡರಾಯ

ಗೊಮ್ಮಟೇಶ್ವರ ಈ ಬೆಟ್ಟದಲ್ಲಿದೆ - ವಿಂದ್ಯಾಗಿರಿ ಬೆಟ್ಟ

ಗೊಮ್ಮಟೇಶ್ವರ ಇರುವುದು - ಹಾಸನ ಜಿಲ್ಲೆಯಲ್ಲಿ

ಶ್ರವಣಬೆಳಗೋಳದ ಪ್ರಾಚೀನ ಹೆಸರು - ಕಾಥವಪುರಿ

ಗಂಗರ ಮೊದಲ ರಾಜಧಾನಿ - ಕುವಲಾಲ

ಗಂಗರ ಎರಡನೇ ರಾಜಧಾನಿ - ತಲಕಾಡು

ಗಂಗರ ಮೂರನೇ ರಾಜಧಾನಿ - ಮಾಕುಂದ

ಗಂಗರ ಕಾಲದ ಗಣ್ಯ ಕೇಂದ್ರ - ನಂದಿ ದುರ್ಗ ಅಥವಾ ನಂದಿ ಬೆಟ್ಟ

ದಡಿಗನಿಗೆ ಇರುವ ಇನ್ನೋಂದು ಹೆಸರು - ಕೊಂಗುಣಿವರ್ಮ

ಗೊಮ್ಮಟೇಶ್ವರನ ವಿಗ್ರಹ ನಿರ್ಮಾಣವಾದ ವರ್ಷ - ಕ್ರಿ.ಶ. 982

ಗಂಗರ ಕಾಲದ ಗ್ರಾಮದ ಮುಖ್ಯಸ್ಥ - ಪ್ರಭುಗಾವುಂಡ

ಗಂಗರ ಕಾಲದಲ್ಲಿದ್ದ ಹಿರಿಯ ರೈತರ ಸಮಿತಿ - ಪ್ರಜೆಗಾಮುಂಡ

ಗಂಗರ ಕಾಲದಲ್ಲಿದ ಕುಟುಂಬ ಪ್ರಮುಖರ ಕೂಟ - ಮಹಾಜನ

ಗಂಗರ ಕಾಲದಲ್ಲಿದ ದೊಡ್ಡ ನೆಯ್ಗೆಯ ಕೇಂದ್ರ - ವಿಜಯ ಪುರ

ಗಂಗರ ಕಾಲದ ಶಿಕ್ಷಣ ಕೇಂದ್ರಗಳು - ಮಠಗಳು , ಅಗ್ರಹಾರ , ಹಾಗೂ ಬ್ರಹ್ಮಪುರಿ

ಬ್ರಹ್ಮಪುರಿ ಎಂದರೆ - ಒಂದು ಪೇಟೆಯಲ್ಲಿನ ಬ್ರಾಹ್ಮಣರ ಬೀದಿ

ಗಂಗರ ಕಾಲದ ಪ್ರಸಿದ್ಧ ವಿದ್ಯಾಕೇಂದ್ರ - ಶ್ರವಮಬೆಳಗೋಳ ಜೈನ ಮಠ

ಬಾಣನ " ಕಾದಂಬರಿ " ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದವರು - ನಾಗವರ್ಮ

ಗಂಗರ ಕಾಲದಲ್ಲಿ ಭತ್ತ ಕುಟ್ಟುವಾಗ ಹೇಳುವ ಗೀತೆಗಳನ್ನು ಒಳಗೊಂಡ ಕೃತಿ - ಗಜಾಷ್ಟಕ

ಗಂಗರ ಕಾಲದ ಪಂಚಕೂಟ ಬಸದಿ ಇರುವ ಸ್ಥಳ - ಕದಂಬ ಹಳ್ಳಿ

ಬೆಂಗಳೂರಿನ ಮ್ಯೂಸಿಯಂ ನಲ್ಲಿರುವ ಗಂಗರ ಕಾಲದ ವೀರಗಲ್ಲಿನ ಹೆಸರು - ಬೇಗೂರು ವೀರಗಲ್ಲು

*****************************************************************************

# ವಿಜಯ ನಗರ ಸಾಮ್ರಾಜ್ಯ

ಸಂಗಮ ವಂಶ

1. 1 ನೇ ಹರಿಹರ - 1336 - 1356

2. 1 ನೇ ಬುಕ್ಕ - 1356 - 1377

3. 2ನೇ ಹರಿಹರ - 1377 - 1404

4. 1 ನೇ ವಿರುಪಾಕ್ಷಾ - 1404 - 1405

5. 2ನೇ ಬುಕ್ಕ - 1405 - 1406

6. 1 ನೇ ದೇವರಾಯ - 1406 - 1422

7. ರಾಮಚಂದ್ರ - 1422 - 1422

8. ವೀರ ವಿಜಯ - 1422 - 1424

9. 2 ನೇ ದೇವರಾಯ ( ಪ್ರೌಢ ದೇವರಾಯ ) - 1424 - 1446

10. ಮಲ್ಲಿಕಾರ್ಜುನ - 1466 - 1465

11. 2 ನೇ ವಿರೂಪಾಕ್ಷ - 1465 1485

12. ಪ್ರೌಢದೇವರಾಯ - 1485

ಸಾಳ್ವ ವಂಶ

13. ಸಾಳುವ ನರಸಿಂಹ - 1485 - 1491

14. ತಿಮ್ಮ ಭೂಪ - 1491

15. 2 ನೇ ನರಸಿಂಹ - 1491 - 1503

ತುಳುವ ವಂಶ

16. ವೀರ ನರಸಿಂಹ - 1503 - 1505

17. 2 ನೇ ನರಸಿಂಹ - 1050 - 1509

18. ಕೃಷ್ಮದೇವರಾಯ - 1509 - 1529

19. ಅಚ್ಚುತ ರಾಯ - 1529 - 1542

20. 1 ನೇ ವೆಂಕಟರಾಯ - 1542

21. ಸದಾಶಿವರಾಯ - 1542 - 1570

ಸಂಗಮ ವಂಶ

22. ತಿರುಮಲ ರಾಯ -

23. 1 ನೇ ವೆಂಕಟರಾಯ

24. ಶ್ರೀರಂಗರಾಯ

25. 2 ನೇ ವೆಂಕಟಾದ್ರಿ

26. 2 ನೇ ಶ್ರೀರಂಗ

27. ರಾಮದೇವ ( ಮಂತ್ರಿ ವಿಚ್ಚಮ ನಾಯಕ )

28. 3 ನೇ ವೆಂಕಟ ರಾಯ

29. 3 ನೇ ರಂಗರಾಯ ( ಸಾಮ್ರಾಜ್ಯ ರಹಿತ )

ವಿಜಯನಗರಕ್ಕೆ ಬೇಟಿ ನೀಡಿದ ಪ್ರವಾಸಿಗರ ಪಟ್ಟಿ

30. ನಿಕಲೋ ಕೊಂತಿ ಿಟಲಿ ದೇಶ 1420 ರಲ್ಲಿ 1ನೇ ದೇವರಾಯ ಅರಸನ ಕಾಲದಲ್ಲಿ ಬೇಟಿ ನೀಡಿದ

31. ಅಬ್ದುಲ್ ರಜಾಕ್ ಪರ್ಶಿಯಾ ದೇಶ 1443 ರಲ್ಲಿ 2 ನೇ ದೇವರಾಯ ್ರಸನ ಕಾಲದಲ್ಲಿ ಬೇಟಿಯಾದ

32. ನಿಕೆಟಿನ್ ರಷ್ಯದ ಪ್ರವಾಸಿ 1470 ರಲ್ಲಿ ವಿರೂಪಾಕ್ಷ ಅರಸನ ಕಾಲದಲ್ಲಿ ಬೇಟಿ ನೀಡಿದ

33. ಬಾರ್ಬೋಸ ಪೋರ್ಚುಗಲ್ ದೇಶದವ 1514 – 1516 ರಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ಬೇಟಿ ನೀಡಿದ

34. ಡೋಮಿಂಗೋ ಪಯಾಸ್ ಪೋರ್ಚುಗಲ್ ದೇಶದವ 1520 ರಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ಬೇಟಿ ನೀಡಿದ

35. ನ್ಯೂನಿಜ್ ಪೋರ್ಚುಗಲ್ ದೇಶದವ 1535 ರಲ್ಲಿ ಅಚ್ಚುತ ರಾಯನ ಕಾಲದಲ್ಲಿ ಬೇಟಿಯಾದ

ವಿಜಯನಗರ ಸಾಮ್ರಾಜ್ಯದ ಹುಟ್ಟಿಗೆ ಕಾರಣವಾದ ಅಂಶ

36. ಹೆದಲಿಯ ಸ್ಲಾನ ಅಲ್ಲಾವುದ್ದೀನ್ ಖಿಲ್ಜಿ ದಕ್ಷಿಣ ಭಾರತದ ರಾಜಕೀಯ ಸಮತೋಲನಕ್ಕೆ ಭಂಗವುಂಟುಮಾಡಿದ್ದು

37. ಕ್ರಿ.ಶ. 1296 ದೆಹಲಿಯ ಸುಲ್ತಾನನಾಗಿ ಅಧಿಕಾರ ಮಹಿಸಿಕೊಂಡ ಮಹಮ್ಮದ್ ಬಿನ್ ತುಘಲಕ್ ದಕ್ಷಿಣ ಭಾರತವನ್ನು ನೇರ ಆಳ್ವಿಕೆಗೆ ಒಳಪಡಿಸಿದ್ದು

38. ಸ್ಥಿರವಾದ ಆಡಳಿತ ಕೊಡುವಲ್ಲಿ ತುಘಲಕ್ ವಿಫಲವಾಗಿದ್ದು

39. ದಕ್ಷಿಣ ಭಾರತದ ಜನತೆಯಲ್ಲಿ ಅಭದ್ರತೆ ವಾತಾವರಣ ಉಂಟಾಗಿದ್ದು .

ರಾಜಕೀಯ ಇತಿಹಾಸ

ವಿಜಯ ನಗರವನ್ನಾಳಿದ ವಂಶಗಳು

40. ಸಂಗಮ ವಂಶ 1336 – 1485 – ರಾಜಧಾನಿ ಹಂಪಿ

41. ಸಾಳುವ ವಂಶ 1485 – 1505 ರಾಜಧಾನಿ ಹಂಪಿ

42. ತುಳುವ ವಂಶ 1505 – 1570 ರಾಜಧಾನಿ ಹಂಪಿ , ಪೆನುಗೊಂಡ

43. ಅರವೀಡು ವಂಶ 1570 – 1646 – ರಾಜಧಾನಿ ಪೆನುಗೊಂಡ ,ವೆಲ್ಲೂರು ಹಾಗೂ ಚಂದ್ರಗಿರಿ

44. ವಿಜಯನಗರ ಸಾಮ್ರಾಜ್ಯಕ್ಕೆ ತಳಹದಿಯನ್ನು ಹಾಕಿದವರು – ಸಂಗಮನ ಮಕ್ಕಳಾದ – ಹರಿಹರ ಮತ್ತು ಬುಕ್ಕರು

45. ವಿಜಯನಗರ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದಿದ್ದು – ಕ್ರಿ.ಶ.1336

46. ಬಹಮನಿ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದಿದ್ದು - ಕ್ರಿ.ಶ - 1347 ರಲ್ಲಿ

47. ವಿಜಯನಗರ ಅರಸುರುಗಳಲ್ಲಿ ಅತ್ಯಂತ ಸಮರ್ಥನಾದ ಅರಸ - ಕೃಷ್ಮದೇವರಾಯ

48. ಕೃಷ್ಮದೇವರಾಯನ ನಿಷ್ಠಾವಂತ ಪ್ರಧಾನಿ - ತಿಮ್ಮರಸ

49. " ಯವನ ರಾಜ್ಯ ಪ್ರತಿಷ್ಠಾನ ಚಾರ್ಯ ' ಎಂಬ ಬಿರುದನ್ನು ಕೃಷ್ಣದೇವರಾಯ ಪಡೆದನು

50. ಕೃಷ್ಣದೇವರಾಯನ ವಿರುದ್ದ ಜಿಹಾದ್ ಯುದ್ದವನ್ನು ಸಾರಿದವನು - ಬೀದರ್ ನ ಬಹಮನಿ ಸುಲ್ತಾನ ಮಹಮ್ಮದ್ ಷಾ ಹಾಗೂ ಬಿಜಾಪುರದ ಸುಲ್ತಾನನಾದ .ಯೂಸುಫ್ ಆದಿಲ್ ಷಾ

51. ಈ ಧರ್ಮಯುದ್ಧ ನಡೆದ ಪ್ರದೇಶ - ಕೋವಿಲ್ ಕೊಂಡ

52. ವಿಜಯನಗರ ಕೃಷ್ಣದೇವರಾಯನ ವಿರುದ್ದ ಹೋರಾಡಿದ ಉಮ್ಮತ್ತೂರಿನ ಪಾಳೆಗಾರ - ಗಂಗರಾಜ

53. ಗಂಗರಾಜನಿಂದ ವಶಪಡಿಸಿಕೊಂಡ ಪ್ರದೇಶ - ಶ್ರೀರಂಗ ಪಟ್ಟಣ ಹಾಗೂ ಶಿವನ ಸಮುದ್ರ

54. ಕೃಷ್ಣದೇವರಾಯನನ್ನ ಎದುರಿಸಿದ ಒರಿಸ್ಸಾದ ದೊರೆ - ಪ್ರತಾಪರುದ್ರ

55. ಪೊರ್ಚುಗೀಸರೊಡನೆ ಉತ್ತಮವಾಗಿ ಸಂಬಂಧ ಹೊಂದಿದ್ದ ವಿಜಯನಗರದ ದೊರೆ - ಕೃಷ್ಣದೇವರಾಯ

56. ಕೃಷ್ಣದೇವರಾಯ ಸಾವನ್ನು ಕಂಡುಕೊಂಡಿದ್ದು - ಕ್ರಿ.ಶ.1529 ರಲ್ಲಿ

57. ತುಂಗಭದ್ರೆ ನದಿಗೆ ಅಡ್ಡಲಾಗಿ ಅಣಿಕಟ್ಟನ್ನು ನಿರ್ಮಿಸಿದ ವಿಜಯನಗರ ್ರಸ - ಕೃಷ್ಣದೇವರಾಯ

58. ಕೃಷ್ಣದೇವರಾಯ ತೋಡಿಸಿದ ಕಾಲುವೆ - ಕೊಡಗಲ್ ಹಾಗೂ ಬಸವಣ್ಣ ಕಾಲುವೆ

59. ಅಮುಕ್ತ ಮೌಲ್ಯದ ಕೃತಿಯ ಕರ್ತೃ - ಕೃಷ್ಣದೇವರಾಯ

60. ಅಮುಕ್ತ ಮೌಲ್ಯದ ಕತಿಯು - ತೆಲುಗು ಭಾಷೆಯಲ್ಲಿದೆ

61. ಅಮುಕ್ತ ಮೌಲ್ಯದ ಇನ್ನೋಂದು ಹೆಸರು - ವಿಷ್ಣುಚಿತ್ತಿಯಮು

62. ಕೃಷ್ಣದೇವರಾಯ ಆಸ್ಥಾನದಲ್ಲಿದ ಕವಿಗಳಿಗೆ - ಅಷ್ಟದಿಗ್ಗಜರು ಎಂದು ಕರೆಯವುರು

63. ಮನುಚರಿತಮು ಕೃತಿಯ ಕರ್ತೃ - ಅಲ್ಲಸಾನಿ ಪೆದ್ದಣ್ಣ

64. ಆಂದ್ರಾಕವಿತಾ ಪಿತಾಮಹಾ - ಎಂಬ ಬಿರುದನ್ನು ಹೊಂದಿದ್ದ ಕವಿ - ಅಲ್ಲಾಸಾನಿ ಪೆದ್ದಣ್ಣ

65. ನಂದಿ ತಿಮ್ಮಣ್ಣ ನ ಕೃತಿ - ಪಾರಿಜಾತಹರಣಮು

66. ಕೃಷ್ಣದೇವರಾಯ ಕಟ್ಟಿಸಿದ ದೇವಾಲಯ - ಹಜಾರ ರಾಮಸ್ವಾಮಿ ಹಾಗೂ ವಿಠಲ ಸ್ವಾಮಿ ದೇವಲಾಯ

67. ಮಹಾನವಮಿ ದಿಬ್ಬ ಅಥವಾ ಸಿಂಹಾಸನ ವೇದಿಕೆ ್ಥಾವ ವಿಜಯಲಯ ನಿರ್ಮಿಸಿದವರು - ಕೃಷ್ಣದೇವರಾಯ

68. ತನ್ನ ತಾಯಿ ನಾಗಲೆಯ ಸ್ಮರಮಾರ್ಥವಾಗಿ ನಿರ್ಮಿಸಿದ ನಗರ - ನಾಗಲಾಪುರ

69. ಕೃಷ್ಣದೇವರಾಯ ನಂತರ ಅಧಿಕಾರಕ್ಕೆ ಬಂದವರು - ಅಚ್ಚುತರಾಯ

70. ಅಚ್ಚುತನ ವಿರೋಧಿ - ಅಳಿಯ ರಾಮರಾಯ

ಅಳಿಯ ರಾಮರಾಯ

71. ಈತನ ಮಂತ್ರಿ - ತಿರುಮಲ

72. ಈತನ ಸೇನಾಧಿಕಾರಿ - ವೆಂಕಟಾದ್ರಿ

73. ತಾಳಿಕೋಟೆ ಯುದ್ದ ಗತಿಸಿದ ವರ್ಷ - ಕ್ರಿ.ಶ 1565 ರಲ್ಲಿ

74. ಯುದ್ದ ನಡೆದಿದ್ದು - ಷಾಹಿ ಮನೆತನ ಹಾಗೂ ವಿಜಯನಗರಕ್ಕೆ

75. ತಾಳಿಕೋಟೆ ಯುದ್ದದಲ್ಲಿ ವಿಜಯ ನಗರದ ಮನೆತನ ಸೋಲಲು ಕಾರಣ ಪ್ರಮುಖ ಕಾರಣ - ಸೈನಿಕ ಕಾರಣ

76. ತಾಳಿಕೋಟೆ ಯುದ್ದದ ನಂತರ ತಿರುಮಲನು ಪಲಾಯನ ಮಾಡಿದ್ದು - ಚಂದ್ರಗಿರಿಗೆ

77. " A forgotten Empire " ಅಥವಾ " ಮರೆತು ಹೋದ ಸಾಮ್ರಾಜ್ಯ " ಕೃತಿಯ ಕರ್ತೃ - Robert Seevel

78. ಹಂಪಿಯಲ್ಲಿ ಹುಲಿ ಹಾಗೂ ಇತರ ಕಾಡು ಪ್ರಾಣಿಗಳು ವಾಸಿಸುತ್ತಿದ್ದವು ಎಂಬ ಹೇಳಿಕೆಯನ್ನು ನೀಡಿದವರು - ಿಟಲಿಯ ಪ್ರವಾಸಿ ಫೆಡ್ರಿಕ್

79. ತುಳುವ ವಂಶದ ಆಳ್ವಿಕೆ ಅಂತ್ಯವಾಗಿದ್ದು - ಕ್ರಿ.ಶ. 1570 ರಲ್ಲಿ ಸದಾಶಿವ ರಾಯನನ್ನ ಕೊಲೆ ಮಾಡುವುದರೊಂದಿಗೆ ಅಂತ್ಯ ಕಂಡಿತು

80. ಹಂಪೆಯು ಈ ನದಿಯ ದಂಡೆಯ ಮೇಲಿದೆ - ತುಂಗಾ ಭದ್ರ

81. ವಿಜಯ ನಗರ ಸಾಮ್ರಾಜ್ಯದ ರಾಜಧಾನಿ - ಹಂಪೆ

82. ಈ ರಾಜ್ಯದ ರಾಜ ಲಾಂಛನ - ವರಾಹ

83. ಹರಿಹರ ಹಾಗೂ ಬುಕ್ಕರು ತಂದೆ ಈ ರಾಜನ ಆಸ್ಥಾನದಲ್ಲಿದ್ದರು - ಕಂಪಲಯರಾಜ ್ಥವಾ ಕಂಪಿಲರಾಯ

84. ಕುಮಾರ ರಾಮನ ಕೃತಿಯ ಕರ್ತೃ - ನಂಜುಂಡ

ಸಂಗಮ ವಂಶ

85. ಸಂಗಮ ವಂಶದ ಮೊದಲ ದೊರೆ - ಹರಿಹರ

86. ಇವನ ರಾಜಧಾನಿ - ಆನೆಗೊಂದಿ

87. ಹರಿಹರನ ಬಿರುದುದಗಳು - ಪೂರ್ವ ಪಶ್ಚಿಮ ಸಮುದ್ರಾದೇಶ್ವರ , ಭಾಷೆಗೆ ತಪ್ಪದ ರಾಯರ ಗಂಡ ರಾಜ ಪರಮೇಶ್ವರ , ಅರಿರಾಯ ವಿಭಾಡ , ಹಾಗೂ ವೇದಾಮಾರ್ಗ ಸ್ಥಾಪನ ಚಾರ್ಯ

88. ಮಧುರಾ ವಿಜಯಂ ಅಥವಾ ಕಂಪಣರಾಯ ವಿಜಯಂ ಕೃತಿಯ ಕೃತ್ರ - ಬುಕ್ಕರಾಯನ ಪತ್ನಿ - ಗಂಗಾಂಬಿಕೆ

89. ವೇದಾಮಾರ್ಗ ಪ್ರವರ್ತಕ ಎಂಬ ಬಿರುದನ್ನು ಹೊಂದಿದ್ದ ದೊರೆ - 1 ನೇ ಬುಕ್ಕರಾಯ

90. ಕರ್ನಾಟಕ ವಿದ್ಯಾ ವಿಲಾಸ ಬಿರುದಿನ ಕರ್ತೃ - 2 ನೇ ಹರಿಹರ

91. 1 ನೇ ದೇವರಾಯನ ಆಸ್ಥಾನಕ್ಕೆ ಾಗಮಿಸಿದ್ದ ವಿದೇಶಿ ಯಾತ್ರಿಕ - ನಿಕೋಲೋ ಕೊಂತಿ

92. 2 ನೇ ದೇವರಾಯನ ಮತ್ತೊಂದು ಬಿರುದು - ಗಜಬೇಂಟೆಕಾರ

93. ಈತನ ಆಸ್ಥಾನಕ್ಕೆ ಪರ್ಶಿಯಾದ ರಾಯಭಾರಿ - ಅಬ್ದುಲ್ ರಜಾಕ್

94. ಈತನ ಆಸ್ಥಾನ ಕವಿ - ಕುಮಾರ ವ್ಯಾಸ

ಸಾಳುವ ವಂಶ

95. ಈ ಸಂತತಿಯ ಸ್ಥಾಪಕ - ಸಾಳುವ ನರಸಿಂಹ

ತುಳುವ ವಂಶ

96. ತುಳುವ ವಂಶವನ್ನು ಆರಂಬಿಸಿದವರು - ವೀರನರಸಿಂಹ

97. ಕೃಷ್ಣದೇವರಾಯನ ಕಾಲವನ್ನು ದಕ್ಷಿಣ ಭಾರತದ ಸಾಂಸ್ಕೃತಿಕ ಸಮ್ಮಿಲನ ಕಾಲ ಎಂದು ಕರೆಯಲಾಗಿದೆ

98. ಕೃಷ್ಣದೇವರಾಯನ ಪ್ರಧಾನ ಮಂತ್ರಿ - ಸಾಳ್ವ ತಿಮ್ಮರಸ

99. ದಕ್ಷಿಣ ಸಮುದ್ರಾಪತಿ ಎಂದು ಬಿರುದು ಹೊಂದಿದವರು - ಕೃಷ್ಣದೇವರಾಯನ

100. ಕೃಷ್ಣದೇವರಾಯನ ದಕ್ಷಿಣ ಸಮುದ್ರಾಪತಿ ಎಂಬ ಬಿರುದನ್ನ ಶ್ರೀಲಂಕಾದ ವೀರಬಾಹುವನ್ನ ಸೋಲಿಸಿ ಪಡೆದನು

ಪ್ರಮುಖ ಕೃತಿಗಳು

101. ಅಮುಕ್ತಮೌಲ್ಯದ ( ತೆಲುಗು ) ಜಾಂಬವತಿ ಕಲ್ಯಾಣ ( ಸಂಸ್ಕೃತ ) - ಇದರ ಕರ್ತೃ - ಕೃಷ್ಣದೇವರಾಯನ

102. ಕರ್ನಾಟಕ ಕೃಷ್ಣರಾಯ ಭಾರತ ಕಥಾ ಮಂಜರಿಯ ಕರ್ತೃ - ತಿಮ್ಮಣ್ಣ ಕವಿ

ಅರವೀಡು ಸಂತತಿ

103. ಈ ಸಂತತಿಯ ಆರಂಬಿಕ ದೊರೆ - ತಿರುಮಲ

104. ರಾಜಧಾನಿ - ಪೆನುಗೊಂಡ

105. ವಿಜಯನಗರ ಕೊನೆಯ ಅರಸ - 3 ನೇ ಶ್ರೀರಂಗರಾಯ

106. ವಿಜಯನಗರ ಸಾಮ್ರಾಜ್ಯ ಪತನಗೊಂಡಿದ್ದು - 1681 ರಲ್ಲಿ

Extra tips

107. ಹಕ್ಕ ಬುಕ್ಕರು - ಓರಂಗಲ್ಲಿನ ಪ್ರತಾಪರುದ್ರನ ಆಸ್ಥಾನದಲ್ಲಿದ್ದರು

108. ವಿದ್ಯಾರಣ್ಯರ ಮೊದಲ ಹೆಸರು - ಮಾಧವ ( ಸಾಮ್ರಾಜ್ಯ ಸ್ಥಾಪಿಸಲು ಮಾರ್ಗದರ್ಶಕರು 1386 ಕಲ್ಲಿ ಕಾಲವಾದರು )

109. ಹರಿಹರ - ಹೊಯ್ಸಳರ ಮಾಂಡಲಿಕ

110. ಬಹಮನಿ ಸಾಮ್ರಾಜ್ಯದ ಸ್ಥಾಪಕ - ಅಲ್ಲಾವುದ್ದಿನ್ ಹಸನ್ ಬಹಮನ್ ಷಾ

111. ತಾಳಿಕೋಟೆ ಕದನದ ಇನ್ನೋಂದು ಹೆಸರು - ರಕ್ಕಸತಂಗಡಿ 1565 ಜನವರಿ 23

112. ವಿಜಯನಗರ ರಾಜಧಾನಿಯ ಈಗಿನ ಹೆಸರು - ಹಂಪೆ

113. ಗದುಗಿನ ನಾರಾಯಣಪ್ಪ ಎಂದು ಕುಮಾರವ್ಯಾಸನನ್ನ ಕರೆಯಲಾಗಿದೆ

114. ವಿಜಯನಗರ ಸಾಮ್ರಾಜ್ಯಕ್ಕೆ ಬಂದಿದ್ದು ಪೋರ್ಚುಗೀಸ್ ರಾಯಭಾರಿ - ಅಲ್ಬುಕರ್ಕ್

115. " ಹಿಂದೂ ರಾಯ ಸುತ್ತಾಣ " ಎಂಬುದು ವಿಜಯ ನಗರ ಅರಸರ ವಿಶಿಷ್ಟ ಬಿರುದು .

116. ಈ ರಾಜವಂಶದ ಕುಲದೇವರು - ಶ್ರೀವಿರೂಪಾಕ್ಷ

117. ದಕ್ಷಿಮ ಬಾರತವನ್ನಾಳಿತ ಅರಸರಲ್ಲಿಯೂ ಶ್ರೇಷ್ಠ ಅರಸ - ಕೃಷ್ಣದೇವರಾಯ .

118. ಕೃಷ್ಣದೇವರಾಯನಿಗೆ " ಕನ್ನಡ ರಾಜ್ಯ ರಮಾರಮಣ " ಎಂಬ ಬಿರುದಿತ್ತು

119. ವಿಜಯ ನಗರದ ಪ್ರಾಚೀನ ರಾಜಧಾನಿ - ಆನೆಗೊಂಡಿ

120. ವಿಜಯನಗರ ಎಂಬ ಹೆಸರಿನಲ್ಲಿ ಹೊಸ ರಾಜಧಾನಿಯನ್ನು ನಿರ್ಮಿಸಿದ ಕೀರ್ತಿ - ಬುಕ್ಕರಾಯನಿಗೆ ಸಲ್ಲುತ್ತದೆ .

121. ವಿಜಯನಗರ ದೇವಾಲಯಗಳಲ್ಲರುವ ಹೆಬ್ಬಾಗಿಲಿನ ಎತ್ತರವಾದ ಗೋಪುರಗಳನ್ನು - ರಾಯಗೋಪುರ ಎಂದು ಕರೆಯುವರು .

122. ಖುರಾನಿನ ಪ್ರತಿಗಳನ್ನು ತನ್ನ ಆಸ್ಥಾನದ ಎತ್ತರವಾದ ಪೀಠದ ಮೇಲೆ ಇರಿಸಿದ್ದ ಅರಸ - 2ನೇ ದೇವರಾಯ

123. ಹಕ್ಕಬುಕ್ಕರಿಗೆ ಸಾಮ್ರಾಜ್ಯ ಸ್ಥಾಪನೆಗೆ ಅಶೀರ್ವದಿಸಿದ ಗುರುಗಳ ಹೆಸರು - ಕಾಶೀ ವಿಲಾಪ ಕ್ರಿಯಾ ಶಕ್ತಿ ಯತಿಗಳು

124. ವಿಜಯನಗರ ಪ್ರಸ್ತುತ - ಬಳ್ಳಾರಿ ಜಿಲ್ಲೆಯಲ್ಲಿದೆ

125. 2 ನೇ ದೇವರಾಯನ ದಂಡ ನಾಯಕ - ಲಕ್ಕಣ ದಂಡೇಶ

126. ಲಕ್ಕಣ ದಂಡೇಶನ ಕೃತಿ - ಶಿತತ್ವ ಚಿಂತಾಮಣಿ

127. ಕರ್ನಾಟಕ ಭಾರತಿ ಕಥಾಮಂಜರಿಯ ಕರ್ತೃ - ಕುಮಾರವ್ಯಾಸ

128. ಕೃಷ್ಣದೇವರಾಯನ ಮಾತ ಪಿತೃಗಳು - ನರಸನಾಯಕ ಹಾಗೂ ನಾಗಲಾಂಬಿಕೆ

129. ತುಳುವ ವಂಶದ ಕೊನೆಯ ಅರಸ - ಸದಾಶಿವರಾಯ

130. ಅರವೀಡು ಸಂತತಿಯ ಕೊನೆಯ ಅರಸ - 3 ನೇ ಶ್ರೀರಂಗ

ವಿಜಯ ನಗರದ ಆಡಳಿತ

131. ವಿಜಯನಗರದ ಪ್ರಾಂತ್ಯಧಿಕಾರಿಗಳಿಗೆ ಇದ್ದ ಪದನಾಮ - ನಾಯಕರ್

132. ಗ್ರಾಮ ಸಭೆಯ ಆಡಳಿತ - ಆಯಗಾರರು

133. ವಿಜಯನಗರ ಅರಸರು ದೇವಾಲಯಗಳ ನಿರ್ಮಾಣಕ್ಕೆ ಹೆಚ್ಚಾಗಿ " ಬೆಮಚುಕಲ್ಲು " ಬಳಸಿದ್ದಾರೆ

134. ವಿಜಯನಗರ ಸಾಮ್ರಾಜ್ಯದಲ್ಲಿ ವಿವಿಧ ಇಲಾಖೆಯ ಮುಖ್ಯಸ್ಥನನ್ನು - ಸಂಪ್ರತಿ ಎಂದು ಕರೆಯುತ್ತಿದ್ದರು

135. ವಿಜಯ ನಗರ ಸಾಮ್ರಾಜ್ಯದ ನಾಣ್ಯಗಳು - ಹೊನ್ನು , ಪಗೋಡ , ಗದ್ಯಾಣ , ಹಗ , ವೀಸ , ಕಾಸು, ಮತ್ತು ಜೀತಲ್

136. ದಸರಾ - ಇವರ ರಾಷ್ಟೀಯ ಹಬ್ಬಲಾಗಿತ್ತು

137. ವಿಜಯನಗರ ಅರಸರ ಸಾಹಿತ್ಯಕ ಪ್ರಗತಿಯನ್ನು - " classical Age " ಎಂದು ಕರೆಯುವರು

138. ಜೈಮಿನಿ ಭಾರತ ಕೃತಿಯ ಕರ್ತೃ - ಲಕ್ಷ್ಮೀಶ

139. ತೊರವೆ ರಾಮಾಯಣದ ಕರ್ತೃ - ನರಹರಿ

140. ಮೊಹಿನಿ ತರಂಗಿನಿ ಯ ಕರ್ತೃ - ಕನಕದಾಸ

141. ಶೈವರ ಅಜಂತಾ - ಎಂದು ಕರೆಯಲ್ಪಡುವ ದೇವಾಲಯ - ಲೇಪಾಕ್ಷಿ

142. ಕರ್ನಾಟಕ ಸಂಗೀತದ ಪಿತಾಮಹಾ - ಪುರಂದರದಾಸರು

143. ವಿಜಯನಗರದ ಪ್ರಾಂತಿಯ ಆಡಳಿತದ ವಿಭಾಗಗಳು - ಮಂಡಲ ಮತ್ತು ಅಮರ ನಾಯಕ

144. ಮಹಾನಾಡು ಪ್ರಭು - ಜಿಲ್ಲಾಧಿಕಾರಿ

145. ಪಟ್ಟಣದ ಮುಖ್ಯಸ್ಥ - ಪಟ್ಟಣ ಸ್ವಾಮಿ

146. ಆಯಗಾರರು - ಗ್ರಾಮದ ಸೇವಕ

147. ಗ್ರಾಮದ ಮುಖಂಡ - ಗೌಡ ಅಥಾವ ರೆಡ್ಡಿ

148. ತಳಾರಿ - ಪೊಲೀಸ್ ಕಾರ್ಯವನ್ನು ನಿರ್ವಹಿಸುತ್ತಿದ್ದ ವ್ಯಕ್ತಿ

149. ಅಗ್ರಹಾರದ ಆಡಳಿತವನ್ನು ನೋಡಿಕೊಳ್ಳುವವರು - ಮಹಾಜನ ಸಭೆ

150. ರಾಯರೇಖಾ ಪದ್ದತಿ - ಭೂಮಿಯನ್ನ ಅಳತೆ ಮಾಡುವ ಪದ್ದತಿ

151. ಕ್ರಿಸ್ತ ಪುರಾಣ ಕೃತಿಯ ಕರ್ತೃ - ಥಾಮಸ್ ಸ್ಟೀಫನ್

152. ಪುರಂದರ ದಾಸರು ಹುಟ್ಟಿದ್ದು - ಮಹಾರಾಷ್ಟ್ರದ ಪುರಂದರ ಗಡದಲ್ಲಿ 1484 ರಲ್ಲಿ ಜನಿಸಿದರು

153. ಪುರಂದರ ದಾಸರ ತಂದೆ ವರದಪ್ಪ ನಾಯಕ ತಾಯಿ - ಸರಸ್ವತಿ ಬಾಯಿ ಅಥಾವ ಲಕ್ಷ್ಮೀ ಬಾಯಿ

154. ಪುರಂದರ ದಾಸರು ಇವರ ಮೊದಲ ಹೆಸರು - ಶ್ರೀನಿವಾಸ ನಾಯಕ ಅಥಾವ ಕೃಷ್ಣಪ್ಪ ನಾಯಕ

155. ಪುರಂದರ ದಾಸರು ಇವರಿಗೆ ಪುರಂದರ ಎಂದು ಎಂದು ನಾಮಕರಣ ಮಾಡಿದವರು - ವ್ಯಾಸರಾಯರು

156. ಈಸ ಬೇಕು ಇದ್ದು ಜಯಿಸ ಬೇಕು - ಈ ಹೇಳಿಕೆಯನ್ನ ನೀಡಿದವರು - ಪುರಂದರ ದಾಸರು

157. ಪುರಂದರ ದಾಸರು ಅಂಕಿತ - ಪುರಂದರ ವಿಠಲ

*******************************************************************************************

## ರಾಷ್ಟ್ರಕೂಟರು

ರಾಷ್ಟ್ರಕೂಟರು ಕ್ರಿ.ಶ. 757 ರಲ್ಲಿ ಬಾದಾಮಿ ಚಾಲುಕ್ಯರನ್ನು ಕೊನೆಗಾಣಿಸಿ ಪ್ರವರ್ಧಮಾನಕ್ಕೆ ಬಂದರು

ರಾಷ್ಟ್ರಕೂಟ ಎಂಬ ಪದದ ಅರ್ಥ - ಪ್ರಾದೇಶಿಕ ವಿಭಜನೆಗಳಾದ ರಾಷ್ಟ್ರದ ಮುಖ್ಯಸ್ಥ ರು ಅಥವಾ ರಾಷ್ಟ್ರ ಎಂದರೆ ಪ್ರಾಂತ್ಯ ಹಾಗೂ ಕೂಟ ಎಂದರೆ - ನಾಯಕ ಎಂದರ್ಥ

ರಾಷ್ಟ್ರಕೂಟ ಮನೆತನ ಸ್ಥಾಪಕ - ದಂತಿದುರ್ಗ

ಇವರ ರಾಜಧಾನಿ - ಮಾನ್ಯಖೇಟ

ಮಾನ್ಯಖೇಟ ಪ್ರಸ್ತುತ - ಗುಲ್ಬರ್ಗ ಜಿಲ್ಲೆಯಲ್ಲಿದೆ

ಇವರ ರಾಜ್ಯ ಲಾಂಛನ - ಗರುಡ

ಇವರು ರಾಜ್ಯಬಾರ ಮಾಡಿದ್ದು - 8 ನೇ ಶತಮಾನದಿಂದ 10 ನೇ ಶತಮಾನದವರೆಗೆ

ಆಧಾರಗಳು

ದಂತಿದುರ್ಗನ - ಸಮನ್ ಗಡ್ ಹಾಗೂ ಎಲ್ಲೋರದ ಗುಹಾ ಶಾಸನ

ಒಂದನೇ ಕೃಷ್ಣನ - ಭಾಂಡ್ಕ ಮತ್ತು ತಾಳೇಗಾಂ ಶಾಸನ

ಧೃವನ - ಜೆಟ್ಟಾಯಿ ಶಾಸನ

ಅಮೋಘವರ್ಷನ - ಸಂಜಾನ್ ತಾಮ್ರ ಶಾಸನ ಹಾಗೂ ಕವಿ ರಾಜ ಮಾರ್ಗ

ಪೊನ್ನನ - ಶಾಂತಿ ಪುರಾಣ

ದಂತಿದುರ್ಗನ - ಪಂಚತಂತ್ರ

ತ್ರಿವಿಕ್ರಮನ - ನಳಚಂಪು

ಪಂಪನ - ವಿಕ್ರಾಮಾರ್ಜುನ ವಿಜಯಂ

ಬಿಲ್ಹಣನ - ವಿಕ್ರಮಾಂಕ ದೇವಚರಿತ

ಸುಲೇಮಾನ್ ನ - ಬರವಣಿಗೆಗಳು ಹಾಗೂ ಅಲ್ ಮಸೂದಿ

ಇಬಾನ್ ಹಾನಲ್ ಮತ್ತು ಇಸ್ತಾಬ್ರಿಯವರ ಬರವಣಿಗೆಗಳು

ರಾಷ್ಟ್ರಕೂಟರ ಮೂಲಗಳು

ರಟ್ಟ ರಾಷ್ಟ್ರಕೂಟರ ರಾಥೋಡ್ ಮೊದಲಾದವರ ಪದಗಳಲ್ಲಿ ಕಂಡು ಬರುವ ಸಾಮ್ಯದ ಆಧಾರದ ಮೇಲೆ ರಾಷ್ಟ್ರ ಕೂಟರು ರಜಪೂತರ ಮೂಲದವರೆಂದು ಡಾ//.Pleet ರವರ ಅಭಿಪ್ರಾಯ

ಉತ್ತರಾರ್ಧದ ಕೆಲವು ಶಾಸನಗಳ ಪ್ರಕಾರ ರಾಷ್ಟ್ರಕೂಟರು ಯಮವಂಶದವರು

ಖೇಡ ಮತ್ತು ಮುಲ್ತಾನ್ ತಾಮ್ರ ಶಾಸನದ ಪ್ರಕಾರ ಿವರ ಮೂಲ ನೆಲೆ ಬಿರಾರ್ ನ ಎಲಚಿಪುರ

ಬರ್ನೆಲ್ ಮತ್ತು H .Krishna Shastri ರವರ ಪ್ರಕಾರ ಇವರು ಆಂಧ್ರ ರೆಡ್ಡಿ ಜನಾಂಗದವರು

S.D.C.V ವೈದ್ಯರ ಪ್ರಕಾರ - ಇವರು ಮಹಾರಾಷ್ಟ್ರದವರು

ಡಾ//.G.R.Bhoodarkar ರಪ್ರಕಾರ ತುಂಗ ವಂಶದವರು ಹಾಗೂ ತುಂಗ ಮತ್ತ ರಟ್ಟ ಈ ವಂಶದ ಮೂಲ ಪುರುಷರೆಂದು ಕೆಲವು ಶಾಸನ ತಿಳಿಸಿದ .

ಅಲ್ತೇಕರ್ ರ ಪ್ರಕಾರ - ರಾಷ್ಟ್ರ ಕೂಟರು ಬಾದಾಮಿ ಚಾಲುಕ್ಯರ ಸಾಮಂತರಾಗಿದ್ದು ಇಂದಿನ ಗುಲ್ಬರ್ಗ ಜಿಲ್ಲೆಯ ಮಾನ್ಯಖೇಟ ಎಂಬಲ್ಲಿ ಒಂದು ಚಿಕ್ಕ ಸಂಸ್ಥಾನವನ್ನು ಆಳುತ್ತಿದ್ದರು ಕನ್ನಡಿಗರು

ರಾಷ್ಟ್ರಕೂಟರ ರಾಜಕೀಯ ಇತಿಹಾಸ

ಕ್ರಿ.ಶ.757 ರಲ್ಲಿ ಬಾದಾಮಿ ಚಾಲುಕ್ಯರ ಕೊನೆಯ ಅರಸ 2 ನೇ ಕೀರ್ತಿವರ್ಮನನ್ನು ಸೋಲಿಸಿ ದಂತಿದುರ್ಗ ಈ ಸಾಮ್ರಾಜ್ಯಕ್ಕೆ ಅಡಿಪಾಯ ಹಾಕಿದ

ದಂತಿದುರ್ಗ - ಈ ಸಾಮ್ರಾಜ್ಯದ ಮೂಲ ಪುರುಷ

ದಂತಿದುರ್ಗನ ರಾದಧಾನಿ - ಎಲ್ಲೋರಾ

ಈತನ ನಂತರ ಈತನ ಚಿಕ್ಕಪ್ಪ - ಒಂದನೇ ಕೃಷ್ಣ ಅಧಿಕಾರಕ್ಕೆ ಬಂದನು

1 ನೇ ಕೃಷ್ಣ - ಶಿವನ ಆರಾಧಕನಾಗಿದ್ದ .

ಇತಿಹಾಸಕ್ಕೆ 1 ನೇ ಕೃಷ್ಣ ಕೊಡುಗೆ - ಎಲ್ಲೋರದ ಕೈಲೈಸನಾಥ ದೇವಾಲಯ

ಎಲ್ಲೋರದ ಕೈಲೈಸನಾಥ ದೇವಾಲಯಕ್ಕೆ - ಕನ್ನಕೇಶ್ವರ ಎಂಬ ಹೆಸರಿತ್ತು

1ನೇ ಕೃಷ್ಣ ನಂತರ - ಇಮ್ಮಡಿ ಗೋವಿಂದ ಪಟ್ಟಕ್ಕೆ ಬಂದ

ಇಮ್ಮಡಿ ಗೋವಿಂದನ ನಂತರ - ಧೃವನು ಪಟ್ಟಕ್ಕೆ ಬಂದನು

ಧೃವ

ಈತ ಮೊದಲು ಗಂಗರ ವಿರುದ್ಧ ಹೋರಾಡಿ ಅವರ ಗಂಗವಾಡಿ ತನ್ನದಾಗಿಸಿದ

ನಂತರ ಕಂಚಿಯ ಪಲ್ಲವ ನಂದಿವರ್ಮನೊಡನೆ ಹೋರಾಡಿ

ನಂತರ ವೆಂಗಿ ಚಾಲುಕ್ಯ ಅರಸ 4 ನೇ ವಿಷ್ಣುವರ್ಧನನೊಡನೆ ಕಾದಾಟ ನಡೆಸಿದ

ಈತನ ಪತ್ನಿ - ಶೀಲಾಮಹಾದೇವಿ ವೆಂಗಿ ಚಾಲುಕ್ಯ ಮನೆತನದವಳು

ಉತ್ತರ ಭಾರತದ ಪ್ರಭುತ್ವಕ್ಕಾಗಿ ನಡೆದ ತ್ರಿರಾಜ ಕದನದಲ್ಲಿ ಸೇರ್ಪಡೆಯಾದ ಮೊದಲು ರಾಷ್ಟ್ರಕೂಟ ದೊರೆ - ಧೃವ

ಧೃವನ ನಂತರ ಈತನ ಮಗ - ಮೂರನೇ ಗೋವಿಂದನ ಅಧಿಕಾರಕ್ಕೆ ಬಂದ

ಮೂರನೇ ಗೋವಿಂದ

ಸ್ತಂಭನ ದಂಗೆಯನ್ನು ಹತ್ತಿಕ್ಕಿದ

ಕಂಚಿಯ ಪಲ್ಲವರೊಡನೆ ಧಾಳಿ ನಡೆಸಿದ

ವೆಂಗಿಯ ವಿರುದ್ಧ ದಾಳಿ ನಡೆಸಿದ

ಬಂಗಾಳದ ಧರ್ಮಪಾಲನನ್ನು ಸೋಲಿಸಿದ

ಸಂಯುಕ್ತ ಕೂಟದ ವಿರುದ್ಧ ಹೋರಾಟ ನಡೆಸಿದ

ಮೂರನೇ ಗೋವಿಂದ - ವಾದಿಕ ಮತಾವಲಂಬಿಯಾಗಿದ್ದನು

ಲಿಂಗಾನು ಶಾಸನ ಗ್ರಂಥದ ಕರ್ತೃ - ವಾಮನ

ವಾಮನನು ಮೂರನೇ ಗೋವಿಂದನ ಆಸ್ಥಾನವನ್ನು “ಜಗತ್ತುಂಗ ಸಭಾ ” ಎಂದು ಕರೆದಿದ್ದಾನೆ

ಮೂರನೇ ಗೋವಿಂದನ ಬಿರುದುಗಳು – ಜಗತ್ತುಂಗ , ಕೀರ್ತಿನಾರಾಯಣ . ತ್ರಿಭುವನ ಮಲ್ಲ , ಶ್ರೀವಲ್ಲಭ

ಅಮೋಘವರ್ಷ ನೃಪತುಂಗ

ಈತ ರಾಷ್ಟ್ರಕೂಟರ ಅತ್ಯಂತ ಪ್ರಸಿದ್ಧ ದೊರೆ

ಆಧಾರಗಳು

ಸಂಜಾನ್ ತಾಮ್ರ ಶಾಸನ

ನೀಲಗುಂದ ತಾಮ್ರ ಶಾಸನ

ಸಿರೂರು ತಾಮ್ರಪಟ ಶಾಸನ

ಕವಿರಾಜ ಮಾರ್ಗ

ಬೆಗುಮ್ರ ತಾಮ್ರಪಟ ಶಾಸನ

ಸುಲೇಮಾನ್ ನ ಬರವಮಿಗೆಗಳು

ಅಮೋಘವರ್ಷನು ಎದುರಿಸಿದ ಸಮಸ್ಸೆಗಳು

ವೆಂಗಿಯ ವಿಜಾಯಧಿತ್ಯನು ರಾಷ್ಟ್ರಕೂಟರ ವಿರುದ್ಧ ಸಂಚನ್ನು ನಡೆಸಿದನು

ಗಂಗರು ಮತ್ತ ಪಲ್ಲವರು ಹಿಂದಿನ ಹಗೆಯನ್ನು ಮುಂದುವರಿಸಿದರು

ಗೂರ್ಜರು ಪ್ರತಿಹಾರರು ಗಡಿಯನ್ನು ಆಕ್ರಮಿಸಿದರು

ಸಾಮಂತ ಜೆಟ್ಟಿ ಈತನ ವಿರುದ್ದ ದಂಗೆ ಎದ್ದನು

ಈತನ ನೆಚ್ಚಿನ ದಂಡ ನಾಯಕ – ಬಂಕೇಶ

ಈತ ತನ್ನ ಮಗಳಾದ – ಚಂದ್ರೋಲಬ್ಬೆಯನ್ನು ಗಂಗರ ಬೂತುಗನಿಗೆ ಕೊಟ್ಟು ವಿವಾಹ ಮಾಡಿದನು

ಇವನು ಕ್ರಿ.ಶ.೮೦೦ ರಲ್ಲಿ – ವಿಂಗವಳ್ಳಿಯ ಯುದ್ಧದಲ್ಲಿ ವಿಜಯಾಧಿತ್ಯನನ್ನು ಸಂಪೂರ್ಣವಾಗಿ ಸೋಲಿಸಿದನು

ಅಮೋಘವರ್ಷನ ಬಿರುದುಗಳು - ನೀತಿ ನಿರಂತರ , ನೃಪತುಂಗ .ಅತಿಶಯದವಳ , ಲಕ್ಷ್ಮೀವಲ್ಲಭ , ಕೀರ್ತಿ ನಾರಾಯಣ ಇತ್ಯಾದಿ ...

ಅಮೋಘವರ್ಷನ ನಿಜವಾದ ಹೆಸರು - ಧೇಯಶರ್ಮ ಅಥವಾ ಶರ್ವ

ಅಮೋಘವರ್ಷನ ಆಸ್ಥಾನಕ್ಕೆ ಭೇಟಿನೀಡಿದ ಅರಬ್ ಯಾತ್ರಿಕ - ಸುಲೇಮಾನ್

ಅಮೋಘವರ್ಷನ ಅದಿಕಾರವಧಿಯಲ್ಲಿ ಬರಗಾಲ ಬಂದಿದದ್ದರಿಂದ - ಕೊಲ್ಲಾಪುರದ ಮಹಾಲಕ್ಷ್ಮೀಗೆ ತನ್ನ ಎಡಗೈ ಬೆರಳನ್ನು ಕತ್ತರಿಸಿ ಸಮರ್ಪಿಸಿದ ( ಸಂಜಾನ್ ದತ್ತಿ ಶಾಸನ )

ಕರ್ನಾಟಕದ ಅಶೋಕ - ಅಮೋಘವರ್ಷ ನೃಪತುಂಗ

ನೃಪತುಂಗನ ಕನ್ನಡ ಕೃತಿ - ಕವಿರಾಜಮಾರ್ಗ

ಅಮೋಘವರ್ಷನೃಪತುಂಗನ ಸಂಸ್ಕೃತ ಕೃತಿ - ಪ್ರಶ್ನೋತ್ತರ ಮಾಲಿಕ

ಅಮೋಗವರ್ಷನ ಗುರುಗಳು - ಜಿನಸೇನಾಚಾರ್ಯ

ಜಿನಸೇನಾಚಾರ್ಯನ ಕೃತಿಗಳು - ಆದಿಪುರಣ , ಪಾಶ್ವಾಭ್ಯುದಯ , ಜಯದಳ

ಮಾನ್ಯಖೇಟ ಪ್ರಸ್ತುತ - ಹೈದರ್ ಬಾದ್ ಕರ್ನಾಟಕದಲ್ಲಿದೆ

ಬಂಕಾಪುರ ನಗರದ ನಿರ್ಮಾತೃ - ಅಮೋಘವರ್ಷನೃಪತುಂಗ ( ತನ್ನ ದಂಡನಾಯಕ ಬಂಕೇಶನ ಜ್ಞಾಪಕಾರ್ಥವಾಗಿ ಕಟ್ಟಿಸಿದ )

ನೃಪತುಂಗ - ಕ್ರಿ.ಶ.878 ರಲ್ಲಿ ಮರಣ ಹೊಂದಿದ

ಅಮೋಘವರ್ಷನ ನಂತರ ಈತನ ಮಗ - ಎರಡನೇ ಕೃಷ್ಣ ಅಧಿಕಾರಕ್ಕೆ ಬಂದನು

ರಾಷ್ಟ್ರಕೂಟರ ಕೊನೆಯ ಅರಸ - ಎರಡನೇ ಕರ್ಕ

ರಾಷ್ಟ್ರಕೂಟರ ಆಡಳಿತ

ರಾಜ - ಆಡಳಿತದ ಕೇಂದ್ರ ಬಿಂದು

ತುಂಗ ವರ್ಷ , ್ಕಾಲವರ್ಷ , ಶುಭತುಂಗ , ಜಗತ್ತುಂಗ - ರಾಜರ ಬಿರುದುಗಳು

ರಾಜತ್ವ - ವಂಶ ಪಾರಂಪರ್ಯವಾಗಿತ್ತು

ಮಂತ್ರಿಮಂಡಲ - ರಾಜನಿಗೆ ಆಡಳಿತದಲ್ಲಿ ಸಲಹೆ ನೀಡಲು ಅಸ್ತಿತ್ವದಲ್ಲಿತ್ತು

ಮಂತ್ರಿ ಮಂಡಲದ ಮುಖ್ಯಸ್ಥ - ಪ್ರಧಾನ ಮಂತ್ರಿ

ಮಹಾಸಂಧಿ ವಿಗ್ರಹಿ - ವಿದೇಶಾಂದ ವ್ಯಾವಹಾರಗಳ ಮಂತ್ರಿ

ಅಮಾತ್ಯ - ಕಂದಾಯ ಮಂತ್ರಿ

ಭಂಡಾರಿಕ - ಹಣಕಾಸು ವ್ಯವಾಹಾರಳ ಮಂತ್ರಿ

ಸೇನೆಯ ಮುಖ್ಯ ಕಛೇರಿ - ರಾಜಧಾನಿಯಲ್ಲಿತ್ತು

ಆದಾಯದ ಮೂಲ - ಭೂಕಂದಾಯ

ಉದ್ರಂಗ , ಉಪರಿತ ,ಬಾಗಕರ - ಪ್ರಮುಖ ಕಂದಾಯಗಳು

ಸಾಮಂತರು - ಕಪ್ಪ ಕಾಣಿಕೆ ಕೋಡಬೆಕಾಗಿತ್ತು

ಪ್ತಾಂತ್ಯಾಡಳಿತ - ಪ್ರಾಂತ್ಯ , ಭುಕ್ತಿ , ವಿಷಯ ಹಾಗೂ ಗ್ರಾಮ

ಪ್ರಾಂತ್ಯಗಳನ್ನು - ರಾಷ್ಟ್ರ ಅಥವಾ ಮಂಡಲ ಎಂದು ಕರೆಯಲಾಗುತ್ತಿತ್ತು

ರಾಷ್ಟ್ರಪತಿ - ಪ್ರಾಂತ್ಯದ ಆಡಳಿತದ ಮುಖ್ಯಸ್ಥ

ವಿಷಯಗಳು - ಪ್ರಾಂತ್ಯಗಳನ್ನು ವಿಷಯಗಳಾಗಿ ವಿಭಗಿಸಲ್ಪಟ್ಟತ್ತು

ವಿಷಯದ ಮುಖ್ಯಸ್ಥ - ವಿಷಯಪತಿ

ಭುಕ್ತಿ - ವಿಷಯಗಳನ್ನು ಭುಕ್ತಿಗಳಾಗಿ ವಿಭಾಗಿಸಲಾಗಿತ್ತು

ಬೋಗಪತಿ - ಭುಕ್ತಿಯ ಮುಖ್ಯಸ್ಥ

ಪಟ್ಟಣದ ಆಡಳಿತ - ಪಟ್ಟಣ ಶೆಟ್ಟಿಗಳು ನೋಡಿಕೊಳ್ಳುತ್ತಿದ್ದರು

ಗ್ರಾಮ - ಆಡಳಿತದ ಕೊನೆಯ ಘಟಕ

ಗ್ರಾಮಪತಿ ಅಥವಾ ಪ್ರಭುಗಾವುಂಡ - ಗ್ರಾಮದ ಮುಖ್ಯಸ್ಥ

ಮಹಜನರು - ಗ್ರಾಮ ಸಭೆಯ ಸದಸ್ಯರು

ರಾಷ್ಟ್ರಕೂಟರ ಸಾಮಾಜಿಕ ಜೀವನ

ಸಮಾಜದಲ್ಲಿ ಪಿತೃ ಪ್ರಧಾನ ಕುಟುಂಬ ಅಶ್ತಿತ್ವದಲ್ಲಿತ್ತು

ಕೀಳ್ಗುಂಟೆ ಮತ್ತು ವೇಳಾವಳಿ - ಸೇವಕರು , ಸೈನಿಕರು ,ಸ್ತ್ರೀಯರು ತಮ್ಮ ಮಾನ ಹಾಗೂ ಘನತೆಯ ಹಾಗೂ ಗ್ರಾಮದ ರಕ್ಷಣೆಗಾಗಿ ಮಾಡುತ್ತಿದ್ದ ಬಲಿದಾನ

ರಾಷ್ಟ್ರಕೂಟರ ಆರ್ಥಿಕ ಜೀವನ

ನೇಗಿಲು ವ್ಯವಸಾಯದ ಪ್ರಮುಖ ಉಪಕರಣವಾಗಿದ್ದು ಇದನ್ನು "ಮೇಟಿ" ಎಂದು ಕರೆಯುತ್ತಿದ್ದರು .

ಕೃಷಿ -ಆರ್ಥಿಕ ಜೀವನದ ಬೆನ್ನೇಲುಬಾಗಿತ್ತು .

ಭೂಮಿಯ ವಿಭಾಗಗಳು - ತರಿ , ಖುಷ್ಕಿ

ಆದಾಯದ ಮೂಲ - ಭೂಕಂದಾಯವಾಗಿತ್ತು

ಕಂದಾಯ ವಸೂಲಿ - ಉತ್ತನ್ನದ 1/6 ಭಾಗ

ಪ್ರಮುಖ ವಾಣಿಜ್ಯ ಬೆಳೆ - ಹತ್ತಿಯಾಗಿತ್ತು

ಕೈಗಾರಿಕಾ ಕೇಂದ್ರ - ಗುಜರಾತ್ , ಬಿಹಾರ್ ಹಾಗೂ ತೆಲಂಗಾಣದಲ್ಲಿತ್ತು

ಮಾನ್ಯಖೇಟ - ಆಭರಣದ ಮಾರುಕಟ್ಟೆಯಾಗಿತ್ತು

ವ್ಯಾಪಾರ ಸಂಪರ್ಕ - ಅರಬ್ ರಾಷ್ಟ್ರದೊಂದಿಗೆ

ವಿದೇಶಿ ವ್ಯಾಪಾರ ಕೇಂದ್ರಗಳು - ಕಲ್ಯಾಣ , ಸೋಪಾರ , ಬ್ರೋಚ್. ತೊರಾಣ , ಥಾಣ

ವ್ಯಾಪಾರಿ ವೃತ್ತಿ ಸಂಘ ಹೊಂದಿದ್ದವರು - ವೀರಬಣಜಿಗರು

ಲಕ್ಷ್ಮೇಶ್ವರ - ನೆಯ್ಗೆಕಾರರ ನೆಯ್ಗೆ ಸಂಘ ಹೊಂದಿತ್ತು

ನಾಣ್ಯಗಳು - ದ್ರಮ್ಮ , ಸುವರ್ಣ , ಗದ್ಯಾಣ , ಕಳಂಜು ಹಾಗೂ ಕಾಸು

ರಾಷ್ಟ್ರಕೂಟರ ಸಾಂಸ್ಕೃತಿಕ ಕೊಡುಗೆಗಳು

ಬಂಕಾಪುರ - ರಾಷ್ಟ್ರಕೂಟರ ಪ್ರಸಿದ್ದ ಜೈನಮತದ ಕೇಂದ್ರವಾಗಿತ್ತು

ರಾಷ್ಟ್ರಕೂಟರು - ಸಂಸ್ಕೃತ ಹಾಗೂ ಕನ್ನಡ ಭಾಷೆಯಲ್ಲಿ ಶಿಕ್ಷಣ ನೀಡುತ್ತಿದ್ದರು

ಬಿಜಾಪುರ ಜಿಲ್ಲೆಯ "ಸಾಲೋಟಗಿ " - ಇವರ ಕಾಲದ ಪ್ರಸಿದ್ದ ವಿದ್ಯಾಕೇಂದ್ರ

ಇವರ ಕಾಲದಲ್ಲಿ ರಚನೆಯಾದ ಸಾಹಿತ್ಯ ಕೃತಿಗಳು

ತ್ರಿವಿಕ್ರಮ - ನಳಚಂಪು

ಹಲಾಯುಧ - ಕವಿರಹಸ್ಯ

ಅಕಲಂಕ - ಅಷ್ಟಸಹಸ್ರಿ

ಅಮೋಘವರ್ಷ - ಪ್ರಶ್ನೋತ್ತರ ಮಾಲಿಕೆ ( ಸಂಸ್ಕೃತ ) ಹಾಗೂ ಕವಿರಾಜಮಾರ್ಗ

ಜಿನಸೇನ - ಆದಿಪುರಾಣ , ಪಾರ್ಶ್ವಭುದಯ ಹಾಗೂ ಜಯದವಳ

ಮಹಾವೀರಾಚಾರ್ಯ - ಗಣಿತ ಸಾರ ಸಂಗ್ರಹ ( ಗಮಿತ ಗ್ರಂಥ )

ಕನ್ನಡದ ಮೊಟ್ಟ ಮೊದಲ ಉಪಲಬ್ದ ಗ್ರಂಥ - ಕವಿರಾಜಮಾರ್ಗ

ಕನ್ನಡದ ಆದಿಕವಿ - ಪಂಪ

ಪಂಪ ಅರಿಕೇಸರಿಯ ಆಸ್ಥಾನ ಕವಿ

ಪಂಪನ ಕೃತಿಗಳು - ವಿಕ್ರಮಾರ್ಜುನ ವಿಜಯ ಹಾಗೂ ಆದಿಪುರಾಣ

ಪೊನ್ನ - ಮೂರನೇ ಕೃಷ್ಣನ ಆಸ್ಥಾನದ ಕವಿ

ಕವಿಚಕ್ರವರ್ತಿ - ಪೊನ್ನನ ಬಿರುದು

ಪೊನ್ನನ ಕೃತಿಗಳು - ಶಾಂತಿಪುರಾಣ , ಭುವನೈಕ್ಯ ರಾಮಭ್ಯುದಯ ಮತ್ತು ಜಿನಾಕ್ಷರ ಮಾಲೆ ( ಎಲ್ಲವೂ ಕನ್ನಡ ಕೃತಿಗಳು )

ಮೂರನೇ ಕೃಷ್ಣ ಪೊನ್ನನಿಗೆ ನೀಡಿದ ಬಿರುದು - ಉಭಯಕವಿ

ಕಲೆ ಮತ್ತು ವಾಸ್ತು ಶಿಲ್ಪ

ಒಂದನೇ ಕೃಷ್ಣ ನಿರ್ಮಿಸಿದ - ಎಲ್ಲೋರಾದ ಕೈಲಾಸನಾಥ ದೇವಾಲಯ ಇವರ ಕಾಲದ ಪ್ರಮುಖ ದೇವಾಲಯ

ಎಲ್ಲೋರಾದ ಕೈಲಾಸ ದೇವಾಲಯದ ಶಿಲ್ಪಿ - ವಿಶ್ವಕರ್ಮ

ಈ ದೇವಾಲಯ ಪ್ರಸ್ತುತ - ಮಹಾರಾಷ್ಟ್ರದ ಔರಂಗಬಾದ್ ಜಿಲ್ಲೆಯಲ್ಲಿದೆ

ಎಲ್ಲೋರಾದ 30 ನೇ ಗುಹೆಯನ್ನು - ಛೋಟಾ ಕೈಲಾಸ ಎಂದು ಕರೆಯಲಾಗಿದೆ

ಎಲಿಫೆಂಟಾ ದೇವಾಲಯ - ಬಾಂಬೆಯ ಬಳಿಯಿದೆ

ಎಲಿಫೇಂಟಾದ ಮೊದಲ ಹೆಸರು - ಗೊರವಪುರಿ ಅಥವಾ ಗೋವಕಪುರಿ

ಈ ದೇವಾಲಯವನ್ನು “ ಎಲಿಫೇಂಟಾ ” ಎಂದ ಕರೆದವರು - ಪೋರ್ಚುಗೀಸರು

ರಾಷ್ಟ್ರಕೂಟರ ಕಾಲವನ್ನು - “ಕಾನೂಜ್ ಸಾಮ್ರಾಜ್ಯ ಕಾಲ ” ಎಂದು ಕರೆಯಲಾಗಿದೆ

Extra Tips

ರಾಷ್ಟ್ರಕೂಟರ ರಾಜ್ಯ ಲಾಂಛನ - ಗರುಡ

ದಂತಿದುರ್ಗನ ತಂದೆಯ ಹೆಸರು - ಇಂದ್ರ

ದಂತಿದುರ್ಗನ ಬಿರುದುಗಳು - ಮಹಾರಾಜಾಧಿ ಪರಮೇಶ್ವರ , ಪೃಥ್ವಿವಲ್ಲಭ

ಒಂದನೇ ಕೃಷ್ಣನ ಬಿರುದುಗಳು - ಶುಭತುಂಗ , ಅಕಾಲವರ್ಷ

ಎರಡನೇ ಗೋವಿಂದನ ಬಿರುದುಗಳು - ಜಗತ್ತುಂಗ , ಪ್ರಭೂತವರ್ಷ ಹಾಗೂ ಪ್ರತಾಪವ ಲೋಕ

ಧೃವನ ಬಿರಿದುಗಳು - ಧಾರವರ್ಷ , ಕಲಿವಲ್ಲಭ ಹಾಗೂ ಶ್ರೀವಲ್ಲಭ

ಮೂರನೇ ಗೋವಿಂದನ ಬಿರುದುಗಳು - ನರೇಂದ್ರ , ಜಗತ್ತುಂಗ , ಪ್ರಭೂತವರ್ಷ ಹಾಗೂ ಜನವಲ್ಲಭ

ರಾಷ್ಟ್ರಕೂಟರ ಶಾಂತಿಪ್ರೀಯ ಅರಸ - ಅಮೋಘವರ್ಷನೃಪತುಂಗ

“ಶಬ್ದಾನು ಶಾಸನ ” ಎಂಬ ಸಂಸ್ಕೃತ ವ್ಯಾಕರಣ ಗ್ರಂಥದ ಕರ್ತೃ - ಶಾಕ್ತಾಯನ

ನೃಪತುಂಗನ ಆಸ್ಥಾನ ಕವಿ - ಶ್ರೀವಿಜಯ

ಮಾನ್ಯಖೇಟ ಎಂಬ ಹೊಸ ರಾಜಧಾನಿಯ ನಿರ್ಮಾತೃ - ಅಮೋಘವರ್ಷ ನೃಪತುಂಗ

ಕಂಚಿಕೊಂಡ ಎಂಬ ಬಿರುದು ಧರಿಸಿದ್ದ ರಾಜ - 3 ನೇ ಕೃಷ್ಣ

ಕನ್ನಡದ ಮೊದಲ ಗಧ್ಯ ಕೃತಿ - ವಡ್ಡರಾಧನೆ

ವಡ್ಡರಾಧನೆಯ ಕರ್ತೃ - ಶಿವಕೋಟಾಚಾರ್ಯ

ಪ್ರಾಚೀನ ಕರ್ನಾಟಕದ ಎಲ್ಲೆಯನ್ನು ತಿಳಿಸುವ ಕನ್ನಡ ಕೃತಿ - ಕವಿರಾಜಮಾರ್ಗ

ಒಂದನೇ ಕೃಷ್ಣನ ಮತ್ತೊಂದು ಹೆಸರು - ಕನ್ನರಸ ಬಿಲ್ಲಹ

ನೃಪತುಂಗನ ಆಸ್ಥಾನಕ್ಕೆ ಬಂದಿದ್ದ ಅರಬ್ ಪ್ರವಾಸಿಗ - ಸುಲೇಮಾನ್

ಕನ್ನಡದ ಅತೀ ಪ್ರಾಚೀನ ಗ್ರಂಥ - ಕವಿರಾಜಮಾರ್ಗ

ಉಭಯ ಕವಿ ಚಕ್ರವರ್ತಿ ಬಿರುದುಳ್ಳ ಕವಿ - ಪೊನ್ನ

ರಾಷ್ಟ್ರಕೂಟರ ಕೊನೆಯ ಅರಸ - 2ನೇ ಕರ್ಕ

ಗಣಿತ ಸಾರಸಂಗ್ರಹದ ಕರ್ತೃ - ಮಹಾವೀರಾಚಾರ್ಯರು

ಕನ್ನಡದ ಮೊದಲ ಉಪಲಬ್ದ ಕೃತಿ - ಕವಿರಾಜಮಾರ್ಗ

ಚಾಲುಕ್ಯರ ನಂತರ ಅಧಿಕಾರಕ್ಕೆ ಬಂದವರು – ರಾಷ್ಟ್ರಕೂಟರು

*************************************************************************************************

# ಕಲ್ಯಾಣಿ ಚಾಲುಕ್ಯರು

ಇವರು ರಾಷ್ಟ್ರಕೂಟರ ಆಳ್ವಿಕೆಯನ್ನು ಕೊಣೆಗಾಣಿಸಿ ಪ್ರವರ್ಧಮಾನಕ್ಕೆ ಬಂದರು

ಇವರನ್ನು ಪಶ್ಚಿಮದ ಚಾಲುಕ್ಯರೆಂದು ಕರೆಯುವರು

ಇವರ ಪ್ರಾರಂಭದ ರಾಜಧಾನಿ - ಏತಗಿರಿ ಅಥವಾ ಪೊಟ್ಟಳಕೆರೆ ಹಾಗೂ ಮಹಾರಾಷ್ಟ್ರದ ಮಾನ್ಯಖೇಟ

ಇವರ ಲಾಂಛನ - ವರಾಹ

ರಾಷ್ಟ್ರಕೂಟರ ಸಾಮಂತರಾಗಿದ್ದ ಎರನೇ ತೈಲಪ - ಈ ಮನೆತನದ ಮೂಲ ಪುರುಷ

ತೈಲಪ ಎರಡನೇ ಕರ್ಕನನ್ನ ಸೋಲಿಸಿ ಈ ರಜ್ಯಾಕ್ಕೆ ತಳಹದಿ ಹಾಕಿದನು

ಆಧಾರಗಳು

ರನ್ನನ ಅಜಿತನಾಥಪುರಾಣ ಮತ್ತು ಗದಾಯುದ್ಧ

ಮೂರನೇ ಸೋಮೇಶ್ವರನ - ಮಾನಸೋಲ್ಲಾಸ

ಬಿಲ್ಹಣನ - ವಿಕ್ರಮಾಂಕದೇವ ಚರಿತಾ

ವಿಜ್ಞಾನೇಶ್ವರನ - ಮಿತಾಕ್ಷರ

ರಾಜಕೀಯ ಇತಿಹಾಸ

ಎರಡನೇ ತೈಲಪ

ಕಲ್ಯಾಣಿ ಚಾಲುಕ್ಯರ ಸ್ಥಾಪಕ ದೊರೆ

ಮಾನ್ಯಖೇಟ ಈತನ ರಾಜಧಾನಿ

ಕ್ರಿ.ಶ.997 ರಲ್ಲಿ ಮರಣ ಹೊಂದಿದ

ಆರನೇ ವಿಕ್ರಮಾಧಿತ್ಯ

ಕಲ್ಯಾಣಿ ಚಾಲುಕ್ಯರ ಅತ್ಯಂತ ಪ್ರಸಿದ್ಧ ದೊರೆ

ಈತ 09/03/1076 ರಲ್ಲಿ " ಚಾಲುಕ್ಯ ವಿಕ್ರಮ ಶಕೆ " ಎಂಬ ಹೊಸ ಶಕೆಯನ್ನ ಸ್ಥಾಪಿಸಿದ

ಈತನಿಗೆ ಭವನೈಕ್ಯಮಲ್ಲ ಮತ್ತು ಪೆರ್ಮಾಚಿದೇವ ಎಂಬ ಬಿರುದಿತ್ತು

ಈತನ ದಂಡ ನಾಯಕನ ಹೆಸರು - ಅಚ್ಚುಗಿ

ಕರ್ನಾಟಕ ಸರಸ್ವತಿ ಎಂದು ಪ್ರಸಿದ್ದರಾದವರು - ಚಂದ್ರಲಾದೇವಿ

ಬಳ್ಳಿಗಾಂವೆ ಈತನ ಕಾಲದ ಪ್ರಸಿದ್ದ ವಿಧ್ಯಾ ಕೇಂದ್ರ

ಈತ "ವಿಕ್ರಮ ಪುರ " ಎಂಬ ನಗರವನ್ನು ನಿರ್ಮಿಸಿದ ನು

"ದೇವಾಲಯಗಳ ಚಕ್ರವರ್ತಿ " ಎಂದು ಕರೆಯಲಾಗಿರುವ ದೇವಾಲಯ " ಇಟಗಿಯ ಮಹಾದೇವಾ ದೇವಾಲಯ " .

" ಇಟಗಿಯ ಮಹಾದೇವಾ ದೇವಾಲಯ " ಇದರ ನಿರ್ಮಾತೃ ಈತನ ದಂಡ ನಾಯಕ - ಮಹಾದೇವಾ ( ದಂಡಾದೀಶ )

ಈತ ಕ್ರಿ.ಶ.1026 ರಲ್ಲಿ ಮರಣ ಹೊಂದಿದನು

ಮೂರನೇ ಸೋಮೇಶ್ವರ :-

6 ನೇ ವಿಕ್ರಮಾಧಿತ್ಯನ ನಂತರ ಅಧಿಕಾರಕ್ಕೆ ಬಂದನು

ಮಾನಸೋಲ್ಲಾಸ ಮತ್ತು ವಿಕ್ರಮಾಭ್ಯುದಯ ಈತನ ಕೃತಿಗಳು

ಮಾನಸೋಲ್ಲಾಸದ ಇನ್ನೊಂದು ಹೆಸರು - "ಅಭಿಲಾಷಿತಾರ್ಥ ಚಿಂತಾಮಣಿ "

"ಅಭಿಲಾಷಿತಾರ್ಥ ಚಿಂತಾಮಣಿ " ಇದರ ಪ್ರತಿಯನ್ನು ಮೂರು ಭಾಗಗಳಾಗಿ ಪ್ರಕಟಿಸಿದ ಸಂಸ್ಥೆಯ ಹೆಸರು " ಬರೋಡದ ಗಾಯಕವಾಡ್ ಓರಿಯಂಟಲ್ ಸಂಸ್ಥೆ "

ಈತನ ಬಿರುದ - "ಸರ್ವಜ್ಞ ಚಕ್ರವರ್ತಿ "

ಈತನ ಇತರೆ ಬಿರುದುಗಳು - ಭೂಲೋಕಮಲ್ಲ , ತ್ರಿಭುವನ ಮಲ್ಲ

ಕಲ್ಯಾಣಿ ಚಾಲುಕ್ಯರ ಆಡಳಿತ

ಮಂತ್ರಿಗಳ ವಿಧಗಳು - " ಪ್ರಧಾನ " ಮತ್ತು " ಮಹಾಪ್ರಧಾನ "

ಪ್ರಧಾನ ಮಂತ್ರಿಗೆ ಇರುತ್ತಿದ್ದ ಬಿರುದುಗಳು " ಚೂಡಾಮಣಿ " ಮತ್ತು " ಅಮಾತ್ಯ ಕೇಸರಿ "

ಸ್ಥಳೀಯ ಆಡಳಿತ ವರ್ಗಗಳು - ಗ್ರಾಮ ಮಹತ್ತರು ಮತ್ತು ರಾಷ್ಟ್ರ ಮಹತ್ತರರು

ಆಡಳಿತದ ಕೊನೆಯ ಘಟಕ - ಗ್ರಾಮ

ಗ್ರಾಮದ ಹಿರಿಯ ಬ್ರಾಹ್ಮಣರನ್ನು " ಮಹಾಜನ " ಎಂದು ಕರೆಯುತ್ತಿದ್ದರು .

ವೈಶ್ಯರನ್ನು - ನಬರ ಎಂದು ಕರೆಯುತ್ತಿದ್ದರು

ಇವರ ಆಡಳಿತದಲ್ಲಿದ್ದ ಭೂಕಂದಾಯ ಲೆಕ್ಕವಿಡುತ್ತಿದ್ದ ಮುಖ್ಯಸ್ಥನ ಹೆಸರು - ಕಡಿತವರ್ಗಡೆ

ಸೈನ್ಯದ ಪ್ರಮುಖ ಕೇಂದ್ರ ಕೋಟೆಗಳು

ಕೊಲ್ಲಾಪುರದ ಮಹಾಲಕ್ಷ್ಮಿ ದೇವಾಲಯ - ಶಕ್ತಿ ಪೂಜೆಯ ಕೇಂದ್ರವಾಗಿತ್ತು

ರನ್ನನಿಗೆ ಆಶ್ರಯ ನೀಡಿದವರು - ಸತ್ಯಶ್ರಾಯ ಹಾಗೂ 2 ನೇ ತೈಲಪ

ಇವರ ಕಾಲದಲ್ಲಿದ್ದ ಸುಪ್ರಸಿದ್ದ ಜೈನ ಭಕ್ತೆ - ಅತ್ತಿಮಬ್ಬೆ

ಅತ್ತಿಮಬ್ಬೆಗೆ ಇದ್ದ ಬಿರುದು - ದಾನ ಚಿಂತಾಮಣಿ

ಬಳ್ಳಿಗಾಂವೆ , ಕೋಳಿವಾಡ ಮತ್ತು ಡಂಬಳ - ಮಹಾಯಾನ ಬೌದ್ಧರ ಕೇಂದ್ರ

ಸಾಹಿತ್ಯ ( ಕನ್ನಡ )

ರನ್ನ - ಗದಾಯುದ್ಧ ಮತ್ತು ಅಜಿತನಾಥಪುರಾಣ ( ಕವಿಚಕ್ರವರ್ತಿ ಬಿರುದು )

ಎರಡನೇ ಚಾವುಂಡರಾಯ - ಲೋಕೋಪಕಾರ

ನಾಗವರ್ಮ - ಕರ್ನಾಟಕ ಕದಂಬರಿ ಮತ್ತು ಛಂದೋಬದಿ

ಚಂದ್ರರಾಜ - ಮದನ ತಿಲಕ

ಶ್ರೀಧರಚಾರ್ಯ - ಜಾತಕ ತಿಲಕ

ಕೀರ್ತಿವರ್ಮ - ಗೋವೈದ್ಯ

ಶಾಂತಿನಾಥ - ಸುಕುಮಾರ ಚರಿತ್ರೆ

ಮಾದವವರ್ಮಾಚಾರ್ಯ - ಚಂದ್ರ ಚೂಡ ಮಣಿ

ನಯನ ಸೇನ - ಧರ್ಮಾಮೃತ

ದುರ್ಗಸಿಂಹ - ಪಂಚತಂತ್ರ

ಸಂಸ್ಕೃತ ಸಾಹಿತ್ಯ

ಜಗದೇಕ ಮಲ್ಲನ ಆಸ್ಥಾನ ಕವಿ - ವಾದಿರಾಜ

6 ನೇ ವಿಕ್ರಮಾಧಿತ್ಯನ ಅಶ್ರಿತ ಕವಿ - ಬಿಲ್ಹಣ

ವಾದಿರಾಜ - ಯಶೋಧರ ಚರಿತೆ ಮತ್ತು ಪಾರ್ಶ್ವನಾಥ ಚರಿತೆ

ಬಿಲ್ಹಣ - ವಿಕ್ರಮಾಂಕ ದೇವಚರಿತ

ವಿಜ್ಞಾನೇಶ್ವರ - ಮಿತಾಕ್ಷರ ಸಂಹಿತೆ

ಮೂರನೇ ಸೋಮೇಶ್ವರ - ಮಾನಸೋಲ್ಲಾಸ

ಜಗದೇಕ ಮಲ್ಲನ - ಸಂಗೀತ ಚೂಡಾಮಣಿ

Extra Tips

ಕಲ್ಯಾಣಿ ಚಾಲುಕ್ಯರ ರಾಜಧಾನಿ - ಬೀದರ್ ಜಿಲ್ಲೆಯ ಕಲ್ಯಾಣ

ಸತ್ಯಾಶ್ರಯನನ್ನು ಮಹಾಭಾರತದ ಭೀಮನಿಗೆ ಹೋಲಿಸಿದ ಕವಿ - ರನ್ನ

ಕನ್ನೇಗಾಲ ಕದನ ಸಂಭವಿಸಿದ್ದು - 6ನೇ ವಿಕ್ರಮಾಧಿತ್ಯ / ವಿಷ್ಣುವರ್ಧನ

ನೃತ್ಯವಿಧ್ಯಾದರಿ ಎಂಬ ಬಿರುದನ್ನು ಹೊಂದಿದ್ದವಳು - ಚಂದ್ರಲಾದೇವಿ

ಕನ್ನಡದ ಮೊದಲ ಪಶುವೈಧ್ಯ ಕೃತಿ - ಗೋವೈದ್ಯ ( ಕೀರ್ತಿವರ್ಮ )

ಕನ್ನಡದ ಮೊದಲ ಜೋತಿಷ್ಯ ಶಾಸ್ತ್ರ - ಜಾತಕ ತಿಲಕ ( ಶ್ರೀಧರಚಾರ್ಯ )

3 ನೇ ಸೋಮೇಶ್ವರ ನ ಬಿರುದು - ಭೂಲೋಕಮಲ್ಲ , ಸರ್ವಜ್ಞ ಚಕ್ರವರ್ತಿ ಹಾಗೂ ಸರ್ವಜ್ಞ ಭೂಪ

ಅಭಿನವ ಪಂಪ ಎಂದು ಖ್ಯಾತಿವೆತ್ತವರು - ನಾಗಚಂದ್ರಕವಿ

ಕನ್ನಡದ ಪ್ರಪ್ರಥಮ ಕವಯಿತ್ರಿ - ಕಂತಿ

ಅರಿಕೇಸರಿಯ ಆಸ್ಥಾನದ ಕವಿ - ಪಂಪ

ಸಾಹಸ ಭೀಮ ವಿಜಯ - ರನ್ನ

ಆದಿ ಕವಿ ಪಂಪ - ವಿಕ್ರಮಾರ್ಜುನ ವಿಜಯ ಹಾಗೂ ಆದಿಪುರಾಣ

ಪಂಪ ರಾಮಯಾಣ ಎಂದು ಖ್ಯಾತವಾದ ಕೃತಿ - ನಾಗ ಚಂದ್ರ ಕವಿಯ - ರಾಮಚರಿತಪುರಾಣ

ಎರಡನೇ ತೈಲಪನ ಬಿರುದು - ತ್ರೈಲೋಕ ಮಲ್ಲ

ಎರಡನೇ ತೈಲಪನ ದಂಡ ನಾಯಕ - ಬರ್ಫೆ

6ನೇ ವಿಕ್ರಮಾಧಿತ್ಯನ ದಂಡನಾಯಕ - ದಂಡಾದೀಶ

ಕನ್ನಡ ಮೊದಲ ಕಾಮಸಾಸ್ತ್ರ ಗ್ರಂಥ - ಮದನ ತಿಲಕ (ಚಂದ್ರರಾಜ )

ರನ್ನನಿಗೆ “ಕವಿಚಕ್ರವರ್ತಿ ” ಎಂಬ ಬಿರುದು ನೀಡಿದವರು - 2 ನೇ ತೈಲಪ

ಕಲ್ಯಾಣಿ ಚಾಲುಕ್ಯರ ಕೊನೆಯ ದೊರೆ - 3 ನೇ ತೈಲಪ

ಕಲ್ಯಾಣಿ ಚಾಲುಕ್ಯರ ಆಳ್ವಿಕೆಯನ್ನು ಕೊನೆಗಾಣಿಸಿದವರು - ಕಲಚೂರಿ ಬಿಜ್ಜಳ

ಕಲ್ಯಾಣಿ ಚಾಲುಕ್ಯರ ರಾಜಧಾನಿ - ಬಿದರ್ ಜಿಲ್ಲೆಯ ಬಸವನ ಕಲ್ಯಾಣ

6 ನೇ ವಿಕ್ರಮಾಧಿತ್ಯನ ತಂದೆ ತಾಯಿ - 1 ನೇ ಸೋಮೇಶ್ವರ ಹಾಗೂ ಬಾಚಲಾ ದೇವಿ

******************************************************************************************

# ಕಲಚೂರಿಗಳು

1. ಇವರ ಮೂಲ ಪುರುಷ - ಬಿಜ್ಜಳ

2. ಇವನ ಆಸ್ಥಾನದ ಮಂತ್ರಿ - ಬಸವಣ್ಣ

3. ಬಸವಣ್ಣ ನವರನ್ನ ಶಾಸನಗಳಲ್ಲಿ " ಮಹೇಶ್ವರ " ಎಂದು ಕರೆಯಲಾಗಿದೆ

4. ಇವರು ಮೂಲತಃ ಬುಂದೇಲ್ ಖಂಡದವರು

5. ಬಿಜ್ಜಳನ ಬಿರುದುಗಳು - ತ್ರಿಭುವನ ಮಲ್ಲ , ಭುಜ ಬಲ ಚಕ್ರವರ್ತಿ , ಕಲಚೂರಿ ಚಕ್ರವರ್ತಿ

6. ಸೋಮೇಶ್ವರ - ಬಿಜ್ಜಳನ ಮೊದಲ ಮಗ

7. ಈತನ ಇನ್ನೋಂದು ಹೆಸರು - ಸೋಮದೇವ

8. ಸೋಮೇಶ್ವರನ ಬಿರುದು - ರಾಯಮುರಾರಿ

9. ಕಲಚೂರಿ ಪದ ಮೂಲತಃ ಬುಂದೇಲ್ ಖಂಡದ " ಕಲಿಂಜರ್ " ದಿಂದ ಬಂದಿದೆ

10. ಕಲಚೂರಿಗಳ ಮೂಲ ರಾಜಧಾನಿ - ಕಲಿಂಜರಿ ಪುರ

11. ಕಲಚೂರಿ ಸಾಮ್ರಾಜ್ಯದ ಸ್ಥಾಪಕ - ಎರಡನೇ ಬಿಜ್ಜಳ

12. ಕಲಚೂರಿಗಳ ಲಾಂಛನ - ನಂದಿ ( ವೃಷಭ )

13. ಬಸವೇಶ್ವರರ ಜನ್ಮ ಸ್ಥಳ - ಬಾಗೇವಾಡಿ ಅಥವಾ ಬಸವನ ಬಾಗೇವಾಡಿ

14. ಬಸವೇಶ್ವರರು ಪುನರುತ್ಥಾನಗೊಳಿಸಿದ ಮತ - ವೀರಶೈವ ಧರ್ಮ

15. ಬಸವಣ್ಣನ ಅಂಕಿತ - ಕೂಡಲ ಸಂಗಮದೇವ

16. ಕಲ್ಯಾಣ ಇರುವ ಜಿಲ್ಲೆ - ಇಂದಿನ ಬಿಜಾಪುರ

17. ಬಸವೇಶ್ವರರು ಪ್ರಚುರ ಪಡಿಸಿದ ತತ್ವ - ಶಕ್ತಿ ವಿಶಿಷ್ಟಾದ್ವೈತ

18. ಬಸವಣ್ಣನ ತಂದೆ ತಾಯಿ - ಮಾದರಸ ಮತ್ತು ಮಾದಲಾಂಬಿಕೆ

19. ಅನುಭವ ಮಂಟಪದ ಸ್ಥಾಪಕರು - ಬಸವಣ್ಣ

20. ಕಲ್ಯಾಣಿ ಕಲಚೂರ್ಯರ ವಂಶ - ಹೈಹಯ ವಂಶ , ಇವರು ಮೂಲತಃ ಇತ್ತರ ಭಾರತದವರು

21. ಕಲಚೂರ್ಯರ ಆರಂಭದ ರಾಜಧಾನಿ - ಮಂಗಳವಾಡ

22. ಬಿಜ್ಜಳನ ಸೇನಾ ದಂಡ ನಾಯಕ - ಕಸಪಯ್ಯ

23. ಬಿಜ್ಜಳನನ್ನ ಕೊಂದವರು - ಜಗದೇವದಣ್ಣಾಯಕ ಬೊಮ್ಮರಸ ಮತ್ತು ಮಲ್ಲಿದೇವ

24. ಕಲಚೂರಿಗಳ ಕೊನೆಯ ಅರಸ – ಸಿಂಘಣ

**********************************************************************************************

# ಬಹಮನಿ ಸಾಮ್ರಾಜ್ಯ

1. ಬಹಮನಿ ಸಾಮ್ರಾಜ್ಯ ಕಾಲ - ಕ್ರಿ.ಶ.1347 - 1527

2. ಕರ್ನಾಟಕದಲ್ಲಿ ಸ್ಥಾಪಿತವಾದ ಮೊದಲ ಮುಸ್ಲಿಂ ಸಾಮ್ರಾಜ್ಯ - ಬಹಮನಿ ಸಾಮ್ರಾಜ್ಯ

3. ಸ್ಥಾಪಕ - ಅಲ್ಲಾವುದ್ದೀನ್ ಹಸನ್ ಗಂಗೂ ಮತ್ತೊಂದು ಹೆಸರು - ಜಾಫರ್ ಖಾನ್

4. ಬಹಮನಿ ಸಾಮ್ರಾಜ್ಯ ಸ್ಥಾಪನೆ - 1347 ಆಗಸ್ಟ್ 3

5. ಬಹಮನಿ ಸಾಮ್ರಾಜ್ಯ ಆರಂಭದ ರಾಜಧಾನಿ - ಗುಲ್ಬರ್ಗ

6. ಗುಲ್ಬರ್ಗದ ಪ್ರಾಚೀನ ಹೆಸರು - ಅಹ್ ಸಾನಾಬಾದ್

7. ನಂತರದ ರಾಜಧಾನಿ - ಬೀದರ್

8. ಸ್ಮಾರಕ ತಯಾರಿಸಲು ಬಳಸಿದ ಶಿಲ್ಪಿಗಳು - ಪರ್ಶಿಯಾದವರು

ಆಧಾರಗಳು

9. ತಾರಿಕ್ - ಏ - ಪೆರಿಸ್ತಾ - ಫೆರಿಸ್ತಾ

10. ಬಹರಾಮ್ - ಇ - ಮಾಸಿರ್ - ತಬತಬ

11. ಫುತ್ - ಉಸ್ - ಸಲಾತಿನ್ - ಇಸಾಮಿ

12. ತಬಕಾತ್ - ಇ - ಅತ್ತರಿ - ನಿಜಾಮುದ್ದೀನ್ ತಬಾಕಾತ್

13. ತಾಜ್ - ಕೀಸರ್ - ಉಲ್ ಮುಲ್ಕ್ - ಪೀರೋಜ್

14. ಮಾನಿಜರ್ - ಉಲ್ - ಇನ್ಶಾ - ಮಹಮ್ಮದ್ ಗವಾನ್

15. ನಿಕೆಟಿನ್ - ( ರಷ್ಯಾದ ಪ್ರವಾಸಿ ) ಬರವಣಿಗೆಗಳು

ರಾಜಕೀಯ ಇತಿಹಾಸ

16. ಅಲ್ಲಾವುದ್ದಿನ್ ಹಸನ್ ಗಂಗೂ ಬಹಮನ್ ಷಾ ( 1347 - 1358 ) ಬಹಮನಿ ವಂಶದ ಸ್ಥಾಪಕ .

17. ಎರಡನೇ ಅಲೆಗ್ಸಾಂಡರ್ ಎಂದು ನಾಣ್ಯ ಟಂಕಿಸಿದವನು - ಅಲ್ಲಾವುದ್ದಿನ್ ಹಸನ್ ಗಂಗೂ ಬಹಮನ್ ಷಾ

18. ಅಲ್ಲಾವುದ್ದಿನ್ ಹಸನ್ ಗಂಗೂ ಬಹಮನ್ ಷಾ ಈತನ ಆಸ್ಥಾನ ಕವಿ - ಇಸಾಮಿ

19. ಒಂದನೇ ಮಹಮ್ಮದ್ ಷಾ ( 1358 - 1375 ) ಈತ ಹಸನ್ ಗಂಗೂನ ಮಗ

20. ಒಂದನೇ ಮಹಮ್ಮದ್ ಷಾ ಈತ ಗುಲ್ಬರ್ಗದಲ್ಲಿ ಅತಿದೊಡ್ಡ " ಜೂಮ್ಮ ಮಸೀದಿ " ಯನ್ನು ನಿರ್ಮಿಸಿದ

21. ಒಂದನೇ ಮಹಮ್ಮದ್ ಷಾ ಈತನ ಆಸ್ಥಾನ ಕವಿಗಳು - ಜೈನುದ್ದೀನ್ ಪೌಲತಾಬಾದಿ ಹಾಗೂ ನಿಜಾಮುದ್ದೀನ್ ಬರಾನಿ

22. ಎರಡನೇ ಮಹಮ್ಮದ ಷಾ - ( 1377 - 1397 ) ಈತ ಅರಿಸ್ಟಾಟಲ್ ಎಂಬ ನಾಮಧ್ಯೇಯಕ್ಕೆ ಪಾತ್ರನಾದನು

23. ಎರಡನೇ ಮಹಮ್ಮದ ಷಾ ಈತನ ಆಸ್ಥಾನದ ಕವಿ - ಹಫೀಜ್

24. ಫೀರೋಜ್ ಷಾ ( 1397 - 1422 ) ಬಹಮನಿ ಸುಲ್ತಾನದಲ್ಲೆ ಅತ್ಯಂತ ಶ್ರೇಷ್ಠ ಸುಲ್ತಾನ್

25. ಫೀರೋಜ್ ಷಾ ಪರ್ತಾ ಎಂಬುವವಳನ್ನ ಮೋಹಸಿ ವಿವಾಹವಾದನು

26. ಫೀರೋಜ್ ಷಾ ಹಸನ್ ಗಿಲಾನಿ ಈತನ ಆಸ್ಥಾನದ ಶ್ರೇಷ್ಠ ಕವಿ

27. ಫೀರೋಜ್ ಷಾ ಈತನ ಮುಖಂಡತ್ವದಲ್ಲಿ ದೌಲತಾ ಬಾದಿನಲ್ಲಿ ಒಂದು ಖಗೋಳ ವೀಕ್ಷಾಣಾಲಯಾವನ್ನ ತೆರೆಯಲಾಯಿತು

28. ಫೀರೋಜ್ ಷಾ ಈತ ಷಾನು - ಗುಲ್ಬರ್ಗದಲ್ಲಿ ಒಂದು ಸುಂದರ ಜುಮ್ಮಾ ಮಸೀದಿ ಯನ್ನು ನಿರ್ಮಿಸಿದನು

29. ಫೀರೋಜ್ ಷಾ ಈತ ಭೀಮಾ ನದಿಯ ದಂಡೆಯ ಮೇಲೆ ತನ್ನ ಹೆಸರಿನಲ್ಲಿ ಫೀರೋಜ್ ಬಾದ್ ನಗರವನ್ನು ನಿರ್ಮಿಸಿದನು

30. 1 ನೇ ಅಹಮದ್ ಷಾ - ( 1422 - 1436 ) 14422 ರಲ್ಲಿ ರಾಜಧಾನಿಯನ್ನು ಗುಲ್ಬರ್ಗದಿಂದ ಬೀದರ್ ಗೆ ಬದಲಾಯಿಸಿದನು

31. 1 ನೇ ಅಹಮದ್ ಷಾ ಈತನನ್ನ ಜನರು ವಾಲಿ ಎಂದು ಕರೆಯುತ್ತದ್ದರು

32. 1 ನೇ ಅಹಮದ್ ಷಾ ಇವನ ಆಸ್ಥಾನದಲ್ಲಿ ಪರ್ಶಿಯನ್ ಕವಿ - ಅಜರಿ

33. ಈತನ ಕೃತಿ - ಬಹಮನ್ ನಾಮ

34. 2 ನೇ ಅಲ್ಲಾವುದ್ದೀನ್ ಅಹಮ್ಮದ್ ಷಾ ( 1436 1458 ) ಈತ ಬೀದರ್ ನಲ್ಲಿ ಒಂದು ವೈದ್ಯಲಾಯವನ್ನು ಸ್ಥಾಪಿಸಿದ

35. 2 ನೇ ಅಲ್ಲಾವುದ್ದೀನ್ ಅಹಮ್ಮದ್ ಷಾ ಈತ ಜಲೀಂ ( ದಬ್ಬಾಳಿಕೆ ರಾಜ ) ಎಂದೇ ಹೆಸರಾಗಿದ್ದ .

36. ಮಹಮ್ಮದ್ ಗವಾನ್ ( 1411 - 1481 ) 1411 ರಲ್ಲಿ ಪರ್ಶಿಯಾದ " ಗವಾನ್ " ( ಗಿಲಾನ್ ಗ್ರಾಮ ) ದಲ್ಲಿ ಜನಿಸಿದನು.

37. ಮಹಮ್ಮದ್ ಗವಾನ್ ಈತನ ಬಿರುದು - ಖ್ವಾಜಾ - ಇ - ಜಹಾನ್

38. ಮಹಮ್ಮದ್ ಗವಾನ್ ಈತ ಒರಿಸ್ಸಾದ ದಂಗೆಯನ್ನು ಅಡಗಿಸಿ ಅಲ್ಲಿನ ಹಿಂದೂ ದೇವಾಲಯವನ್ನು ಧ್ವಂಸ ಮಾಡಿ " ಘಾಜಿ " ಎಂಬ ಬಿರುದನ್ನ ಪಡೆದುಕೊಂಡನು

39. ಮಹಮ್ಮದ್ ಗವಾನ್ ಈತನ ಮತ್ತೊಂದು ಬಿರುದು - ಲಷ್ಕರೆ

40. ಮಹಮ್ಮದ್ ಗವಾನ್ ಈತ ಬೀದರ್ ನಲ್ಲಿ 1472 ರಲ್ಲಿ " ಗವಾನ್ ಮದರಸಾ " ಎಂಬ ಕಾಲೇಜನ್ನ ನಿರ್ಮಿಸಿದನು

41. ಮಹಮ್ಮದ್ ಗವಾನ್ ಈತ ರಿಯಾಜ್ - ಉನ್ - ಇನ್ಷಾ , ಮಾನುಜರುಲ್ ಇನ್ಷಾ ಮತ್ತು ದಿವಾನ್ - ಇ- ಲಷ್ಕರ್ ಎಂಬ ಕೃತಿಯನ್ನು ರಚಿಸಿದನು

42. ಏಪ್ರಿಲ್ 15 . 1481 ರಲ್ಲಿ ಗವಾನನಿಗೆ ಗಲ್ಲು ಶಿಕ್ಷೆಯಾಯಿತು

ಬಹಮನಿ ಸುಲ್ತಾನರ ಕೊಡುಗೆಗಳು

43. ಕೇಂದ್ರದಲ್ಲಿ ಸುಲ್ತಾನನೇ ಸರ್ವೋಚ್ಚ ಅಧಿಕಾರಿ -

44. ಸುಲ್ತಾನನ್ನ " ಭೂಮಿಯ ಮೇಲಿನ ದೇವರ ಅಧಿಕಾರಿ ' ಎಂದು ನಂಬಲಾಗಿತ್ತು .

ಮಂತ್ರಿ ಮಂಡಲ

45. ವಕೀಲ್ - ಉಸ್ - ಸುಲ್ತಾನ್ - ಪ್ರಧಾನ ಮಂತ್ರಿ

46. ಅಮೀರ್ - ಇ- ಜುಮ್ಲಾ - ಅರ್ಥ ಸಚಿವ

47. ವಜೀರ್ - ಇ- ಅಶ್ರಫ್ - ವಿದೇಶಾಂಗ ಮಂತ್ರಿ

48. ಅಮೀರ್ - ಉಲ್ - ಉಮ್ರಾ - ಮಹಾದಂಡ ನಾಯಕ

49. ವಜೀರ್ - ಇ - ಕುಲ್ - - ಪೇಶ್ವೆ ಮಂತ್ರಿ

50. ಖಾಜಿ - ನ್ಯಾಯಾಧೀಶ

51. ಸದರ್ ಇ - ಜಹಾನ್ - ನ್ಯಾಯಾಡಳಿತ ಮಂತ್ರಿ

52. ನಜೀರ್ - ಮುಖ್ಯ ಲೆಕ್ಕಾಧಿಕಾರಿ

53. ಕೊತ್ವಾಲ - ನರ ರಕ್ಷಕ

54. ಪ್ರಾಂತ್ಯದ ಹೆಸರು - ತರಫ್

55. ಸರಕಾರ - ಜಿಲ್ಲೆ

56. ರಗಣ - ತಾಲ್ಲೂಕ್

57. ಅನಿಫ್ - ಜಿಲ್ಲೆಯ ಅಧಿಕಾರಿ

58. ದೇಸಾಯಿ - ಪರಗಣಗಳ ಅಧಿಕಾರಿ

59. ಮುಕ್ಕಣಗೌಡ - ಗ್ರಾಮದ ಅಧಿಕಾರಿ

60. ಮಕ್ ದಾಬ್ - ಶಿಕ್ಷಣ ಕೇಂದ್ರ

61. ಫಿಕಾರ್ ನಾಮಾ ಕೃತಿಯ ಕರ್ತೃ - ಬಂದೇ ನವಾಜ್

62. 1 ನೇ ಮಹಮ್ಮದ್ ಷಾ ನಿರ್ಮಿಸಿದ ಜುಮ್ಮಾ ಮಸೀದಿಯ ಶಿಲ್ಪಿ - ರಫಿ ಕ್ವಾಜಿನ್

Extra Tips

63. ಇವರ ಕಾಲದ ಶೈಲಿಯನ್ನು “ ಸಾರ್ಸನಿಕ್ ಶೈಲಿ ” ಎಂದು ಕರೆಯಲಾಗಿದೆ

64. ಗುಲ್ಬರ್ಗದ ಕೋಟೆಯನ್ನು ಮೊದಲೇ ಅಲ್ಲಾವುದ್ದೀನನ ಕಾಲದಲ್ಲಿಲ ನಿರ್ಮಿಸಲಾಯಿತು

65. ಗುಲ್ಬರ್ಗಾದ ಸಮಾಧಿಗಳಲ್ಲಿ ಪ್ರಸಿದ್ಧವಾದುದು - ಬಂದೇ ನವಾಜ್ ದರ್ಗಾ

66. ಮಹಮ್ಮದ್ ಗವಾನ್ ನು 1472 ರಲ್ಲಿ ನಿರ್ಮಿಸಿದ ಮದ್ರಸಾ ಕಾಲೇಜು ಭಾರತೀಯ ಮತ್ತು ಸರ್ಸಾನಿಕ್ ಶೈಲಿಯ ಸಂಗಮವಾಗಿದೆ

67. ಮಹಮ್ಮದ್ ಗವಾನ್ ನ ಕಾಲದಲ್ಲಿ ಆರಂಭಿಸಿಲಾದ ಮಿಶ್ರ ಲೋಹದ ಕಲೆ - ಬೀದರಿ ಕಲೆ

68. ಬೀದರಿ ಕಲೆಯಲ್ಲಿ ಅನುಸರಿಸಲಾದ ಬೆಳ್ಳಿಯ ರೇಖೆಗಳನ್ನು - ಟೆಹ್ನಿಷಾನ್ ಎಂದು ಕರೆಯುವರು

69. ಬೀದರಿ ಕಲೆಯಲ್ಲಿ ಉಬ್ಬಾದ ರೇಖೆಗಳನ್ನು - ಜರ್ನಿಪಾನ್ ಎಂದು ಕರೆಯುವರು

70. ಅಮೀರ್ ಉಲ್ ಉಮ್ರಾ - ಕೇಂದ್ರ ಸೇನಾಪತಿ

71. ಲಷ್ಕರ್ ಸೇನಾ ವಸತಿ ಪ್ರದೇಶಗಳನ್ನ ನೋಡುತ್ತಿದವನು

72. ತೋಶಕ್ ಖಾನ್ - ಶಸ್ತ್ರಾಸ್ತ್ರ ಮತ್ತು ಸಮವಸ್ತ್ರ ಕಛೇರಿ

73. ಫಿಕಾರ್ ಘರ್ - ಸುಲ್ತಾನನ ಬೇಟೆ ಸಲಕರಣೆ ಒದಗಿಸುವ ಕಛೇರಿ

74. ಮೀರ್ ಭಕ್ಷಿ ಮತ್ತು ಸದ್ರುಷಾ ಶರೀಫ್ - ಅರಬ್ಬಿ ಭಾಷೆಯ ಪಂಡಿತರು

75. ಅಲಿಮುದ್ದೀನ್ ಮತ್ತು ಹಕೀಂ ನಾಸಿರುದ್ದೀನ್ - ಹೆಸರಾಂತ ಆಸ್ಥಾನ ವೈದ್ಯರು

76. ಇಬ್ರಾಹಿಂ ನಾಮ ಕೃತಿಯ ಕ್ರತೃ - ಅಬ್ದುಲ್

77. ಹಸನ್ ಗಂಗು ಗುಲ್ಬರ್ಗಕ್ಕೆ ಇಟ್ಟ ಹೆಸರು - ಹಸನ್ ಬಾದ್

78. ದಕ್ಷಿಣ ಭಾರತದಲ್ಲಿ ಮೊದಲು ಸಂಘಟಿತ ಆಡಳಿತ ಸ್ಥಾಪಿಸಿದ ಮುಸ್ಲಿಂ - ಮಹಮ್ಮದ್ ಬಿನ್ ತುಘಲಕ್

79. ಹಸನ್ ಗಂಗು - ಪರ್ಶಿಯಾದವನು

80. ಹಸನ್ ಗಂಗು - ಮಹಮ್ಮದ್ ಬಿನ್ ತುಘಲಕ್ ನ ಅಮೀರನಾಗಿದ್ದ

81. ಮಹಮ್ಮದ್ ಗವಾನ್ ನ ತಂದೆಯ ಹೆಸರು - ಜಲಾಲುದ್ದೀನ್ ಮಹಮ್ಮದ್

82. ಬಹಮನಿ ಸುಲ್ತಾನರ ಪ್ರಮುಖ ವಾಸ್ತುಶಿಲ್ಪ ಕೇಂದ್ರಗಳು - ಬೀದರ್ ಮತ್ತು ಗುಲ್ಬರ್ಗ

83. ಮಹಮ್ಮದ್ ಗವಾನ್ ನ ಮೊದಲ ಹೆಸರು - ಮಹಮ್ಮದ್ ಉದಿನ್ - ಅಹಮ್ಮದ್

84. ಬಹಮನಿ ರಾಜ್ಯದ ಕೊನೆಯ ಸುಲ್ತಾನ - ಕಲೀಮುಲ್ಲ

85. ಬಹಮನಿ ರಾಜ್ಯದಿಂದ ಹೊರಗೆ ಬಂದ ಮೊದಲ ಷಾಹಿ ರಾಜ್ಯ - ಬಿರಾರ್

86. ಬಹಮನಿ ರಾಜ್ಯದಿಂದ ಹೊರಗೆ ಬಂದ ಎರಡನೇ ಷಾಹಿ ರಾಜ್ಯ - ಬಿಜಾಪುರ

87. ಬಹಮನಿ ಸುಲ್ತಾನ ಆಡಳಿತ ಭಾಷೆ – ಪರ್ಶಿಯನ್

*************************************************************************************

# ಕರ್ನಾಟಕದ ಸ್ವಾತಂತ್ರ್ಯ ಹೋರಾಟ

1920 ರಿಂದಲೂ ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ನಡೆಸಿದ ಧೀಮಂತ ಹೋರಾಟದಲ್ಲಿ ಏಕೀಕರಣಕ್ಕೆ ಮುಂಚಿನ ವಿಭಜಿತ ಕರ್ನಾಟಕದ ಜನತೆಯ, ಸಂಸ್ಥಾನಗಳ ಪ್ರಜೆಗಳ , ರೈತರ , ಕಾರ್ಮಿಕರ, ವಿದ್ಯಾರ್ಥಿಗಳ ಪಾತ್ರ ಚರಿತ್ರಾರ್ಹವಾಗಿತ್ತು . ಕರ್ನಾಟಕದ ಜನತೆ ಕೂಡಾ ಸ್ವಾತಂತ್ರ್ಯಕ್ಕಾಗಿ ದುಬಾರಿ ಬೆಲೆತೆತ್ತಿದ್ದಾರೆ . ಕನ್ನಡಿಗರ - ಕಾರ್ಮಿಕರ ಪಾತ್ರ ಹೆಮ್ಮೆ ಪಡುವಂಥಾದ್ದಾಗಿತ್ತು . ಮಹಾತ್ಮಾಗಾಂಧಿಯರ ಅಹಿಂಸಾ ತತ್ವವನ್ನು ನೆನಸುತ್ತಾ ಬ್ರಿಟಿಷ್ ಗುಲಾಮಗಿರಿಯನ್ನು ನಾಶಗೊಳಿಸುವ ಸಲುವಾಗಿ ಕರ್ನಾಟಕದ ರೈತರೂ , ಕಾರ್ಮಿಕರೂ ಹಿಂಸಾತ್ಮಕ ದಾರಿಯನ್ನೂ ಹಿಡಿಯಬೇಕಾಯಿತು. ಮುಷ್ಕರ , ಹರತಾಳಗಳಿಂದಲೇ ಸಂತೃಪ್ತರಾಗದೆ ರೈಲ್ವೆ ಫಿಷ್ಪ್ಲೇಟ್ ತೆಗೆಯುವ, ತಂತಿ ಕತ್ತರಿಸುವ , ರೈಲ್ವೆ ಸ್ಟೇಷನ್ಗಳಿಗೆ ದಾಳಿ ಮಾಡುವ , ಕಂದಾಯ ಕಛೇರಿಗಳನ್ನು ಆಕ್ರಮಿಸುವ , ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳುವ ಮಟ್ಟಕ್ಕೂ ಹೋಗಿದ್ದರೆಂಬುದನ್ನು ನೆನಪಿಸಿ ಕೊಂಡರೆ ಛಿದ್ರ ವಿಚಿದ್ರವಾಗಿದ್ದ ಕನ್ನಡಿಗರಲ್ಲಿ ರಾಜ ಮಹಾರಾಜರ, ಪಾಳೆಯಗಾರರ, ದೇಸಾಯಿ, ಜಹಗೀರದಾರ , ಜಮೀನ್ದಾರರ ಹಿಡಿತದಲ್ಲಿದ್ದ ಜನ ತಮ್ಮ ದೇಶಪ್ರೇಮವನ್ನು ತೋರ್ಪಡಿಸಿದ ರೀತಿ ವ್ಯಕ್ತಮಾಡಿದ ಧೈರ್ಯ ನೆನಪಿಸಿ ಕೊಂಡರೆ ಇಂದಿಗೂ ಧಮನಿಗಳಲ್ಲಿ ಬಿಸಿರಕ್ತ ಚಿಮ್ಮುತ್ತದೆ .

ಯಾವುದೇ ದೇಶದ ಸ್ವಾತಂತ್ರ್ಯ - ಸ್ವಾತಂತ್ರ್ಯ ಹೋರಾಟ ಬಹು ದುಬಾರಿ . ವಿದ್ಯಾರ್ಥಿಗಳು ಶಾಲೆ- ಕಾಲೇಜು ಬಿಟ್ಟು ಹೊರನಡೆದರು. ಕಾರ್ಮಿಕರು ಕಾರ್ಖಾನೆ ತ್ಯಜಿಸಿದರು . ರೈತ ಭೂಮಿಯ ಚಿಂತೆ ದೂರಮಾಡಿದ . ಸಾರ್ವಜನಿಕರು ದೇಶವೇ ಸಂಪತ್ತು ಎಂದು ಹೇಳಿ ಪೋಲಿಸರ- ಮಿಲಿಟರಿಯ ಲಾಠಿಯೇಟು ಗುಂಡೇಟುಗಳನ್ನೆಲ್ಲ ಎದುರಿಸಿದರು. ರಕ್ತ ಸುರಿಸಿದರು , ಸೆರೆಮನೆ ಸೇರಿದರು, ಹೆಣವಾಗಿ ಬಿದ್ದರು. ನೌಕರಿ ಹೋಯಿತು, ಹೊಲ ಇಲ್ಲದಂತಾಯಿತು, ಮನೆಮಠಗಳೆಲ್ಲ ಕೈದಕ್ಕದಾದವು . ಆದರೂ ಕರ್ನಾಟಕದ ಜನತೆ ಅಂಜಲಿಲ್ಲ . ಹಿಂಜರಿಯಲಿಲ್ಲ. ಅವರ ಗುರಿ ಒಂದೇ ಆಗಿತ್ತು - ಬ್ರಿಟಿಷರನ್ನು ದೇಶಬಿಟ್ಟು ತೊಲಗಿಸುವುದು. ಸ್ವಾತಂತ್ರ್ಯ ಗಳಿಸುವುದು . ದೇಶದ ಸ್ವಾತಂತ್ರ್ಯವೇ ನಮ್ಮ ಹೊಲ ಉಳಿಸೀತು , ಹೊಲ ಹಂಚಿಕೊಟ್ಟೀತು, ನಮ್ಮ ಕಾರ್ಖಾನೆ ನೌಕರಿ ರಕ್ಷಿಸೀತು , ಹೊಸ ನೌಕರಿ ಸೃಷ್ಟಿಸೀತು ,

ಮಕ್ಕಳ ಬೌದ್ಧಿಕ ವಿಕಾಸಕ್ಕೆ ಅವಕಾಶ ಮಾಡಿಕೊಟ್ಟೀತು, ದೇಶೀ ಕೈಗಾರಿಕೆಗಳ ಬೆಳವಣಿಗೆ ಮಾಡೀತು , ನಾಗರೀಕ ಹಕ್ಕು ದೊರಕೀತು , ಜನರ ಸುಲಿಗೆ ನಿಲ್ಲಿಸೀತು , ದೇಶದ ಅಭಿವೃದ್ಧಿಯಾದೀತು, ಕರ್ನಾಟಕವನ್ನೊಳಗೊಂಡ ಭಾರತ ಜಗತ್ತಿನ ಅಭಿವೃದ್ಧಿ ಶೀಲ ರಾಷ್ಟ್ರಗಳ ಸಾಲಿನಲ್ಲಿ ಹೆಮ್ಮರವಾಗಿ ಮೆರೆದೀತು ಎಂಬುದಾಗಿತ್ತು. ಆಗಸ್ಟ್ 15 , 1947ರಂದು ಆಂಗ್ಲ ಬಾವುಟ ಇಳಿಸಿ ರಾಷ್ಟ್ರೀಯ ಧ್ವಜ ಹಾರಿಸಿದ್ದೆವು. ಆದರೆ 47 ವರ್ಷಗಳಲ್ಲಿ ನಮ್ಮೆಲ್ಲರ ಕನಸು ಪೂರ್ಣವಾಗಿ ನನಸಾಗಲಿಲ್ಲ . ಮಾತ್ರವಲ್ಲ ಈಗಿರುವ ಕಾಂಗ್ರೆಸ್ ಸರಕಾರದ ಪ್ರಧಾನ ಮಂತ್ರಿ , ನರಸಿಂಹರಾಯರು 47 ವರ್ಷಗಳ ಮುಂಚೆ ಗಳಿಸಿದ್ದ ಸ್ವಾತಂತ್ರ್ಯಕ್ಕೇನೆ ಅಪಾಯ ತಂದೊಡ್ಡಿದ್ದಾರೆ . ಅಂದು ಬ್ರಿಟೀಷ್ ಗುಲಾಮರಾಗಿ ಅವರ ವಿರುದ್ಧ ಸಮರ ಹೂಡಲಾಯಿತು . ಇಂದು ಅಮೇರಿಕನ್ ಸಾಮ್ರಾಜ್ಯಶಾಹಿಯ ಐಎಂಎಫ್ -ವಿಶ್ವಬ್ಯಾಂಕಿನ ಗುಲಾಮಗಿರಿ ಅವುಗಳ ವಿರುದ್ಧ ಸಮರ - ಎಡಪಕ್ಷಗಳು, ಸಂಘಟಿತ ಕಾರ್ಮಿಕವರ್ಗ , ರೈತ ವಿದ್ಯಾರ್ಥಿ , ಯುವಜನತೆ ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ , ಅಮೇರಿಕನ್ ಸಾಮ್ರಾಜ್ಯಶಾಹಿಗೆ ಶರಣಾಗುವುದರ ವಿರುದ್ಧ ಸಮರ ಸಾರಿದ್ದಾರೆ, ಹೋರಾಟ ನಡೆಸಿದ್ದಾರೆ . ಕಾಯಿದೆ ಭಂಗ ಚಳುವಳಿ ನಡೆಸಿದ್ದಾರೆ . ಅಗತ್ಯ ಬಿದ್ದರೆ ಬ್ರಿಟಿಷರ ವಿರುದ್ಧ ಹಿಡಿದ ಹೋರಾಟದ ದಾರಿ ಹಿಡಿಯಲು ಸಿದ್ಧರಾಗುತ್ತಿದ್ದಾರೆ . ಇಂಥ ಪರಿಸ್ಥಿತಿಯಲ್ಲಿ ಕನ್ನಡಿಗರು ಬ್ರಿಟಿಷರ ವಿರುದ್ಧ ನಡೆಸಿದ್ದ ಹೋರಾಟಗಳ ಕೆಲವಂಶಗಳನ್ನು ನೆನಪಿಸೋಣ . ಅವುಗಳಿಂದ ಸ್ಪೂರ್ತಿ ಪಡೆಯೋಣ.

1920 ರಿಂದ ಆರಂಭ

1942ರ ಕರ್ನಾಟಕವನ್ನು ವೀಕ್ಷಿಸಿದರೆ ಇಂದಿನ 20 ಜಿಲ್ಲೆಗಳ ಪೈಕಿ 7 ಜಿಲ್ಲೆಗಳು ಮತ್ತು ಬೆಂಗಳೂರು ಕಂಟೋನ್ಮೆಂಟ್, ಬ್ರಿಟಿಷರ ಆಡಳಿತದಲ್ಲಿದ್ದವು. ಧಾರವಾಡ , ಬೆಳಗಾವ , ಕಾರವಾರ , ಬಿಜಾಪುರ , ಮುಂಬಯಿ ಪ್ರಾಂತದಲ್ಲೂ , ಮಂಗಳೂರು , ಬಳ್ಳಾರಿ ಮದ್ರಾಸ್ ಪ್ರಾಂತದಲ್ಲೂ ಗುಲ್ಬರ್ಗ , ಬೀದರ , ರಾಯಚೂರು, ಹೈದರಾಬಾದ ಸಂಸ್ಥಾನದಲ್ಲೂ ಸೇರಿಕೊಂಡಿದ್ದವು . ಕೊಡಗು ಪ್ರತ್ಯೇಕವಾಗಿಯೆ ಇತ್ತು . ಇವುಗಳಲ್ಲದೆ ಜಮಖಂಡಿ ಮುಧೋಳ, ರಾಮದುರ್ಗ , ಸಂಡೂರು , ವಡಗಾವ (ಕುರುಂದವಾಡ ), ಸವಣೂರು , ಸಾಂಗ್ಲಿ, ಮಿರಜ , ಕೋಲಾಪುರ, ಅವುಂದ ಮೊದಲಾದ ಸಂಸ್ಥಾನಗಳಿದ್ದವು . ಕೊನೆಯ 5 ಸಂಸ್ಥಾನಗಳು ಮಹಾರಾಷ್ಟ್ರದಲ್ಲಿದ್ದರೂ ಅವುಗಳ ಪ್ರದೇಶಗಳು ಮುಂಬಯಿ ಕರ್ನಾಟಕದಲ್ಲಿದ್ದವು . ಈ ಎಲ್ಲಾ ಪ್ರದೇಶಗಳಲ್ಲಿಯ ಸ್ವಾತಂತ್ರ್ಯ ಹೋರಾಟ ಒಂದೇ ತೆರನಾಗಿರದಿದ್ದರೂ ಕೂಡ ರಾಷ್ಟ್ರೀಯತೆಯ ಭಾವನೆ ಮಾತ್ರ ದೇಶದ ಇತರ ಪ್ರದೇಶಗಳಿಗೆ ಸರಿಸಮಾನವಾಗಿತ್ತು . 1885 ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ನ ಪ್ರಥಮ ಸಮ್ಮೇಳನ ಮುಂಬಯಿಯಲ್ಲಿ ನಡೆದಾಗಿನಿಂದಲೂ ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕದ ಸಂಪರ್ಕ ಉಂಟಾಗಿತ್ತು . ಬಂಗಾಳದ ವಿಭಜನೆಯಾದಾಗ ' ವಂಗ ಭಂಗ 'ದ ವಿರುದ್ಧ ಮುಂಬಯಿ ಕರ್ನಾಟಕದ ಹಲವೆಡೆ ಪ್ರತಿಭಟನಾ ಸಭೆಗಳು ನಡೆದವು. 1920- 21 ರಲ್ಲಿ ಸ್ವಾತಂತ್ರ್ಯ ಚಳುವಳಿ ವಿಶಾಲವಾಗಿ ಹಬ್ಬಿತು . ಕೋರ್ಟುಗಳಿಗೆ ಬಹಿಷ್ಕಾರ ಹಾಕಬೇಕೆಂಬ ಕರೆಗೆ ಹೆಚ್ಚಿನ ಬೆಂಬಲ ಸಿಕ್ಕಿತು. ಜೊತೆಯಲ್ಲಿಯೇ ಸಭೆ , ಮೆರವಣಿಗೆ ,

ವಿದೇಶಿ ವಸ್ತುಗಳ ದಹನ , ಶೇಂದಿ ಅಂಗಡಿಗಳ ಪಿಕೆಟಿಂಗ್ ನಡೆಯಿತು . ಧಾರವಾಡ ಮೊದಲಾದ ಕಡೆ ಪೋಲಿಸರ ಗೋಲಿಬಾರ್ನಿಂದಾಗಿ ಹಲವಾರು ಜನ ಅಸುನೀಗಿದರು . ' ಪ್ರಿನ್ಸ್ ಆಫ್ ವೇಲ್ಸ್' ನ ಸಂದರ್ಶನವನ್ನು ಪ್ರತಿಭಟಿಸಿದಾಗ ಗೋಲಿಬಾರಿನಿಂದ

ಬೆಂಗಳೂರು ಕಂಟೋನ್ಮೆಂಟ್ನಲ್ಲಿ ಇಬ್ಬರು ಖಿಲಾಫತ್ ಸ್ವಯಂ ಸೇವಕರು ಕೊಲ್ಲಲ್ಪಟ್ಟರು (ನವೆಂಬರ್ 18 , 1928). ರಾಜ್ಯದಾದ್ಯಂತ ಹಲವಾರು ಮುಖಂಡರ ಬಂಧನವಾಯಿತು . ಕಾರವಾರ ಜಿಲ್ಲೆಯಲ್ಲಿ ಹೆಡ್ ಮಾಸ್ತರುಗಳನ್ನೊಳಗೊಂಡು ಹಲವಾರು ಶಿಕ್ಷಕರು ತಮ್ಮ ಹುದ್ದೆಗಳಿಗೆ ರಾಜಿನಾಮೆ ಕೊಟ್ಟು ವಿದ್ಯಾರ್ಥಿಗಳ ಜೊತೆಯಲ್ಲಿ ಚಳುವಳಿಯಲ್ಲಿ ಧುಮುಕಿದರು . ಬಳ್ಳಾರಿಯೂ ಕಾರವಾರದ ದಾರಿ ಹಿಡಿಯಿತು . 1920- 22 ಪ್ರಾರಂಭದ ಚಳುವಳಿಗೆ ಕರ್ನಾಟಕದ ಹೆಚ್ಚಿನ ಜಿಲ್ಲೆಗಳಲ್ಲಿ ಉತ್ಸಾಹಪೂರಿತ ಬೆಂಬಲ ಲಭ್ಯವಾಯಿತು.

## ಚಳುವಳಿಗೆ ಹೊಸ ರೂಪ

1923 ರಿಂದ 1930 ರವರೆಗೆ ದೇಶದ ಇತರ ಭಾಗಗಳಲ್ಲಿ ಮುಖ್ಯವಾಗಿ ಪಂಜಾಬ್, ಉತ್ತರ ಪ್ರದೇಶ , ಬಂಗಾಲ, ಮದ್ರಾಸ್ , ಮುಂಬೈ ಮೊದಲಾದೆಡೆಗಳಲ್ಲಿ ಕಮ್ಯೂನಿಸ್ಟ್ ಪಕ್ಷದ , ಇತರ ಉಗ್ರವಾದಿ ಗುಂಪುಗಳ ಚಟುವಟಿಕೆಗಳು ಮುಂದುವರಿದವು. 1930 ರಿಂದ ಕರ್ನಾಟಕದಲ್ಲಿ ಚಳುವಳಿಗೆ ಹೊಸರೂಪ ಬಂತು. ಕಾರವಾರ ಜಿಲ್ಲೆಯ ಅಂಕೋಲದಲ್ಲಿ ಏಪ್ರಿಲ್ 4 , 1930ರಂದು 30 ,000 ಜನ ಉಪ್ಪು ಸತ್ಯಾಗ್ರಹ ಪ್ರಾರಂಭಿಸಿದರು . ಅದು 45 ದಿವಸ ನಡೆಯಿತು . ಅದು ಮಂಗಳೂರು , ಧಾರವಾಡ ಬಿಜಾಪುರ, ಕಾರವಾರ ಜಿಲ್ಲೆಗಳಿಗೆ ಹಬ್ಬಿತು . ಸತ್ಯಾಗ್ರಹಿಗಳು ಗೋವದಿಂದ ಉಪ್ಪು ತರಿಸಿ ಮಾರಾಟ ಮಾಡಿ ಎಕ್ಸೈಸ್ ಕಾನೂನನ್ನು ಮುರಿದರು . ಅನಂತರ ಫಾರೆಸ್ಟ್ ಸತ್ಯಾಗ್ರಹ, ಕರ ನಿರಾಕರಣೆ ಚಳುವಳಿ, ದಾರುಬಂದಿ ಚಳುವಳಿ ನಡೆದು ಸಾವಿರಾರು ಜನ ಸೆರೆಮನೆ ಸೇರಿದರು . ಸಿರ್ಸಿ , ಸಿದ್ದಾಪುರ, ಅಂಕೋಲದಲ್ಲಿ 1934ರಲ್ಲಿ 800 ಕ್ಕಿಂತಲೂ ಹೆಚ್ಚು ಕುಟುಂಬಗಳ ಭೂಮಿ, ಮನೆ ಮಠಗಳನ್ನೆಲ್ಲ ಸರ್ಕಾರ ವಶಪಡಿಸಿಕೊಂಡು ಅವರನ್ನೆಲ್ಲ ನಿರ್ಗತಿಕರನ್ನಾಗಿ ಮಾಡಿತು. 1930-34 ರವರೆಗಿನ ಚಳುವಳಿ ಕಾರವಾರ ಜಿಲ್ಲೆಯಲ್ಲಿ ಅತಿಹೆಚ್ಚು ಪ್ರಭಾವಿತವಾಗಿತ್ತು . ಮುಂದೆ 1939- 40ರಲ್ಲಿ ಪ್ರಾರಂಭವಾದ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದ ರೈತ ಚಳುವಳಿಗೆ ನಾಂದಿಹಾಕಿತು . 1920- 1934 ರವರೆಗೆ ನಡೆದ ಚಳುವಳಿಗೆ ಪ್ರೋತ್ಸಾಹ ಧೈರ್ಯ ತುಂಬಿದ ಪತ್ರಿಕೆಗಳೆಂದರೆ ಬಾಲಗಂಗಾಧರ ತಿಲಕ್ ಅವರ ಮರಾಠಿ ದಿನ ಪತ್ರಿಕೆ ' ಕೇಸರಿ' ಮತ್ತು ' ಮರಾಠ' ಹಾಗೆಯೇ ಕನ್ನಡ ಪತ್ರಿಕೆಗಳಾದ ಮಂಗಳೂರಿನ " ಸ್ವದೇಶಾಭಿಮಾನಿ" (1907) ಅಗಡಿಯ " ಸುಭೋಧ ಚಂದ್ರಿ (1907) ಧಾರವಾಡದ " ಕರ್ನಾಟಕ ವೃತ್ತಾ " (1895) ರಾಜ ಹಂಸ (1881), ಹುಬ್ಬಳ್ಳಿಯ "ಕನ್ನಡ ಕೇಸರಿ" (1906) ಮೈಸೂರಿನ " ವೃತ್ತಾಂತ ಚಿಂತಾಮಣಿ " (1885). ಅನಂತರ ಹುಬ್ಬಳ್ಳಿಯ " ಸಂಯುಕ್ತ ಕರ್ನಾಟಕ " .

ಕಾರವಾರ ಜಿಲ್ಲೆಯಲ್ಲಿ ಉಪ್ಪು ಸತ್ಯಾಗ್ರಹ, ಫಾರೆಸ್ಟ್ ಸತ್ಯಾಗ್ರಹ, ಶೇಂದಿ ಅಂಗಡಿ ಪಿಕೆಟಿಂಗ್ , ಶಿಕ್ಷಕರ ಸಾಮೂಹಿಕ ರಾಜಿನಾಮೆ , ವಿದ್ಯಾರ್ಥಿಗಳ ಹರತಾಳದ ರೂಪ ತಾಳಿದರೆ , ಬೆಳಗಾವ , ಧಾರವಾಡ , ಬಿಜಾಪುರಗಳಲ್ಲಿ ತೀವ್ರ ಹಿಂಸಾತ್ಮಕ , ಗೆರಿಲ್ಲಾ ರೀತಿಯ ಹೋರಾಟ ನಡೆಯಿತು . 15 ರಿಂದ 25ರ ಹರೆಯದ ಯುವಕರು, ಹಳ್ಳಿ ರೈತರ ತಂಡ ಶಿಸ್ತು ಬದ್ಧವಾಗಿ ಟೆಲಿಗ್ರಾಂ ತಂತಿ ಕತ್ತರಿಸುವ , ರೈಲ್ವೆ ಹಳಿ ಕೀಳುವ , ಸ್ಟೇಶನ್ಗಳನ್ನು ಆಕ್ರಮಿಸುವ ಕೆಲಸಗಳನ್ನು ವ್ಯವಸ್ಥಿತವಾಗಿ ನಡೆಸಿರುವುದು ಗಮನಿಸತಕ್ಕದ್ದು . ಬಿಜಾಪುರ ಜಿಲ್ಲೆಯ ಮಿಂಚಿನಾಳ ರೈಲ್ವೆ ಸ್ಟೇಶನಿನ ಮೇಲೆ ನಡೆದ ಆಕ್ರಮಣ ಇಂದಿಗೂ ನನ್ನ ಮನದಲ್ಲಿ ಹಸಿಯಾಗಿಯೇ ಉಳಿದಿದೆ . ಸತ್ಯಾಗ್ರಹಿಗಳಲ್ಲಿದ್ದ ಹುಮ್ಮಸ್ಸು , ಧೈರ್ಯ, ಸಮಯ ಪ್ರಜ್ಞೆ, ಕರ್ತವ್ಯ ನಿಷ್ಠೆ , ಹೊತ್ತ ಜವಾಬ್ದಾರಿಯನ್ನು ಸಕಾಲದಲ್ಲಿ ಮುಗಿಸಬೇಕೆಂಬ ನಿರ್ಧಾರಗಳು ಬ್ರಿಟಿಷರ ವಿರುದ್ಧ ಚಳುವಳಿಯ ಮಹತ್ವ ಗ್ರಾಮಾಂತರ ಪ್ರದೇಶದ ಯುವಕರಲ್ಲಿ ಕೂಡ ಎಷ್ಟು ಆಳವಾಗಿ ಬೇರೂರಿದೆಯೆಂದು ಕಂಡು ಬರುತ್ತದೆ . ಇಂಥ ಹೋರಾಟಗಳ ಪ್ರತಿಫಲವಾಗಿಯೇ ಬಿಜಾಪುರ ನಗರ ಮತ್ತು ಹಳ್ಳಿ ಪ್ರದೇಶದಲ್ಲಿ ಭೂಮಾಲಿಕರ ವಿರುದ್ಧ ಭೂಮಿಗಾಗಿ , ಭೂಮಿಯ ಹಕ್ಕಿಗಾಗಿ ಹೋರಾಟ ನಡೆಸಲು ಸಾಧ್ಯವಾಗಿದೆ.

## ಮೈಸೂರು ಸಂಸ್ಥಾನದಲ್ಲಿ ಚಳುವಳಿ

ಕರ್ನಾಟಕದ ಇತರ ಭಾಗಗಳಲ್ಲಿ ರಾಷ್ಟ್ರೀಯ ಚಳುವಳಿ ಪ್ರಾರಂಭವಾಗಿ ತೀವ್ರಗೊಳ್ಳುತ್ತಿರುವಾಗಲೇ ಮೈಸೂರು , ಕೊಡಗು ಜಿಲ್ಲೆಗಳಲ್ಲಿಯೂ ರಾಷ್ಟ್ರೀಯ ಚಳುವಳಿ ಪ್ರಾರಂಭವಾಗಿತ್ತು . ಮುಂಬಯಿ ಕರ್ನಾಟಕದಲ್ಲಿ ಮಧ್ಯಮವರ್ಗದ ಮತ್ತು ರೈತರ ಪಾತ್ರ ಪ್ರಧಾನವಾಗಿದ್ದರೆ ಹಳೇ ಮೈಸೂರಿನಲ್ಲಿ ಮಧ್ಯಮವರ್ಗ ಮತ್ತು ರೈತರ ಜೊತೆಯಲ್ಲಿ ಕಾರ್ಮಿಕರ ವಿದ್ಯಾರ್ಥಿಗಳ ಪಾತ್ರ ಪ್ರಾಧಾನವಾಗಿತ್ತೆಂಬುದು ಗಮನಾರ್ಹ. ಮಂಗಳೂರು ಜಿಲ್ಲೆಯಲ್ಲಿ ಕೂಡ ವಿದ್ಯಾರ್ಥಿಗಳ , ಕಾರ್ಮಿಕರ ಪಾಲ್ಗೊಳ್ಳುವಿಕೆ ಇತ್ತು . ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಗಾಗಿ ಚಳುವಳಿ ಅದರ ಜೊತೆಯಲ್ಲಿಯೇ ದೇಶಕ್ಕಾಗಿ ಸ್ವಾತಂತ್ರ್ಯ ಚಳುವಳಿಯ ಕಿಡಿ 1920- 26ರಲ್ಲಿ ಪ್ರಾರಂಭವಾಗಿತ್ತು . ಮಹಾರಾಜರ ವಿರುದ್ಧ ಹೋರಾಟ ಒಂದೆಡೆಯಾದರೆ ಬ್ರಿಟಿಷರ ವಿರುದ್ಧ ಹೋರಾಟ ಮತ್ತೊಂದೆಡೆ . ಈ ಎರಡೂ ಹೋರಾಟಗಳು ಒಟ್ಟಾಗಿಯೇ ನಡೆಸಲ್ಪಟ್ಟವು . ಜವಾಬ್ದಾರಿ ಸರಕಾರಗಳ ರಚನೆಗಾಗಿ ಎಲ್ಲ ಸಂಸ್ಥಾನಗಳಲ್ಲೂ ಚಳುವಳಿ ನಡೆಯಿತು . ಇದಕ್ಕೆಲ್ಲ ಸ್ಫೂರ್ತಿ ನೀಡಿದ್ದು ಸ್ವಾತಂತ್ರ್ಯ ಚಳುವಳಿ. ಸಂಸ್ಥಾನಗಳೆಲ್ಲ ಬ್ರಿಟಿಷ್ ಭಾರತದಲ್ಲೇ ವಿಲೀನಗೊಳ್ಳಬೇಕೆಂಬ ನಿರ್ಣಯ ಎಲ್ಲ ಸಂಸ್ಥಾನಗಳ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ನಿರ್ಧರಿಸಲಾಗಿತ್ತು . ಅದನ್ನು ಕಾರ್ಯರೂಪದಲ್ಲಿ ತರುವ ಪ್ರಯತ್ನ ಮೈಸೂರು ಸಂಸ್ಥಾನದಲ್ಲಿ ನಡೆಯಿತು . ದೇಶದ ಸ್ವಾತಂತ್ರ್ಯ ಚಳುವಳಿಯ ಪ್ರಥಮ ಹೆಜ್ಜೆ ಕಾಂಗ್ರೆಸ್ ಧ್ವಜ ಹಾರಿಸುವುದಾಗಿತ್ತು. ಬ್ರಿಟಿಷರು ಅದಕ್ಕೆ ಅವಕಾಶ ಮಾಡಿಕೊಡುತ್ತಿರಲಿಲ್ಲ . ಪೋಲೀಸರ ಪ್ರತಿಬಂಧ ಮುರಿದು ಧ್ವಜಾರೋಹಣ. ಆಗ ದಬ್ಬಾಳಿಕೆ- ಸೆರೆಮನೆಗಳನ್ನು ಕಾಣಬೇಕಾಗುತ್ತಿತ್ತು. ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ , ಸ್ವಾತಂತ್ರ್ಯ ಚಳುವಳಿಗಾಗಿ ಮೈಸೂರು ರಾಜ್ಯಾದ್ಯಂತ ಧ್ವಜಾರೋಹಣ ಮಾಡುವ ಕಾರ್ಯಕ್ರಮ ನಡೆದಾಗ ಬ್ರಿಟಿಶ್

ಆಡಳಿತೆಯಲ್ಲಿ ನಡೆದಂತೆಯೇ ಮೈಸೂರು ಸಂಸ್ಥಾನದಲ್ಲೂ ಕಾಂಗ್ರೆಸ್ ಧ್ವಜಾರೋಹಣಕ್ಕೆ ಸರಕಾರ ಅಡ್ಡಿ ಉಂಟು ಮಾಡಿತು. ಜನತೆ ಅದನ್ನು ವಿರೋಧಿಸಿತು . ಹಲವಾರು ಕಡೆ ಸರಕಾರದ ಪ್ರತಿಬಂಧಕಾಜ್ಞೆ ಮುರಿಯಲಾಯಿತು . ಗೋಲಿಬಾರಾಯಿತು. ಕೆಲವು ಕಡೆ ನಿರಪರಾಧಿಗಳು ಹುತಾತ್ಮರಾದರು . 1930 ಜೂನ್ 2ನೇ ತಾರೀಕು ಬೆಂಗಳೂರು ರೈಲ್ವೆ ಸ್ಟೇಶನಿನ ಮುಂದುಗಡೆ ಕೆಂಪಾಂಬುದಿ ಕೆರೆಯ ಅಂಗಳದಲ್ಲಿ 60 ಅಡಿ ಎತ್ತರದ ಧ್ವಜಸ್ತಂಭವನ್ನು ಕಾರ್ಮಿಕರ ಸಹಕಾರದಿಂದ ಸ್ಥಾಪಿಸಿ ಧ್ವಜಾರೋಹಣ ಮಾಡಿದಾಗ ಧ್ವಜಸ್ತಂಭದಿಂದ ರಾಷ್ಟ್ರಧ್ವಜವನ್ನು ಕೆಳಗಿಳಿಸಿ ಪೋಲಿಸರು ಅಪಮಾನ ಮಾಡಿದರು . ಜನ ಈ ಅಪಮಾನ ಸಹಿಸಲು ಸಿದ್ದರಿರಲಿಲ್ಲ . ಪೋಲಿಸರು ಧ್ವಜವನ್ನು ವಾಪಸ್ ಕೊಡುವ ತನಕ ಸತ್ಯಾಗ್ರಹ ಮುಂದುವರಿಯಿತು . ಮದ್ದೂರಿನ ಬಳಿ ಶಿವಪುರದಲ್ಲಿ 1938 ಎಪ್ರಿಲ್ 26 ರಂದು ಧ್ವಜ ಹಾರಿಸಿದಾಗಲೂ ಪೋಲಿಸರು ಧ್ವಜ ಹಾರಿಸಿದವರನ್ನು ಸರದಿ ಪ್ರಕಾರ ಬಂಧಿಸಿದರು. ನಾಲ್ಕು ದಿವಸ ಇದೇ ರೀತಿ ಬಂಧನ ನಡೆಸಿ ಬೇಸತ್ತ ಪೋಲಿಸರು ಮರು ದಿವಸದಿಂದ ಸತ್ಯಾಗ್ರಹಿಗಳನ್ನು ಬಂಧಿಸುವುದನ್ನೇ ಬಿಟ್ಟು ಕೊಟ್ಟರು . ವಿಧುರಾಶ್ವತ್ಥದ ಹತ್ಯಾಕಾಂಡ ಇಡಿ ದೇಶದ ಗಮನವನ್ನು ಸೆಳೆಯಿತು. 1938 ಎಪ್ರಿಲ್ 25 ರಂದು ಕೋಲಾರ ಜಿಲ್ಲೆಯ ಗೌರಿ ಬಿದನೂರು ತಾಲೂಕಿನ ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರವಾದ ವಿದುರಾಶ್ವಥ್ಥದಲ್ಲಿ ಹತ್ಯಾಕಾಂಡ ನಡೆಯಿತು . ಅಂದು ಮುಂಜಾನೆ ಕಾಂಗ್ರೆಸ್ ಧ್ವಜ ಹಾರಿಸಲಾಯಿತು . ಪೋಲಿಸರಿಗೆ ಅದು ಸಹನೆಯಾಗಲಿಲ್ಲ . ಗೋಲಿಬಾರ್ ಆಯಿತು . 49 ಜನ ಗುಂಡಿಗೆ ಬಲಿಯಾಗಿ ಆಸುನೀಗಿದರು . ಇವರ ಪೈಕಿ ತುಂಬು ಗರ್ಭಿಣಿ ಗೌರಮ್ಮ ಎಂಬಾಕೆ ಒಬ್ಬಳು . ಈ ಘಟನೆ ಕರ್ನಾಟಕದ ಜಲಿಯಾನ್ ವಾಲಾಬಾಗ್ ಎಂದು ಹೆಸರು ಪಡೆಯಿತು .

## ಕಮ್ಯುನಿಸ್ಟರ ಪಾತ್ರ

ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ಮಹಾತ್ಮ ಗಾಂಧಿಯವರು ಮತ್ತು ಕಾಂಗ್ರೆಸ್ಸಿನ ಧೋರಣೆಗಳಲ್ಲಿ , ಹೋರಾಟದ ತಂತ್ರಗಳಲ್ಲಿ , ಪದ್ಧತಿಗಳಲ್ಲಿ ಕಮ್ಯುನಿಸ್ಟ್ ಮುಖಂಡತ್ವಕ್ಕೆ ಸಂಪೂರ್ಣ ಒಪ್ಪಿಗೆ ಇಲ್ಲದಿದ್ದರೂ ಕೂಡ ಕಮ್ಯುನಿಸ್ಟ್ ಪಕ್ಷ, ಕಾಂಗ್ರೆಸ್ ಪಕ್ಷದಲ್ಲಿದ್ದು ಕಾಂಗ್ರೆಸ್ ಪಕ್ಷದ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆದ್ದು ಹಲವಾರು ಕಮಿಟಿಗಳಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ ಕೂಡ (ಎಐಸಿಸಿ ) ಆರಿಸಿ ಬರುತ್ತಿತ್ತು . ಆ ಕಮಿಟಿಗಳಲ್ಲಿ ತನ್ನ ಧೋರಣೆಯನ್ನು ಪ್ರತಿಪಾದಿಸುತ್ತಿತ್ತು. ಕಾಂಗ್ರೆಸ್ ಸೋಶಲಿಸ್ಟ್ ಪಾರ್ಟಿ ಕೂಡ ಕಾಂಗ್ರೆಸ್ಸಿನೊಳಗೆ ಇತ್ತು . ಹಿಟ್ಲರ್ ಸೋವಿಯತ್ ಯೂನಿಯನಿನ ಮೇಲೆ ಆಕ್ರಮಣ ಮಾಡಿದಾಗ ಜಾಗತಿಕ ಪರಿಸ್ಥಿತಿಯಲ್ಲುಂಟಾದ ಬದಲಾವಣೆಗಳನ್ನು ಲಕ್ಷಿಸಿ ಭಾರತ ಕಮ್ಯುನಿಸ್ಟ್ ಪಕ್ಷ ತಮ್ಮ ನಿಲುಮೆಯಲ್ಲಿ ಬದಲಾವಣೆ ಮಾಡಿ ಸೋವಿಯತ್ ರಶ್ಯಾವನ್ನು ರಕ್ಷಿಸಲು , ಜಗತ್ತನ್ನು ನಾಝೀ ಆಕ್ರಮಣದಿಂದ ಉಳಿಸಲು ಹಿಟ್ಲರ್, ಮುಸೋಲಿನಿ, ಟೋಜೊ ಅವರನ್ನು ಸೋಲಿಸುವುದೇ ಪ್ರಧಾನ ಕರ್ತವ್ಯ , ಆ ಮೂಲಕ ದೇಶದ ಸ್ವಾತಂತ್ರ್ಯ ಚಳುವಳಿಯನ್ನು ಮುಂದುವರಿಸಬೇಕೆಂದು ನಿರ್ಧರಿಸಿ ಕಾಂಗ್ರೆಸ್ ಜೊತೆಗಿದ್ದ ತನ್ನ

ಸಂಬಂಧವನ್ನು ಕಡಿದು ಹಾಕಿತು. ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಬ್ರಿಟಿಷ್ ಆಡಳಿತೆಯ ವಿರುದ್ಧ ಹೋರಾಟ ಮುಂದುವರಿಸಿತು.

ಕರ್ನಾಟಕದಲ್ಲಿ ಮುಖ್ಯವಾಗಿ ಮೈಸೂರು ಸಂಸ್ಥಾನ , ಮಂಗಳೂರು , ಕಾರವಾರ ಕೊನೆಯಲ್ಲಿ ಬಿಜಾಪುರ , ಧಾರವಾಡಗಳಲ್ಲಿ ಕಮ್ಯುನಿಸ್ಟರು ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಗಳಲ್ಲಿ ನೇರ ಹಾಗೂ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ಅನಂತರ ಕರ್ನಾಟಕ ಪ್ರಾಂತದಲ್ಲಿ ಅದರ ವಿಲೀನಕ್ಕಾಗಿ ಹೋರಾಟದಲ್ಲಿ ಪಾಲ್ಗೊಂಡಿದ್ದರು.

ಮಂಗಳೂರು ಜಿಲ್ಲೆಯಲ್ಲಿ ಎಸ್. ಎನ್. ಹೊಳ್ಳ , ಬಿ. ವಿ . ಕಕ್ಕಿಲ್ಲಾಯ ಮೊದಲಾದವರು ನೇಕಾರರ, ಬೀಡಿ , ಗೇರು , ಟೈಲ್ಸ್, ಕಾಫಿ, ಬಂದರು , ಪ್ರೆಸ್ ಮೊದಲಾದ ಕೆಲಸಗಾರರ ಸಂಘಟನೆಗಳನ್ನು , ವಿದ್ಯಾರ್ಥಿಗಳನ್ನು ಕೆಲವು ಪ್ರದೇಶಗಳಲ್ಲಿ ರೈತರನ್ನು ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡಿದ್ದರು. ಮಂಗಳೂರಿನ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದ ಎನ್. ಎಲ್ . ಉಪಾಧ್ಯಾಯರು, ಹೈಸ್ಕೂಲಿನಲ್ಲಿ ನಾನು ವಿದ್ಯಾರ್ಥಿ ದೆಸೆಯಲ್ಲಿಯೇ ಚಳುವಳಿಗೆ ಆಕರ್ಷಿಸಲ್ಪಟ್ಟು , ಸ್ಕೂಲಿಗೆ ಬಹಿಷ್ಕಾರ ಹಾಕಿ ಜನರೊಡನೆ ಸಹಭೋಜನದಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು

## ರೈತ- ಕಾರ್ಮಿಕ ಸಂಘಟನೆ

ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಮುಖಂಡರ ಜೊತೆಯಲ್ಲಿಯೇ ಎನ್. ಡಿ ಶಂಕರ , ಎಂ . ಎಸ್. ರಾಮರಾವ್, ಕೊಡಗಿನಿಂದ ಬಂದ ಸಿ. ಬಿ. ಮೊನ್ನಯ್ಯ ಮೊದಲಾದವರು ಬೆಂಗಳೂರು , ಮೈಸೂರು , ಭದ್ರಾವತಿ , ದಾವಣಗೆರೆಗಳಲ್ಲಿ ಕಾರ್ಮಿಕರನ್ನು ಸಂಘಟಿಸಿ ಜವಾಬ್ದಾರಿ ಸರಕಾರಕ್ಕಾಗಿಯೂ, ದೇಶದ ಸ್ವಾತ್ರಂತ್ರ್ಯಕ್ಕಾಗಿಯೂ ಕಾರ್ಮಿಕರು ಮುಷ್ಕರ ಹೂಡುವಂತೆ ಇತರ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುತ್ತಿದ್ದರು . ಬೆಂಗಳೂರಿನ ಬಿನ್ನಿ ಮಿಲ್ಲು , ಮೈಸೂರು ಮಿನರ್ವ , ಟಿ . ಆರ್. ಮಿಲ್ಗಳು ವಿಮಾನ ಕಾರ್ಖಾನೆ , ಗವರ್ನಮೆಂಟ್ ಇಲೆಕ್ಟ್ರಿಕ್ ಕಾರ್ಖಾನೆ, ಎಂಕೊ ಬ್ಯಾಟರೀಸ್, ಮಹಾಲಕ್ಷ್ಮಿ ಮತ್ತು ಸರ್ವೋದಯ ಮಿಲ್ಲುಗಳು, ಮೈಸೂರು ಬಿವರೀಸ್ , ಗ್ಲಾಸ್ ಫ್ಯಾಕ್ಟರಿ , ಐ . ಟಿ. ಐ . ಮೊದಲಾದ ಕಾರ್ಖಾನೆಗಳ ಕಾರ್ಮಿಕರೆಲ್ಲ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದರು. ಬಹು ಸಂಖ್ಯೆಯಲ್ಲಿ ವಿದ್ಯಾರ್ಥಿಗಳೂ ಕೂಡಾ ಅಂಥ ಹೋರಾಟಗಳಲ್ಲಿ ಪಾಲುಗಾರರಾಗುತ್ತಿದ್ದರು. ಆ ಕಾರಣದಿಂದಲೇ ಹಲವಾರು ಕಾರ್ಮಿಕ ಮುಖಂಡರನ್ನೂ ಸೂರ್ಯನಾರ್ಯಣರಾವ್ , ಎಂ . ಎಸ್. ಕೃಷ್ಣನ್ ಮೊದಲಾದ ವಿದ್ಯಾರ್ಥಿ ಮುಖಂಡರನ್ನೂ ಆಗ ಕಮ್ಯುನಿಸ್ಟ್ ವಿಚಾರ ಧಾರೆಯತ್ತ ಸೆಳೆಯಲು ಸಾಧ್ಯವಾಯಿತು. ಕೋಲಾರ ತಾಲೂಕಿನ ಕೆ. ಜಿ . ಎಫ್ . ಮಾತ್ರವಲ್ಲ ಹೆಚ್ಚಿನ ತಾಲೂಕುಗಳಲ್ಲಿ ಹಲವಾರು ರೀತಿಯ ಚಳುವಳಿ ನಡೆದು ಅದರಲ್ಲಿ ಕಾರ್ಮಿಕರು , ರೈತಸಮುದಾಯ ಸಕ್ರಿಯವಾಗಿ ಭಾಗವಹಿಸಿದ

ಕಾರಣದಿಂದಲೇ ಬಲಿಷ್ಠವಾದ ರೈತ ಸಂಘಟನೆ ಕಟ್ಟಿ ಹೋರಾಟ ನಡೆಸಲು , ತಮ್ಮ ನೆಲೆಯನ್ನು ಭದ್ರವಾಗಿಸಲು ಕಮ್ಯುನಿಸ್ಟರಿಗೆ ಸಾಧ್ಯವಾಯಿತು. ಕಮ್ಯುನಿಸ್ಟರ ಪ್ರಭಾವದಿಂದಾಗಿ ಬೆಂಗಳೂರು , ಕೋಲಾರ , ಶಿವಮೊಗ್ಗ , ಚಿತ್ರದುರ್ಗ ಜಿಲ್ಲೆಗಳಲ್ಲಿ ಹೋರಾಟ ತೀವ್ರಗೊಳಿಸಲು ಸಾಧ್ಯವಾಯಿತು. ಆಗಲೇ 1943ರ ಕೊನೆಯಲ್ಲಿ ಯರವಾಡಾ ಜೈಲಿನಿಂದ ಬಿಡುಗಡೆಯಾದ ಎನ್. ಎಲ್ . ಉಪಾಧ್ಯಾಯರನ್ನು ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಪಕ್ಷದ ಸಂಘಟಕರನ್ನಾಗಿ ಬೆಂಗಳೂರಿಗೆ ಕಳುಹಿಸಿಕೊಟ್ಟ ನಂತರ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ನಡೆಯುತ್ತಿದ್ದ ಹೋರಾಟದಲ್ಲಿ ಕಮ್ಯುನಿಸ್ಟ್ ಪಕ್ಷ ಮತ್ತು ಕಾರ್ಮಿಕ ಸಂಘಟನೆಗಳು ಹೆಚ್ಚು ಶಿಸ್ತುಬದ್ಧವಾಗಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳುವಂತಾಗಲು ಸಾಧ್ಯವಾಯಿತು. ಜನ ಜಾಗೃತಿ ಸಂಘದ ಹೆಸರಿನಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ನಡೆಯುತ್ತಿದ್ದ ಚಳುವಳಿಯಲ್ಲಿ ಎನ್. ಎಲ್ . ಉಪಾಧ್ಯಾಯರು ಸೇರಿಕೊಂಡರು. ಕೆ. ಜಿ . ಎಫ್ . ಚಿನ್ನದ ಗಣಿಯಲ್ಲಿ ಬೆಂಗಳೂರಿನ ಬಟ್ಟೆ ಗಿರಣಿಗಳಲ್ಲಿ, ಭದ್ರಾವತಿ ಉಕ್ಕು- ಕಬ್ಬಿಣ ಕಾರ್ಖಾನೆಯಲ್ಲಿ, ದಾವಣಗೆರೆ- ಹರಿಹರಗಳಲ್ಲಿ ಕಾರ್ಮಿಕರ ಮುಷ್ಕರ , ಬೆಂಗಳೂರು - ಮೈಸೂರುಗಳಲ್ಲಿ ವಿದ್ಯಾರ್ಥಿಗಳ ಹರತಾಳ ಒಂದೇ ಸಮನೆ ಮುಂದುವರಿಯಿತು . ಕಮ್ಯುನಿಸ್ಟ್ರು ಕೆಲವೇ ಜನರಿದ್ದರೂ ಕೂಡ ಕಾರ್ಮಿಕ -ವಿದ್ಯಾರ್ಥಿಗಳಲ್ಲಿಯ ಅವರ ಪ್ರಭಾವ , ಚಳುವಳಿಗಳಿಗೆ ಅವರ ಮಾರ್ಗದರ್ಶನ ಸರಕಾರದ ಕಣ್ಣು ಕೆಂಪಾಗುವಂತೆ ಮಾಡಿ ಎನ್. ಡಿ . ಶಂಕರ ಅವರನ್ನು ಬಂಧಿಸಿ , ಸಿ. ಬಿ . ಮೊನ್ನಯ್ಯ , ಎನ್. ಎಲ್ . ಉಪಾಧ್ಯಾಯರನ್ನು ಮೈಸೂರು ಸಂಸ್ಥಾನದಿಂದ ಗಡಿಪಾರು ಮಾಡಲಾಯಿತು .

1939ರಿಂದಲೇ ಕಾರವಾರ ಜಿಲ್ಲೆಯಲ್ಲಿ ಎನ್. ಜಿ . ಮಾಳಸೇಕರ , ಗಣುಮಹಾಬಲ ನಾಯಕ, ಗುಬ್ಬು ನಾಯಕ, ಕೈತಾನ, ಕಲಕುಟಕರ ಮೊದಲಾದವರು ಸ್ವಾತಂತ್ರ್ಯ ಚಳುವಳಿಯ ಜೊತೆಯಲ್ಲಿಯೇ ಬಲಿಷ್ಠವಾದ ಗೇಣಿದಾರರ ಸಂಘ ಕಟ್ಟಿ ಹೋರಾಟ ನಡೆಸುತ್ತಿದ್ದರು . ನಾಸಿಕ ಜೈಲಿನಿಂದ ಬಿಡುಗಡೆಯಾದ ನಂತರ 1943ರಲ್ಲಿ ಸಿಪಿಐ ಕೇಂದ್ರ ಸಮಿತಿ ಎನ್. ಕೆ. ಉಪಾಧ್ಯಾಯರನ್ನು ರೈಲ್ವೇ ಕೆಲಸಗಾರರ ಸಂಘಟನೆಗೆ ಹುಬ್ಬಳ್ಳಿಗೆ ಕಳುಹಿಸಿಕೊಟ್ಟಿತು . ಕಾರ್ಮಿಕ ಸಂಘಟನೆಯ ಜೊತೆಯಲ್ಲಿ ಸರಕಾರದ ವಿರುದ್ಧ ನಡೆದ ರಾಜಕೀಯ ಚಟುವಟಿಕೆಯಿಂದಾಗಿ ಧಾರವಾಡ ಜಿಲ್ಲೆಯಿಂದ ಅವರನ್ನು ಗಡಿಪಾರು ಮಾಡಲಾಯಿತು . ಮೈಸೂರು ಸಂಸ್ಥಾನದಿಂದ ಹೊರಹಾಕಲ್ಪಟ್ಟ ಎನ್. ಎಲ್ . ಉಪಾಧ್ಯಾಯರು ಹುಬ್ಬಳ್ಳಿಯಲ್ಲಿ ನೆಲೆಸಿ ಕಾರವಾರ ಮೊದಲಾದ ಪ್ರದೇಶಗಳ ಚಳುವಳಿಗೆ ಮಾರ್ಗದರ್ಶನ ನೀಡಿದರು . ಸಿ . ಬಿ. ಮೊನ್ನಯ್ಯನವರೂ ಹುಬ್ಬಳ್ಳಿಗೆ ಬಂದರು . ಸಂಘಟನೆಯ ಕೆಲಸ ಮುಂದುವರಿಸಿದರು . ಮುಂಬಯಿ , ಮದ್ರಾಸ್ ಪ್ರಾಂತ್ಯಗಳಲ್ಲಿ , ಹೈದರಾಬಾದ್ ಸಂಸ್ಥಾನದಲ್ಲಿ , ಬೇರೆ ಬೇರೆ ರಾಜರುಗಳ ಆಡಳಿತದಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡಿಗರು ಬ್ರಿಟಿಷರ ವಿರುದ್ಧ , ಅದರ ಜೊತೆಯಲ್ಲಿಯೇ ಸಂಸ್ಥಾನಿಕರ ವಿರುದ್ಧ ನಡೆಸಿದ ಹೋರಾಟ ದೇಶದ ಇತರೆಡೆಗಳಲ್ಲಿ ನಡೆದ ಹೋರಾಟದಂತೆಯೇ ನಡೆಯಿತು . ಪೇಟೆ ಮತ್ತು ಗ್ರಾಮಗಳಲ್ಲಿ ಪ್ರತಿಬಂಧಗಳನ್ನು ಮುರಿದು ಧ್ವಜಾರೋಹಣ, ಗ್ರಾಮಾಧಿಕಾರಿಗಳಲ್ಲಿ , ಪಟೇಲರುಗಳಿಗೆ ಖಾದಿ ಟೋಪಿ ಧರಿಸಲು ಒತ್ತಾಯ , ಸಭೆ ಮೆರವಣಿಗೆಗಳು,

ಹೈಸ್ಕೂಲು ಕಾಲೇಜುಗಳಿಗೆ ಬಹಿಷ್ಕಾರ , ಕೋರ್ಟ್ ಕಚೇರಿಗಳಿಗೆ ಬಹಿಷ್ಕಾರ , ರಾಜೀನಾಮೆಗಳು, ಕಾರ್ಮಿಕರ ಮುಷ್ಕರಗಳು ಇವುಗಳಲ್ಲಿ ಒಂದು ತರ ನಡೆದರೆ , ತಂತಿ ಕತ್ತರಿಸುವ , ಬೆಂಕಿ ಹಚ್ಚುವ , ರಿಕಾರ್ಡ್ ಸುಡುವ ಕೃತ್ಯಗಳೂ ನಡೆದವು.

ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿ ಬ್ರಿಟಿಷರ ವಿರುದ್ಧವಾಗಿಯೇ ಸೀಮಿತವಾಗಿತ್ತು . ವಿದೇಶೀ ಬಟ್ಟೆ ಬರೆಗಳಿಗೆ ಬಹಿಷ್ಕಾರ , ಚರಕದ ಮೂಲಕ ನೂಲು ತಯಾರಿ , ಶೆರೆ ಶೇಂದಿಗಳಿಗೆ ಬಹಿಷ್ಕಾರ , ಶೇಂದಿ ಗಿಡಗಳನ್ನು ಕಡಿಯುವುದು , ಉಪ್ಪು ಸತ್ಯಾಗ್ರಹ, ಆಡಳಿತೆಯ ವಿರುದ್ಧ ನಾನಾ ರೀತಿಯ ಬಹಿಷ್ಕಾರಗಳು ನಡೆಯುತ್ತಿದ್ದವು . ಅವುಗಳ ಮೂಲಕವೇ ರೈತರನ್ನೂ , ಕಾರ್ಮಿಕರನ್ನೂ ವಿದ್ಯಾರ್ಥಿಗಳನ್ನೂ ಚಳುವಳಿಗೆ ಸೇರಿ ಕೊಳ್ಳುವಂತೆ ಆಕರ್ಷಿಸಲಾಗುತ್ತಿತ್ತು. ರೈತರೂ- ಕಾರ್ಮಿಕರೂ ಸಾಮೂಹಿಕವಾಗಿ ಚಳುವಳಿಯಲ್ಲಿ ಭಾಗವಹಿಸಬೇಕಾದರೆ , ಅದು ಪರಿಣಾಮ ಕಾರಿಯಾಗಬೇಕಾದರೆ , ರೈತರ , ಭೂಮಿ- ಗೇಣಿ ಪ್ರಶ್ನೆ , ಕಾರ್ಮಿಕರ ಆರ್ಥಿಕ ಬೇಡಿಕೆಗಳ ಕುರಿತೂ ಸಮಿತಿಗಳಲ್ಲಿ ಚರ್ಚೆ ಮಾಡಿ ಸ್ವಾತಂತ್ರ್ಯ ಹೋರಾಟಗಳಲ್ಲಿ ಆ ಬೇಡಿಕೆಗಳನ್ನೂ ಮಂಡಿಸಿ ಪ್ರಚಾರಗೊಳಿಸಿ, ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ರೈತರ , ಕಾರ್ಮಿಕರ ಹೋರಾಟಗಳನ್ನು ಸೇರಿಸಿಕೊಳ್ಳಬೇಕೆಂದು ಕಮ್ಯುನಿಸ್ಟ್ ಪಕ್ಷ ಒತ್ತಾಯಿಸುತ್ತಲೇ ಬಂದಿತ್ತು. ಮೈಸೂರು ಸಂಸ್ಥಾನದ ಕಾರ್ಮಿಕ ಕೇಂದ್ರಗಳಲ್ಲಿ ಕಾಂಗ್ರೆಸ್ ಪ್ರಭಾವಶಾಲಿಯಾಗಿದ್ದರೂ ಕೂಡಾ , ಅಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿ, ಜವಾಬ್ದಾರಿ ಸರಕಾರಕ್ಕಾಗಿ ನಡೆದ ಹೋರಾಟದಲ್ಲಿ ಕಮ್ಯುನಿಸ್ಟ್ ಮುಖಂಡರು ಕಾರ್ಮಿಕರ ಸಮಸ್ಯೆಗಳನ್ನೂ ಸೇರಿಸಿ ಹೋರಾಡಿದ್ದರಿಂದ , ಕಾಂಗ್ರೆಸ್ ಮುಖಂಡರು ಮಾಲಕರೊಂದಿಗೆ ಹೊಂದಾಣಿಕೆ ಮಾಡಿದಾಗಲೆಲ್ಲಾ ಅವರನ್ನು ತ್ಯಜಿಸಿ ಕಮ್ಯುನಿಸ್ಟ್ ಮುಖಂಡತ್ವವನ್ನು ಸ್ವೀಕರಿಸಿದ್ದ ಕಾರಣದಿಂದಲೇ ಹಲವಾರು ಕಾರ್ಮಿಕ ಕೇಂದ್ರಗಳಲ್ಲಿ ಕಮ್ಯುನಿಸ್ಟರು ತಮ್ಮ ಪ್ರಭಾವ ಉಳಿಸಿಕೊಳ್ಳಲು ಸಾಧ್ಯವಾಯಿತು. ಮಂಗಳೂರು ಜಿಲ್ಲೆಯಲ್ಲಿಯೂ ಕೆಂಬಾವುಟದ ಪ್ರಭಾವ ಉಳಿಸಿಕೊಳ್ಳಲು ಸಾಧ್ಯವಾಯಿತು. ಹಾಗೆಯೇ “ಉಳುವವನೇ ಭೂಮಿ ಒಡೆಯ ” , “ ಮುಕ್ಕಾಲು ಪಾಲು ಗೇಣಿದಾರನಿಗೆ ” , “ ಸಾವುಕಾರರ ಸಾಲ ರದ್ಧತಿ ” ಬೇಡಿಕೆಗಳನ್ನು ಸ್ವಾತಂತ್ರ್ಯ ಚಳುವಳಿಯ ಜೊತೆಯಲ್ಲಿ ಸೇರಿ ಹೋರಾಡಿದ್ದರಿಂದಲೇ ಕಾರವಾರ , ಮಂಗಳೂರು ಬಿಜಾಪುರ , ಕೋಲಾರ , ತುಮಕೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ರೈತ ಸಂಘ ಭದ್ರಗೊಳಿಸಲು ಸಾಧ್ಯವಾಯಿತು.

ಕೆಲವೇ ಕಮ್ಯುನಿಸ್ಟ್ ಮುಖಂಡರಿದ್ದರೂ ಕೂಡಾ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕರೂ , ರೈತರೂ, ವಿದ್ಯಾರ್ಥಿಗಳೂ , ಸಕ್ರಿಯವಾಗಿ , ಪರಿಣಾಮಕಾರಿಯಾಗಿ ಪಾಲ್ಗೊಳ್ಳುವಂತೆ ಮಾಡಿದರು . ಈ ವಿಭಾಗದ ಜನರಲ್ಲಿ ರಾಜಕೀಯ ಜಾಗೃತಿ ಉಂಟುಮಾಡಿ ಸ್ವಾತಂತ್ರ್ಯನಂತರವೂ ತಮ್ಮ ಸಮಸ್ಯೆಗಳಿಗಾಗಿ ಹೋರಾಟ ಮುಂದುವರಿಸಲಿಕ್ಕೆ ಮಾರ್ಗದರ್ಶನ ನೀಡಿದರು

ಬ್ರಿಟಿಷರ ಆಕ್ರಮಣ ಕಾಲದಿಂದಲೇ ಒಂದು ದೃಷ್ಟಿಯಲ್ಲಿ ಆರಂಭವಾಗಿ, ೧೯ನೆಯ ಶತಮಾನದ ನಡುಗಾಲದಿಂದ ಕ್ರಮೇಣ ತೀವ್ರವಾಗಿ, ೨೦ನೆಯ

ಶತಮಾನ ದಲ್ಲಿ ವ್ಯಾಪಕವಾಗಿ ಹಬ್ಬಿ, ೧೯೪೭ರಲ್ಲಿ ಯಶಸ್ವಿಯಾಗಿ ಪರ್ಯವಸಾನ ಹೊಂದಿನ ಭಾರತೀಯ ಸ್ವಾತಂತ್ರ್ಯ ಚಳವಳಿಯ ಅಂಗವಾಗಿದ್ದೂ ವಿಶಿಷ್ಟವಾಗಿ ವಿಕಾಸಗೊಂಡ ಕರ್ನಾಟಕ ಸ್ವಾತಂತ್ರ್ಯ ಚಳವಳಿಯ ಇತಿಹಾಸವನ್ನು ಸ್ಥೂಲವಾಗಿ ಮೂರು ಕಾಲಗಳಾಗಿ ವಿಂಗಡಿಸಬಹುದಾಗಿದೆ. ಅಂತಾರಾಷ್ಟ್ರೀಯವೆನ್ನಬಹುದಾದ ರೀತಿಯಲ್ಲಿ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರು ಬ್ರಿಟಿಷರ ವಿರುದ್ಧ ನಡೆಸಿದ ಹೋರಾಟಗಳದು ಮೊದಲನೆಯ ಘಟ್ಟ. ಬ್ರಿಟಿಷರು ಭಾರತದಲ್ಲಿ ಭದ್ರವಾಗಿ ನೆಲೆಗೊಳ್ಳುತ್ತಿದ್ದ ಕಾಲದಲ್ಲಿ ಇವರ ಆಡಳಿತವನ್ನು ಪ್ರತಿಭಟಿಸಿ ಅಲ್ಲಲ್ಲಿ ಸಂಭವಿಸಿದ ಸಶಸ್ತ್ರ ಬಂಡಾಯಗಳದು ಎರಡನೆಯ ಘಟ್ಟ. ಮುಂದೆ, ಸುಮಾರು ಮುಕ್ಕಾಲು ಶತಮಾನದ ಅನಂತರ, ಸಾರ್ವತ್ರಿಕವಾಗಿ ಪರಿಣಮಿಸಿ ಬ್ರಿಟಿಷರ ಉಚ್ಚಾಟನೆಗೆ ಕಾರಣವಾದ ಅಹಿಂಸಾತ್ಮಕ ಸಮರದ್ದು ಮೂರನೆಯ ಘಟ್ಟ. ಈ ಮೂರು ಘಟ್ಟಗಳನ್ನೂ ಈ ಲೇಖನದಲ್ಲಿ ವಿವೇಚಿಸಲಾಗಿದೆ.

೧೮ನೆಯ ಶತಮಾನ ಮುಗಿಯುವ ವೇಳೆಗೆ ಆಗಲೇ ಬ್ರಿಟಿಷರು ಭಾರತದ ಭಾವೀ ಆಡಳಿತಗಾರರು ಎಂಬ ಅಂಶ ಸ್ಪಷ್ಟವಾಗಿತ್ತು. ೧೬-೧೭ನೆಯ ಶತಮಾನಗಳಲ್ಲಿ ಸಮಗ್ರ ಭಾರತವನ್ನಾಳಿ (ದಕ್ಷಿಣದ ಕೆಲವು ಪ್ರದೇಶಗಳು ಹೊರತು) ಮೆರೆದ ಮೊಗಲ್ ಸಾಮ್ರಾಜ್ಯ ೧೮ನೆಯ ಶತಮಾನದ ಆರಂಭ ಕಾಲಕ್ಕೇ ಕ್ಷೀಣಿಸಿತು. ಮರಾಠರು ಆ ಸಾಮ್ರಾಜ್ಯದ ಉತ್ತರಾಧಿಕಾರಿಗಳಾಗಲೆತ್ನಿಸಿ ವಿಫಲರಾದರು; ಮೂರನೆಯ ಪಾಣಿಪಟ್ ಕದನದಲ್ಲಿ (೧೭೬೧) ಅವರ ಪ್ರಯತ್ನಗಳೆಲ್ಲ ಮಣ್ಣುಗೂಡಿದುವು. ವ್ಯಾಪಾರಕ್ಕಾಗಿ ಭಾರತಕ್ಕೆ ಬಂದಿದ್ದ ಇಂಗ್ಲಿಷರು ಭಾರತದ ರಾಜಕೀಯ ಗೊಂದಲವನ್ನು ತಮ್ಮ ಲಾಭಕ್ಕಾಗಿ ಉಪಯೋಗಿಸಿಕೊಂಡರು. ೧೭೫೭ರಲ್ಲಿ ನಡೆದ ಪ್ಲಾಸಿ ಕದನದ ಅನಂತರ ಬಹು ಬೇಗ ಬಂಗಾಳ ಅವರ ಸ್ವಾಧೀನವಾಯಿತು. ದಕ್ಷಿಣ ಭಾರತದಲ್ಲೂ ಅವರು ದೇಶೀಯರ ಪಕ್ಷ-ಪ್ರತಿಪಕ್ಷ ಹೋರಾಟಗಳಲ್ಲಿ ಭಾಗವಹಿಸಿದರು. ೧೭೬೦ರಲ್ಲಿ ನಡೆದ ವಂಡಿವಾಷ್ ಕದನದಲ್ಲಿ ಅವರು ಗಳಿಸಿದ ವಿಜಯದ ಫಲವಾಗಿ ಅಲ್ಲೂ ಅವರೇ ಆಳರಸರಾಗುವುದು ಖಂಡಿತವೆಂಬುದು ಸ್ಪಷ್ಟವಾಯಿತು. ಕರ್ಣಾಟಕದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಗೆ ಈ ಘಟನೆಗಳೇ ಹಿನ್ನೆಲೆಯೆನ್ನಬಹುದು.

ಕೊಂಚಕೊಂಚವಾಗಿ ಪ್ರಬಲಿಸಿ ಇಡೀ ಭಾರತವನ್ನೇ ಸ್ವಾಧೀನಪಡಿಸಿಕೊಳ್ಳುತ್ತಿದ್ದ ಬ್ರಿಟಿಷರನ್ನು ಹೊಡೆದೋಡಿಸುವ ಪ್ರಯತ್ನದಲ್ಲಿ ೧೮ನೆಯ ಶತಮಾನದ ಉತ್ತರಾರ್ಧ ಕಾಲದಲ್ಲೇ ನಿರತರಾಗಿದ್ದವರೆಂದರೆ ಮೈಸೂರಿನ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್ ಮೊದಮೊದಲು ಹೈದರನಿಗೆ ಇಂಗ್ಲಿಷರ ಬಗ್ಗೆ ದ್ವೇಷವೇನೂ ಇರಲಿಲ್ಲ. ಆದರೆ ಮೊಗಲ್ ಶಕ್ತಿಯ ದಿವಾಳಿತನದಿಂದಾಗಿ ಛಿದ್ರವಾಗಿದ್ದ ಪ್ರದೇಶ ಗಳನ್ನು ಗೆದ್ದುಕೊಳ್ಳು ವುದರಲ್ಲಿ ಆಸಕ್ತರಾಗಿದ್ದ ದೇಶೀಯ ಅಧಿಪತಿಗಳ ಶಕ್ತಿವರ್ಧನವನ್ನು ಇಂಗ್ಲಿಷರು ಸಹಿಸಲಿಲ್ಲ. ಇಂಗ್ಲಿಷರ ಪ್ರಾಬಲ್ಯದಿಂದ ಸಂಭವಿಸಲಿದ್ದ ವಿಪತ್ತನ್ನು ಹೈದರ್ ಕಂಡುಕೊಂಡ.

ಇಂಗ್ಲಿಷರನ್ನೆದುರಿಸಿ ಕಾದಾಡಲು ಹೈದರಾಬಾದಿನ ನಿಜಾಮನೊಂದಿಗೂ ಮರಾಠರೊಂದಿಗೂ ಸಹಕರಿಸಲು ಹೈದರ್ ಸಿದ್ದನಾಗಿದ್ದನಾದರೂ ಅವರು ಮೊದಲು ಇವನ ಸ್ನೇಹಹಸ್ತವನ್ನು ಸ್ವೀಕರಿಸಲಿಲ್ಲ. ಆದರೂ ಹೈದರ್ ಉಪಾಯದಿಂದ ಅವರನ್ನು ಇಂಗ್ಲಿಷರಿಂದ ಬೇರ್ಪಡಿಸಿ ತನ್ನತ್ತ ಸೆಳೆದುಕೊಂಡ. ನಿಜಾಮನೊಂದಿಗೆ ಸೇರಿ ಇಂಗ್ಲಿಷರನ್ನು ಕದನವೊಂದರಲ್ಲಿ ಸೋಲಿಸಿದ. ಆದರೆ ಈ ವಿಜಯ ತಾತ್ಕಾಲಿಕವಾಯಿತು. ನಿಜಾಮ ಜಾರಿಕೊಂಡು ಬ್ರಿಟಿಷರೊಂದಿಗೆ ರಾಜಿ ಮಾಡಿಕೊಂಡ. ಹೈದರನೂ ವಿಧಿಯಿಲ್ಲದೆ ಅವರೊಂದಿಗೆ ಕೌಲು ಮಾಡಿಕೊಳ್ಳಬೇಕಾಯಿತು. ಏತನ್ಮಧ್ಯೆ ಹೈದರನ ಸೇನೆಗಳು ಮರಾಠರೊಂದಿಗೆ ಯುದ್ಧಮಾಡಬೇಕಾಗಿ ಬಂದಾಗ ಇಂಗ್ಲಿಷರು ಅವನಿಗೆ ಸಹಾಯ ಮಾಡಬೇಕಾಗಿತ್ತು. ಆದರೆ ಇಂಗ್ಲಿಷರು ದ್ರೋಹ ಬಗೆದರು. ಕೌಲಿನ ಷರತ್ತನ್ನು ಮುರಿದರು. ಮರಾಠರು ದೇಶವನ್ನು ಕೊಳ್ಳೆಹೊಡೆದು ಹಿಂದುರಿಗಿದರು. ಇಂಗ್ಲಿಷರ ಬಗ್ಗೆ ಹೈದರನಿಗೆ ಯಾವ ಪ್ರೀತಿಯೂ ಉಳಿಯುವುದು ಸಾಧ್ಯವಿರಲಿಲ್ಲ. ಅವನು ಇಂಗ್ಲಿಷರ ಕಡುದ್ವೇಷಿಯಾದ. ಅವರನ್ನು ಇಲ್ಲಿಂದ ಓಡಿಸುವುದೇ ಅವನ ಮುಖ್ಯ ಸಂಕಲ್ಪವಾಯಿತು. ಮುಂದೆ ಹೈದರ್ ಮತ್ತೆ ನಿಜಾಮನನ್ನೂ ಮರಾಠರನ್ನೂ ಸೇರಿಸಿಕೊಂಡು ಇಂಗ್ಲಿಷರನ್ನು ಓಡಿಸಲುದ್ಯುಕ್ತನಾದ. ಆದರೆ ಆ ವೇಳೆಗೆ ಯೂರೋಪಿನಲ್ಲಿ ಇಂಗ್ಲೆಂಡಿಗೂ ಫ್ರಾನ್ಸಿಗೂ ನಡುವೆ ಆರಂಭವಾದ ಯುದ್ಧದಿಂದಾಗಿ ಭಾರತದಲ್ಲೂ ಈ ಎರಡು ಪಕ್ಷಗಳೂ ಕಾದಾಡಲಾರಂಭಿಸಿದುವು. ಇಂಗ್ಲಿಷರ ಕೈ ಮೇಲಾಯಿತು. ಭಾರತದಲ್ಲಿ ಫ್ರೆಂಚರು ದುರ್ಬಲರಾದುದರಿಂದ ಹೈದರನಿಗಿದ್ದ ಆಸರೆ ತಪ್ಪುವಂತಾಯಿತು. ಆದರೂ ಹೈದರ್ ಚಾಣಾಕ್ಷತನದಿಂದ ನಿಜಾಮನೊಂದಿಗೂ ಮರಾಠರೊಂದಿಗೂ ಸಖ್ಯ ಬೆಳೆಸಿ ಇಂಗ್ಲಿಷರನ್ನೆದುರಿಸುತ್ತಲೇ ಇದ್ದ. ಇಂಗ್ಲಿಷರೂ ಇವರ ಸಂಘಟನೆಯನ್ನು ಮುರಿಯಲು ನಾನಾ ತಂತ್ರಗಳನ್ನು ಬಳಸಿ ಗೆದ್ದರು. ಇಂಗ್ಲಿಷರನ್ನು ಉಚ್ಚಾಟಿಸಬೇಕೆಂಬ ತನ್ನ ಕನಸು ನನಸಾಗಿಯೇ ಹೈದರ್ ಅಕಾಲ ಮರಣಕ್ಕೀಡಾದ.

ಆದರೆ ಅನಂತರ ಟಿಪ್ಪು ತನ್ನ ತಂದೆಯ ಹೋರಾಟವನ್ನು ಮುಂದುವರಿಸಿದ. ಹಿಂದೂಸ್ತಾನವನ್ನು ಇಂಗ್ಲಿಷರ ಹಿಡಿತದಿಂದ ತಪ್ಪಿಸಬೇಕೆಂಬುದೇ ಟಿಪ್ಪುವಿಗೆ ಹೈದರನ ಚರಮಸಂದೇಶವಾಗಿತ್ತು. ಆದರೆ ೧೭೮೩ರಲ್ಲಿ ಯುರೋಪಿನಲ್ಲಿ ಸಹಿ ಹಾಕಲಾದ ವರ್ಸೇಲ್ಸ್ ಕೌಲಿನಿಂದ ಫ್ರೆಂಚರಿಗೂ ಇಂಗ್ಲಿಷರಿಗೂ ನಡುವಣ ವೈರ ಕೊನೆಗೊಂಡಿತ್ತು. ಟಿಪ್ಪುವೂ ನಿಜಾಮನೂ ಮರಾಠರೂ ಒಂದಾಗಿ ಹೋರಾಡಲಾರದೆ ಹೋದರು. ಪರಸ್ಪರ ದ್ವೇಷಾಸೂಯೆಗಳೂ ಇಂಗ್ಲಿಷರು ಯಶಸ್ವಿಯಾಗಿ ಅನುಸರಿಸಿದ ಒಡೆದು ಆಳುವ ತಂತ್ರವೂ ಇವರ ಸಂಘಟನೆಯ ವೈಫಲ್ಯಕ್ಕೆ ಮುಖ್ಯ ಕಾರಣ. ಇಂಗ್ಲಿಷರೊಂದಿಗೆ ಆತ ಏಕಾಕಿಯಾಗಿ ಹೋರಾಡಬೇಕಾಗಿ ಬಂತು. ಟಿಪ್ಪು ಮೂರನೆಯ ಮೈಸೂರು ಯುದ್ಧದಲ್ಲಿ ಸೋತು ಅರ್ಧರಾಜ್ಯವನ್ನೇ ಬ್ರಿಟಿಷರಿಗೆ ಕೊಡಬೇಕಾಯಿತು. ಬ್ರಿಟಿಷರ ಬೆಂಬಲಿಗರಾಗಿದ್ದ ನಿಜಾಮನಿಗೂ ಮರಾಠರಿಗೂ ಕೆಲವು ಪ್ರಾಂತ್ಯಗಳನ್ನು ಕೊಡಬೇಕಾಯಿತು. ಅದಕ್ಕಿಂತಲೂ ಹೆಚ್ಚು ಅಪಮಾನಕರ ಪ್ರಸಂಗವೆಂದರೆ, ಮೂರು ಕೋಟಿ ಮೂವತ್ತು ಲಕ್ಷ ರೂಪಾಯಿಗಳ ಪರಿಹಾರದ್ರವ್ಯವನ್ನು ಕೊಡಲೊಪ್ಪಿ, ಅದರರ್ಧವನ್ನು ಆಗಲೇ ಸಲ್ಲಿಸಿ, ಉಳಿದರ್ಧಕ್ಕಾಗಿ

ತನ್ನೆರಡು ಮಕ್ಕಳನ್ನು ಇಂಗ್ಲಿಷರಿಗೆ ಒತ್ತೆಯಾಗಿ ಒಪ್ಪಿಸಬೇಕಾದದ್ದು. ಈ ತೇಜೋವಧೆಯನ್ನು ಟಿಪ್ಪು ಸಹಿಸಲಾರದೆ ಹೋದ. ಹೇಗೊ ಆ ಹಣವನ್ನು ಅವರಿಗೆ ಸಲ್ಲಿಸಿ ಮಕ್ಕಳನ್ನು ಕರೆಸಿಕೊಂಡ. ಆದರೆ ಇಂಗ್ಲಿಷರ ಮೇಲೆ ಸೇಡು ತೀರಿಸಿಕೊಳ್ಳಬೇಕೆಂಬ ಹಠ ಬೆಳೆಯಿತು. ಇದರ ಪರಿಣಾಮವೇ ನಾಲ್ಕನೆಯ ಮೈಸೂರು ಯುದ್ಧ ಮತ್ತು ಟಿಪ್ಪುವಿನ ಮರಣ (೧೭೯೯). ಅವನ ಸಾವಿನಿಂದ ಮೈಸೂರು ಹರಿದು ಹಂಚಿಹೋಯಿತು.

೧ ಸಶಸ್ತ್ರ ಬಂಡಾಯಗಳು

೨ ಕಿತ್ತೂರು

೩ ಸಂಗೊಳ್ಳಿ ರಾಯಣ್ಣ

೪ ಬಾದಾಮಿ

೫ ಹಲಗಲಿ

೬ ಸುರಪುರ

೭ ನರಗುಂದ: ಬಾಬಾ ಸಾಹೇಬ

೮ ಮುಂಡರಗಿ ಭೀಮರಾವ್

೯ ಅಸಹಕಾರ ಚಳುವಳಿ

೧೦ ಕಾಂಗ್ರೆಸ್ ಸ್ಥಾಪನೆ

೧೧ ಬೆಳಗಾಂವಿಯ ಕಾಂಗ್ರೆಸ್ ಅಧಿವೇಶನ

೧೨ ಕಾನೂನುಭಂಗ ಚಳವಳಿ

೧೩ ಈಸೂರು ಪ್ರಕರಣ

೧೪ ಹೈದಾರಾಬಾದ್ ಕರ್ನಾಟಕದಲ್ಲಿ

## ಸಶಸ್ತ್ರ ಬಂಡಾಯಗಳು

ಕರ್ನಾಟಕದ ಇತರ ಕಡೆಗಳಲ್ಲಿ ಪ್ರತಿಭಟನೆ ಮುಂದುವರಿಯಿತು : ಉತ್ತರ ಕರ್ನಾಟಕದಲ್ಲಿ ಬ್ರಿಟಿಷರನ್ನು ಮೊದಲು ಪ್ರತಿಭಟಿಸಿದವನು ಧೋಂಡಿಯ ವಾಘ್. ಈತ ಶಿವಮೊಗ್ಗ ಜಿಲ್ಲೆಯ ಚನ್ನಗಿರಿಯವ, ಶೂರ, ಸಾಹಸಿ ; ಚಿಕ್ಕವಯಸ್ಸಿನಲ್ಲೇ ಯುದ್ಧವಿದ್ಯೆ ಕಲಿತು ಎಲ್ಲರ ಮೆಚ್ಚುಗೆ ಗಳಿಸಿದ. ೧೭೮೦ರಲ್ಲಿ ಹೈದರನ ಸೈನ್ಯಕ್ಕೆ ಸೇರಿದ. ಕೊಂಚ ಕಾಲ ಅಲ್ಲಿದ್ದು ತರಬೇತಿ ಪಡೆದ. ಅಲ್ಲಿಂದ ತಪ್ಪಿಸಿಕೊಂಡು ಧಾರವಾಡ ಜಿಲ್ಲೆಗೆ ಹೋಗಿ ಅಲ್ಲಿ ಒಂದು ಸಣ್ಣ ಪಾಳೆಯಪಟ್ಟನ್ನು ನಿರ್ಮಿಸಿಕೊಳ್ಳಲೆತ್ನಿಸಿದ. ಅವನ ಧೈರ್ಯಸಾಹಸಗಳ ವಿಷಯ ಟಿಪ್ಪುವಿನ ಕಿವಿಗೆ ಬಿದ್ದು, ಅವನು ಧೋಂಡಿಯನನ್ನು ತನ್ನ ಸೈನ್ಯಕ್ಕೆ ಆಹ್ವಾನಿಸಿದ. ಶ್ರೀರಂಗಪಟ್ಟಣಕ್ಕೆ ಹೋದಾಗ ಅವನನ್ನು ಬಲಾತ್ಕಾರದಿಂದ ಇಸ್ಲಾಂ ಧರ್ಮಕ್ಕೆ ಸೇರಿಸಿಬಿಟ್ಟರು. ೧೭೯೯ರ ಗೊಂದಲದಲ್ಲಿ ಆತ ಅಲ್ಲಿಂದ ತಪ್ಪಿಸಿಕೊಂಡು ಬಿದನೂರಿಗೆ ಬಂದ. ಅಲ್ಲಿ ಒಂದು ಸಣ್ಣ ಸಂಸ್ಥಾನವನ್ನು ಆಕ್ರಮಿಸಿಕೊಂಡು ಎರಡು ಲೋಕಗಳಿಗೊಡೆಯ ಎಂಬ ಬಿರುದು ಧರಿಸಿ ಇಂಗ್ಲಿಷರೊಂದಿಗೆ ಹೋರಾಡಲು ಅವರ ವೈರಿಗಳಿಗೆ ಕರೆ ನೀಡಿದ. ಆಗ ಇಂಗ್ಲಿಷರು ಸುಮ್ಮನಿರಲಾಗಲಿಲ್ಲ. ಆರ್ಥರ್ ವೆಲೆಸ್ಲಿ ಸೈನ್ಯದೊಂದಿಗೆ ಸಿದ್ಧನಾದ. ಕೋಣಗಲ್ಲಿನಲ್ಲಿ ಕದನ ನಡೆದು ಧೋಂಡಿಯ ಹತನಾದ. ೧೮೧೯ರಲ್ಲಿ ರಾಯಚೂರು ಜಿಲ್ಲೆಯಲ್ಲಿರುವ ಕೊಪ್ಪಳದಲ್ಲೂ ಮರುವರ್ಷ ಬಿದರೆಯಲ್ಲೂ ಸಣ್ಣ ಬಂಡಾಯಗಳು ನಡೆದುವು. ಅವುಗಳನ್ನು ಅಡಗಿಸಲಾಯಿತು.

## ಕಿತ್ತೂರು

ಕಿತ್ತೂರಿನಲ್ಲಿ ನಡೆದ ಪ್ರತಿಭಟನೆ ದೊಡ್ಡದು. ಅದರ ದೊರೆ (ದೇಸಾಯಿ) ಶಿವಲಿಂಗರುದ್ರಸರ್ಜನ ೧೮೨೪ರ ಸೆಪ್ಟೆಂಬರ್ ೧೧ರಂದು ಕಾಲವಾದ. ಅವನಿಗೆ ಮಕ್ಕಳಿರಲಿಲ್ಲ. ಆದರೆ ಹಿಂದಿನ ದೇಸಾಯಿಯ ಕಾಲದಲ್ಲೇ ಶಿವಲಿಂಗಪ್ಪನನ್ನು ದತ್ತು ತೆಗೆದುಕೊಳ್ಳಲಾಗಿತ್ತು. ಆ ದತ್ತು ಸ್ವೀಕಾರಕ್ಕೆ ಒಪ್ಪಿಗೆ ದೊರಕದಂತೆ ದಖನಿನ ಕಮಿಷನರ್ ಆಗಿದ್ದ ಚಾಪ್ಲಿನನೂ ರಾಜಕೀಯ ನಿಯೋಗಿಯಾಗಿದ್ದ ಥ್ಯಾಕರೆಯೂ ಸನ್ನಾಹ ನಡೆಸಿದರು. ವಾರಸುದಾರರಿಲ್ಲವೆಂಬ ನೆಪದಿಂದ ಕಿತ್ತೂರು ಸಂಸ್ಥಾನವನ್ನು ಸ್ವಾಧೀನಪಡಿಸಿಕೊಳ್ಳುವುದೇ ಅವರ ಉದ್ದೇಶವಾಗಿತ್ತು. ಶಿವಲಿಂಗರುದ್ರಸರ್ಜನ ಮಲತಾಯಿ ರಾಣಿ ಚೆನ್ನಮ್ಮ ಈ ಬಿಕ್ಕಟ್ಟನ್ನು ಶಾಂತಿಯಿಂದ ಪರಿಹರಿಸಲೆತ್ನಿಸಿದಳು ; ಆದರೆ ಅವಳ ಪ್ರಯತ್ನ ಫಲಿಸಲಿಲ್ಲ. ಕೊನೆಗೆ ಕಿತ್ತೂರಿನ ಜನ ಪ್ರತಿಭಟಿಸಿ ನಿಂತರು. ಥ್ಯಾಕರೆಯ ಅವಿಚಾರವರ್ತನೆಯಿಂದ ಪರಿಸ್ಥಿತಿ ಹದಗೆಟ್ಟಿತು. ಆತ ಹತನಾದ. ಕ್ಯಾಪ್ಟನ್ ಬ್ಲಾಕನನ್ನೂ ಕೊಂದರು. ಮದರಾಸು, ಬೊಂಬಾಯಿ, ಷೋಲಾಪುರ, ಮೈಸೂರುಗಳಿಂದ ಬ್ರಿಟಿಷ್ ಪಡೆಗಳು ಕಿತ್ತೂರಿನ ಕಡೆ ನುಗ್ಗಿದುವು. ೧೮೨೪ರ ಡಿಸೆಂಬರ್ ೨೪ರಂದು ಕಾಳಗ ನಡೆಯಿತು. ಬ್ರಿಟಿಷರು ಗೆದ್ದರು. ಚೆನ್ನಮ್ಮನನ್ನು ಸೆರೆಹಿಡಿದು ಬೈಲಹೊಂಗಲದಲ್ಲಿ ಬಂಧಿಸಿಟ್ಟರು. ಶಾಂತಿಯನ್ನರಿಸಿ, ಅದು ದೊರೆಕದಂತಾದಾಗ ದಿಟ್ಟತನದಿಂದ ಹೋರಾಡಿದ ಚೆನ್ನಮ್ಮನನ್ನು ಕನ್ನಡಿಗರೆಲ್ಲ ಇಂದಿಗೂ ಸ್ಮರಿಸುತ್ತಾರೆ. ಅವಳ ಧೈರ್ಯ ಸ್ಥೈರ್ಯಗಳನ್ನು ಮನ

ನಾಟುವಂತೆ ಚಿತ್ರಿಸುವ ಲಾವಣಿಗಳನ್ನು ಹಾಡುತ್ತಾರೆ ; ನಾಟಕಗಳನ್ನಾಡುತ್ತಾರೆ. ಆಕೆಯ ಜೀವನವನ್ನು ಕುರಿತ ಚಲನಚಿತ್ರವೂ ತಯಾರಾಗಿದೆ. (ನೋಡಿ ಚೆನ್ನಮ್ಮ, ಕಿತ್ತೂರು ರಾಣಿ)

## ಸಂಗೊಳ್ಳಿ ರಾಯಣ್ಣ

ರಾಣಿ ಚೆನ್ನಮ್ಮನ ಬಂಧನದಿಂದ ಕಿತ್ತೂರಿನ ಪ್ರತಿಭಟನೆ ನಿಲ್ಲಲಿಲ್ಲ. ಚೌಕಿದಾರ ಸಂಗೊಳ್ಳಿ ರಾಯಣ್ಣ ಕಿತ್ತೂರಿನ ರಕ್ಷಣೆಗಾಗಿ ಹೋರಾಡಿ ಸೆರೆಸಿಕ್ಕಿ ಕೆಲಕಾಲ ಬಂಧನದಲ್ಲಿದ್ದ. ಯುದ್ಧ ಮುಗಿದ ಮೇಲೆ ಬಿಡುಗಡೆ ಹೊಂದಿ, ಶಿವಲಿಂಗಪ್ಪನ ಪರವಾಗಿ ಬ್ರಿಟಿಷರೊಡನೆ ಹೋರಾಡಲು ಪಣತೊಟ್ಟು ನಿಂತ. ರಾಯಣ್ಣನಿಗೆ ಬೆಂಬಲವಾಗಿ ಅನೇಕ ಯೋಧರು ದೊರಕಿದರು. ಮದ್ದುಗುಂಡುಗಳನ್ನು ಕೂಡಿಟ್ಟುಕೊಂಡು, ಮರಸುಕಾಳಗವನ್ನಾರಂಭಿಸಿದ. ಸರ್ಕಾರಿ ಕಟ್ಟಡಗಳು ಬೂದಿಯಾದುವು. ಖಜಾನೆಗಳ ಲೂಟಿಯಾಯಿತು. ಬ್ರಿಟಿಷ್ ಸೈನ್ಯದ ತುಕಡಿಗಳು ನಾಶವಾದುವು. ಆದರೆ ನುರಿತ ಸುಸಜ್ಜಿತ ಸೈನ್ಯದೆದುರು ರಾಯಣ್ಣನ ಸೈನ್ಯ ಹೆಚ್ಚು ಕಾಲ ನಿಲ್ಲಲಿಲ್ಲ. ೧೮೩೦ರ ಏಪ್ರಿಲ್ ೮ರಂದು ಅವನು ಸೆರೆ ಸಿಕ್ಕಿದ. ನ್ಯಾಯಸ್ಥಾನದಲ್ಲಿ ವಿಚಾರಣೆ ನಡೆದು ಅವನಿಗೆ ಗಲ್ಲಿನ ಶಿಕ್ಷೆಯಾಯಿತು.

## ಬಾದಾಮಿ

೧೮೪೧ರಲ್ಲಿ ಬಾದಾಮಿಯಲ್ಲೂ ಹೀಗೆಯೇ ಒಂದು ಬಂಡಾಯ ಜರುಗಿತು. ಇದರ ನಾಯಕ ನರಸಿಂಗ ದತ್ತಾತ್ರೇಯ ಪೇಟ್ಕರ್ ಅಥವಾ ನರಸಿಂಗರಾವ್. ಈತ ಒಂದು ಸಾವಿರಕ್ಕೂ ಹೆಚ್ಚಿನ ದಳವೊಂದನ್ನು ಕೋಟೆಯ ಮೇಲೇರಿಸಿ ಆ ಕೋಟೆಯನ್ನು ವಶಪಡಿಸಿಕೊಂಡ. ಸಾತಾರದ ದೊರೆಯ ಧ್ವಜವನ್ನು ಕೋಟೆಯ ಮೇಲೇರಿಸಿ ತಾನು ಆ ದೊರೆಗೆ ಅಧೀನನೆಂದು ಸಾರಿಕೊಂಡ. ಧಾರವಾಡ ಮತ್ತು ಬೆಳಗಾಂವಿಗಳಿಂದ ಬ್ರಿಟಿಷ್ ಸೈನ್ಯ ಬಂದು ಅದನ್ನು ವಶಪಡಿಸಿಕೊಂಡಿತು. ನರಸಿಂಗರಾಯನನ್ನು ಬೆಳಗಾಂವಿಗೆ ಕರೆದುಕೊಂಡು ಹೋಗಿ ಅಲ್ಲಿ ವಿಚಾರಣೆಗೊಳಪಡಿಸಿ ಅವನಿಗೂ ಮರಣದಂಡನೆ ವಿಧಿಸಲಾಯಿತು. ಆದರೆ ಆತ ಕುರುಡನಾಗಿದ್ದುದರಿಂದ ಅದನ್ನು ಜೀವಾವಧಿ ಶಿಕ್ಷೆಗೆ ಬದಲಾಯಿಸಿ ಅಹಮದಾಬಾದ್ ಜೈಲಿಗೆ ಕಳುಹಿಸಲಾಯಿತು.

## ಹಲಗಲಿ

ಮುಧೋಳ ಸಂಸ್ಥಾನಕ್ಕೆ ಸೇರಿದ್ದ ಹಲಗಲಿಯ ಬೇಡರು ನೀಡಿದ ಪ್ರತಿಭಟನೆ ಹೃದಯಸ್ಪರ್ಶಿಯಾದದ್ದು, ಬ್ರಿಟಿಷರು ಸಿಪಾಯಿದಂಗೆ ಎಂದು ಕರೆದ ೧೮೫೭ರ ಬಂಡಾಯದಲ್ಲಿ ಭಾರತೀಯರ ಬ್ರಿಟಿಷ್ ವಿರೋಧ ರುದ್ರರೂಪ ತಾಳಿತ್ತು. ಭಾರತೀಯರು ಆಯುಧಗಳನ್ನಿಟ್ಟುಕೊಳ್ಳುವುದನ್ನೇ ನಿಷೇಧಿಸಿದರೆ ಬ್ರಿಟಿಷರ ವಿರುದ್ಧ ಹೋರಾಟ ನಿಲ್ಲಬಹುದೆಂಬ ಭಾವನೆಯಿಂದ ೧೮೫೭ರ ಸೆಪ್ಟೆಂಬರ್ ೧೧ರಂದು ಅಸ್ತ್ರಗಳ ಕಾಯಿದೆಯೊಂದನ್ನು ಸರ್ಕಾರ ಜಾರಿಗೆ ತಂದಿತ್ತು.

ಅಸ್ತ್ರಗಳನ್ನು ಹೊಂದಿದ್ದ ಭಾರತೀಯರೆಲ್ಲ ಅವನ್ನು ಸರ್ಕಾರಕ್ಕೆ ತೋರಿಸಿ ಅವರಿಂದ ಅಪ್ಪಣೆ ಚೀಟಿ (ಲೈಸೆನ್ಸ್) ಪಡೆಯಬೇಕಾಗಿತ್ತು. ತಮ್ಮ ಅಸ್ತ್ರಗಳು ಪವಿತ್ರವೆಂದು ಭಾವಿಸಿದ್ದ ಬೇಡರು ಈ ಕಾನೂನನ್ನು ಪ್ರತಿಭಟಿಸಿದರು. ಆಯುಧಗಳನ್ನು ಹೊಂದಿರುವುದು ತಮ್ಮ ಆಜನ್ಮಸಿದ್ಧ ಹಕ್ಕು ಎಂದು ವಾದಿಸಿದರು. ಹಲಗಲಿಯ ನೆರೆಯ ಹಳ್ಳಿಗಳಾದ ಮಂಟೂರು, ಭೋಧಾನಿ, ಅಲಗುಂಡಿಗಳಿಂದಲೂ ಬೇಡರು ತಂಡತಂಡವಾಗಿ ಬಂದು ಹಲಗಲಿಯಲ್ಲಿ ನಿಂತರು. ಬ್ರಿಟಿಷರ ಸೈನ್ಯವೇ ಬಂದರೂ ಎದುರಿಸಿ ಮಡಿಯಲು ಸಿದ್ಧರಾದರು. ಬಿಜಾಪುರದಿಂದ ಕುದುರೆಯ ದಂಡೊಂದು ಬಂತು. ಜೇಡರು ಮನೆಗಳೊಳಗೆ ಅಡಗಿಕೊಂಡು ಗುಂಡು ಹಾರಿಸತೊಡಗಿದರು. ಊರ ಮಧ್ಯದ ಚೌಕವನ್ನು ವಶಪಡಿಸಿಕೊಳ್ಳಲು ಸೈನ್ಯ ಮಾಡಿದ ಪ್ರಯತ್ನ ವಿಫಲವಾಯಿತು. ಪ್ರತಿಮನೆಯೂ ಒಂದು ಬುರುಜಾಯಿತು ; ಪ್ರತಿಯೊಬ್ಬ ಬೇಡನೂ ಆವೇಶದಿಂದ ಹೋರಾಡಿದ. ಈ ಪ್ರತಿಭಟನೆಯೆದುರು ಆ ಸುಸಜ್ಜಿತ ಸೈನ್ಯಕ್ಕೂ ಮುಂದುವರಿಯಲಾಗಲಿಲ್ಲ. ಕೊನೆಗೆ ಸೇನಾಧಿಪತಿ ಸೇಟರ್ ಕೆರ್ ಆ ಮನೆಗಳಿಗೆ ಬೆಂಕಿ ಹೊತ್ತಿಸಲು ಸೈನಿಕರಿಗೆ ಆಜ್ಞೆ ಮಾಡಿದ. ಮನೆಗಳು ಹತ್ತಿ ಉರಿಯತೊಡಗಿದುವು. ಹೊರಗೆ ಬಂದರೆ ಸಾವು ; ಅದಕ್ಕಿಂತ ಹೆಚ್ಚು ಅಸಹನೀಯವಾದ ಅಪಮಾನ ಎಂದು ಭಾವಿಸಿ ಬೇಡರು ಯಾರೂ ಹೊರಗೆ ಬರಲೇ ಇಲ್ಲ. ಅವರೂ ಅವರ ಪರಿವಾರದವರೂ ಸುಟ್ಟು ಬೂದಿಯಾದರು. ಇದರಿಂದ ಒಳ್ಳೆಯದೇ ಆಯಿತು ; ಮುಂದೆ ಬ್ರಿಟಿಷರ ಅಧಿಕಾರವನ್ನು ಪ್ರತಿಭಟಿಸಿ ನಿಲ್ಲುವೆನೆನ್ನುವ ಭಾರತೀಯನಿಗೆ ಪಾಠ ಕಲಿಸಿದಂತಾಯಿತು - ಎಂದು ಸೇನಾಧಿಪತಿ ಸರ್ಕಾರಕ್ಕೆ ವರದಿ ಮಾಡಿದ.

### ಸುರಪುರ

೧೮೫೭-೫೮. ಗುಲ್ಬರ್ಗ ಜಿಲ್ಲೆಯಲ್ಲಿ ಯಾದಗಿರಿಯಿಂದ ಮೂವತ್ತು ಮೈಲಿ ದೂರದಲ್ಲಿರುವ ಸುರಪುರ ಈಗ ಒಂದು ಸಣ್ಣ ಊರು. ಹತ್ತೊಂಬತ್ತನೆಯ ಶತಮಾನದ ಪುರ್ವಾರ್ಧದಲ್ಲಿ ಇದು ಚೆನ್ನಾಗಿ ಬಾಳುತ್ತಿದ್ದ ಸಣ್ಣ ರಾಜ್ಯವಾಗಿತ್ತು. ಅಲ್ಲಿನ ಜನ ಹೆಚ್ಚಾಗಿ ಬೇಡರು. ಅವರು ಶೂರರು, ಸ್ವಾತಂತ್ರ್ಯ ಪ್ರಿಯರು. ೧೮ನೆಯ ಶತಮಾನದಲ್ಲಿದ್ದ ನಂಜುಂಡಕವಿ ಬರೆದ ಕಂಪಿಲರಾಮನಾಥಚರಿತದಲ್ಲಿ ಅವರ ಸ್ವಭಾವ ಸಂಪನ್ನತೆಗಳ ವರ್ಣನೆಯಿದೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಅವರು ಬಹುಸಂಖ್ಯೆಯಲ್ಲಿ ಅದರ ಸೈನ್ಯಕ್ಕೆ ಸೇರಿ ಉತ್ತರದ ಗಡಿಪ್ರಾಂತವನ್ನು ಮುಸ್ಲಿಮರ ದಾಳಿಯಿಂದ ಕಾಪಾಡಿದ್ದರು. ಮುಂದೆ ಅವರು ಸುರಪುರಕ್ಕೆ ಬಂದು ನೆಲಸಿದರು. ಔರಂಗಜೇಬ್ ಕಾಲವಾದ (೧೭೦೭) ಮೇಲೆ ಮರಾಠರು ಪ್ರಬಲರಾಗಿ ಸುರಪುರದ ನಾಯಕರಿಂದ ಕಪ್ಪ ವಸೂಲು ಮಾಡುತ್ತಿದ್ದರು. ಅನಂತರ ನಿಜಾಮನೂ ಮರಾಠರೊಂದಿಗೆ ಸೇರಿಕೊಂಡು ಅವರಿಂದ ೫೦,೦೦೦ ರೂ. ಕಸಿದುಕೊಂಡ. ಈ ಮಧ್ಯೆ ಬ್ರಿಟಿಷರೂ ಈ ವ್ಯವಹಾರಗಳಲ್ಲಿ ಕೈಹಾಕಿ ಲಾಭ ಗಳಿಸಿದರು. ಈ ವ್ಯವಹಾರಗಳ ಪರಿಣಾಮವಾಗಿ ಸುರಪುರದ ಖಜಾನೆ ಬರಿದಾಯಿತು.

೧೮೪೧ರಲ್ಲಿ ಸುರಪುರದ ರಾಜ ಕೃಷ್ಣಪ್ಪನಾಯಕ ಕಾಲವಾದಾಗ ಅವನ ಮಗ ವೆಂಕಟಪ್ಪನಾಯಕ ದೊರೆಯಾಗಿದ್ದ. ಮೆಡೋಸ್ ಟೇಲರನನ್ನು ರಾಜಕೀಯ ನಿಯೋಗಿಯಾಗಿ ಬ್ರಿಟಿಷ್ ಸರ್ಕಾರ ಸುರಪುರಕ್ಕೆ ಕಳುಹಿಸಿತು. ರಾಜ್ಯದ

ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಗೊಳಿಸುವುದಲ್ಲದೆ ದೊರೆಯ ವಿದ್ಯಾಭ್ಯಾಸದ ಮೇಲ್ವಿಚಾರಣೆ ನಡೆಸುವುದೂ ಟೇಲರನ ಕೆಲಸವಾಗಿತ್ತು. ಸಮರ್ಥನಾದ ಟೇಲರ್ ಆ ಎರಡು ಕಾರ್ಯಗಳನ್ನೂ ನೆರವೇರಿಸಿ ಎಲ್ಲರ ವಿಶ್ವಾಸವನ್ನೂ ಸಂಪಾದಿಸಿದ. ವೆಂಕಟಪ್ಪನಾಯಕ ಪ್ರಾಪ್ತವಯಸ್ಕನಾದ ಮೇಲೆ ಟೇಲರ್ ಹಿಂತಿರುಗಿದ (೧೮೫೩). ಆಗ ಗವರ್ನರ್-ಜನರಲ್ ಆಗಿದ್ದವನು ಡಾಲ್ಹೌಸಿ; ಇನ್ನೂ ಕೆಲಕಾಲ ರಾಜ್ಯದ ಆಡಳಿತದ ಮೇಲ್ವಿಚಾರಣೆ ನಡೆಸಿ ಸೂಕ್ತ ಸಲಹೆ ಕೊಡುವುದಕ್ಕೆ ಒಬ್ಬ ಬ್ರಿಟಿಷ್ ಅಧಿಕಾರಿಯನ್ನು ಇಟ್ಟುಕೊಂಡಿರಬೇಕೆಂದು ಆತ ದೊರೆಗೆ ತಿಳಿಸಿದ. ಹೊಸ ಅಧಿಕಾರಿಗಾಗಿ ವರ್ಷಕ್ಕೆ ೨೦,೦೦೦ ರೂ. ಖರ್ಚು ಮಾಡುವುದು ಆಗಿನ ಹಣಕಾಸು ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲವೆಂಬುದು ದೊರೆಯ ಉತ್ತರವಾಗಿತ್ತು. ನಿರ್ದಾಕ್ಷಿಣ್ಯವಾಗಿ ಬರೆದಿದ್ದ ಈ ಉತ್ತರವನ್ನೋದಿ ಡಾಲ್ಹೌಸಿಗೆ ಅಸಮಾಧಾನ ವುಂಟಾಯಿತು. ಒಂದು ಕಡೆ ನಿಜಾಮನೂ ಇನ್ನೊಂದು ಕಡೆ ಬ್ರಿಟಿಷರೂ ಸುರಪುರ ರಾಜ್ಯದ ಕೆಲವು ಪ್ರದೇಶಗಳನ್ನು ಆಕ್ರಮಿಸಿಕೊಂಡಿದ್ದುದರಿಂದ ವೆಂಕಟಪ್ಪನಾಯಕನ ಪುರ್ವಿಕರು ಆಳುತ್ತಿದ್ದ ರಾಜ್ಯ ಆ ವೇಳೆಗಾಗಲೇ ಚಿಕ್ಕದಾಗಿತ್ತು. ಅವರ ಸುಲಿಗೆಯಿಂದಾಗಿ ಸುರಪುರದ ಖಜಾನೆಯೂ ಬರಿದಾಗಿತ್ತು. ಜನರಲ್ಲಿ ಬ್ರಿಟಿಷರ ಬಗ್ಗೆ ಅಸಮಾಧಾನ ವ್ಯಾಪಕವಾಗಿ ಬೆಳೆದಿತ್ತು. ಬ್ರಿಟಿಷರನ್ನು ಭಾರತದಿಂದ ಓಡಿಸಿದ್ದಲ್ಲದೆ ಉಳಿಗಾಲವಿಲ್ಲ ಎಂಬುದು ೧೯ ವರ್ಷದ ಉತ್ಸಾಹಿ ಯುವಕ ವೆಂಕಟಪ್ಪನಾಯಕನಿಗೆ ಅರಿವಾಯಿತು. ಆತ ಸೈನ್ಯವನ್ನು ಬಲಗೊಳಿಸಲೆತ್ನಿಸಿದ. ರೋಹಿಲರು, ಅರಬರು ಮುಂತಾದವರನ್ನು ಸೈನ್ಯಕ್ಕೆ ಸೇರಿಸಿ ತರಬೇತಿ ಕೊಡಿಸಿದ. ನಾನಾ ಸಾಹೇಬನಿಗೆ ನಿಯೋಗ ಹೋಯಿತು. ಅಲ್ಲಿಂದಲೂ ನಿಯೋಗಿಗಳು ಸುರಪುರಕ್ಕೆ ಬಂದರು. ರಾಯಚೂರು ಮುಂತಾದ ಪ್ರದೇಶಗಳ ಪಾಳೆಯಗಾರರೂ ಜಮೀನ್ದಾರರೂ ಅವನಿಗೆ ನೆರವು ನೀಡುವ ಭರವಸೆಯಿತ್ತರು. ಸುರಪುರ ಪಿತೂರಿಯ ಕೇಂದ್ರವಾಯಿತು.

ಇದೆಲ್ಲವೂ ಬ್ರಿಟಿಷ್ ಅಧಿಕಾರಿಗಳಿಗೆ ತಿಳಿಯದಿರಲಿಲ್ಲ. ಲಿಂಗಸುಗೂರು, ಕರ್ನೂಲು, ಕಲಾದಗಿ ಧಾರವಾಡ ಮುಂತಾದ ಕಡೆಗಳಲ್ಲಿದ್ದ ಸೈನ್ಯಗಳಿಗೆ ಕರೆ ಹೋಯಿತು. ಕೆಲವು ದಿನಗಳಲ್ಲೇ ದೊಡ್ಡ ಸೈನ್ಯವೊಂದು ಸುರಪುರದ ಕೋಟೆಯೆದುರು ನಿಂತಿತು. ಆದರೆ ಅದನ್ನು ವಶಪಡಿಸಿಕೊಳ್ಳಲು ಬ್ರಿಟಿಷ್ ಸೈನ್ಯ ಮಾಡಿದ ಪ್ರಯತ್ನಗಳೆಲ್ಲ ವಿಫಲವಾದುವು. ಕೊನೆಗೆ ವಾಗನಗೇರಿ ಭೀಮರಾಯನೆಂಬ ದೇಶದ್ರೋಹಿ ಬ್ರಿಟಿಷರ ಸಹಾಯಕ್ಕೆ ದೊರಕಿದ. ಆತ ವೆಂಕಟಪ್ಪನಾಯಕನ ಆಪ್ತ ಸಲಹೆಗಾರ. ಕೋಟೆಯೊಳಕ್ಕೆ ಬರುವ ಗುಪ್ತದ್ವಾರವನ್ನು ಬ್ರಿಟಿಷರಿಗೆ ತೋರಿಸಿ, ಆ ಕೂಡಲೆ ವೆಂಕಟಪ್ಪನಾಯಕನ ಹತ್ತಿರ ಹೋಗಿ, ಶತ್ರುಗಳು ಒಳಗೆ ನುಗ್ಗಿದರು ; ತಪ್ಪಿಸಿಕೊಂಡು ಹೋಗು ಎಂದು ಸಲಹೆಯಿತ್ತ. ವೆಂಕಟಪ್ಪನಾಯಕ ಕೂಡಲೆ ಊರು ಬಿಟ್ಟು ಹೈದರಾಬಾದ್ ಕಡೆ ಹೊರಟ. ಅವನ ಜೊತೆ ಹೊರಟ ಭೀಮರಾಯ ದಾರಿಯಲ್ಲಿ ದೊರೆ ತಂದಿದ್ದ ಹಣ, ಜವಾಹಿರಿಯೆಲ್ಲವನ್ನೂ ಕದ್ದು ಪರಾರಿಯಾದ. ಹೈದರಾಬಾದ್ ತಲಪಿದ ಕೂಡಲೆ ವೆಂಕಟಪ್ಪನಾಯಕನ ಗುರುತು ಸಿಕ್ಕಿ, ಅವನನ್ನು ಸಿಕಂದರಾಬಾದಿನಲ್ಲಿ ಬಂಧನದಲ್ಲಿಟ್ಟರು. ವಿಚಾರಣೆ ನಡೆದು ಅವನಿಗೆ ನಾಲ್ಕು ವರ್ಷ ಸಜಾ

ವಿಧಿಸಲಾಯಿತು. ವೆಂಕಟಪ್ಪನಾಯಕನನ್ನು ಜೈಲಿಗೆ ಕೊಂಡೊಯ್ಯುತ್ತಿದ್ದಾಗ ದಾರಿಯಲ್ಲಿ ಆತ ಆತ್ಮಹತ್ಯೆ ಮಾಡಿಕೊಂಡ. ೧೮೬೧ರಲ್ಲಿ ಸುರಪುರವನ್ನು ನಿeóÁಂ ರಾಜ್ಯಕ್ಕೆ ಸೇರಿಸಲಾಯಿತು. (ನೋಡಿ- ವೆಂಕಟಪ್ಪನಾಯಕ ೨)

ನರಗುಂದ: ಬಾಬಾ ಸಾಹೇಬ

ರಾಜರಾಗಲಿ ಜಮೀನ್ದಾರರಾಗಲಿ ದತ್ತುಸ್ವೀಕಾರಕ್ಕೆ ಸರ್ಕಾರದ ಅನುಮತಿ ಪಡೆಯಬೇಕು. ಹಾಗೆ ಮಾಡದಿದ್ದರೆ ದತ್ತು ಪುತ್ರ ಆಸ್ತಿಗೆ ಹಕ್ಕುದಾರನಾಗುವುದಿಲ್ಲ-ಎಂದು ಗವರ್ನರ್-ಜನರಲ್ ಡಾಲ್ಹೌಸಿ ಹೊರಡಿಸಿದ ನಿರೂಪಿಸಿದ ಪರಿಣಾಮವಾಗಿ ಜನರಲ್ಲಿ ಅಸಮಧಾನವುಂಟಾಗಿತ್ತು. ಧಾರ್ಮಿಕ ಸಂಪ್ರದಾಯವಾಗಿದ್ದ ದತ್ತುಸ್ವೀಕಾರಕ್ಕೂ ಬ್ರಿಟಿಷರು ಅಡ್ಡಿಯೊಡ್ಡುತ್ತಾರೆ; ಆಸ್ತಿ ಕಬಳಿಸುವುದೇ ಇವರ ಉದ್ದೇಶ-ಎಂದು ಜನ ಭಾವಿಸಿದ್ದರು. ನರಗುಂದದ ಭಾಸ್ಕರರಾವ್ ಅಥವಾ ಬಾಬಾಸಾಹೇಬ ತನಗೇ ಮಕ್ಕಳಿಲ್ಲದ್ದರಿಂದ ದತ್ತು ಸ್ವೀಕಾರಕ್ಕೆ ಅನುಮತಿ ಕೇಳಿದ. ಅದು ಅವನಿಗೆ ದೊರಕಲಿಲ್ಲ. ಅದರಿಂದ ಆತ ಕೆರಳಿ ಬ್ರಿಟಿಷರನ್ನು ದೇಶದಿಂದ ಹೊಡೆದಟ್ಟಲು ನಿರ್ಧರಿಸಿದ. ದೇಶದ ನಾನಾಕಡೆಗೆ ಗುಪ್ತದೂತರನ್ನು ಕಳುಹಿಸಿ, ಬಂಡಾಯಕ್ಕೆ ಕರೆಕೊಟ್ಟ. ಉತ್ತರ ಭಾರತದಲ್ಲಾಗಲೇ ಬ್ರಿಟಿಷರಿಗೆ ವಿರೋಧವಾಗಿ ಬಂಡಾಯ ಪ್ರಾರಂಭವಾಗಿತ್ತು. ದತ್ತುಸ್ವೀಕಾರಕ್ಕೆ ಅನುಮತಿ ದೊರಕದಿರಲು ಮುಖ್ಯ ಕಾರಣನಾದ ಬ್ರಿಟಿಷ್ ಅಧಿಕಾರಿ ಮ್ಯಾನ್ಸನ್ ಕೊಲೆಗೀಡಾದ. ಆದರೆ ಮ್ಯಾನ್ಸನನ ಹತ್ತಿರ ಇದ್ದ ಕಾಗದಪತ್ರಗಳನ್ನು ನೋಡಿದಾಗ, ತನ್ನ ಅನುಯಾಯಿಗಳಲ್ಲೇ ಕೆಲವರು ದ್ರೋಹಿಗಳಿದ್ದುದು ಬಾಬಾಸಾಹೇಬನಿಗೆ ತಿಳಿದುಬಂತು. ಸೇಡು ತೀರಿಸಿಕೊಂಡದ್ದಾಯಿತು. ಇನ್ನು ಅವನಿಗೆ ಉಳಿದಿದ್ದ ಒಂದೇ ವÆರ್ಗವೆಂದರೆ ನರಗುಂದದಲ್ಲಿ ನಿಂತು ಹೋರಾಡುವುದು. ಬ್ರಿಟೀಷ್ ಸೈನ್ಯ ನರಗುಂದದ ಕೋಟೆಗೆ ಮುತ್ತಿಗೆ ಹಾಕಿದಾಗ ಭೀಕರ ಕದನ ನಡೆಯಿತು. ಕೋಟೆ ಶತ್ರುಗಳ ಕೈವಶವಾಗುತ್ತದೆಂದು ತಿಳಿದಾಗ ಬಾಬಾ ಸಾಹೇಬ ಅಲ್ಲಿಂದ ತಪ್ಪಿಸಿಕೊಂಡ. ಆದರೆ ತೋರಗಲ್ ಕಾಡಿನಲ್ಲಿ ಹೋಗುತ್ತಿದ್ದಾಗ ಸೆರೆಸಿಕ್ಕಿದ. ಬೆಳಗಾಂವಿಯಲ್ಲಿ ವಿಚಾರಣೆ ನಡೆಸಿ ಅವನನ್ನು ಗಲ್ಲಿಗೇರಿಸಲಾಯಿತು.

ಮುಂಡರಗಿ ಭೀಮರಾವ್

ಇನ್ನೊಬ್ಬ ಬಂಡಾಯಗಾರ. ಈತ ಶ್ರೀಮಂತ ಮನೆತನದವನಲ್ಲ; ಸ್ವಶಕ್ತಿಯಿಂದ ಬಾಳುತ್ತಿದ್ದ ಮಧ್ಯಮವರ್ಗದ ಮನೆತನಕ್ಕೆ ಸೇರಿದ್ದವ; ಆದರೆ ಮೇಧಾವಂತ, ಶೂರ, ಸಾಹಸಿ, ಉತ್ತಮ ಬೇಟೆಗಾರನೆಂದು ಹೆಸರು ಪಡೆದಿದ್ದ. ವಿದ್ಯಾವಂತನಾಗಿ ಹರಪನಹಳ್ಳಿ., ಬಳ್ಳಾರಿ ಈ ಎರಡು ಕಡೆಗಳಲ್ಲಿ ತಹಸೀಲ್ದಾರನಾಗಿ ಕೆಲಸ ಮಾಡಿದ್ದ. ನಾಡಿನ ಪರಿಸ್ಥಿತಿ, ಉತ್ತರ ಭಾರತದಲ್ಲಿ ನಡೆಯುತಿದ್ದ ವಿದ್ಯಾಮಾನಗಳು-ಎಲ್ಲರನ್ನೂ ಅರಿತಿದ್ದ ಅವನಿಗೆ ಬ್ರಿಟಿಷ್ ಸರ್ಕಾರದ ನೌಕರನಾಗಿರಲು ಸಾಧ್ಯವಾಗಲಿಲ್ಲ. ಹೆಮ್ಮಿಗಿಯ ಕೆಂಚನಗೌಡ, ಸೊರಟೂರಿನ ದೇಸಾಯಿ ಮುಂತಾದ ನಾಯಕರನ್ನೂ

ಅವರ ಅನುಯಾಯಿಗಳನ್ನೂ ಕೂಡಿಕೊಂಡು ಒಂದು ಪಡೆ ನಿರ್ಮಿಸಿ ಡಂಬಳದ ಖಜಾನೆಯನ್ನು ಲೂಟಿ ಮಾಡಿ ಕೂಪ್ಪಳಕ್ಕೆ ಹೋಗಿ ಅದರ ಕೋಟೆಯನ್ನು ವಶಪಡಿಸಿಕೊಂಡ. ಆಗ ಸರ್ಕಾರ ಎಚ್ಚತ್ತು ಹೈದರಾಬಾದ್, ರಾಯಚೂರು, ಧಾರವಾಡ ಮುಂತಾದ ಕಡೆಗಳಿಂದ ಸೈನ್ಯವನ್ನು ತರಿಸಿತು. ಕೊಪ್ಪಳದ ಸುತ್ತ ಭಾರಿ ಕದನ ನಡೆಯಿತು. ಮದ್ದುಗುಂಡು ತೀರಿ ಇನ್ನು ಗೆಲ್ಲುವ ಆಸೆಯಿಲ್ಲವೆಂದು ಕಂಡುಬಂದಾಗ ಭೀಮರಾವ್ ಆತ್ಮಹತ್ಯೆ ಮಾಡಿಕೊಂಡ.

## ಅಸಹಕಾರ ಚಳುವಳಿ

ಬಲಪ್ರಯೋಗದಿಂದ ಬ್ರಿಟಿಷನ್ನು ದೇಶದಿಂದೋಡಿಸುವುದು ಸಾಧ್ಯವಿಲ್ಲವೆಂಬುದು ಖಚಿತವಾಯಿತು. ಇನ್ನು ಉಳಿದಿದದ್ದ ಮಾರ್ಗವೊಂದೇ: ಅವರು ದೇಶವನ್ನಾಳುವುದೇ ಸಾಧ್ಯವಿಲ್ಲದಂತೆ ಮಾಡಿ, ತಾವಾಗಿಯೇ ದೇಶವನ್ನು ಬಿಟ್ಟು ಹೋಗುವಂತೆ ಮಾಡುವುದು. ಬ್ರಿಟಿಷರ ಆದಳಿತ ಭಾರತದಲ್ಲಿ ಸ್ಥಿರವಾದಂತೆಲ್ಲಾ ಈ ನಿಟ್ಟಿನಲ್ಲಿ ಜನರ ಸಂಘಟನೆ ಬೆಳೆಯಲಾರಂಭಿಸಿತು.

ಬ್ರಿಟಿಷರು ಭಾರತದಲ್ಲಿ ತಮ್ಮ ಭಾಷೆ, ಧರ್ಮ ಸಂಸ್ಕೃತಿಗಳನ್ನು ಹರಡಬೇಕೆಂಬ ಉದ್ದೇಶದಿಂದ ಇಂಗ್ಲಿಷ್ ವಿದ್ಯೆ ಹರಡುವಂತೆ ಪ್ರೋತ್ಸಾಹ ಕೊಟ್ಟರು. ಸಾವಿರಾರು ವರ್ಷಗಳಿಂದ ತಮ್ಮದೇ ಆದ ಸಂಸ್ಕೃತಿಯನ್ನು ಬೆಳೆಸಿಕೊಂಡಿದ್ದ ಭಾರತೀಯರು ಪಾಶ್ಚಾತ್ಯರ ಭಾಷೆ ಸಾಹಿತ್ಯಗಳನ್ನು ಕಲಿತದ್ದೂ ಅಲ್ಲದೆ, ಬ್ರಿಟಿಷರು ತಮ್ಮ ದೇಶದಲ್ಲಿ ಅನುಸರಿಸುತ್ತಿದ್ದ ರಾಜಕೀಯ ನೀತಿ ತತ್ವಗಳಿಗೂ ಭಾರತದಲ್ಲಿ ಅವರ ರಾಜ್ಯನೀತಿಗೂ ಇದ್ದ ಭಿನ್ನತೆಯನ್ನು ಅರಿತುಕೊಂಡರು. ಇಂಗ್ಲೆಂಡಿನಲ್ಲಿದ್ದುದು ಉದಾರನೀತಿ; ಭಾರತದಲ್ಲಿ ಪ್ರಗತಿವಿರೋಧ ನೀತಿ. ಇಂಗ್ಲೆಂಡಿನಲ್ಲಿ ಪ್ರಜಾಭಿಪ್ರಾಯಕ್ಕೆ ಮನ್ನಣೆ ಇತ್ತು; ಭಾರತದಲ್ಲಿ ಅದು ಸಾಮ್ರಾಜ್ಯ ನೀತಿಯನ್ನನುಸರಿಸುತ್ತಿತ್ತು. ಇಂಡಿಯ ಕೌನ್ಸಿಲ್ ಸದಸ್ಯನಾಗಿದ್ದ ಸರ್ ಎರ್ಸ್ಕಿನ್ ಪೆರಿ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದ. ಇಂಗ್ಲೆಂಡಿನಲ್ಲಿ ಆಗ ಉದಾರವಾದಿ ಪಕ್ಷ ಜನಮನ್ನಣೆ ಪಡೆದಿತ್ತು. ಇಷ್ಟೂ ಅಲ್ಲದೆ ಸುರೇಂದ್ರನಾಥ ಬ್ಯಾನರ್ಜಿ. ದಾದಾಭಾಯಿ ನವರೋಜಿ ಮುಂತಾದ ಕೆಲವು ಪ್ರತಿಭಾವಂತ ಭಾರತೀಯರು ಬ್ರಿಟಿಷರ ಆಡಳಿತದಿಂದ ದೇಶಕೊದಗಿದ್ದ ಅನರ್ಥ ಪರಂಪರೆಗಳನ್ನು ತಮ್ಮ ಭಾಷಣಗಳಲ್ಲಿ ಹೃದಯಂಗಮವಾಗಿ ಚಿತ್ರಿಸುತ್ತಿದ್ದರು. ಅಷ್ಟೂ ಅಲ್ಲದೆ, ೧೮೬೧ ರಿಂದ ೧೮೯೯ರ ವರೆಗಿನ ಅವಧಿಯಲ್ಲಿ, ಆರು ದೊಡ್ಡ ಕ್ಷಾಮಗಳೂ ಅನಾವೃಷ್ಟಿಯಿಂದ ಪದೇ ಪದೇ ಅಭಾವ ಪರಿಸ್ಥಿತಿಯೂ ಸಂಭವಿಸಿ ಜನ ಕಂಗೆಟ್ಟಿದ್ದರು. ೧೮೭೬-೭೭ರ ಕ್ಷಾಮದಲ್ಲಿ ಬಳ್ಳಾರಿ ಜಿಲ್ಲೆಯ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿ ನಾಲ್ಕರಲ್ಲೊಂದು ಭಾಗ ಜನ ಸತ್ತರು. ದಕ್ಷಿಣ ಭಾರತದಲ್ಲಿ ಈ ಕ್ಷಾಮಕ್ಕೆ ಬಲಿಯಾದವರ ಸಂಖ್ಯೆ ಐವತ್ತು ಲಕ್ಷ. ದೇಶ ಇಂಥ ಆಪತ್ತಿಗೆ ಈಡಾಗಿದ್ದಾಗ, ಸಾಮ್ರಾಜ್ಯವಾದಿ ವೈಸಾರಾಯ್ ಲಾರ್ಡ್ ಲಿಟನ್, ವಿಕ್ಟೋರಿಯ ರಾಣಿ ಭಾರತದ ಸಾಮ್ರಾಜ್ಞಿಯೆಂಬ ಬಿರುದನ್ನು ಧರಿಸಿದುದರ ಗೌರವಾರ್ಥವಾಗಿ ವೈಭವದ ದರ್ಬಾರ್ ನಡೆಸಿದ. ಈ ಆಡಂಬರಕ್ಕಾದ ಖರ್ಚಿನಿಂದ ಹೊಟ್ಟೆಗಿಲ್ಲದೆ ಸಾಯುತ್ತಿದ್ದ ಲಕ್ಷಾಂತರ ಭಾರತೀಯರಿಗೆ ಈ ಹಣದಿಂದ ಅನ್ನ ಒದಗಿಸಬಹುದಾಗಿತ್ತು.

## ಕಾಂಗ್ರೆಸ್ ಸ್ಥಾಪನೆ

ಭಾರತೀಯರಿಗೆ ತಮ್ಮ ಪರಿಸ್ಥಿತಿಯ ಅರಿವು ಹೆಚ್ಚಾದಂತೆ ಬ್ರಿಟಿಷರ ವಿಷಯದಲ್ಲಿ ಅಸಮಾಧಾನ ಬೆಳೆಯಿತು. ಉದಾರವಾದಿಗಳಾದ ಕೆಲವು ಬ್ರಿಟಿಷರೂ ಭಾರತೀಯರಲ್ಲಿ ಸಹಾನುಭೂತಿ ಹೊಂದಿದ್ದರು. ಕೊನೆಗೆ ೧೮೮೫ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪಿತವಾಯಿತು. ರಾಷ್ಟ್ರದ ನಾನಾ ಕಡೆಗಳ ಜನ ಇದಕ್ಕೆ ಸದಸ್ಯರಾದರು. ಕಾಂಗ್ರೆಸ್ ತನ್ನ ಆರಂಭದೆಶೆಯಲ್ಲಿ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ದೊರಕಿಸಿಕೊಳ್ಳಬೇಕೆಂಬ ಆಶೋತ್ತರವನ್ನೇನೂ ಇಟ್ಟುಕೊಂಡಿರಲಿಲ್ಲ. ಸರ್ಕಾರ ಕೂಡ ಮೊದಮೊದಲು ಈ ಸಂಸ್ಥೆಯ ಬಗ್ಗೆ ಸೌಹಾರ್ದಭಾವನೆಯನ್ನೇ ತಳೆದಿತ್ತು. ಕೇಂದ್ರದಲ್ಲೂ ಪ್ರಾಂತ್ಯಗಳಲ್ಲೂ ಸ್ವಯಮಾಡಳಿತವಿರಬೇಕು. ಪ್ರತಿಯೊಬ್ಬ ಭಾರತೀಯನಿಗೂ ವಿದ್ಯಾಭ್ಯಾಸ ದೊರಕಬೇಕು. ಸರ್ಕಾರದಲ್ಲಿ ಜವಾಬ್ದಾರಿಯ ಉದ್ಯೋಗಗಳು ಭಾರತೀಯರಿಗೆ ದೊರಕಬೇಕು, ಸೈನ್ಯದ ಎಲ್ಲಾ ಹುದ್ದೆಗಳಲ್ಲೂ ಭಾರತೀಯರಿಗೆ ಅವಕಾಶವಿರಬೇಕು. ಇಂಗ್ಲೆಂಡಿನಲ್ಲಿಯ ಇಂಡಿಯ ಕೌನ್ಸಿಲ್ ರದ್ದಾಗ ಬೇಕು. ಸರ್ಕಾರದ ಕಾರ್ಯಾಂಗ ನ್ಯಾಯಾಂಗಗಳನ್ನು ಪ್ರತ್ಯೇಕಿಸಬೇಕು. ಇವೇ ಆಗ ಕಾಂಗ್ರೆಸ್ಸಿನ ಮುಖ್ಯ ಬೇಡಿಕೆಗಳು. ಈ ಬೇಡಿಕೆಗಳನ್ನು ಕೂಡ ಸರ್ಕಾರ ಗಣನೆಗೆ ತೆಗೆದುಕೊಳ್ಳಲಿಲ್ಲ.

ಉತ್ತರ ಕರ್ನಾಟಕದ ಬಹುಭಾಗ ಬೊಂಬಾಯಿ ಪ್ರಾಂತ್ಯಕ್ಕೆ ಸೇರಿಹೋಗಿ ಮಹಾರಾಷ್ಟ್ರದ ಮುಖಂಡರ ಪ್ರಭಾವಕ್ಕೊಳಗಾಗಿತ್ತು. ಅಲ್ಲಿ ಲೋಕಮಾನ್ಯ ಬಾಲ ಗಂಗಾಧರ ತಿಲಕರ ಸ್ಫೂರ್ತಿಯುತ ಭಾಷಣಗಳೂ ಅವರ ಕೇಸರಿ ಪತ್ರಿಕೆಯ ಲೇಖನಗಳೂ ಆ ಪ್ರಾಂತ್ಯದ ಕನ್ನಡಿಗರನ್ನು ಹುರಿದುಂಬಿಸಿದವು. ಭಯವನ್ನು ಬಿಡಬೇಕೆಂದೂ ನಿರುತ್ಸಾಹವನ್ನು ನೀಗಬೇಕೆಂದು ವÆತೃಭೂಮಿಯ ಹಿರಿಮೆ ಘನತೆ ಗೌರವಗಳಿಗೆ ತಕ್ಕಂತೆ ಬಾಳಬೇಕೆಂದೂ ಸ್ವಾಮಿ ವಿವೇಕಾನಂದರು ಎಲ್ಲಾರಿಗೂ ಕರೆಕೊಟ್ಟರು. ರಾಷ್ಟ್ರ ಪ್ರೇಮವನ್ನು ಕೆರಳಿಸಿ ಜನರಿಗೆ ನವೋತ್ಸಾಹವನ್ನು ನೀಡುವ ಭವಾನಿ ತಲಪಾರ್, ರಾಣಾಭೀಮದೇವ್ ಮುಂತಾದ ಅನೇಕ ನಾಟಕಗಳು ರಂಗಭೂಮಿಯ ಮೇಲೆ ಪ್ರಯೋಗವಾದವು. ಕೆಲವು ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ರ್ಯಾಂಡ್, ಐರ್ಸ್ಟ ಎಂಬ ಬ್ರಿಟಿಷ್ ಅಧಿಕಾರಿಗಳನ್ನು ಕೊಲೆ ಮಾಡಿದವರು ಗಲ್ಲಿಗೆ ಗುರಿಯಾದರು. ಇದರಿಂದ ಜನ ಹೆಚ್ಚು ಕೆರಳಿದರು. ಜನರ ಬಾಯಿ ಮುಚ್ಚಿಸಲೂ ವೃತ್ತಪತ್ರಿಕೆಗಳ ಸ್ವಾತಂತ್ರ್ಯವನ್ನು ಕಸಿದುಕ್ಕೊಳ್ಳಲೂ ಹೊಸ ಕಾನೂನುಗಳು ಜಾರಿಗೆ ಬಂದವು. ಜನತೆ ಹೆಚ್ಚುತ್ತಿದ್ದ ಕಾಲದಲ್ಲಿ ಇಂಥ ದಮನನೀತಿಯ ಪರಿಣಾಮವೆಂದರೆ, ಜವಾಹರಲಾಲ್ ನೆಹರು ಹೇಳಿದಂತೆ ಮೊತ್ತಮೊದಲಿಗೆ ಭಾರತ ರಾಜಕೀಯದಲ್ಲಿ ಬಾಂಬಿನ ಪ್ರವೇಶ. ಬಂಗಾಳದ ವಿಭಜನೆ ಸಾಲದೆಂಬಂತೆ, ವೈಸರಾಯ್ ಕರ್ಜನ್ ಭಾರತೀಯರನ್ನು ತುಚ್ಛವಾಗಿ ಪರಿಗಣಿಸಿದ. ನನಗೆ ಇಬ್ಬರು ಹೆಂಡರು: ಒಬ್ಬಳು ಹಿಂದು, ಒಬ್ಬಳು ಮುಸಲ್ಮಾನ್. ಎರಡನೆಯವಳೇ ನನಗೆ ಅಚ್ಚುಮೆಚ್ಚು.-ಎಂದು ವಿಭಜಿತ ಬಂಗಾಲದ ಒಂದು ಭಾಗದ ಗವರ್ನರಾಗಿ ಫುಲ್ಲರ್ ಆಡಿದ ಅಸಭ್ಯ ನುಡಿಯನ್ನು ಜನ ಸಹಿಸದಾದರು. ಲೋಕಮಾನ್ಯರ ನಾಯಕತ್ವದಲ್ಲಿ ಕರ್ನಾಟಕ ಜನತೆಯೂ ಸ್ವದೇಶಿ, ಬಹಿಷ್ಕಾರ (ಬಾಯ್ಕಾಟ್)

ಮುಂತಾದ ಚಳವಳಿಗಳನ್ನು ನಡೆಸಿತು. ೧೯೦೫-೬ರಲ್ಲಿ ಲೋಕಮಾನ್ಯರು ಉತ್ತರ ಕರ್ನಾಟಕದಲ್ಲಿ ಪ್ರವಾಸ ಮಾಡಿದರು. ನಿಮ್ಮ ಆರ್ಷೇಯ ಧರ್ಮ ಸಂಸ್ಕೃತಿಗಳನ್ನು ನೆನೆಯಿರಿ. ಅವುಗಳ ಪುನರುಜ್ಜೀವನಕ್ಕೆ, ಭಾರತದ ಹಿರಿಮೆಯನ್ನು ಪುನಃ ಮೆರೆಯುವುದಕ್ಕೆ, ಸ್ವದೇಶಿ ಚಳುವಳಿ, ಬಹಿಷ್ಕಾರ, ದೇಶಿಯ ವಿದ್ಯಾಶಿಕ್ಷಣ, ಇವು ಮೂಲಸಾಧನಗಳು-ಎಂದು ಜನಕ್ಕೆ ಭೋಧಿಸಿದರು. ಅಲೂರು ವೆಂಕಟರಾಯರು, ಮುದವೀಡು ಕೃಷರಾಯರು ಸಕ್ಕರಿ ಬಾಳಾಚಾರ್ಯ ಮುಂತಾದ ಕನ್ನಡಿಗ ನಾಯಕರು ಕರ್ಣಾಟಕದಲ್ಲೆಲ್ಲ ಪ್ರವಾಸ ಮಾಡಿ ಸ್ವದೇಶೀ ಸ್ವರಾಜ್ಯಗಳ ಸಂಕೇತವನ್ನು ಹರಡಿದರು. ಸ್ವದೇಶಿ ಕೈಗಾರಿಕೆಗಳು ನಾನಾಕಡೆ ಸ್ಥಾಪಿತವಾದವು; ಕಿತ್ತೂರಿನಲ್ಲೂ ಬಾದಾಮಿಯಲ್ಲೂ ನೇಯ್ಗೆ, ಧಾರವಾಡದಲ್ಲಿ ಬೆಂಕಿಕಡ್ಡಿ, ಲಕ್ಷ್ಮೇಶ್ವರದಲ್ಲಿ ಪಿಂಗಾಂಣಿ ಸಾಮಾನು- ಹೀಗೆ ನಾನಾ ಕಡೆಗಳಲ್ಲಿ ದಿನಬಳಕೆಯ ಸಾಮಾನು ತಯಾರಿಕೆ ಪ್ರಾರಂಭವಾಯಿತು. ಇದಕ್ಕೆ ಪೋಷಕವಾಗಿ ರಾಷ್ಟ್ರೀಯ ಬ್ಯಾಂಕ್ಗಳನ್ನೂ ಸ್ಥಾಪಿಸಿದರು. ರಾಣಿಬೆನ್ನೂರು ಮುಂತಾದ ಕಡೆಗಳಲ್ಲಿ ವಿದೇಶಿ ಬಟ್ಟೆಗಳನ್ನು ಸುಟ್ಟರು. ಧಾರವಾಡ, ಬೆಳಗಾಂವಿ, ನವಗುಂದ, ಹಾನಗಲ್ ಮುಂತಾದ ಅನೇಕ ಕಡೆಗಳಲ್ಲಿ ರಾಷ್ಟ್ರೀಯ ವಿದ್ಯಾಶಾಲೆಗಳು ಸ್ಥಾಪಿತವಾದವು.

ಲೋಕಮಾನ್ಯ ತಿಲಕರು ಕೇಸರಿ ಪತ್ರಿಕೆಯಲ್ಲಿ ಬರೆದಿದ್ದ ಒಂದು ಲೇಖನ ರಾಜದ್ರೋಹವೆಂದು ಅವರನ್ನು ನ್ಯಾಯಸ್ಥಾನದಲ್ಲಿ ವಿಚಾರಣೆಗೊಳಪಡಿಸಿ ಅವರಿಗೆ ಆರು ವರ್ಷ ಕಾರಾಗೃಹ ಶಿಕ್ಷೆವಿಧಿಸಿಧಾಗ ಇದಕ್ಕೆ ವಿರೋಧವಾಗಿ ಮೆರವಣಿಗೆಗಳೂ ಸಭೆಗಳು ದೇಶದ ನಾನಾಕಡೆ ಜರುಗಿದವು. ಇವುಗಳನ್ನಡಗಿಸುವುದಕ್ಕೆ ಲಾಠಿ ಪ್ರಯೋಗವೇ ಮುಂತಾದ ಕ್ರಮಗಳನ್ನು ಸರ್ಕಾರ ಕೈಗೊಂಡಿತು. ಕರ್ನಾಟಕದಲ್ಲೂ ಸರ್ಕಾರಕ್ಕೆ ಪ್ರತಿಭಟನೆ ವ್ಯಾಪಕವಾಗಿತ್ತು. ದಕ್ಷಿಣ ಕನ್ನಡದಲ್ಲಿ ಅಮ್ಮೆಂಬಳ ಶ್ರೀನಿವಾಸ ಪೈ, ಸುಬ್ಬರಾಯ ಬಾಳಿಗ ಮುಂತಾದವರು. ಬಳ್ಳಾರಿಯ ಕಡೆ ಕೋಲಾಚಲಂ ವೆಂಕಟರಾವ್ ಮತ್ತು ಸಭಾಪತಿ ಮೊದಲಿಯಾರ್ ಮುಂತಾದವರು ಸರ್ಕಾರವನ್ನು ಖಂಡಿಸಿದಲ್ಲದೆ ಕಾಂಗ್ರೆಸ್ ಚಳುವಳಿಯನ್ನು ಮುಂದುವರೆಸಿದರು. ೧೯೦೯ರಲ್ಲಿ ಮಾರ್ಲೆ-ಮಿಂಟೋ ಸುಧಾರಣೆಗಳು ಬಂದಾಗ ಕಾಂಗ್ರೆಸ್ ಅದನ್ನು ವಿರೋಧಿಸಿತು. ೧೯೧೪ರಲ್ಲಿ ಯುರೋಪಿನಲ್ಲಿ ಒಂದನೆಯ ಮಹಾಯುದ್ಧ ಪ್ರಾರಂಭವಾಯಿತು. ಪ್ರಜಾಪ್ರಭುತ್ವದ ಉಳಿವಿಗಾಗಿ ಈ ಯುದ್ಧ ನಡೆಯುತ್ತಿತ್ತೆಂಬುದಾಗಿ ಮಿತ್ರರಾಷ್ಟ್ರಗಳು ಘೋಷಿಸಿಕೊಂಡರೂ ಭಾರತದಲ್ಲಿ ಮಾತ್ರ ಅದನ್ನು ಸ್ಥಾಪಿಸುವ ಸೂಚನೆಗಳಿರಲಿಲ್ಲ. ಆದರೂ ಭಾರತ ಬ್ರಿಟನ್ಗೆ ನೀಡಿದ ನೆರವು ಅಪಾರ. ಇದರ ಫಲವಾಗಿ ೧೯೧೯ರ ಸುಧಾರಣೆಗಳು ಬಂದವು. ಆದರೆ ಇವು ಕಾಂಗ್ರೆಸ್ಸಿಗೆ ತೃಪ್ತಿಕೊಡಲಿಲ್ಲ. ಗಾಂಧೀಜಿಯವರಾಗಲೇ ದಕ್ಷಿಣ ಆಫ್ರಿಕದಿಂದ ಭಾರತಕ್ಕೆ ಬಂದಿದ್ದರು. ಮುಂದೆ ಭಾರತದ ಹೋರಾಟ ನಿರ್ದಿಷ್ಟ ಮಾರ್ಗದಲ್ಲಿ ಮುಂದುವರಿಯಿತು.

## ಬೆಳಗಾಂವಿಯ ಕಾಂಗ್ರೆಸ್ ಅಧಿವೇಶನ

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಕರ್ನಾಟಕದ ಬೆಳಗಾಂವಿಯಲ್ಲಿ ಜರುಗುವುದೆಂಬ ತೀರ್ಮಾನವಾದಾಗ ಕನ್ನಡ ಜನ ಹೆಮ್ಮೆಯಿಂದಲೂ ಉತ್ಸಾಹದಿಂದಲೂ ಅದಕ್ಕೆ ಸಿದ್ಧತೆ ಮಾಡಿಕೊಂಡರು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್

ಅಧಿವೇಶನ, ಬಿಜಾಪುರ ಜಿಲ್ಲಾ ಕಾಂಗ್ರೆಸ್ ಅಧಿವೇಶನ, ಕರ್ನಾಟಕ ಖಿಲಾಫತ್ ಪರಿಷತ್, ಭಗಿನೀಮಂಡಲ ಪರಿಷತ್, ಕರ್ನಾಟಕ ಸಾಹಿತ್ಯ ಸಮ್ಮೇಳನ, ಸ್ವಯಂಸೇವಕರ ಸಮ್ಮೇಳನ ಇವು ಬಿಜಾಪುರದಲ್ಲಿ ಜರುಗಿದವು. ಖಾದಿ ವಸ್ತು ಪ್ರದರ್ಶನ, ದನಗಳ ಜಾತ್ರೆ ಮತ್ತು ರಾಷ್ಟ್ರೀಯ ಗೀತೆಗಳ ಕಂಠಪಾಠ ಸ್ಪರ್ಧೆಗಳೂ ಸಾಂಗವಾಗಿ ನೇರವೇರಿದವು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮ್ಮೇಳನಕ್ಕೆ ಸಿ. ರಾಜಗೋಪಾಲಚಾರಿ ಯವರೇ ಅಧ್ಯಕ್ಷರು. ಕಾರ್ನಾಡ್ ಸದಾಶಿವರಾವ್, ಹರ್ಡೇಕರ್ ಮಂಜಪ್ಪ, ಎನ್.ಸಿ. ಕೇಳ್ಕರ್ ಮುಂತಾದ ಅಖಿಲಭಾರತ ಖ್ಯಾತಿ ಪಡೆದ ಅನೇಕರು ಅಧಿವೇಶನದಲ್ಲಿ ಹಾಜರಿದ್ದರು. ಆದರೆ ಎಲ್ಲಾಕ್ಕಿಂತ ಹೆಚ್ಚಾಗಿ, ಕರ್ನಾಟಕದ ಭಾಗ್ಯವಿಶೇಷವೆಂಬಂತೆ ಗಾಂಧೀಜಿ ಯವರೇ ಬೆಳಗಾಂವಿಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರು. ಗಾಂಧೀಜಿಯವರು ತಮ್ಮ ಅಧ್ಯಕ್ಷಭಾಷಣದಲ್ಲಿ ನಾಡಿನ ಐಕ್ಯಮತ್ಯ, ಅಸ್ಪೃಶ್ಯತಾ ನಿವಾರಣೆ, ಖಾದಿಪ್ರಚಾರ, ಗ್ರಾಮೋದ್ಯೋಗ, ಸ್ವದೇಶಿ, ಅಹಿಂಸೆ-ಮುಂತಾದವುಗಳ ಬಗ್ಗೆ ಭಾಷಣ ಮಾಡಿದರು. ಈ ರಚಾನಾತ್ಮಕ ಕಾರ್ಯಗಳೂ ಸ್ವಾತಂತ್ರ್ಯ ಚಳವಳಿಯಷ್ಟೆ ಮುಖ್ಯವೆಂದು ಒತ್ತಿ ಹೇಳಿದರು. ಕರ್ನಾಟಕ ಜನತೆಯಲ್ಲಿ ಹೊಸ ಸ್ಫೂರ್ತಿ ಮೂಡಿತು. ನಾಡಿನ ಮುಖಂಡರೆ್ಲ ಕರ್ನಾಟಕದ ನಾನಾ ಕಡೆ ಸಂಚರಿಸಿ ಗಾಂಧೀಜಿಯವರ ಸಂದೇಶವನ್ನು ಜನರಲ್ಲಿ ಹರಡಿದರು. ಮೈಸೂರು ಸಂಸ್ಥಾನದಲ್ಲಿ ಕೆಲವು ಕಡೆ ಮೆರವಣಿಗೆ ಭಾಷಣಗಳನ್ನು ಅಧಿಕಾರಿಗಳು ನಿಷೇಧಿಸಿದರೂ ರಚನಾತ್ಮಕ ಕಾರ್ಯಗಳಿಗೆ ಸರ್ಕಾರ ಅಡ್ಡಿ ಬರಲಿಲ್ಲ. ಆದರೆ ಕರ್ನಾಟಕದ ಇತರ ಕಡೆಗಳಲ್ಲಿ ಚಳವಳಿಗಾರರಿಗೂ ಅಧಿಕಾರಿಗಳಿಗೂ ಘರ್ಷಣೆ ಅನಿವಾರ್ಯವೆಂಬುದು ಸ್ಪಷ್ಟವಾಯಿತು. ಹೋರಾಟ ಮುಂದುವರಿಯಬೇಕಿತ್ತು. ಕರ್ನಾಟಕದ ಜನರೂ ಸಿದ್ಧವಾಗಿದ್ದರು.

## ಕಾನೂನುಭಂಗ ಚಳವಳಿ

ಗಾಂಧೀಜಿಯವರು ೧೯೩೦ರ ಎಪ್ರಿಲ್ ೬ರಂದು ದಂಡಿಯಾತ್ರೆ ಪ್ರಾರಂಭಿಸಿದರು. ಕರ್ನಾಟಕದ ತಂಡದಲ್ಲಿ ಮೊದಲಿಂದ ಇದ್ದವರು ಮೈಲಾರ ಮಹದೇವಪ್ಪ ಮಾತ್ರ (ನೋಡಿ- ಮಹಾದೇವಪ್ಪ, ಮೈಲಾರ). ಆದರೆ ಹುಬ್ಬಳ್ಳಿ, ಬೆಳಗಾಂವಿ, ಮಂಗಳೂರು ಮುಂತಾದ ಕಡೆಗಳಿಂದ ಸ್ವಯಂಸೇವಕರು ಬಂದು ಸೇರಿಕೊಂಡರು. ಸರ್ಕಾರದ ಮುಖಂಡರನ್ನು ಹಿಡಿದು ಶಿಕ್ಷೆಗೊಳಪಡಿಸಿತು. ವಿದ್ಯಾರ್ಥಿಗಳೂ ಬಂದು ಸೇರಿಕೊಂಡರು. ಸರ್ಕಾರದ ದಬ್ಬಾಳಿಕೆ ಹೆಚ್ಚಿದಂತೆ ಸತ್ಯಾಗ್ರಹಿಗಳ ಸಂಖ್ಯೆಯೂ ಹೆಚ್ಚಿತು. ಸ್ತ್ರೀಯರೂ ಅಧಿಕ ಸಂಖ್ಯೆಯಲ್ಲಿ ಭಾಗವಹಿಸತೊಡಗಿದರು. ಗಾಂಧೀಜಿಯವರು ದರ್ಶನದಲ್ಲಿದ್ದ ಉಪ್ಪಿನ ಉಗ್ರಾಣದ ಮೇಲೆ ಧಾಳಿ ನಡೆಸಿದಾಗ, ಕರ್ನಾಟಕದ ತಂಡ ಸಾಣುಕಟ್ಟೆ ಉಗ್ರಾಣಕ್ಕೆ ಹೋಗಿ ನೂರಾರು ಪೌಂಡು ಉಪ್ಪನ್ನು ಸಾಗಿಸಿ ಕುಮಟದಲ್ಲಿ ಮಾರಿತು. ಮೇ ೪ರಂದು ಗಾಂಧೀಜಿಯವರನ್ನು ಬಂಧಿಸಿ ಯೆರವಾಡ ಸೆರೆಮನೆಗೆ ಕೊಂಡೊಯ್ದರು. ಹರತಾಳ ಖಂಡನಾಸಭೆ ಪ್ರದರ್ಶನಗಳು ಎಲೆಲ್ಲೂ ಜರುಗಿದವು. ಉಪ್ಪಿಗೆ ಮಾತ್ರ ಸೀಮಿತವಾಗಿದ್ದ ಕಾನೂನು ಉಲ್ಲಂಘನೆ ಆಗ ಇತರ ಕೆಲವು ವಸ್ತುಗಳಿಗೂ ಹರಡಿತು. ಸತ್ಯಾಗ್ರಹದ ಸಮಾಚಾರ ಹರಡದಂತೆ ಸರ್ಕಾರ ಹೊಸ ವೃತ್ತಪತ್ರಿಕಾ ಆಜ್ಞೆಗಳನ್ನು ಹೊರಡಿಸಿತು; ಜನ

ಕಲ್ಲಚ್ಚಿನ ಪತ್ರಿಕೆಗಳನ್ನು ಹೊರಡಿಸಿ ಜನರಲ್ಲಿ ಹಂಚಿದರು. ಸತ್ಯಾಗ್ರಹಿಗಳಿಗೆ ಯಾವ ರೀತಿಯ ಆಶ್ರಯವನ್ನೂ ಕೊಡಬಾರದೆಂದು ಸರ್ಕಾರ ಆಜ್ಞೆ ಹೊರಟಿತು. ಗೃಹಿಣಿಯರು ಕೂಡ ಇದನ್ನು ಉಲ್ಲಂಘಿಸಿ ಅವರಿಗೆ ಆಶ್ರಯ ನೀಡಿದರು.

ಸತ್ಯಾಗ್ರಹ ವ್ಯಾಪಕವಾಯಿತು. ಹೊರದೇಶಗಳ ಬಟ್ಟೆಗಳಿಗೆ ಬಹಿಷ್ಕಾರ, ಅರಣ್ಯ ಸತ್ಯಾಗ್ರಹ, ಮದ್ಯದಂಗಡಿಗಳ ಮುಂದೆ ತಡೆಕಾವಲು, ಕರನಿರಾಕರಣೆ, ಮುಂತಾದ ಎಲ್ಲಾ ಚಟುವಟಿಕೆಗಳೂ ಕರ್ನಾಟಕದಲ್ಲೂ ಪ್ರಾರಂಭವಾದವು. ಮೈಸೂರು ಸಂಸ್ಥಾನದಲ್ಲೂ ಸರ್ಕಾರ ಕಾಂಗ್ರೆಸ್ಸಿಗರ ಮೇಲೆ ಲಾಠಿ ಪ್ರಯೋಗಗಳೇ ಮುಂತಾದ ಕ್ರಮಗಳನ್ನು ಕೈಗೊಂಡಿತು. ಆದರೆ ಚಳವಳಿ ಬೆಳೆಯುತ್ತಲೇ ಹೋಯಿತು. ಇಲ್ಲಿ ಒಂದು ಗಮನೀಯ ಅಂಶ ಮೊದಲ ಬಾರಿಗೆ ಕಂಡುಬಂತು. ಹರಿದು ಹಂಚಿಹೋಗಿದ್ದ ಕರ್ನಾಟಕದ ಜನ ತಮ್ಮ ಶೋಚನೀಯ ಪರಿಸ್ಥಿತಿಯನ್ನರಿತರು. ಕನ್ನಡಿಗರೆಲ್ಲಾ ಒಂದಾಗಿ ಬಾಳಬೇಕೆಂಬ ಆಸೆ ಅವರಲ್ಲಿ ಬಲಗೊಂಡಿತು. ಕರ್ನಾಟಕ ಪ್ರಾಂತ್ಯನಿರ್ಮಾಣಕ್ಕೆ ಈ ಹೋರಾಟದ ಕಾಲದಲ್ಲಿ ಬಲ ದೊರಕಿತು. ಈ ಹೋರಾಟಕ್ಕೆ ಪ್ರತಿಭಾವಂತರೂ ಸಮರ್ಥರೂ ಆದ ನಾಯಕರೂ ದೊರೆತರು. ಗಂಗಾಧರರಾವ್ ದೇಶಪಾಂಡೆ, ಕಡಪ ರಾಘವೇಂದ್ರರಾವ್, ಶ್ರೀನಿವಾಸರಾವ್ ಕೌಜಲಗಿ, ಹರ್ಡೇಕರ್ ಮಂಜಪ್ಪ, ಸದಾಶಿವರಾವ್ ಕಾರ್ನಾಡ್, ಎಸ್.ಎಸ್. ಸೆಟ್ಲೂರ್, ಆರ್. ಆರ್. ದಿವಾಕರ, ಶಿವಮೂರ್ತಿಶಾಸ್ತ್ರಿ ಇಂಥವರ ಮುಂದಾಳುತನದಲ್ಲಿ ಕರ್ನಾಟಕವೂ ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಗಣನೀಯ ಪಾತ್ರವಹಿಸಿತು. ಕರನಿರಾಕರಣೆಯಲ್ಲಿ ಅಂಕೋಲ, ಶಿರಸಿ, ಸಿದ್ದಾಪುರ ಪ್ರಾಂತ್ಯಗಳು ಮಾಡಿದ ಬಲಿದಾನ ವೃತ್ತಾಂತವನ್ನು ಸರ್ದಾರ್ ಪಟೇಲರು ಕೇಳಿ, ಆ ನನ್ನದೇಶ ಬಾಂದವರ ತ್ಯಾಗ, ದೇಶಪ್ರೇಮ, ಅವರು ಅನುಭವಿಸಿದ ಕಷ್ಟನಷ್ಟಗಳು ಇವುಗಳಿಂದ ನಾನು ತುಂಬ ಮನನೊಂದಿದ್ದೇನೆ-ಎಂದರು. ಸ್ಕೂಲು ಕಾಲೇಜುಗಳಿಂದ ವಿದ್ಯಾಥಿರ್‌ಗಳು ಹೊರಬಂದು ಅಧಿಕ ಸಂಖ್ಯೆಯಲ್ಲಿ ಭಾಗವಹಿಸತೊಡಗಿದರು. ಸಂಸ್ಥಾನಗಳ ಪ್ರಜಾ ಸಮ್ಮೇಳನ, ಮೈಸೂರು ಯುವಕ ಸಮ್ಮೇಳನಗಳು ೧೯೩೦ರಲ್ಲಿ ಬೆಂಗಳೂರಿನಲ್ಲಿ ಜರುಗಿ ಮೈಸೂರಿನಲ್ಲೂ ಶಾಸನಬದ್ಧ ರಾಜಪ್ರಭುತ್ವವೇರ್ಪಡಬೇಕು ಎಂಬ ನಿರ್ಣಯವನ್ನು ಅಂಗೀಕರಿಸಲಾಯಿತು.

ಈ ಮಧ್ಯೆ ಟೀಷರೂ ಕಾಂಗ್ರೆಸನ್ನು ಒಲಿಸಿಕೊಳ್ಳಲು ಅರೆಮನಸ್ಸಿನ ಯತ್ನ ನಡೆಸಿದರು. ಮೂರು ಚಕ್ರಗೋಷ್ಠಿಗಳಾದವು. ಕಾಂಗ್ರೆಸ್ಸಿಗೆ ತೃಪ್ತಿಯಾಗುವ ಯಾವ ತೀರ್ಮಾನವನ್ನೂ ಕೈಗೊಳ್ಳ ಲಾಗಲಿಲ್ಲ. ಆದರೂ ಸಂಧಾನಗಳ ಫಲವಾಗಿ ೧೯೩೪ರಲ್ಲಿ ಕಾಂಗ್ರೆಸ್ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ನಿಲ್ಲಿಸಿತು. ೧೯೩೫ರಲ್ಲಿ ಪ್ರಾತೀಯ ಸ್ವಯಮಾಧಿಪತ್ಯವನ್ನು ಭಾರತಕ್ಕೆ ಕೊಡಲಾಯಿತು. ಕಾಂಗ್ರೆಸ್ಸಿನ ಕೆಲವರಿಗೆ ಇದು ಇಷ್ಟವಿಲ್ಲದಿದ್ದರೂ ಉಳಿದವರು ಇದನ್ನು ಒಪ್ಪಿದದರು. ೧೯೩೭ರಲ್ಲಿ ಪ್ರಾಂತ್ಯಗಳಲ್ಲಿ ಹೊಸ ಸರ್ಕಾರಗಳನ್ನು ರಚಿಸಲಾಯಿತು. ಆದರೆ ೧೯೩೯ರಲ್ಲಿ ಎರಡನೆಯ ಮಹಾಯುದ್ಧ ಪ್ರಾರಂಭವಾದಾಗ, ಭಾರತವನ್ನು ಕೇಳದೆ ಬ್ರಿಟನ್ ಅದನ್ನು ಯುದ್ಧಕ್ಕೆ ಎಳೆದದ್ದು ತಪ್ಪು ಎಂಬ ಕಾರಣದಿಂದ ಪ್ರಾಂತೀಯ ಮಂತ್ರಿಮಂಡಲಗಳು ರಾಜಿನಾಮೆಯಿತ್ತವು. ಈ ಯುದ್ಧ ತಮ್ಮದಲ್ಲವೆಂದು ಹೇಳುವ

ಸ್ವಾತಂತ್ರವೂ ಜನಕ್ಕಿರಲಿಲ್ಲವಾದ್ದರಿಂದ ಗಾಂಧೀಜಿಯವರು ವೈಯಕ್ತಿಕ ಸತ್ಯಾಗ್ರಹ ಪ್ರಾರಂಭಿಸಿದರು. ಯುದ್ಧವಿರೋಧಿ ಘೋಷಣೆಗಳನ್ನು ಕೂಗಿ ಸೆರೆಮನೆ ಸೇರುವ ಈ ವಿಶಿಷ್ಟ ಸತ್ಯಾಗ್ರಹದಲ್ಲಿ ಭಾಗವಹಿಸಿ ದಸ್ತಗಿರಿಯಾದ ನಿಷ್ಠಾವಂತ ಸತ್ಯಾಗ್ರಹಿಗಳಲ್ಲಿ ಕನ್ನಡಿಗರೂ ಇದ್ದರು.ಬ್ರಿ

೧೯೪೨ರಲ್ಲಿ ಬ್ರಿಟಿಷರನ್ನು ಭಾರತದಿಂದ ಉಚ್ಚಾಟಿಸುವ ಚಳವಳಿ ಆರಂಭವಾಯಿತು. ಗಾಂಧೀಜಿ ಆದಿಯಾಗಿ ಅನೇಕ ಮುಖಂಡರು ದಸ್ತಗಿರಿಯಾದಾಗ ರಂಗನಾಥ ದಿವಾಕರ, ಹುಕ್ಕೇರಿಕರ, ಡಿ.ಪಿ.ಕರಮರಕರ, ಚೆನ್ನಬಸಪ್ಪ ಅಂಬಲಿ ಮುಂತಾದವರು ಬೊಂಬಾಯಿಯಲ್ಲಿ ಭೂಗತರಾಗಿ ಚಳವಳಿಯನ್ನು ನಿರ್ದೇಶಿಸಿದರು. ಗಂಗಾಧರರಾವ್ ದೇಶಪಾಂಡೆ, ಎನ್.ಎಸ್. ಹರ್ಡೀಕರ, ಕಬ್ಬೂರ ಮುಂತಾದ ಅನೇಕರು ಬಂಧಿತರಾದರು. ಮೊದಲು ನಗರಕ್ಕೆ ಮಾತ್ರ ಸೀಮಿತವಾಗಿದ್ದ ಸಂಪು ಹಳ್ಳಿಗಳಿಗೂ ಹರಡಿತು. ಚಳವಳಿ ಉಗ್ರವಾಯಿತು. ೧೯೪೨ರ ಆಗಸ್ಟ್ ೯ರಿಂದ ಒಂದು ವರ್ಷದಲ್ಲಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಬಂಧಿತರಾದವರ ಸಂಖ್ಯೆಯನ್ನು ಮುಂದೆ ಕೊಟ್ಟಿದೆ: ಬೆಳಗಾಂವಿ ೧,೨೫೫ ಧಾರವಾಡ ೧,೧೪೭ ಉತ್ತರ ಕನ್ನಡ ೫೧೫ ಬಿಜಾಪುರ ೫೦೦ ದಕ್ಷಿಣ ಕನ್ನಡ ೨೭ ಬಳ್ಳಾರಿ ೧೧೨ ಮೈಸೂರು ಸಂಸ್ಥಾನ ೨,೫೦೦ ಕೊಡಗು ೭೪ ಗೋಲಿಬಾರು ನಡೆದ ಕೆಲವು ಸ್ಥಳಗಳ ಹೆಸರು, ಸತ್ತವರ ಮತ್ತು ಗಾಯಗೊಂಡವರ ಸಂಖ್ಯೆ-ಇವನ್ನು ಮುಂದೆ ಕೊಟ್ಟಿದೆ: ಸತ್ತವರ ಸಂಖ್ಯೆ: ಗಾಯಗೊಂಡವರ ಸಂಖ್ಯೆ: ಬೈಲಹೊಂಗಲ ೭ ೯ ನಿಪ್ಪಾಣಿ ೨ ೮ ಶಿಲಾಪುರ ೧ ೧ ಕೋಳೀಗುಡ್ಡ - ೨ ಖವಟಕೊಪ್ಪ ೧ ೬ ಹುಬ್ಬಳ್ಳಿ ೧ ೧೮ ಮೈಸೂರು ಸಂಸ್ಥಾನ ೧೫೬ ೭೮೯

ಲಾಠಿ ಪ್ರಹಾರಗಳ ವಿವರ ಈ ರೀತಿ ಇದೆ: ಪ್ರಹಾರ ಸಂಖ್ಯೆ: ಗಾಯಗೊಂಡವರ ಸಂಖ್ಯೆ: ಬೆಳಗಾಂವಿ ೬ ೬೫ ಗದಗ ೩ ೩ ಹಾವೇರಿ ೨ ೮ ತಾಳೀಕೋಟೆ ೧ ೨ ಅಂಕೋಲ ೨ - ಮಂಗಳೂರು ೬ ೫೦ ಕಾರ್ಕಳ ೧ ೧೧ ಬೆಂಗಳೂರು ೧೨ ೬೦

ಜನರನ್ನು ಚದುರಿಸಲು ಬೆಂಗಳೂರಿನ ಕಾಲ್ದಳ ಕುದುರೆಗಳನ್ನು ಬಳಸಲಾಗಿತ್ತು. ಚಳುವಳಿಯಲ್ಲಿ ಭಾಗವಹಿಸಿದ್ದವರನೇಕರಿಗೆ ಸರ್ಕಾರ ಬಗೆಬಗೆಯ ಉಗ್ರದಂಡನೆ ವಿಧಿಸುತ್ತಿತ್ತು. ಛಟಕೀ ಶಿಕ್ಷೆ ಇಂಥವುಗಳಲ್ಲೊಂದು. ಅಲ್ಲದೆ ಸಾಮೂಹಿಕ ದಂಡಕ್ಕೆ ಅನೇಕ ಹಳ್ಳಿಗಳ ಜನ ತುತ್ತಾದರು. ಬೆಳಗಾಂವಿಯ ಜಿಲ್ಲೆಯಲ್ಲಿ ೮ ಹಳ್ಳಿಗಳ ಮೇಲೆ ೧,೭೮,೦೦೦ರೂ.ಗಳನ್ನು ಧಾರವಾಡ ಜಿಲ್ಲೆಯಲ್ಲಿ ೧೮ ಹಳ್ಳಿಗಳ ಮೇಲೆ ೫೩,೫೦೦ರೂ.ಗಳನ್ನು ಬಿಜಾಪುರ ಜಿಲ್ಲೆಯಲ್ಲಿ ೨ ಹಳ್ಳಿಗಳ ಮೇಲೆ ೩೦,೦೦೦ ರೂ.ಗಳನ್ನೂ ಮೈಸೂರು ಸಂಸ್ಥಾನದಲ್ಲಿ ೪ ಹಳ್ಳಿಗಳ ಮೇಲೆ ೨,೦೦೦ ರೂ.ಗಳನ್ನೂ ದಂಡವಾಗಿ ವಿಧಿಸಲಾಯಿತು. ಸತ್ಯಾಗ್ರಹಿಗಳಿಗೆ ಮಾರ್ಗದರ್ಶಕರಾಗಿ ಮುಖಂಡರಿಲ್ಲದಿದ್ದರೂ ಚಳವಳಿಗಾರರ ಕಾರ್ಯಕ್ರಮಬದ್ಧವಾಗಿ ಮುಂದುವರಿಯಿತು. ಕೊಂಚವೂ ಧೃತಿಕೆಡದೆ ಒಂದೇ ಸಮನಾಗಿ ಹೋರಾಡಿ ಕೊನೆಗೆ ಆತ್ಮಾರ್ಪಣೆ ಮಾಡಿದ ಮಹದೇವಪ್ಪ ಮೈಲಾರ, ಯಾರಿಗೂ ಹಿಂಸೆ ಕೊಡದೆ ಸರ್ಕಾರದ ಕಟ್ಟಡಗಳಿಗೆ ಬೆಂಕಿಯಿಡುವುದೇ ಮುಂತಾದ ವಿಧ್ವಂಸಕ ಕಾರ್ಯ ನಡೆಸಿದ ಚೆನ್ನಪ್ಪ ವಾಲಿ ಮತ್ತು ಸಂಗಡಿಗರು, ಸೈನ್ಯದ

ತುಕಡಿಯೊಂದನ್ನು ತರುತ್ತಿದ್ದ ರೈಲನ್ನು ತಡೆಯಲು ಅದಕ್ಕೆ ಅಡ್ಡವಾಗಿ ಕಂಬಿಗಳ ಮಧ್ಯೆ ನಿಂತು ಸೈನ್ಯಾಧಿಕಾರಿಯ ಗುಂಡಿಗೆ ಬಲಿಯಾದ ದಾವಣಗೆರೆಯ ಹಲ್ಲೂರು ನಾಗಪ್ಪ, ಹುಬ್ಬಳ್ಳಿಯಲ್ಲಿ ಪೋಲಿಸರ ಗುಂಡು ತಗುಲಿ ಸಾಯವ ಸ್ಥಿತಿಯಲ್ಲಿದ್ದಾಗ ಡಾಕ್ಟರು ಅನುಕಂಪದಿಂದ ಮಗು ನಿನಗೇನು ಬೇಕಪ್ಪ? ಎಂದು ಕೇಳಿದಾಗ ತನಗೆ ಸ್ವರಾಜ್ಯ ಬೇಕು ಎಂದು ದಿಟ್ಟತನದಿಂದ ಉತ್ತರ ಕೊಟ್ಟ ೧೬ ವರ್ಷದ ಹುಡುಗ ನಾರಾಯಣ ದೋಣಿ-ಇಂಥ ಸತ್ಯಾಗ್ರಹಿಗಳು ಅನೇಕ.

ಮೈಸೂರು ಹೈದರಾಬಾದು ಸಂಸ್ಥಾನಗಳಲ್ಲಿ ನಡೆದ ಚಳವಳಿ ಇಬ್ಬಗೆಯಾದುದು: ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವುದರ ಜೊತೆಗೆ ದೇಶಿಯ ಅರಸರು ಸಾಂಕುಶ ಪ್ರಭುಗಳಾಗಿರಲೊಪ್ಪಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವಂತೆ ಮಾಡುವುದು. ೧೯೨೦ರಲ್ಲಿ ನಾಗಪುರದಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ದೇಶಿಯ ಸಂಸ್ಥಾನಗಳು ಕೂಡ ಅದರ ಕಕ್ಷೆಯೊಳಕ್ಕೆ ಬಂದವು. ಈ ಕಾಲದಲ್ಲಿ ಮೈಸೂರಿನಲ್ಲೂ ರಾಜಕೀಯ ಸಮ್ಮೇಳನಗಳು ನಡೆದು ಸಂಸ್ಥಾನ ಜನರ ಆಶೋತ್ತರಗಳು ಖಚಿತವಾದವು. ೧೯೨೪ರಲ್ಲಿ ಬೆಳಗಾಂವಿಯಲ್ಲಿ ಸೇರಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಮೈಸೂರಿನವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ೧೯೨೭ರಲ್ಲಿ ಗಾಂಧೀಜಿಯವರು ಮೈಸೂರಿಗೆ ಭೇಟಿ ನೀಡಿದರು. ಇದರಿಂದ ಜನರಲ್ಲಿ ಜಾಗೃತಿ ಅಧಿಕವಾಯಿತು.

ಸಂಸ್ಥಾನ ಸರ್ಕಾರದ ನೀತಿಯೂ ಆಗ ಕಟುವಾಗಿಯೇ ಇತ್ತು. ಅನಾವೃಷ್ಟಿಯಿಂದಾಗಿ ಬೆಳೆಗಳು ಸರಿಯಾಗಿ ಆಗದಿದ್ದರೂ ಸರ್ಕಾರ ನಿರ್ದಯೆಯಿಂದ ಕಂದಾಯ ವಸೂಲು ಮಾಡುತ್ತಿದುದ್ದ ದನ್ನು ಪ್ರತಿಭಟಿಸಿ ಶಿವಮೊಗ್ಗ, ಶಿರಾಳಕೊಪ್ಪ ಮತ್ತು ಮಂಡ್ಯದ ರೈತರು ಕರನಿರಾಕರಣೆ ಚಳವಳಿ ಕೈಗೊಂಡರು. ಕಾರ್ಮಿಕ ಚಳವಳಿಯೂ ಬಲಗೊಂಡಿತು. ೧೯೨೮ರಲ್ಲಿ ಮೈಸೂರು ಸಂಸ್ಥಾನದಲ್ಲೂ ಕಾಂಗ್ರೆಸ್ ಸಂಸ್ಥೆ ಸ್ಥಾಪಿತವಾಯಿತು. ೧೯೩೦ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಮೈಸೂರಿನವರೂ ಭಾಗವಹಿಸಿದ್ದರು. ದೇಶಿಯ ಸಂಸ್ಥಾನಗಳ ಪ್ರತಿನಿಧಿಗಳ ಸಮ್ಮೇಳನಗಳು ಜವಾಬ್ದಾರಿ ಸರ್ಕಾರ ಹೋರಾಟಕ್ಕೆ ಪುಷ್ಟಿಕೊಟ್ಟವು. ಮೈಸೂರು ಸಂಸ್ಥಾನದ ಹೋರಾಟದ ಇತಿಹಾಸದಲ್ಲಿ ೧೯೩೭ ಇನ್ನೊಂದು ಮುಖ್ಯ ಘಟ್ಟ. ಮೈಸೂರಿನಲ್ಲಿದ್ದ ಎರಡು ಪ್ರಮುಖ ಪಕ್ಷಗಳಾದ ಪ್ರಜಾಪಕ್ಷವೂ ಕಾಂಗ್ರೆಸ್ಸೂ ಆಗ ಒಂದಾದುವು. ದೇಶಿಯ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸಲು ಹೋರಾಟ ನಡೆಸಲು ಅವಕ್ಕೆ ಪ್ರತ್ಯೇಕವಾದ ಕಾಂಗ್ರೆಸ್ ಸಂಸ್ಥೆ ಇರಬೇಕೆಂಬ ತತ್ತ್ವವನ್ನು ಭಾರತ ರಾಷ್ಟ್ರೀಯ ಕಾಂಗ್ರೆಸ್ಸೂ ಒಪ್ಪಿತು. ೧೯೩೮ರಲ್ಲಿ ಶಿವಪುರದಲ್ಲಿ ಸೇರಿದ್ದ ಮೈಸೂರು ಕಾಂಗ್ರೆಸ್ ಅಧಿವೇಶನದಿಂದ ಚಳವಳಿ ಉಗ್ರವಾಯಿತು. ೧೯೪೨ರಲ್ಲಿ ಚಳವಳಿಯ ಕಾಲದಲ್ಲಿ ಇದು ಅಖಿಲಭಾರತ ಚಳವಳಿಯೊಂದಿಗೆ ಸಮಾವೇಶಗೊಂಡಿತು. ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಸ್ವತಂತ್ರರೆಂದು ಘೋಷಿಸಲ್ಪಟ್ಟ ಸಂಸ್ಥಾನಾಧೀಶರು ಭಾರತದ ಒಕ್ಕೂಟದಲ್ಲಿ ತಮ್ಮ ಸಂಸ್ಥಾನವನ್ನು ವಿಲೀನಗೊಳಿಸಬೇಕೆಂದೂ ಜವಾಬ್ದಾರಿ ಸರ್ಕಾರ ಸ್ಥಾಪಿಸಬೇಕೆಂದೂ ಮೈಸೂರು ಚಲೋ ಚಳವಳಿ ಅತ್ಯಂತ ಉಗ್ರವಾಗಿ ನಡೆಯಿತು. ಮೈಸೂರಿನಲ್ಲೂ ಪ್ರಜಾಪ್ರತಿನಿಧಿಗಳ ಸರ್ಕಾರ ಸ್ಥಾಪಿತವಾಯಿತು.

## ಈಸೂರು ಪ್ರಕರಣ

ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದಲ್ಲಿ ಚಿರಸ್ಮರಣೀಯವಾದದೆಂದರೆ ಈಸೂರು ಪ್ರಕರಣ. ಈಸೂರು ಶಿವಮೊಗ್ಗ ಜಿಲ್ಲೆಯಲ್ಲಿರುವ ಶಿಕಾರಿಪುರ ತಾಲ್ಲೂಕಿನ ಒಂದು ಸಣ್ಣ ಗ್ರಾಮ. ಇಲ್ಲಿಯ ಜನ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರವೇರ್ಪಡಬೇಕು ಎಂದು ೧೯೨೯ರಲ್ಲಿ ಸಂಸ್ಥಾನದ ಪ್ರಜೆಗಳು ನಡೆಸಿದ ಚಳವಳಿಯಲ್ಲಿ ಭಾಗವಹಿಸಿದ್ದರು. ೧೯೪೨ರ ಚಳವಳಿಯಲ್ಲೂ ಮೊದಲಿನಿಂದ ಪಾಲುಗೊಂಡಿದ್ದರು. ೧೯೪೨ರ ಮಧ್ಯಕಾಲದಲ್ಲಿ ಅವರು ತಮ್ಮದೇ ಆದ ಒಂದು ವಿಶಿಷ್ಟ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರು. ಸುಮಾರು ಇನ್ನೂರು ಜನರನ್ನು (ಅದರಲ್ಲಿ ಹೆಚ್ಚು ಮಂದಿ ತರುಣರೇ) ಒಳಗೊಂಡ ಒಂದು ಮೆರವಣಿಗೆ ಆ ಹಳ್ಳಿಯ ಬೀದಿಗಳಲ್ಲಿ ಪ್ರತಿನಿತ್ಯ ಹೊರಡುತ್ತಿತ್ತು. ಕಚೇರಿಗೆ ಬೆಂಕಿಯಿಟ್ಟು ಸುಡಿ, ಗೌಡರ ಶಾನುಭೋಗರ ಸರ್ಕಾರಿ ಲೆಕ್ಕಪುಸ್ತಕಗಳನ್ನು ಸುಟ್ಟುಹಾಕಿ, ಸರ್ಕಾರದ ನೌಕರರಿಗೆ ಎಂದೂ ಗೌರವವನ್ನೂ ಕೊಡಕೂಡದು, ಕೊಟ್ಟವರ ಮನೆಯನ್ನು ಸುಡುತ್ತೇವೆ, ತೇಗದ ಮರಗಳನ್ನು ಕಡಿದುರುಳಿಸಿ, ಯಾರೂ ಭೂಕಂದಾಯವನ್ನು ಕೊಡಕೂಡದು- ಇಂಥವೇ ಅವರ ಕೂಗುಗಳು. ಒಂದು ದಿನ ಅಲ್ಲಿಯ ಶ್ಯಾನುಭೋಗ ಮತ್ತು ಪಟೇಲ ಬಂದಾಗ ಅವರ ಸರ್ಕಾರಿ ಪುಸ್ತಕಗಳನ್ನೆಲ್ಲಾ ಅವರಿಂದ ಕಸಿದುಕೊಂಡರು. ಮಾರನೆಯ ದಿನವೇ ಆ ಹಳ್ಳಿಗೆ ಸ್ವತಂತ್ರಹಳ್ಳಿ ಎಂಬ ಹೆಸರಿಟ್ಟು ಒಂದು ಬೋರ್ಡನ್ನೂ ಬರೆದು ತಗಲುಹಾಕಿದರು. ಹೊಸ ಸರ್ಕಾರವನ್ನೇ ಸ್ಥಾಪಿಸಿದರು ಈ ಯುವಕರು. ಹತ್ತು ವರ್ಷದ ಹುಡುಗ ಜಯಪ್ಪ ಅಮಲ್ದಾರನಾಗಿ ನೇಮಕ ಹೊಂದಿದ. ೧೨ವರ್ಷದ ಮಲ್ಲಪ್ಪಸರ್ವಾಧಿಕಾರಿಯಾದ. ಇತರ ಅಧಿಕಾರಿಗಳನ್ನೂ ನೇಮಿಸಲಾಯಿತು. ಎಲ್ಲರೂ ನಿಯಮಬದ್ಧರಾಗಿ ಹುರುಪಿನಿಂದ ಕೆಲಸ ಮಾಡತೊಡಗಿದರು. ಪ್ರತಿಯೊಬ್ಬನೂ ಖಾದಿಟೋಪಿ ಧರಿಸಬೇಕೆಂಬ ನಿಯಮವನ್ನು ಜಾರಿಗೆ ತರಲಾಯಿತು. ಎಲ್ಲರೂ ಸೇರಿದಾಗ ಕರೆಗಂಟೆ ಬಾರಿಸುತ್ತಿದ್ದರು. ಹುಡುಗರ ಶಿಸ್ತು, ನಿಯಮ ಪಾಲನೆ ಎಲ್ಲರನ್ನು ಅಚ್ಚರಿಗೊಳಿಸಿತು. ಸೆಪ್ಟೆಂಬರ್ ೨೮ರಂದು ಅಮಲ್ದಾರರು ತಕ್ಕಸಿಬ್ಬಂದಿಯೊಡನೆ ಈ ಸ್ವತಂತ್ರ್ಯ ಹಳ್ಳಿಗಳಿಗೆ ಬಂದರು. ಊರಿನ ಕರೆಗಂಟೆ ಬಾರಿಸಿತು. ಎಲ್ಲರೂ ಕಲೆತರು. ಅಮುಲ್ದಾರರಿಗೆ ಧರಿಸಲು ಖಾದಿ ಟೋಪಿ ಕೊಟ್ಟರು. ಅವರು ಶಾಂತರಾಗಿದ್ದರೂ ಅವರೊಂದಿಗೆ ಇದ್ದ ಪೋಲೀಸ್ ಅಧಿಕಾರಿಗೆ ಇದು ಸಹಿಸಲಿಲ್ಲ. ಲಾಠಿ ಹೊಡೆತ ಪ್ರಾರಂಭವಾಯಿತು. ಕಾಳಗವೇ ನಡೆಯಿತು. ಪೋಲೀಸ್ ಅಧಿಕಾರಿ, ಅಮಲ್ದಾರ ಇಬ್ಬರೂ ಸಾವಿಗೆ ಈಡಾದರು. ಸ್ವಲ್ಪ ಕಾಲದಲ್ಲೇ ಹೆಚ್ಚು ಪೋಲೀಸರಲ್ಲದೆ ಒಂದು ಸೈನ್ಯದ ತುಕಡಿಯೂ ಬಂದಿತು. ಇವರು ಅಮಾನುಷ ರೀತಿಯಲ್ಲಿ ಆ ಹಳ್ಳಿಯವರ ಮೇಲೆ ಸೇಡು ತೀರಿಸಿಕೊಂಡರು. ನಲವತ್ತೊಂದು ಮಂದಿ ನ್ಯಾಯಸ್ಥಾನದಲ್ಲಿ ವಿಚಾರಣೆಗೊಳಗಾದರು. ಅವರಲ್ಲಿ ಐದು ಜನಕ್ಕೆ ಮರಣದಂಡನೆ ವಿಧಿಸಲಾಯಿತು.

## ಹೈದಾರಾಬಾದ್ ಕರ್ನಾಟಕದಲ್ಲಿ

ಹೈದಾರಾಬಾದ್ ಕರ್ನಾಟಕವೂ ಸ್ವಾತಂತ್ರ್ಯ ಹೋರಾಟದಲ್ಲಿ ಎಂದೂ ಹಿಂದೆ ಬಿದ್ದಿರಲಿಲ್ಲ. ೧೮೫೭ರ ಸಂಗ್ರಾಮದಲ್ಲಿ ಕೊಪ್ಪಳದ ಮುಂಡರಗಿ ಭೀಮರಾವ್, ಸುರಪುರದ ವೆಂಕಟಪ್ಪನಾಯಕ ಮುಂತಾದವರು ಬ್ರಿಟಿಷರೊಂದಿಗೆ ಹೋರಾಡಿ ಮಡಿದಿದ್ದರು. ತಿಲಕರ ರಾಜಕೀಯ ಆಂದೋಲನದಿಂದ ಈ ಜಾಗೃತಿ ಬೆಳೆಯಿತು: ಗಾಂಧೀಜಿ ಯವರ ಅಸಹಕಾರ ಚಳವಳಿಯ ಸಮಯದಲ್ಲಿ ಖಚಿತವಾಗತೊಡಗಿತು. ನಿಜಾಮ್ ಕನ್ನಡಿಗರ ಸರ್ವತೋಮುಖ ಏಳಿಗೆಗಾಗಿ ನಿಜಾಮ್ ಕರ್ನಾಟಕ ಪರಿಷತ್ತೊಂದನ್ನು ಸ್ಥಾಪಿಸಬೇಕೆಂದು ೧೯೩೪ರಲ್ಲಿ ರಾಯಚೂರಿನಲ್ಲಿ ನಡೆದ ಕನ್ನಡ ಸಾಹಿತ್ಯಸಮ್ಮೇಳನದ ಸಮಯದಲ್ಲಿ ತಿರ್ಮಾನವಾಯಿತು. ಅದರಂತೆ ೧೯೩೭ರಲ್ಲಿ ಹೈದರಾಬಾದಿ ನಲ್ಲಿ ಪರಿಷತ್ತು ಸೇರಿತು. ಆಂಧ್ರ ಮಹಾರಾಷ್ಟ್ರ ವಿಭಾಗಗಳೂ ಇದೇ ಬಗೆಯ ಚಟುವಟಿಕೆಗಳ ನ್ನಾರಂಭಿಸಿದ್ದವು. ಹೈದಾರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಟುವಟಿಕೆಗಳು ಅಧಿಕೃತವಾಗಿ ಪ್ರಾರಂಭವಾದದ್ದು ಆಗಲೇ. ಇದೇ ಕಾಲಕ್ಕೆ ಬಿರುಸಾಗಿ ನಡೆದ ವಂದೇ ಮಾತರಂ ಚಳವಳಿಯಲ್ಲಿ ಅನೇಕ ಕನ್ನಡ ವಿದ್ಯಾಥಿರ್ು್ಗಳು ಪಾತ್ರವಹಿಸಿದರು.

ಇಡೀ ಹೈದರಾಬಾದ್ ಸಂಸ್ಥಾನಕ್ಕೆ ಒಂದು ರಾಜಕೀಯ ಸಂಸ್ಥೆಯನ್ನು ಸ್ಥಾಪಿಸುವ ಉದ್ದೇಶದಿಂದ ಪ್ರಯತ್ನಗಳು ನಡೆದದ್ದು ೧೯೩೮ರಲ್ಲಿ. ಆದರೆ ಇದಕ್ಕೆ ಸರ್ಕಾರ ಅನುಮತಿ ಕೊಡಲಿಲ್ಲ. ಇದಕ್ಕಾಗಿ ಸತ್ಯಾಗ್ರಹ ಹೂಡಲಾಯಿತು. ಇದಕ್ಕೆ ಜಾತೀಯತೆಯ ಬಣ್ಣ ಬಳಿಯಲು ಸರ್ಕಾರ ಹವಣಿಸಿತು.

೧೯೪೦ರಲ್ಲಿ ಬಿದರೆಯಲ್ಲಿ ಕರ್ಣಾಟಕ ಪರಿಷತ್ತಿನ ಎರಡನೆಯ ಅಧಿವೇಶನ ಸೇರಿತು. ಅದು ಮುಗಿದ ಅನಂತರ ಕೆಲವು ಪುಂಡರು ಸೇರಿ ಕೊಂಡು ಆ ನಗರಕ್ಕೆ ಬೆಂಕಿಯಿಟ್ಟರು. ಜನ ಉಗ್ರವಾಗಿ ಪ್ರತಿಭಟಿಸಿದರು. ಸಂಸ್ಥಾನ ಕಾಂಗ್ರೆಸ್ಸಿನ ಮೇಲಿನ ಬಹಿಷ್ಕಾರ ತೆಗೆಯಬೇಕೆಂಬ ಚಳವಳಿಯೂ ಸಾಗಿತು. ೧೯೪೨ರಲ್ಲಿ ಆರಂಭವಾದ ಅಖಿಲಭಾರತ ಸ್ವಾತಂತ್ರ್ಯ ಚಳವಳಿಯ ಬಿಸಿ ಹೈದರಾಬಾದಿಗೂ ತಟ್ಟದೆ ಇರಲಿಲ್ಲ. ಆ ಸಮಯದಲ್ಲಿ ಕರ್ನಾಟಕ ಪರಿಷತ್ತಿನ ಮೂರನೆಯ ಅಧಿವೇಶನ ಸುರಪುರದಲ್ಲಿ ಸೇರಿ ಜನರ ಜವಾಬ್ದಾರಿ ಸರ್ಕಾರದ ಬೇಡಿಕೆಗಳನ್ನು ಮುಂದಿಟ್ಟಿತು. ಆದರೆ ಸರ್ಕಾರ ಇದಕ್ಕೆ ಲಕ್ಷ್ಯ ಕೊಡಲಿಲ.್ಲ ಪರಿಷತ್ತಿನ ನಾಲ್ಕು, ಐದನೆಯ ಅಧೀವೇಶನಗಳೂ ಸೇರಿ ಹೊಣೆಗಾರ ಪ್ರಭುತ್ವ ಸ್ಥಾಪನೆಗಾಗಿ ಸರ್ಕಾರಕ್ಕೆ ಒತ್ತಾಯ ಹಾಕಿದವು. ೯೪೬ರಲ್ಲಿ ಸೇರಿದ್ದ ಅಖಿಲಭಾರತ ದೇಶಿಯ ಸಂಸ್ಥಾನಗಳ ಪರಿಷತ್ತಿನ ಅಧಿವೇಶನ ಹೈದರಾಬಾದಿನ ಹೋರಾಟಕ್ಕೆ ನೈತಿಕ ಬೆಂಬಲ ನೀಡಿತಲ್ಲದೆ ಹೈದರಾಬಾದ್ ರಾಜ್ಯ ಕಾಂಗ್ರೆಸ್ಸಿನ ಮೇಲಿನ ನಿರ್ಬಂಧವನ್ನು ಸರ್ಕಾರ ತೆಗೆದುಹಾಕಬೇಕೆಂದೂ ಇಲ್ಲದಿದ್ದರೆ ಸತ್ಯಾಗ್ರಹ ಹೂಡಬೇಕೆಂದೂ ನಿರ್ಣಯ ಮಾಡಿತು. ಸರ್ಕಾರ ಈ ಕ್ರಮಕ್ಕೆ ಹೆದರಿ ನಿರ್ಬಂಧವನ್ನು ರದ್ದು ಮಾಡಿತು. ಅಲ್ಲಿಂದಾಚೆಗೆ ಹೋರಾಟ ಹೆಚ್ಚು ಬಿರುಸಿನಿಂದ ಸಾಗಿತು. ೧೯೪೭ರಲ್ಲಿ ರಾಜ್ಯ ಕಾಂಗ್ರೆಸ್ ಮೊದಲನೆಯ ಅಧಿವೇಶನ ಸೇರಿತು. ಆ ವರ್ಷದ ಆಗಸ್ಟಿನಲ್ಲಿ ಭಾರತ ಸ್ವತಂತ್ರ್ಯವಾದಾಗ ಸಂಸ್ಥಾನದ ನಿಜಾಮ ಭಾರತದಿಂದ ಪ್ರತ್ಯೇಕವಾಗಿರಬೇಕೆಂದು ಮಾಡಿದ ಪ್ರಯತ್ನ ವಿಫಲವಾಗೊಂಡಿತು. ಸ್ವತಂತ್ರ್ಯ ಭಾರತಸರ್ಕಾರದ ಪೋಲಿಸ್ ಕಾರ್ಯಾಚರಣೆಯಿಂದಾಗಿ ಹೈದರಾಬಾದಿನ ಜನರ

ಆಶೋತ್ತರಗಳು ಪುರೈಸಿದವು. ಈ ನಡುವೆ ಅಲ್ಲಿಯ ಜನ ಧೈರ್ಯಸಾಹಸಗಳಿಂದ ಹೋರಾಟ ನಡೆಸುತಿದ್ದರು. ಪ್ರತ್ಯೇಕ ಮುಸ್ಲಿಂ ರಾಜ್ಯದ ಕನಸುಕಟ್ಟಿ ಉನ್ನತ ಸಾಹಸದಿಂದ ಕ್ರೂರಕೃತ್ಯಗಳೆಸಗುತ್ತಿದ್ದರಜಾಕಾರರ ಹಿಂಸೆಗಳನ್ನೂ ಅವರು ಸಹಿಸಿ ಗೆದ್ದರು.

ಹೀಗೆ ಕರ್ನಾಟಕದ ಎಲ್ಲಾ ಕಡೆಗಳಲ್ಲೂ ಜನರು ರಾಜಕೀಯ ಸ್ವಾತಂತ್ರ್ಯ ಗಳಿಸಿದರಾದರೂ ಅವರ ಹೋರಾಟ ಇನ್ನೂ ಮುಗಿದಿರಲಿಲ್ಲ. ಮುಂಬಯಿ, ಹೈದರಾಬಾದು, ಮದ್ರಾಸ್ ಪ್ರಾಂತ್ಯಗಳ ಕರ್ಣಾಟಕ ಭಾಗಗಳನ್ನೂ ಮೈಸೂರು ಕೊಡಗುಗಳನ್ನೂ ಒಂದುಗೂಡಿಸಿ ಅಖಂಡ ಕರ್ನಾಟಕವನ್ನು ಸ್ಥಾಪಿಸುವ ಕಾರ್ಯ ಉಳಿದಿತ್ತು. ಈ ಗುರಿ ಸಾಧಿಸಿದ್ದು ೧೯೫೬ರಲ್ಲಿ. ಆ ವರ್ಷದ ನವೆಂಬರ್ ಒಂದರಂದು ಕನ್ನಡ ರಾಜ್ಯೋದಯವಾಯಿತು.

*******************************************************************************************

# ಕರ್ನಾಟಕ ಏಕೀಕರಣ

ಕರ್ನಾಟಕ ಏಕೀಕರಣ : ೨೦೦೬ ನವೆಂಬರ್ ೧ನೆಯ ತಾರೀಖಿಗೆ ಕರ್ನಾಟಕ ಏಕೀಕರಣವಾಗಿ ಐವತ್ತು ವರ್ಷಗಳು ತುಂಬಿವೆ. ಕರ್ನಾಟಕ ಏಕೀಕರಣದ ಇತಿಹಾಸ ಬಲ್ಲವರಿಗೆ ಏಕೀಕರಣಕ್ಕೆ ನಡೆದ ಹೋರಾಟವು ಕಹಿ-ಸಿಹಿ ಘಟನೆಗಳ ಸ್ಮೃತಿ. ಒಡೆದುಕೊಳ್ಳುವ ಮತ್ತು ಕೂಡಿ ಕೊಳ್ಳುವ ಕನ್ನಡಿಗರ ಸ್ವಭಾವ ಇತಿಹಾಸಕ್ಕೆ ಹೊಸದಲ್ಲ. ಈ ಒಡೆದುಕೊಳ್ಳುವ ಮನೋಭಾವಕ್ಕೆ ಯಾವಾಗಲೂ ಪ್ರೇರಣೆಯಾಗಿರುವುದು ಬಹುತೇಕ ಅಧಿಕಾರದ ಆಸೆ. ಒಂದಾಗಲು ಕಾರಣವಾಗಿರುವುದು ಭಾಷೆ ಮತ್ತು ಸಂಸ್ಕೃತಿಯ ಬಗೆಗಿನ ಪ್ರೀತಿ ಮತ್ತು ಗೌರವ.

ಇತಿಹಾಸ

ಹೊಯ್ಸಳರು ಮತ್ತು ಸೇವುಣರ ನಡುವಿನ ರಾಜಕೀಯ ಸೆಣಸಾಟದಲ್ಲಿ ಕರ್ನಾಟಕವು ಎರಡು ಭಾಗವಾಯಿತು. ತುಂಗಭದ್ರಾ ನದಿಯ ಉತ್ತರಕ್ಕೆ ಸೇವುಣರೂ, ದಕ್ಷಿಣಕ್ಕೆ ಹೊಯ್ಸಳರೂ ಆಳಿದರು. ಇದು ನಡೆದದ್ದು ೧೩ ನೆಯ ಶತಮಾನದ ಆರಂಭದಲ್ಲಿ; ಆಗ ಬೇರೆಯಾದ ಕನ್ನಡಿಗರು ಆಡಳಿತಾತ್ಮಕವಾಗಿ ಒಂದಾದದ್ದು ೧೯೫೬ ರಲ್ಲಿ. ಅಂದರೆ

ಸುಮಾರು ೭೫೦ ವರ್ಷಗಳ ಕಾಲ ಕನ್ನಡಿಗರೇ ಅಧಿಕವಾಗಿದ್ದ ಭಾಗಗಳನ್ನು ಆಳಿದವರು ಕನ್ನಡೇತರರು. ಆಳುವ ವರ್ಗವು ಬಯಸುವ ಭಾಷೆಯನ್ನು ಆಡಳಿತದಲ್ಲಿ ಬಳಸುವುದು ವಾಡಿಕೆ. ಯಾವುದೇ ಭಾಷೆಯ ಬಳಕೆ ಕಡಿಮೆ ಯಾದರೆ, ಆ ಭಾಷೆಯ ಅವನತಿ ಆರಂಭವಾಗುತ್ತದೆ. ಭಾಷೆಯ ಅವನತಿಯೊಡನೆ ಆ ಭಾಷಿಕರ ಸಂಸ್ಕೃತಿಯೂ ಅನ್ಯಾಕ್ರಾಂತವಾಗುತ್ತದೆ ಮತ್ತು ಕ್ರಮೇಣ ತನ್ನ ಸ್ವರೂಪದಲ್ಲಿ ಗುರುತಿಸಲಾಗದಷ್ಟು ಬದಲಾವಣೆಗಳನ್ನು ಪಡೆಯುತ್ತದೆ.

ಕರ್ನಾಟಕದ ಗಡಿರೇಖೆಯು ಎಂದೂ ಸ್ಥಿರವಾಗಿರಲಿಲ್ಲ. ಕದಂಬ-ಗಂಗ-ಬಾದಾಮಿ ಚಾಳುಕ್ಯ ವಂಶಗಳ ಆಳ್ವಿಕೆಯ ಸಂದರ್ಭದಲ್ಲಿ ಗೋದಾವರಿ ನದಿಯನ್ನು ಉತ್ತರ ಗಡಿಯಾಗಿಯೂ, ಕಾವೇರಿ ನದಿಯು ಸಮುದ್ರವನ್ನು ಸೇರುವ ಭಾಗದವರೆಗಿನ ಭಾಗವನ್ನು ದಕ್ಷಿಣ ಗಡಿಯಾಗಿಯೂ ಹೊಂದಿದ್ದ ಕರ್ನಾಟಕವು ಬಾದಾಮಿ ಚಾಳುಕ್ಯ ವಂಶದ ಇಮ್ಮಡಿ ಪುಲಕೇಶಿಯ ಕಾಲದಲ್ಲಿ ನರ್ಮದೆಯವರೆಗೆ ತನ್ನ ಆಡಳಿತವನ್ನು ವಿಸ್ತರಿಸಿಕೊಳ್ಳುವ ಅವಕಾಶಗಳಿದ್ದರೂ ಹಾಗೆ ಮಾಡಲಿಲ್ಲ. ಶ್ರೀವಿಜಯನು, ತನ್ನ 'ಕವಿರಾಜಮಾರ್ಗ' ದಲ್ಲಿ `ಕಾವೇರಿಯಿಂದಮಾಗೋದಾವರಿವರಮಿರ್ದ' ನಾಡು ಕನ್ನಡ ನಾಡು ಎಂದು ವರ್ಣಿಸಿದ್ದಾನೆ. ಕಲ್ಯಾಣ ಚಾಳುಕ್ಯರ ಆಳ್ವಿಕೆಯ ಕಾಲಕ್ಕೆ ಈಗಿನ ಮಹಾರಾಷ್ಟ್ರದ ದಕ್ಷಿಣ ಭಾಗಗಳು ಮತ್ತು ಆಂಧ್ರದ ಪಶ್ಚಿಮ ಭಾಗಗಳು ಆಗಿನ ಕರ್ನಾಟಕದ ಅವಿಭಾಜ್ಯ ಭಾಗಗಳಾಗಿದ್ದವು.

ಈಗಾಗಲೇ ತಿಳಿಸಿರುವಂತೆ ಹೊಯ್ಸಳರು ಮತ್ತು ಸೇವುಣರ ಕಾಲದಲ್ಲಿ ಒಡೆದುಕೊಂಡ ಕರ್ನಾಟಕವು ಒಂದಾಗಲು ಹಲವು ಶತಮಾನಗಳು ಬೇಕಾಯಿತು; ಹೋರಾಟವೂ ಅನಿವಾರ್ಯವಾಯಿತು. ಇದು ವಿಪರ್ಯಾಸ ಎನಿಸಿದರೂ, ಮರೆಮಾಚಲಾಗದ ಸತ್ಯ. ಹೊಯ್ಸಳರು ಮತ್ತು ಸೇವುಣ ರ ಅನಂತರ ಆಳಿದ ವಿಜಯನಗರದ ಅರಸರ ಕಾಲದಲ್ಲೂ ಕರ್ನಾಟಕವು ತನ್ನ ಹಿಂದಿನ ಸ್ವರೂಪವನ್ನು ಪಡೆಯಲಿಲ್ಲ. ದಕ್ಷಿಣ ಭಾರತದ ಬಹುತೇಕ ಭಾಗವನ್ನು ವಿಜಯನಗರದ ಅರಸರು ಆಳಿದರು; ಆದರೆ ಆ ಮೊದಲು ಕರ್ನಾಟಕದ ಭಾಗವಾಗಿದ್ದ ಮತ್ತು ಈಗ ಕರ್ನಾಟಕಕ್ಕೆ ಸೇರಿರುವ ರಾಯಚೂರು, ಗುಲಬರ್ಗ ಮತ್ತು ಬೀದರ್ ಜಿಲ್ಲೆಗಳು ವಿಜಯನಗರದ ವ್ಯಾಪ್ತಿಗೆ ಸೇರಿರಲಿಲ್ಲ. ಅವೆಲ್ಲವೂ ಆದಿಲ್ ಷಾಹಿಗಳ ವಶದಲ್ಲಿದ್ದವು. ಮೈಸೂರು ರಾಜ್ಯವನ್ನು ವಿಸ್ತರಿಸಲು ಹೈದರ್ ಮತ್ತು ಟಿಪ್ಪು ಪ್ರಯತ್ನಿಸಿದರು.

ಟಿಪ್ಪುವು ತುಂಗಭದ್ರಾ ನದಿಯ ಆಚೆಯ ಕೆಲವು ಪ್ರದೇಶಗಳನ್ನು ಗೆದ್ದನಾದರೂ, ೧೭೯೧ ರಲ್ಲಿ ಪೇಶ್ವೆಗಳೊಡನೆ ಆದ ಒಪ್ಪಂದದ ಪ್ರಕಾರ, ವರದಾ ನದಿಯ ಉತ್ತರ ಭಾಗವನ್ನು ಪೇಶ್ವೆಗಳಿಗೂ, ಕೊಡಗು ಮತ್ತು ಮಲಬಾರ್ ಪ್ರಾಂತಗಳನ್ನು ಬ್ರಿಟಿಷರಿಗೂ ನೀಡಬೇಕಾಯಿತು. ೧೭೮೭ರಲ್ಲಿ ತುಂಗಭದ್ರೆಯು ತನ್ನ ರಾಜ್ಯದ ಉತ್ತರ ಗಡಿ ಎಂದು ಒಪ್ಪಿಕೊಂಡಿದ್ದ ಟಿಪ್ಪುವು, ೧೭೯೯ ರಲ್ಲಿ ಮರಣ ಹೊಂದಿದ. ಅನಂತರ ಅಂದರೆ ೪ ನೆಯ ಮೈಸೂರು ಯುದ್ಧದ ಅನಂತರ ಬ್ರಿಟಿಷರು ಮತ್ತು ಹೈದರಾಬಾದ್ನ ನಿಜಾಮನ ನಡುವೆ ಆಗಿದ್ದ ಒಪ್ಪಂದದ ಪ್ರಕಾರ ಮೈಸೂರು ಸಂಸ್ಥಾನವು ಮಾತ್ರ ಮೈಸೂರಿನ ಒಡೆಯರಿಗೆ ಉಳಿಯಿತು.

ಬೆಳಗಾಂವಿ, ಬಿಜಾಪುರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಬ್ರಿಟಿಷರ ಮುಂಬಯಿ ಆಧಿಪತ್ಯಕ್ಕೂ, ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳು ಬ್ರಿಟಿಷರ ಮದರಾಸಿನ ಆಧಿಪತ್ಯಕ್ಕೂ, ಬೀದರ್, ಗುಲಬರ್ಗ ಮತ್ತು ರಾಯಚೂರು ಜಿಲ್ಲೆಗಳು ಹೈದರಾಬಾದ್ ನಿಜಾಮನ ಆಳ್ವಿಕೆಗೂ ಸೇರಿದವು. ಕೊಡಗು ಜಿಲ್ಲೆಯು ಬ್ರಿಟಿಷರ ಒಂದು ಅಧೀನ ರಾಜ್ಯವಾಗಿ ಉಳಿಯಿತು. ಕೆಲವು ಪ್ರದೇಶಗಳು ಸ್ಥಳೀಯ ಮರಾಠೀ ಸಂಸ್ಥಾನಿಕರ ವಶದಲ್ಲಿ ಉಳಿದವು. ಹೀಗೆ ರಾಜಕೀಯವಾಗಿ ಒಡೆದುಕೊಂಡು, ಭಿನ್ನ-ಭಿನ್ನ ಆಡಳಿತ ವ್ಯಾಪ್ತಿಗೆ ಸೇರಿದ ಕನ್ನಡ ಭಾಷಿಕರ ಪ್ರಾಂತಗಳಲ್ಲಿ, ಆಳುವ ವರ್ಗದವರ ಮರ್ಜಿಯಂತೆ, ಆಡಳಿತದ ಭಾಷೆಯ ಬಳಕೆ ಆಯಿತು. ಈಗಿನಂತೆಯೇ, ಹಿಂದೆಯೂ ಜನರ ಭಾಷೆಯ ಬದಲು, ಆಳುವವರ ಅಥವಾ ಆಳುವ ವರ್ಗದ ಅನುಕೂಲಕ್ಕಾಗುವ ಭಾಷೆಯು ಆಡಳಿತದಲ್ಲಿ ಬಳಕೆ ಆಯಿತು.

ಕೇವಲ ಕೆಲವರೇ ಇದ್ದ ಆಳುವವರು, ಬಹು ಸಂಖ್ಯಾತ ಆಳಿಸಿಕೊಳ್ಳುವವರ ಭಾಷೆಯನ್ನು ಕಲಿಯಲಿಲ್ಲ; ಆಡಳಿತದಲ್ಲಿ ಬಳಸಿಕೊಳ್ಳಲಿಲ್ಲ. ಬದಲಿಗೆ ಬಹು ಸಂಖ್ಯಾತ ಆಳಿಸಿಕೊಳ್ಳುವವರು ಅಲ್ಪ ಸಂಖ್ಯಾತ ಆಳುವವರ ಭಾಷೆಯನ್ನು ಕಲಿತರು. ಇದಕ್ಕೆ ಕಾರಣ ಆಳುವವರ ಯಾಜಮಾನ್ಯ ಪ್ರವೃತ್ತಿ ಮತ್ತು ಆಳಿಸಿಕೊಳ್ಳುವವರ ಗುಲಾಮ ಪ್ರವೃತ್ತಿ. ತಮಗೆ ಅರ್ಥವಾಗದೆ ಇದ್ದರೂ ಆಳುವವರ ಭಾಷೆಯನ್ನು ಒಪ್ಪಿಕೊಂಡ ಜನ ಕ್ರಮೇಣ ಆಳುವವರ ಭಾಷೆಯನ್ನು ಬಲವಂತವಾಗಿಯಾದರೂ ಕಲಿತರು. ಆಳುವ ಜನ ತಮ್ಮ ಅನುಕೂಲಕ್ಕೆ ಆಡಳಿತ ನಡೆಸುವುದು ಸಹಜ. ಬ್ರಿಟಿಷ ರಾಗಲೀ, ಹೈದರಾಬಾದ್ ನಿಜಾಮನಾಗಲೀ, ಮರಾಠೀ ದೇಸಾಯಿಗಳಾಗಲೀ ತಮಗೆ ಮಾತ್ರ ಅರ್ಥವಾಗುವ ಭಾಷೆಯಲ್ಲಿ ಆಡಳಿತ ನಡೆಸಿದರು. ತಾವು ಹೇಳಿದ್ದು ತಮಗೆ ಅರ್ಥವಾಗಬೇಕು ಎಂಬ ಅವರ ನಿರೀಕ್ಷೆಯಂತೂ ಸರಿ;

ಆದರೆ ತಮ್ಮ ಮಾತು ಯಾರಿಗೆ ತಲುಪಬೇಕೋ ಅವರಿಗೆ ತಲುಪುತ್ತಿದೆಯೇ ಎಂದು ತಿಳಿಯುವ ಪ್ರಯತ್ನವನ್ನೂ ಆಳುವ ಜನ ಮಾಡಿದಂತೆ ತೋರುವುದಿಲ್ಲ. ಈ ಮಾತು ಎಲ್ಲ ಕಾಲಕ್ಕೆ ಮತ್ತು ಆಳಿದ ಎಲ್ಲರಿಗೂ ಅನ್ವಯಿಸುವುದಿಲ್ಲ. ಬ್ರಿಟಿಷರಲ್ಲಿ ಕೆಲವು ಅಧಿಕಾರಿಗಳು ಭಾರತಕ್ಕೆ ಬಂದ ಮೇಲೆ ಇಲ್ಲಿನ ಸ್ಥಳೀಯ ಭಾಷೆಗಳನ್ನು ಕಲಿತು, ಆ ಭಾಷೆಯಲ್ಲೇ ಮಹತ್ವದ ಸಾಧನೆಗಳನ್ನು ಮಾಡಿದರು. ಆ ನಿಟ್ಟಿನಲ್ಲಿ ಯೂರೋಪಿಯನ್ ವಿದ್ವಾಂಸರ ಕಾರ್ಯವಿಧಾನವನ್ನು ಮೆಚ್ಚಲೇಬೇಕಾಗುತ್ತದೆ. ಕರ್ನಾಟಕದ ಉತ್ತರ ಭಾಗದಲ್ಲಿಯೂ ೧೮ ನೆಯ ಶತಮಾನದ ಹೊತ್ತಿಗೆ ಮರಾಠೀ ಭಾಷೆಯ ಪ್ರಭಾವ ಅಧಿಕವಾಗಿತ್ತು. ೧೮೧೭ ರಲ್ಲಿ ಸೋತ ಬಾಜೀರಾಯನಿಂದ ಬ್ರಿಟಿಷರು ಪೇಶವೆಗಳ ಆಳ್ವಿಕೆಗೆ ಸೇರಿದ್ದ ಎಲ್ಲಾ ಭಾಗಗಳನ್ನೂ ವಶಪಡಿಸಿಕೊಂಡರು.

ಆಡಳಿತಾತ್ಮಕ ಕಾರಣಗಳಿಂದ ೧೮೨೬ ರಲ್ಲಿ ಧಾರವಾಡ ಜಿಲ್ಲೆಯನ್ನು ಮದ್ರಾಸ್ ಪ್ರಾಂತಕ್ಕೆ ಸೇರಿಸಲು ಆಗ ಬಳ್ಳಾರಿಯಲ್ಲಿ ಕಲೆಕ್ಟರ್ ಆಗಿದ್ದ ಸರ್ ಥಾಮಸ್ ಮನ್ರೋ ಶಿಫಾರಸು ಮಾಡಿ, ಮುಂಬಯಿ ಕರ್ನಾಟಕ ಪ್ರಾಂತವನ್ನು 'ದಕ್ಷಿಣ ಮರಾಠ ಪ್ರಾಂತ್ಯ' ಎಂದು ಕರೆದು ತಪ್ಪು ಮಾಡಿರುವೆನೆಂದು ಒಪ್ಪಿಕೊಂಡಿದ್ದ. ಶಾಶ್ವತ ಏಕೀಕರಣವನ್ನು ಸಾಧಿಸುವುದರಿಂದ ಒಟ್ಟು ಕನ್ನಡ ಜನರಿಗೆ ಹಿತ ಆಗುತ್ತದೆ ಎಂಬುದು ಮನ್ರೋನ ಆಸೆಯಾಗಿತ್ತು. ದಕ್ಷಿಣ ಮರಾಠ

ಪ್ರಾಂತ್ಯದ ಆ ಭಾಗಗಳಲ್ಲಿ ಆಳುತ್ತಿದ್ದ ಮರಾಠೀ ದೇಸಾಯರು ಮತ್ತು ಜಹಗೀರುದಾರರು ಆಡಳಿತದಲ್ಲಿ ಇಡಿಯಾಗಿ ಮರಾಠೀ ಭಾಷೆಯನ್ನು ಜಾರಿಗೆ ತಂದಿದ್ದರು. ಆದ್ದರಿಂದ ಜನತೆಯು ಅನಿವಾರ್ಯವಾಗಿ ಮರಾಠೀ ಕಲಿಯಬೇಕಾಯಿತು.

ಕನ್ನಡವು ಕೇವಲ ಮನೆಮಾತಾಗಿ ಉಳಿಯಿತು. ಆಡಳಿತಕ್ಕೆ ಪೂರ್ಣವಾಗಿ ಬಳಕೆ ಆಗುತ್ತಿದ್ದ ಮರಾಠೀ ಭಾಷೆಗೆ ಶಿಕ್ಷಣದಲ್ಲೂ ಆದ್ಯತೆ ದೊರೆಯಿತು. ಈ ವಿಪರ್ಯಾಸವನ್ನು ಸರಿಪಡಿಸಲು ಸರ್ ವಾಲ್ಟರ್ ಎಲಿಯಟ್ ಪ್ರಯತ್ನಿಸಿದ. ೧೮೨೬ ರಲ್ಲಿ ಮುಂಬಯಿ ಆಧಿಪತ್ಯದ ಸರ್ಕಾರವು ಹುಬ್ಬಳ್ಳಿ ಮತ್ತು ಧಾರವಾಡಗಳಲ್ಲಿ ಒಂದೊಂದು ಮರಾಠೀ ಶಾಲೆಯನ್ನು ಆರಂಭಿಸಿತು. ಆಡಳಿತದಲ್ಲಿ ಮರಾಠಿಯ ಪ್ರಾಬಲ್ಯವೇ ಹೆಚ್ಚಾಗಿದ್ದುದರಿಂದ ಸರ್ಕಾರದೊಂದಿಗಿನ ಸಂಪರ್ಕಕ್ಕೆ ಅದೇ ಸುಲಭ ಭಾಷೆ ಎಂಬ ಅಭಿಪ್ರಾಯ ಅಧಿಕಾರಿಗಳಿಗಿದ್ದಂತೆ ತೋರುತ್ತದೆ. ಆದರೆ ಸರ್ ವಾಲ್ಟರ್ ಎಲಿಯಟ್ ಆಲೋಚಿಸಿದ ರೀತಿಯೇ ಬೇರೆ ಆಗಿತ್ತು. 'ಇಲ್ಲಿಯ ಬಹುತೇಕ ಜನರ ಭಾಷೆ ಕನ್ನಡ ಆಗಿರುವುದರಿಂದ ಕನ್ನಡವೇ ಆಡಳಿತ ಭಾಷೆಯಾಗುವುದು ಸೂಕ್ತ' ಎಂಬ ಅಭಿಪ್ರಾಯದಿಂದ ಧಾರವಾಡದಲ್ಲಿ ಕನ್ನಡ ಶಾಲೆಯೊಂದನ್ನು ಆರಂಭಿಸಲು ತಾನೇ ೧೮೩೦ ರಲ್ಲಿ ಅರ್ಜಿ ಸಲ್ಲಿಸಿದ.

ಆದರೆ ಸರ್ಕಾರ ಅನುಮತಿ ನೀಡಲಿಲ್ಲ. ೧೮೩೩ ರವರೆಗೆ, ಮೂರು ವರ್ಷಗಳ ಕಾಲ ಎಲಿಯಟ್ ಸ್ವಂತ ಖರ್ಚಿನಲ್ಲೇ ಶಾಲೆಯನ್ನು ನಡೆಸಿದ. ಸರ್ ವಾಲ್ಟರ್ ಎಲಿಯಟ್ ಆರಂಭಿಸಿದ ಕೆಲಸವನ್ನು, ಎಂಜಿನಿಯರಿಂಗ್ ಶಿಣ ಪಡೆದರೂ ಶಿಕ್ಷÀಣ ಇಲಾಖೆಯಲ್ಲಿ ದುಡಿದು ಕನ್ನಡದ 'ಡೆಪ್ಯುಟಿ' ಎನಿಸಿಕೊಂಡು ಕನ್ನಡದ ರಕ್ಷಣೆ ಮಾಡಿದ ಡೆಪ್ಯುಟಿ ಚೆನ್ನಬಸಪ್ಪ ಮುಂದುವರಿಸಿದರು. ಅವರಿಗೆ ಆಗಿನ ವಿದ್ಯಾ ಇಲಾಖೆಯ ದಕ್ಷಿಣ ವಿಭಾಗದ ಇನ್ಸ್ಪೆಕ್ಟರ್ ಆಗಿದ್ದ ರಸೆಲ್ ಪ್ರೋತ್ಸಾಹ ನೀಡಿದರು. ಡೆಪ್ಯುಟಿ ಚೆನ್ನಬಸಪ್ಪನವರು ಬೆಳಗಾಂವಿಯ ನಾರ್ಮಲ್ ಸ್ಕೂಲಿನ ಪ್ರಿನ್ಸಿಪಾಲರಾಗಿದ್ದಾಗ 'ಮಠಪತ್ರಿಕೆ' ಎಂಬ ಕನ್ನಡ ಪತ್ರಿಕೆಯನ್ನೂ ಆರಂಭಿಸಿದರು.

೧೮೩೭ ರಲ್ಲಿ ಬೆಳಗಾಂವಿಯ ಜಿಲ್ಲಾಧಿಕಾರಿಯಾಗಿದ್ದ ಜಾನ್.ಎ.ಡನ್ಲಪ್ ಅವರು ಧಾರವಾಡದ ಸಂದರ್ಶಕ ನ್ಯಾಯಾಂಗ ಕಮೀಷನರ್ ಅವರಿಗೆ ೨೦-೪-೧೮೩೭ ರಂದು ಬರೆದದಿರುವ ಪತ್ರದಲ್ಲಿ ಬೆಳಗಾಂವಿಯ ಜಿಲ್ಲೆಯಾದ್ಯಂತ ಕನ್ನಡವನ್ನೇ ಆಡಳಿತ ಹಾಗೂ ವ್ಯವಹಾರದ ಭಾಷೆಯನ್ನಾಗಿ ಜಾರಿಗೆ ತರಲು ಆದೇಶ ಹೊರಡಿಸಿರುವುದನ್ನು ತಿಳಿಸಿದ್ದಾರೆ. ಅಂತೆಯೇ ಆಗಿನ ಮುಂಬಯಿ ಗವರ್ನರ್ ಆರ್.ಗ್ರಾಂಟ್ ಅವರ ೧೯-೯-೧೮೩೭ರ ಪತ್ರವು ಕನ್ನಡಕ್ಕೆ ದೊರೆಯಲೇ ಬೇಕಾದ ಪ್ರಾಶಸ್ತ್ಯದ ಬಗ್ಗೆ ಮನವರಿಕೆ ಮಾಡಿದೆ. ಹೈದರಾಬಾದ್ ಸಂಸ್ಥಾನದಲ್ಲೂ ಕನ್ನಡದ ಪರಿಸ್ಥಿತಿಯು ಕೆಟ್ಟಿತ್ತು. ಅಲ್ಲಿ ಮರಾಠೀ ಭಾಷೆಯ ಜೊತೆಗೆ ಉರ್ದು ಭಾಷೆಯೂ ಪ್ರಭಾವಶಾಲಿಯಾಗಿತ್ತು. ಶಿಕ್ಷಣದಲ್ಲೂ ಉರ್ದುವೇ ಮುಖ್ಯವಾಗಿತ್ತು. ಮೈಸೂರು ಸಂಸ್ಥಾನದಲ್ಲಿ ಮಾತ್ರ ಕನ್ನಡದ ಪರಿಸ್ಥಿತಿ ತೀರಾ ಹದಗೆಟ್ಟಿರಲಿಲ್ಲ.

ಕನ್ನಡಿಗರೇ ಅಧಿಕವಾಗಿದ್ದ ಭಾಗಗಳಲ್ಲಿ ಕನ್ನಡ ಭಾಷೆಯ ಪರಿಸ್ಥಿತಿ ಇದಾದರೆ, ಕನ್ನಡ ಸಂಸ್ಕೃತಿಯ ಪರಿಸ್ಥಿತಿಯು ಮತ್ತಷ್ಟು ಹದಗೆಟ್ಟಿತ್ತು. ಕನ್ನಡ ಭಾಷೆ ಮತ್ತು ಆ ಮೂಲಕ ರೂಪುಗೊಳ್ಳುವ ಸಂಸ್ಕೃತಿಯನ್ನು ಉಳಿಸಲು ಕನ್ನಡಿಗರೇ ಹೆಚ್ಚು ವಾಸಿಸುವ ಪ್ರದೇಶಗಳನ್ನು ಒಂದೇ ಆಡಳಿತ ವ್ಯಾಪ್ತಿಗೆ ತರುವ ಅಗತ್ಯ ಇತ್ತು. ಅದಕ್ಕಾಗಿ ಅವಶ್ಯಕ ವಾತಾವರಣ ನಿರ್ಮಾಣವಾದದ್ದು ೧೯೦೫ ರ ಸುಮಾರಿನಲ್ಲಿ; ಬಂಗಾಲ ವಿಭಜನೆ : ಒಡೆದು ಆಳುವ ನೀತಿಗೆ ಪ್ರಸಿದ್ಧರಾಗಿದ್ದ ಅಂದಿನ ಬ್ರಿಟಿಷ್ ಆಳುವ ವರ್ಗವು ಈಶಾನ್ಯ ಭಾರತವನ್ನು ಒಡೆದು ಆಳಲು ನಿರ್ಧಾರ ಮಾಡಿದ ಫಲವಾಗಿ, ಬಂಗಾಲದ ವಿಭಜನೆ ಆಯಿತು. ಮೊದಲಿನಿಂದಲೂ ರಾಷ್ಟ್ರೀಯತೆಗಾಗಿ ಬ್ರಿಟಿಷರನ್ನು ವಿರೋಧಿಸುತ್ತಲೇ ಇದ್ದ ಬಂಗಾಲದ ಜನ ಬ್ರಿಟಿಷ್ ರಾಜಕೀಯ ತಂತ್ರವನ್ನು ಒಪ್ಪಲಿಲ್ಲ.

ಬಂಗಾಲದ ವಿಭಜನೆಯಾದ ದಿನ ಅಂದರೆ, ೧೬-೮-೧೯೦೫ ರಂದು ಬಂಗಾಲದ ಯಾವ ಮನೆಯಲ್ಲೂ ಒಲೆಗಳನ್ನು ಹತ್ತಿಸಲಿಲ್ಲ. ಆ ದಿನವನ್ನು ಸಂತಾಪ ದಿನ ವಾಗಿ ಆಚರಿಸಲಾಯಿತು. ಹೋರಾಟವು ನಿರಂತರವಾಗಿ ಮುಂದುವರಿದು ೧೯೧೨ ರಲ್ಲಿ ಬಂಗಾಲದ ವಿಭಜನೆ ರದ್ದಾಯಿತು. ಸರ್ಕಾರವೇ ನೇಮಿಸಿದ್ದ ಸಮಿತಿಯು ೧೯೧೮ ರಲ್ಲಿ ಸಲ್ಲಿಸಿದ ಮಾಂಟ್ ಫೋರ್ಡ್ ವರದಿಯು 'ಬ್ರಿಟಿಷರ ಆಡಳಿತದ ಆವರೆಗಿನ ಭಾರತದ ಆಡಳಿತ ವಿಭಾಗಗಳು ಅಸಮರ್ಪಕ ಮತ್ತು ಜನತೆಯ ಹಿತವನ್ನು ಅನುಸರಿಸಿಲ್ಲ' ಎಂದು ಸ್ಪಷ್ಟಪಡಿಸಿತು.

### ಕರ್ಣಾಟಕ ವಿದ್ಯಾವರ್ಧಕ ಸಂಘ

ಕನ್ನಡ ಶಿಕ್ಷಣದ ಬಗೆಗಿನ ಜಾಗೃತಿ ಒಂದೆಡೆಗಾದರೆ, ಕನ್ನಡ ಸಾಹಿತ್ಯ, ಸಂಸ್ಕೃತಿ, ಭಾಷೆ ಮತ್ತಿತರ ಕನ್ನಡಿಗರ ಸಮಸ್ಯೆಗಳನ್ನು ಅರ್ಥೈಸಿ, ನಿವಾರಿಸಿ, ಕನ್ನಡ ಭಾಷಿಕರನ್ನು ಒಂದಾಗಿಸುವ ಪ್ರಯತ್ನದ ಫಲವೇ 'ಕರ್ಣಾಟಕ ವಿದ್ಯಾವರ್ಧಕ ಸಂಘ'ದ ಸ್ಥಾಪನೆ. ಕರ್ಣಾಟಕ ವಿದ್ಯಾವರ್ಧಕ ಸಂಘವು ರಾ.ಹ.ದೇಶಪಾಂಡೆ ಅವರ ಕಲ್ಪನೆಯ ಕೂಸು. ರಾ.ಹ.ದೇಶಪಾಂಡೆ ಅವರು ಆ ಭಾಗದಲ್ಲಿ ಎಂ.ಎ., ಪಡೆದ ಮೊದಲ ವ್ಯಕ್ತಿ ಎಂಬ ಕೀರ್ತಿಗೆ ಪಾತ್ರರಾದವರು. ವಿದ್ಯಾವರ್ಧಕ ಸಂಘದ ಮೂಲ ಉದ್ದೇಶವು-

೧)ಕನ್ನಡದಲ್ಲಿ ಉಪಯುಕ್ತ ಕೃತಿಗಳ ರಚನೆಗೆ ಪ್ರೋತ್ಸಾಹ

೨) ಇತರ ಭಾಷೆಗಳ ಉಪಯಕ್ತ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿಸಿ ಬಹುಮಾನ ನೀಡಿಕೆ.

೩) ಸಂಪನ್ಮೂಲಗಳಿಗೆ ತಕ್ಕಂತೆ ಹೊಸ ಕನ್ನಡ ಗ್ರಂಥ ಭಂಡಾರಗಳ ಸ್ಥಾಪನೆ ಅಥವಾ ಇರುವ ಗ್ರಂಥ ಭಂಡಾರಗಳಿಗೆ ನೆರವು

ಳ) ಕಡಿಮೆ ಬೆಲೆಯಲ್ಲಿ ರಾಜಕೀಯ ಸ್ವರೂಪವಿರದ ಉಪಯುಕ್ತ ಸಾವಧಿಕ ಪತ್ರಿಕೆಗಳ ಪ್ರಕಟಣೆ ಅಥವಾ ಈಗಾಗಲೇ ಇರುವ ಅಂತಹ ಪತ್ರಿಕೆಗಳಿಗೆ ಸಹಾಯ ಹಾಗೂ

ೞ) ಕನ್ನಡಿಗರಿಗೆ ಸಮರ್ಥವಾಗಿ ಸಂಪಾದಿತವಾದ ಪ್ರಾಚೀನ ಕನ್ನಡ ಕೃತಿಗಳನ್ನು ದೊರಕಿಸುವುದೇ ಆಗಿತ್ತು.

೧೮೯೦ ಜುಲೈ ೩೦ ರ ಸಂಜೆ ಧಾರವಾಡದಲ್ಲಿ ಆರಂಭವಾದ ಸಂಘವು ತನ್ನ ಉದ್ದೇಶಗಳಿಗೆ ತಕ್ಕಂತೆ ಕೆಲಸ ಮಾಡಿತು. ಹಲವು ಗ್ರಂಥಗಳನ್ನು ಪ್ರಕಟಿಸಿತು ಮತ್ತು 'ವಾಗ್ಭೂಷಣ' ಎಂಬ ಮಾಸ ಪತ್ರಿಕೆಯನ್ನೂ ಪ್ರಕಟಿಸಿತು. ಕರ್ನಾಟಕದಾದ್ಯಂತ ಹಲವಾರು ಲೇಖಕರನ್ನು ಬೆಳೆಸಿದ ಸಂಘವು ಕನ್ನಡ ಗ್ರಂಥಗಳ ಭಾಷೆಯು ಏಕರೂಪವಾಗಿರಬೇಕು ಎಂಬ ಅಭಿಪ್ರಾಯದಿಂದ ಅಖಿಲ ಕರ್ನಾಟಕ ಮಟ್ಟದ ಗ್ರಂಥಕರ್ತರ ಸಮ್ಮೇಳನವನ್ನು ಧಾರವಾಡದಲ್ಲಿ ೧೯೦೭ ರ ಜೂನ್ ತಿಂಗಳ ಮೊದಲ ವಾರದಲ್ಲಿ ನಡೆಸಿತು. ಎರಡನೆಯ ಸಮ್ಮೇಳನವನ್ನು ಮೈಸೂರು ಸರ್ಕಾರದ ವಿದ್ಯಾ ಇಲಾಖೆಯವರು ಬೆಂಗಳೂರಿನಲ್ಲಿ ನಡೆಸಬೇಕಾಗಿತ್ತು. ಕಾರಣಾಂತರಗಳಿಂದ ಸಮ್ಮೇಳನ ಬೆಂಗಳೂರಿನಲ್ಲಿ ನಡೆಯಲಿಲ್ಲ. ಎರಡನೆಯ ಸಮ್ಮೇಳನವೂ ಧಾರವಾಡದಲ್ಲೇ ನಡೆಯಿತು.

## ಕನ್ನಡ ಸಾಹಿತ್ಯ ಪರಿಷತ್ತು

ಮೂರನೆಯ ಅಖಿಲ ಕರ್ನಾಟಕ ಮಟ್ಟದ ಗ್ರಂಥಕರ್ತರ ಸಮ್ಮೇಳನವಾದರೂ ಬೆಂಗಳೂರಿನಲ್ಲಿ ನಡೆಯಬೇಕೆಂಬ ಕೆಲವು ಗಣ್ಯರ ಅಪೇಕ್ಷೆಯು ಕರ್ನಾಟಕ(ಕನ್ನಡ)ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಕಾರಣವಾಯಿತು. ಎರಡೂ ಸಂಘಟನೆಗಳು ಸಾಹಿತ್ಯಕ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ಕೊಟ್ಟರೂ ಸಹ, ಅವಕಾಶ ದೊರೆತಾಗಲೆಲ್ಲಾ ಏಕೀಕರಣದ ವಿಷಯದಲ್ಲೂ ಸಮರ್ಥವಾಗಿ ಕಾರ್ಯೋನ್ಮುಖವಾದವು. ಕರ್ನಾಟಕ ವಿದ್ಯಾವರ್ಧಕ ಸಂಘವು ೭-೧೦-೧೯೧೭ ರಂದು ನಡೆದ ತನ್ನ ವ್ಯವಸ್ಥಾಪಕ ಸಮಿತಿಯ ಸಭೆಯಲ್ಲಿ ಏಕೀಕರಣಕ್ಕೆ ಸಂಬಂಧಿಸಿದಂತೆ ಸ್ವೀಕಾರ ಮಾಡಿದ ಗೊತ್ತುವಳಿಯು ಈ ಕೆಳಕಂಡಂತಿದೆ-

'ಬ್ರಿಟಿಷ್ ಅಧಿಕಾರಕ್ಕೆ ಒಳಗಾದ ಎಲ್ಲ ಕನ್ನಡ ಊರು, ತಾಲೂಕು, ಜಿಲ್ಲೆಗಳನ್ನು ಒಟ್ಟುಗೂಡಿಸಿ ಒಂದು ರಾಜಕೀಯ ವಿಭಾಗವನ್ನು ಮಾಡಿ ಅದಕ್ಕೆ ಕರ್ನಾಟಕ ಪ್ರಾಂತವೆಂದು ಕರೆಯುವ ಬಗ್ಗೆ ಸರಕಾರಕ್ಕೆ ಬಿನ್ನಹ ಮಾಡಬೇಕು. ಉದಾಹರಣಾರ್ಥ ಸೊಲ್ಲಾಪುರ ಜಿಲ್ಲೆಯ ಕೆಲವು ಭಾಗ ಕನ್ನಡವಿರುತ್ತದೆ. ಮದ್ರಾಸ್ ಇಲಾಖೆಯಲ್ಲಿ ಬಳ್ಳಾರಿ, ದಕ್ಷಿಣ ಕನ್ನಡ ಈ ಜಿಲ್ಲೆಗಳು ಪೂರ್ಣ ಕನ್ನಡವಿದ್ದು ಕಡಪಾ, ಕರ್ನೂಲ, ಅನಂತಪುರ ಮುಂತಾದ ಜಿಲ್ಲೆಗಳಲ್ಲಿ ಎಷ್ಟೋ ಹಳ್ಳಿಗಳೂ ತಾಲೂಕುಗಳೂ ಕನ್ನಡ ಇರುತ್ತವೆ. ಇವುಗಳನ್ನೆಲ್ಲ ಒಟ್ಟುಗೂಡಿಸಿ ಒಂದು ಕರ್ನಾಟಕ ಇಲಾಖೆ ಅಥವಾ ಪ್ರಾಂತವೆಂಬ ರಾಜಕೀಯ ವಿಭಾಗವನ್ನು ಮಾಡಿದರೆ ಕನ್ನಡಿಗರ ಐಕ್ಯಕ್ಕೂ ಹಿತಕ್ಕೂ ಬೆಳವಣಿಗೆಗೂ ಅನುಕೂಲವಾಗುವುದು'.

ಮೈಸೂರು ಸಂಸ್ಥಾನ ಮಾತ್ರವಲ್ಲದೆ ಮುಂಬಯಿ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮದ್ರಾಸ್ ಆಧಿಪತ್ಯ, ಕೊಡಗು ಇತ್ಯಾದಿ ಕನ್ನಡ ಪ್ರಾಂತಗಳ ಪ್ರಾತಿನಿಧ್ಯವೂ ಇದ್ದ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸಾಹಿತ್ಯ ಸಮ್ಮೇಳನಗಳಲ್ಲಿ ಏಕೀಕರಣದ ಪರವಾಗಿ ನಿರ್ಣಯ ಸ್ವೀಕರಿಸು ವುದಲ್ಲದೆ, ತನ್ನ 'ಕನ್ನಡ ನುಡಿ' ಮತ್ತು 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ'ಗಳಲ್ಲಿ ಏಕೀಕರಣದ ಪರವಾದ ಲೇಖನಗಳನ್ನು ಪ್ರಕಟಿಸಿ ಏಕೀಕರಣಕ್ಕೆ ಶ್ರಮಿಸಿತು.

### ಕರ್ನಾಟಕ ಸಭೆ

ರಾಷ್ಟ್ರೀಯ ನಾಯಕರು ಕರ್ನಾಟಕ ಏಕೀಕರಣದ ವಿಷಯದಲ್ಲಿ ಆಸಕ್ತಿ ವಹಿಸಿದ ಅನಂತರ ಅದಕ್ಕೊಂದು ನಿಶ್ಚಿತ ಎಂಬ ಸ್ವರೂಪ ದೊರೆಯಿತು. ಈ ನಿಟ್ಟಿನಲ್ಲಿ ಯಾಜಮಾನ್ಯ ವಹಿಸಿದವರು ಆಲೂರು ವೆಂಕಟರಾಯರು. ೧೯೦೫ ರಿಂದಲೂ ಕರ್ನಾಟಕ ಏಕೀಕರಣಕ್ಕೆ ದುಡಿದು, ಏಕೀಕರಣ ಆದದ್ದನ್ನು ನೋಡಿ ಸಂತೋಷಪಟ್ಟ ಹಿರಿಯರಾದ ಆಲೂರು ವೆಂಕಟರಾಯರನ್ನು 'ಕನ್ನಡ ಕುಲಪುರೋಹಿತ' ಎಂದೇ ಕರೆಯಲಾಗಿದೆ. ಆಲೂರರ ಕರ್ನಾಟಕ ಏಕೀಕರಣ ಪರ ಹೋರಾಟಕ್ಕೆ 'ಹೋಂರೂಲ್' ಸಂದರ್ಭದಲ್ಲಿ ತಿಲಕರು ಆಡಿದ್ದ 'ಕನ್ನಡದಲ್ಲಿ ಮಾತನಾಡಿ ಕನ್ನಡ ಭಾಷೆಯ ಹಕ್ಕನ್ನು ಸ್ಥಾಪಿಸು'ಎಂಬ ಮಾತುಗಳೂ ಪ್ರೇರಣೆ ಆಗಿದ್ದವು. ಕನ್ನಡ ಮತು ಕರ್ನಾಟಕದ ಬಗ್ಗೆ ಆಲೂರರಿಗೆ ಇದ್ದ ಗೌರವ, ಅಭಿಮಾನ ಮತ್ತು ಕಳಕಳಿಗಳನ್ನು ಅವರ 'ಕರ್ನಾಟಕ ಗತ ವೈಭವ' ಕೃತಿಯಲ್ಲಿ ಗುರುತಿಸಬಹುದು.

ಆಲೂರರ ಜೊತೆಗೆ ವೆಂಕಟರಂಗೋಕಟ್ಟಿ, ಮುದವೀಡು ಕೃಷ್ಣರಾಯರು, ಬಿಂದೂರಾವ್ ಮುತಾಲಿಕ ದೇಸಾಯಿ, ಕಡಪಾ ರಾಘವೇಂದ್ರ ರಾವ್, ಗದಿಗೆಯ್ಯ ಹೊನ್ನಾಪುರ ಮಠ, ಪಾಟೀಲ ಸಂಗಪ್ಪ ಮುಂತಾದ ಹಿರಿಯ ರಾಷ್ಟ್ರೀಯ ನಾಯಕರಿದ್ದರು. ಗದಿಗೆಯ್ಯ ಹೊನ್ನಾಪುರ ಮಠ ಅವರ ಅಟ್ಟದ ಮೇಲೆ ೧೯೧೬ ರಲ್ಲಿ ಆಲೂರರು, ಕಡಪಾ ರಾಘವೇಂದ್ರ ರಾಯರು, ನರಗುಂದಕರರು ಒಟ್ಟಾಗಿ ಸ್ಥಾಪಿಸಿದ 'ಕರ್ನಾಟಕ ಸಭೆ'ಯು ಕರ್ನಾಟಕ ಏಕೀಕರಣವನ್ನೇ ಪ್ರಧಾನ ವಿಷಯವನ್ನಾಗಿ ಸ್ವೀಕರಿಸಿ ಕಾರ್ಯತತ್ಪರವಾಯಿತು.

### ಕರ್ನಾಟಕ ರಾಜಕೀಯ ಪರಿಷತ್ತು

೧೯೧೮ ರಲ್ಲಿ ಅಖಿಲ ಕರ್ನಾಟಕ ರಾಜಕೀಯ ಪರಿಷತ್ತು ಸ್ಥಾಪನೆ ಆಯಿತು. ಏಕೀಕರಣ ವಿಚಾರಗಳಿಗೆ ರಾಜಕೀಯ ಬೆಂಬಲವೂ ದೊರೆಯಿತು. ಪರಿಷತ್ತಿನ ಮೊದಲ ಅಧಿವೇಶನವು ೧೯೨೦ ರಲ್ಲಿ ಧಾರವಾಡದ ಉಳವಿ ಚೆನ್ನಬಸಪ್ಪನ ಗುಡ್ಡದ ಮೇಲೆ, ಮೈಸೂರು ಸಂಸ್ಥಾನದ ನಿವೃತ್ತ ದಿವಾನ್ ವಿ.ಪಿ.ಮಾಧವರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಆ ಅಧಿವೇಶನದಲ್ಲಿ ಕಾಂಗ್ರೆಸ್ ಸಂಸ್ಥೆಯು ಕನ್ನಡ ಮಾತನಾಡುವ ಜನರ ಪ್ರದೇಶವನ್ನೆಲ್ಲ ಸೇರಿಸಿ ಒಂದು ಸ್ವತಂತ್ರ ಪ್ರಾಂತವನ್ನಾಗಿಸಬೇಕೆಂಬ ನಿರ್ಣಯವನ್ನು ಸ್ವೀಕರಿಸಿತು. ಅದೇ ವರ್ಷ ನಾಗಪುರದಲ್ಲಿ ಸೇರಿದ್ದ ಕಾಂಗ್ರೆಸ್ ಮಹಾಧಿವೇಶನದಲ್ಲಿ ಪ್ರಾಂತಿಕ ಕಾಂಗ್ರೆಸ್ ಸಮಿತಿಗಳ ರಚನೆಗೆ ಅವಕಾಶ ದೊರೆಯಿತು.

ಕಡಪಾ ರಾಘವೇಂದ್ರ ರಾಯರು ಮತ್ತು ಶಾಂತಕವಿಗಳೆಂದು ಹೆಸರಾಗಿದ್ದ ಸಕ್ಕರಿ ಬಾಳಾಚಾರ್ಯರ ಪ್ರಯತ್ನದಿಂದಾಗಿ ಆ ಅಧಿವೇಶನಕ್ಕೆ ಕರ್ನಾಟಕದಿಂದ ಸುಮಾರು ೮೦೦ ಪ್ರತಿನಿಧಿಗಳು ಹೋಗಿದ್ದರು. 'ಪ್ರಾಂತಗಳನ್ನು ಗುರುತಿಸಲು ಭಾಷೆಯೇ ಸರಿಯಾದ ಆಧಾರ' ಎಂಬ ನಂಬಿಕೆಯಿದ್ದ ಮಹಾತ್ಮ ಗಾಂಧೀಜಿ ಅವರಿಗೆ ಭಾಷಾವಾರು ಪ್ರಾಂತ ರಚನೆಯ ಬಗ್ಗೆ ಒಲವಿತ್ತು. ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ರಚನೆಯಾದ ಮೇಲೆ ಸಮಿತಿಯ ವ್ಯಾಪ್ತಿಗೆ ಕನ್ನಡ ಮಾತನಾಡುವ ಜನರಿರುವ ಪ್ರದೇಶಗಳೆಲ್ಲ ಸೇರ್ಪಡೆ ಆಗಬೇಕೆಂದೂ ನಿರ್ಣಯವಾಗಿತ್ತು. ಈ ಹಿನ್ನೆಲೆಯಲ್ಲೇ ಕನ್ನಡಿಗರು ಪರಸ್ಪರ ಒಂದಾಗಿ ಸಭೆ, ಸಮಾರಂಭಗಳನ್ನು ಹಮ್ಮಿಕೊಳ್ಳುವ, ಸಮ್ಮೇಳನಗಳನ್ನು ನಡೆಸುವ ಸೌಹಾರ್ದದ ವಾತಾವರಣವನ್ನು ಸೃಷ್ಟಿಸಿಕೊಂಡರು.

### ಕೇಳ್ಕರ್ ಸಮಿತಿ ವರದಿ

ಕೆ.ಪಿ.ಸಿ.ಸಿ ರಚನೆಯಾದ ಸಂದರ್ಭದಲ್ಲೇ ಬಳ್ಳಾರಿ ಜಿಲ್ಲೆಯು ಎಲ್ಲಿಗೆ ಸೇರಬೇಕು ಎಂಬ ಬಗ್ಗೆ ಕರ್ನಾಟಕ ಮತ್ತು ಆಂಧ್ರದ ನಾಯಕರಲ್ಲಿ ಭಿನ್ನಾಭಿಪ್ರಾಯ ಉಂಟಾಯಿತು. ಅದನ್ನು ಬಗೆಹರಿಸಲು ಕಾಂಗ್ರೆಸ್ ಸಂಸ್ಥೆಯು ಕೇಳಕರ್ ಸಮಿತಿಯನ್ನು ನೇಮಿಸಿತು. ಕೇಳಕರ್ ಸಮಿತಿಯ ವರದಿಯ ಪ್ರಕಾರ ಬಳ್ಳಾರಿ ಜಿಲ್ಲೆಯ ಆದವಾನಿ, ಆಲೂರು ಮತ್ತು ರಾಯದುರ್ಗ ತಾಲ್ಲೂಕುಗಳು ಆಂಧ್ರ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ವ್ಯಾಪ್ತಿಗೆ ಸೇರಿತು. ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಯ ರಚನೆಯ ನಂತರ ಕರ್ನಾಟಕ ಏಕೀಕರಣವೇ ಆಗಿಹೋಯಿತು ಎಂಬ ಭಾವನೆಯಿಂದ ಹಲವು ಹಿರಿಯ ನಾಯಕರು ನಿರ್ಲಿಪ್ತರಾದರು.

ಬೆಳಗಾಂವಿ ಕಾಂಗ್ರೆಸ್ ಅಧಿವೇಶನ ಮತ್ತು ಕರ್ನಾಟಕ ಏಕೀಕರಣ ಸಂಘ : ೧೯೨೪ ರಲ್ಲಿ ಬೆಳಗಾಂವಿಯಲ್ಲಿ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನದಲ್ಲಿ ಕರ್ನಾಟಕ ಏಕೀಕರಣ ವಿಚಾರಕ್ಕೆ ಮತ್ತೆ ಅತ್ಯಪೂರ್ವ ಚಾಲನೆ ದೊರೆಯಿತು. ಆ ಸಂದರ್ಭಕ್ಕೆಂದೇ 'ಕರ್ಣಾಟಕದ ಕೈಪಿಡಿ' ಎಂಬ ಗ್ರಂಥವನ್ನು ಕಾಂಗ್ರೆಸ್ ಸಮಿತಿಯೇ ಪ್ರಕಟಿಸಿತು. ಜೊತೆಗೆ ಬೆಳಗಾವಿಯ ಆರ್.ಬಿ. ಕುಲಕರ್ಣಿ ಕಾವ್ಯರತ್ನ ಎನ್ನುವವರು ಬರೆದ 'ಕನ್ನಡಿಗನ ಸರ್ವಸ್ವ ಅಥವಾ ಸಂಯುಕ್ತ ಕರ್ನಾಟಕ ಪ್ರಾಂತ' ಎಂಬ ಕೃತಿಯು ಬಿಡುಗಡೆ ಆಯಿತು. ಅದೇ ಸಂದರ್ಭದಲ್ಲಿ ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಕವನವು ಹಾಡಲ್ಪಟ್ಟಿತು.

ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿದಂತೆ ನಿಶ್ಚಿತ ರೂಪು-ರೇಷೆಗಳು ರೂಪುಗೊಂಡದ್ದೇ ಬೆಳಗಾವಿಯಲ್ಲಿ ಕಾಂಗ್ರೆಸ್ ಮಹಾಧಿವೇಶನ ನಡೆದ ಸಂದರ್ಭದಲ್ಲಿ ಎನ್ನುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಏಕೆಂದರೆ ಅದೇ ಸಂದರ್ಭದಲ್ಲಿ 'ಕರ್ನಾಟಕ ಏಕೀಕರಣ ಸಂಘ'ದ ಸ್ಥಾಪನೆ ಆಯಿತು ಮತ್ತು ಅದರ ಮೊಟ್ಟ ಮೊದಲ ಪರಿಷತ್ತೂ ಸಹ ನಡೆಯಿತು. ಅದರ

ಅಧ್ಯಕ್ಷತೆ ವಹಿಸಿದ್ದವರು ರಾವ್ ಬಹದ್ದೂರ್ ಸಿದ್ದಪ್ಪ ಕಂಬಳಿ; ಆಗ ಅವರು ಮುಂಬಯಿ ವಿಧಾನ ಪರಿಷತ್ತಿನ ಉಪ ಸಭಾಪತಿಯಾಗಿದ್ದರು.

ಪರಿಷತ್ತಿನ ಸ್ವಾಗತಾಧ್ಯಕ್ಷರಾಗಿದ್ದವರು ದ.ವೆ.ಬೆಳವಿ. ಕರ್ನಾಟಕ ಏಕೀಕರಣ ಸಂಘದ ಹತ್ತನೆಯ ಪರಷತ್ತು ನಡೆದದ್ದು ಮುಂಬಯಿಯಲ್ಲಿ. ಆಗ ಉದ್ಘಾಟಕರು ವಲ್ಲಭಭಾಯಿ ಪಟೇಲ್ ಮತ್ತು ಅಧ್ಯಕ್ಷತೆ ವಹಿಸಿದ್ದವರು ಆಗ ಮುಂಬಯಿ ಆಧಿಪತ್ಯದ ಮುಖ್ಯ ಮಂತ್ರಿಗಳಾಗಿದ್ದ ಬಿ.ಜಿ.ಖೇರ್. ಏಕೀಕರಣಕ್ಕೆಂದೇ ರೂಪುಗೊಂಡ 'ಕರ್ನಾಟಕ ಏಕೀಕರಣ ಸಂಘ'ವು ಪ್ರತಿ ಪರಿಷತ್ತಿನಲ್ಲೂ ಏಕೀಕರಣ ವಿಚಾರದ ಬಗ್ಗೆ ವಿಶೇಷ ಪ್ರಸ್ತಾವನೆ ಮಾಡಿದೆ.

ಮಾಂಟೆಗೋ-ಚೆಲ್ಮ್ಸ್‌ಫರ್ಡ್ ಸಮಿತಿ

ಬಂಗಾಲದ ವಿಭಜನೆ ಮತ್ತು ಆನಂತರದ ಬೆಳವಣಿಗೆಗಳು ಬ್ರಿಟಿಷ್ ಸರ್ಕಾರದ ಒಡೆದು ಆಳುವ ನೀತಿಗೆ ಸಹಕಾರಿ ಆಗಿರಲಿಲ್ಲ. ೧೯೧೭ ರಲ್ಲಿ ಆಗಿನ ಭಾರತದ ಗವರ್ನರ್ ಜನರಲ್ ಮತ್ತು ಭಾರತದ ಕಾರ್ಯದರ್ಶಿಗಳು ಭಾರತವನ್ನು ಭಾಷಾವಾರು ಸ್ವಾಯತ್ತ ಪ್ರಾಂತಗಳನ್ನಾಗಿ ವಿಭಾಗಿಸಲು ಇಚ್ಛಿಸಿದ್ದರು. ೧೯೧೮ ರಲ್ಲಿ ಸಂವಿಧಾನ ಪರಿಷ್ಕರಣೆಯ ಸಲುವಾಗಿ ಮಾಂಟೆಗೋ-ಚೆಲ್ಮ್ಸ್‌ಫರ್ಡ್ ನೇಮಕಗೊಂಡಿತು.

ಸಮಿತಿಯು ೧೯೧೯ ರಲ್ಲಿ ವರದಿಯನ್ನು ಸಲ್ಲಿಸಿತು. ಭಾಷಾವಾರು ಪ್ರಾಂತ ರಚನೆಯನ್ನು ಕೋರಿ ಕರ್ನಾಟಕದಲ್ಲೂ ಸಮಿತಿಗೆ ಮನವಿಗಳು ಸಲ್ಲಿಸಲ್ಪಟ್ಟವು. ಜನತೆಯ ಅಭಿಪ್ರಾಯವನ್ನು ಪುರಸ್ಕರಿಸುವ ಹಾಗೂ ಆಡಳಿತದ ಅನುಕೂಲದ ಕಾರಣದಿಂದಲೂ ಸಹ ಭಾಷಾವಾರು ಪ್ರಾಂತ ರಚನೆ ಒಳಿತು ಎಂಬ ಅಭಿಪ್ರಾಯ ಸಮಿತಿಯದಾಗಿತ್ತು. ಆ ವರದಿಯ ಹಿನ್ನೆಲೆಯಲ್ಲಿಯೇ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳ ರಚನೆ ಆಯಿತು.

## ಮೋತಿಲಾಲ್ ನೆಹರೂ ಸಮಿತಿ

ನಂತರದ ವರ್ಷಗಳಲ್ಲಿ, ಸುಮಾರು ಮೂವತ್ತನಾಲ್ಕು ರಾಜಕೀಯ ಸಂಸ್ಥೆಗಳ ಸರ್ವಪಕ್ಷ ಸಮ್ಮೇಳನವು ನಿರ್ಣಯಿಸಿದಂತೆ, ಭಾಷಾವಾರು ಪ್ರಾಂತ ರಚನೆಗೆ ಸಂಬಂಧಿಸಿದಂತೆ ವರದಿ ನೀಡಲು ಮೋತಿಲಾಲ್ ನೆಹರೂ ಅವರ ನೇತೃತ್ವದಲ್ಲಿ ಒಂದು ಸಮಿತಿಯ ರಚನೆ ಆಯಿತು. ೧೯೨೮ ಮೇ ೧೯ ರಂದು ನೇಮಕಗೊಂಡ ಸಮಿತಿಯು ಸುಮಾರು ೨೫ ಬಾರಿ ಸಭೆ ಸೇರಿ ವರದಿಯನ್ನು ಸಿದ್ಧಪಡಿಸಿತು.

ಭಾಷಾವಾರು ಪ್ರಾಂತ ರಚನೆಯನ್ನು ಅವಶ್ಯಕ ಎಂದು ಪರಿಗಣಿಸಿದ ಸಮಿತಿಯು ಕರ್ನಾಟಕ ಮತ್ತು ಆಂಧ್ರ ಪ್ರಾಂತಗಳ ರಚನೆಗೆ ಸೂಕ್ತ ಏರ್ಪಾಡನ್ನು ಮಾಡಲು ಶಿಪಾರ್ಸು ಮಾಡಿತು. ಆದರೆ ಆಳುತ್ತಿದ್ದ ಯಾವುದೇ ಸರ್ಕಾರ ಆ ಬಗ್ಗೆ ಆಸಕ್ತಿ ವಹಿಸಲಿಲ್ಲ.

## ವಿಧಾನ ಪರಿಷತ್ತುಗಳಲ್ಲಿ ಪ್ರಸ್ತಾವನೆ

ಮದರಾಸ್ ಮತ್ತು ಮುಂಬಯಿಯ ವಿದಾನ ಪರಿಷತ್ತುಗಳಲ್ಲಿ ಕರ್ನಾಟಕ ಪ್ರದೇಶಗಳನ್ನು ಪ್ರತಿನಿಧಿಸುತ್ತಿದ್ದ ಅನೇಕ ಗಣ್ಯರು ಕರ್ನಾಟಕ ಪ್ರಾಂತ ರಚನೆಯ ಸಂಬಂಧವಾಗಿ ಪ್ರಶ್ನಿಸುತ್ತಲೇ ಇದ್ದರು. ನೆಹರೂ ವರದಿ ಸಲ್ಲಿಕೆ ಆದ ನಂತರವೂ ಕರ್ನಾಟಕ ಏಕೀಕರಣದ ಪ್ರಶ್ನೆಗೆ ವಿಧಾನ ಪರಿಷತ್ತು ಗಳು ಸ್ಪಂದಿಸಲಿಲ್ಲ. ವಿಧಾನ ಪರಿಷತ್ತುಗಳ ಬೆಂಬಲವಿಲ್ಲದೆ ಕೇಂದ್ರ ಶಾಸನ ಸಭೆ ಭಾಷಾವಾರು ಪ್ರಾಂತ ರಚನೆಯನ್ನು ಒಪ್ಪುವುದು ಸಾಧ್ಯವಿರಲಿಲ್ಲ.ಕರ್ನಾಟಕ ಪ್ರಾಂತ ರಚನೆಗೆ ಕನ್ನಡಿಗರ ಬೆಂಬಲವಿಲ್ಲ ಎಂದು ಮುಂಬಯಿ ಸರ್ಕಾರ ವಾದ ಮಾಡಿತು. ಆದರೆ ಜಾತಿ, ಮತ ಭೇದವಿಲ್ಲದೆ ಕರ್ನಾಟಕ ಏಕೀಕರಣ ಕುರಿತಂತೆ ಸಂಘ-ಸಂಸ್ಥೆಗಳು, ಪತ್ರಿಕೆಗಳು, ವಾಚನಾಲಯಗಳು, ವಿವಿಧ ಪರಿಷತ್ತುಗಳು ಕಾರ್ಯನಿರತವಾದವು.

ಏಕೀಕರಣದ ಪರವಾಗಿ ೩೬೦೦೦ ವಯಸ್ಕರ ಸಹಿಯನ್ನೊಳಗೊಂಡ ಮನವಿಯನ್ನು ಸಲ್ಲಿಸುವಲ್ಲಿ ಎನ್.ಎಸ್.ಹರ್ಡೀಕರ್ ಶ್ರಮಿಸಿದರು. ಮೈಸೂರು ಸಂಸ್ಥಾನದ ಜನತೆಗೆ ಕರ್ನಾಟಕ ಏಕೀಕರಣದ ಕಲ್ಪನೆ ಬರಲು ಸಾಧ್ಯವಿಲ್ಲ ಎಂಬ ಅಭಿಪ್ರಾಯ ಉತ್ತರ ಕರ್ನಾಟಕದ ಹಲವು ನಾಯಕ ರಿಗಿತ್ತು. ಆದರೆ ಸರ್.ಎಂ.ವಿಶ್ವೇಶ್ವರಯ್ಯನವರ ದೂರದರ್ಶಿತ್ವದ ಫಲವಾಗಿ ರೂಪುಗೊಂಡ ಕನ್ನಡ ಸಾಹಿತ್ಯ ಪರಿಷತ್ತು ಭಾವನಾತ್ಮಕವಾಗಿ ಕನ್ನಡಿಗರನ್ನು ಒಂದುಗೂಡಿಸುವ ಕೆಲಸ ಮಾಡುತ್ತಿತ್ತು. ಉತ್ತರ ಕರ್ನಾಟಕದಲ್ಲಿದ್ದ ಹಲವು ದೇಶೀ ಸಂಸ್ಥಾನಗಳು ಏಕೀಕರಣಕ್ಕೆ ಒಪ್ಪುವ ಬಗ್ಗೆ ಅನೇಕರಿಗೆ ಅನುಮಾನಗಳು ಇದ್ದವು.

ಅಂತಹ ಬಹುತೇಕ ಸಂಸ್ಥಾನಗಳ ಒಡೆತನ ಇದ್ದದ್ದು ಮರಾಠೀ ಜನರ ಕೈಗಳಲ್ಲಿ ; ಅನುಮಾನಗಳಿಗೆ ಆ ವಿಚಾರವೂ ಕಾರಣವಾಗಿತ್ತು.೧೯೨೮ ರ ಆಗಸ್ಟ್ ೨೮ ರಿಂದ ೩೧ ರವರೆಗೆ ಲಖನೌನಲ್ಲಿ ನಡೆದ ಸರ್ವಪಕ್ಷ ಸಮಿತಿಯು ಮೋತಿಲಾಲ್ ನೆಹರೂ ಅವರ ವರದಿಯನ್ನು ಅಂಗೀಕರಿಸಿತು.೨೮-೧೨-೧೯೨೮ ರಂದು ಕೋಲ್ಕತದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನವೂ ನೆಹರೂ ಸಮಿತಿಯ ವರದಿಯನ್ನು ಅಂಗೀಕರಿಸಿತು.

## ಸೈಮನ್ ಆಯೋಗ

ಭಾರತದ ಸಂವಿದಾನದ ಪುನರ್ಘಟನೆಗೆ ಸಂಬಂಧಿಸಿದಂತೆ ನೇಮಕಗೊಂಡ ಸೈಮನ್ ಆಯೋಗವನ್ನು ಕಾಂಗ್ರೆಸ್ ಬಹಿಷ್ಕರಿಸಿತು. ಸೈಮನ್ ಆಯೋಗದ ವರದಿಯನ್ನನುಸರಿಸಿ ಸಿಂಧ್ ಮತ್ತು ಒರಿಸ್ಸಾ ಪ್ರಾಂತಗಳ ರಚನೆ ಆಯಿತು. ಕಾಂಗ್ರೆಸ್ ಸಂಸ್ಥೆಯು ಸೈಮನ್ ಆಯೋಗವನ್ನು ಬಹಿಷ್ಕರಿಸಿತಾದರೂ, ದುಂಡು ಮೇಜಿನ ಪರಿಷತ್ತನ್ನು ಬಹಿಷ್ಕರಿಸಲಿಲ್ಲ.

ಆ ಪರಿಷತ್ತಿನಲ್ಲೂ ಭಾಷಾವಾರು ಪ್ರಾಂತ ರಚನೆಯ ವಿಷಯ ಪ್ರಸ್ತಾಪ ಆಗಿತ್ತು. ೧೯೩೭ ರಲ್ಲಿ ಭಾರತಕ್ಕೆ ಸ್ವಾಯತ್ತತೆ ಲಭಿಸಿತಾದರೂ, ಸಿಂಧ್ ಮತ್ತು ಒರಿಸ್ಸಾ ಪ್ರಾಂತಗಳ ನಿರ್ಮಾಣ ಆದರೂ ಕರ್ನಾಟಕದ ನಿರ್ಮಾಣ ಆಗಲಿಲ್ಲ.

ಕರ್ನಾಟಕ ಏಕೀಕರಣ ಪರಿಷತ್ತುಗಳು ಮತ್ತು ಕರ್ನಾಟಕಸ್ಥರ ಮಹಾಸಭೆ

೧೯೨೪ ರಿಂದ ಆರಂಭವಾಗಿ ೧೯೪೬ ರವರೆಗೆ ನಡೆದ ಹತ್ತು ಕರ್ನಾಟಕ ಏಕೀಕರಣ ಪರಿಷತ್ತುಗಳ ಮುಖ್ಯ ಉದ್ದೇಶವೂ ಕರ್ನಾಟಕ ಏಕೀಕರಣವೇ ಆಗಿತ್ತು. ಬೇರೆ ಬೇರೆ ಸ್ಥಳಗಳಲ್ಲಿ ನಡೆದ ಈ ಪರಿಷತ್ತುಗಳಲ್ಲಿ ಸ್ವಾಗತಾಧ್ಯಕ್ಷರಾಗಲೀ, ಉದ್ಘಾಟಕರಾಗಲೀ ಅಥವಾ ಅಧ್ಯಕ್ಷರಾಗಲೀ ಕರ್ನಾಟಕ ಏಕೀಕರಣವನ್ನು ಹೊರತುಪಡಿಸಿ ಬೇರೇನನ್ನೂ ಪ್ರಸ್ತಾಪಿಸಿದಂತೆ ತೋರುವುದಿಲ್ಲ. ಹತ್ತನೆಯ ಪರಿಷತ್ತಿನ ಉದ್ಘಾಟಕರಾಗಿದ್ದ ಸರ್ದಾರ್ ವಲ್ಲಭ ಭಾಯಿ ಪಟೇಲರು ಭಾಷಾವಾರು ಪ್ರಾಂತ ರಚನೆಯ ಅಗತ್ಯತೆಯನ್ನು ತಿಳಿಸಿ, ಸಧ್ಯದಲ್ಲೇ ಕರ್ನಾಟಕ ಪ್ರಾಂತ ರಚನೆ ಆಗುವುದೆಂದು ತಿಳಿಸಿದ್ದರು. ೩೧-೮-೧೯೪೬ ರಂದು ದಾವಣಗೆರೆಯಲ್ಲಿ ಕರ್ನಾಟಕಸ್ಥರ ಮಹಾಸಭೆ ನಡೆಯಿತು. ಸ್ವಾಗತಾಧ್ಯಕ್ಷರಾಗಿದ್ದವರು ಉರವಕೊಂಡ ಜಗದ್ಗುರುಗಳು ಮತ್ತು ಮಹಾ ಸಭೆಯನ್ನು ಉದ್ಘಾಟಿಸಿದವರು ಕೆ.ಆರ್.ಕಾರಂತರು. ಸಭೆಯ ಅಧ್ಯಕ್ಷತೆಯನ್ನು ಎಂ.ಪಿ.ಪಾಟೀಲರು ವಹಿಸಿದ್ದರು. *ಬಹುತೇಕ ಕರ್ನಾಟಕದ ಎಲ್ಲಾ ಭಾಗಗಳಿಂದ, ಎಲ್ಲಾ ರಾಜಕೀಯ ಪಕ್ಷÀಗಳ ಪ್ರತಿನಿಧಿಗಳು ಮಹಾಸಭೆಗೆ ಬಂದಿದ್ದರು. ಭಾರತಕ್ಕೆ ಸ್ವಾತಂತ್ರ ಬರುವ ದಿನಗಳು ಹತ್ತಿರದಲ್ಲಿವೆ ಎಂದು ಅಲ್ಲಿದ್ದ ಬಹುತೇಕ ಎಲ್ಲರಿಗೂ ತಿಳಿದಿತ್ತು. ರಾಜಕೀಯ ಘಟನೆ ಸಿದ್ಧವಾಗುವುದಕ್ಕೆ ಮೊದಲೇ ಭಾಷಾವಾರು ಪ್ರಾಂತಗಳ ರಚನೆ ಆಗುವುದು ಒಳಿತು ಹಾಗೂ ಸೂಕ್ತ ಎಂಬುದು ಅನೇಕರ ಅಭಿಪ್ರಾಯವಾಗಿತ್ತು. ಆ ಸಭೆಯಲ್ಲಿ 'ಸಾಧ್ಯವಾದರೆ ಮೈಸೂರನ್ನು ಒಳಗೊಂಡು, ಅಗತ್ಯವಾದರೆ ಅದನ್ನು ಬಿಟ್ಟು ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕು' ಎಂಬ ಗೊತ್ತುವಳಿಯನ್ನು ಬಳ್ಳಾರಿಯ ಕೋ.ಚೆನ್ನಬಸಪ್ಪ ಮಂಡಿಸಿದರು. ಅದನ್ನು ಬೆಂಗಳೂರಿನ ಬಿ.ಬಸವಲಿಂಗಪ್ಪ ಅನುಮೋದಿಸಿದರು. ಗೊತ್ತುವಳಿಗೆ ಕೆಂಗಲ್ ಹನುಮಂತಯ್ಯನವರು ಒಂದು ತಿದ್ದುಪಡಿ ತಂದರು. ಅದು ಪ್ರಮುಖವಾದ ಹಾಗೂ ಬಹು ಮುಖ್ಯವಾದ ತಿದ್ದುಪಡಿ ಆಗಿತ್ತು.

ಆ ತಿದ್ದುಪಡಿಯು 'ಮೈಸೂರನ್ನು ಒಳಗೊಂಡು ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕು' ಎಂದಿತ್ತು. ತಿದ್ದುಪಡಿಯ ವಿಷಯದಲ್ಲಿ ಶ್ರೀರಂಗರ ಪಾತ್ರ ಮುಖ್ಯವಾಗಿತ್ತು .ಬ್ರಿಟಿಷ್ ಕರ್ನಾಟಕ, ಸಂಸ್ಥಾನ ಕರ್ನಾಟಕ ಎಂಬ ಭೇದವನ್ನೆಣಿಸದೆ, ಕರ್ನಾಟಕ ಏಕೀಕರಣ ಮತ್ತು ಭಾಷಾನುಗುಣ ಪ್ರಾಂತ ರಚನೆಗೆ ಘಟನಾ ಸಮಿತಿಯಲ್ಲಿ ಆದ್ಯತೆ - ಈ ಎರಡು ವಿಚಾರಗಳಿಗೆ ನಿರ್ಣಯ ಸ್ವೀಕರಿಸಿದ ಮಹಾ ಸಭೆಯು ಮೇಲಿನ ಉದ್ದೇಶ ಸಾಧನೆಗೆ ಮೂವರು ಸದಸ್ಯರ ಸಮಿತಿಯನ್ನು ನೇಮಿಸಿತು. ಆ ಸಮಿತಿಯಲ್ಲಿದ್ದವರೆಂದರೆ-

೧)ಎಂ.ಪಿ.ಪಾಟೀಲ,

೨)ಎಸ್.ನಿಜಲಿಂಗಪ್ಪ ಮತ್ತು

೩) ಶ್ರೀ ಕೆ.ಬಿ.ಜಿನರಾಜ ಹೆಗಡೆ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಆರಂಭವಾದಾಗಿನಿಂದಲೂ ಅದಕ್ಕೆ-

೧)ಭಾರತಕ್ಕೆ ಸ್ವಾತಂತ್ರ್ಯ ಮತ್ತು

೨)ಕರ್ನಾಟಕ ಏಕೀಕರಣ-ಎರಡೂ ಗುರಿಗಳಿದ್ದವು. ಈ ನಿಟ್ಟಿನಲ್ಲಿ ಬ್ರಿಟಿಷ್ ಕರ್ನಾಟಕ ಭಾಗಗಳ ಜನತೆಯ ಪ್ರಯತ್ನಗಳು ಪ್ರಮುಖವಾಗಿದ್ದವು. ಮೊದಮೊದಲಿಗೆ, ಮೈಸೂರು ಸಂಸ್ಥಾನದಲ್ಲಿ ಏಕೀಕರಣಕ್ಕೆ ತೀವ್ರ ವಿರೋಧ ಇಲ್ಲದಿದ್ದರೂ, ಕೆಲವರಿಗೆ ಆಸಕ್ತಿಯಂತೂ ಇರಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಬರುವ ದಿನಗಳು ಹತ್ತಿರವಾದಂತೆಲ್ಲಾ ಎಲ್ಲರಿಗೂ ಕರ್ನಾಟಕ ಏಕೀಕರಣ ಆಗಲೇಬೇಕೆಂಬ ಆಸಕ್ತಿ ಹೆಚ್ಚಿತು.

ಹತ್ತನೆಯ ಕರ್ನಾಟಕ ಏಕೀಕರಣ ಪರಿಷತ್ತು ಮತ್ತು ಮೂವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಈಗಾಗಲೇ ತಿಳಿಸಿರುವಂತೆ ಮುಂಬಯಿಯಲ್ಲಿ ೧೯೪೬ ರಲ್ಲಿ ನಡೆದ ಹತ್ತನೆಯ ಕರ್ನಾಟಕ ಏಕೀಕರಣ ಪರಿಷತ್ತು ಏಕೀಕರಣದ ವಿಷಯದಲ್ಲಿ ಮಹತ್ವ ಪಡೆಯಿತು. ಕರ್ನಾಟಕ ಏಕೀಕರಣ ಪರಿಷತ್ತಿನ ಹನ್ನೊಂದನೆಯ ಪರಿಷತ್ತು ೨೯-೧೨-೧೯೪೭ ರಂದು ಕಾಸರಗೋಡಿನಲ್ಲಿ ನಡೆಯಿತು. ಅದೇ ಸಂದರ್ಭದಲ್ಲಿ , ೩೧ ನೆಯ ಕನ್ನಡ ಸಾಹಿತ್ಯ ಸಮ್ಮೇಳನವೂ ಕಾಸರಗೋಡಿನಲ್ಲೇ ನಡೆಯಿತು. ಆ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದವರು ತಿ.ತಾ.ಶರ್ಮ. ಅವರ ಅಧ್ಯಕ್ಷ ಭಾಷಣದಲ್ಲೂ ಏಕೀಕರಣದ ವಿಚಾರ ಪ್ರಸ್ತಾಪವಾಯಿತು. ಏಕೀಕರಣ ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಬೇಕಾಗಿದ್ದ ಎ.ಬಿ.ಶೆಟ್ಟರು ಕಾರಣಾಂತರಗಳಿಂದ ಬರಲಾಗಲಿಲ್ಲ. ಆದ್ದರಿಂದ ಪರಿಷತ್ತಿನ ಅಧ್ಯಕ್ಷತೆಯನ್ನು ಕೇಂದ್ರ ಶಾಸನ ಸಭೆಯ ಆರ್.ಆರ್.ದಿವಾಕರ್ ವಹಿಸಿದರು. ಕೆ.ಆರ್.ಕಾರಂತರು ಪರಿಷತ್ತಿನ ಸ್ವಾಗತಾಧ್ಯಕ್ಷರಾಗಿದ್ದರು.

ಪರಿಷತ್ತಿನ ಉದ್ಘಾಟನೆ ಮಾಡಿದವರು ಮೈಸೂರು ಸಂಸ್ಥಾನದ ಎಚ್.ಸಿದ್ದಯ್ಯನವರು. ಭಾರತಕ್ಕೆ ಸ್ವಾತಂತ್ರ ಸಿಕ್ಕ ಮೇಲೂ ಏಕೀಕರಣ ವಿಳಂಬವಾಗುತ್ತಿರುವುದನ್ನು ಬಹುತೇಕ ಎಲ್ಲ ನಾಯಕರೂ ಆಕ್ಷೇಪಿಸಿದರು. ಏಕೀಕರಣಕ್ಕೆ ಇರುವ ಅಡೆ ತಡೆಗಳೇನು ಎಂದು ಸ್ಪಷ್ಟವಾಗಬೇಕು ಎಂಬುದೇ ಬಹು ಮುಖ್ಯ ಪ್ರಶ್ನೆಯಾಗಿತ್ತು. ರಾಜ್ಯಘಟನೆ ಜಾರಿಯಾಗುವುದರೊಳಗೆ ಕರ್ನಾಟಕ ಪ್ರಾಂತ ನಿರ್ಮಾಣ ಆಗದದಿದ್ದರೆ ತೀವ್ರ ಚಳವಳಿಯ ಮೂಲಕ ಅದನ್ನು ವಿರೋಧಿಸಲಾಗುವುದು ಎಂದು ಎಚ್ಚರಿಸಿದ ಆ ಸಭೆಯಲ್ಲಿ ಏಳು ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು.

### ಮುಂಬಯಿ ಶಾಸನ ಸಭೆಯಲ್ಲಿ ವಿಷಯ ಮಂಡನೆ

೧-೪-೧೯೪೭ ರಂದು ಮುಂಬಯಿ ಶಾಸನ ಸಭೆಯಲ್ಲಿ ಪ್ರತ್ಯೇಕ ಕರ್ನಾಟಕ ರಚನೆಗೆ ಸಂಬಂಧಿಸಿದಂತೆ ಅಂದಾನಪ್ಪ ದೊಡ್ಡಮೇಟಿ ಅವರು ಮಂಡಿಸಿದ ಒಂದು ಖಾಸಗಿ ಗೊತ್ತುವಳಿಯು, ಮುರಾಜಿ ದೇಸಾಯಿ ಅವರ ವಿರೋಧದ ನಡುವೆಯೂ, ಮುಖ್ಯ ಮಂತ್ರಿ ಬಿ.ಜಿ. ಖೇರರು ಸೂಚಿಸಿದ ತಿದ್ದುಪಡಿಗಳೊಂದಿಗೆ, ಪರವಾಗಿ ೬೦ ಮತ್ತು ವಿರುದ್ಧವಾಗಿ

೮ ಮತಗಳಿಂದ ಸ್ವೀಕೃವಾತವಾಯಿತು. ಮದರಾಸು ಶಾಸನ ಸಭೆಯಲ್ಲಿ ವಿಷಯ ಮಂಡನೆ : ೧೯೪೭ ಏಪ್ರಿಲ್ ೨೭ ರಂದು ಮದರಾಸು ಶಾಸನ ಸಭೆಯಲ್ಲಿ ಪಿ.ಸುಬ್ಬರಾಯನ್ ಅವರು 'ಭಾರತದ ಸಂವಿಧಾನವನ್ನು ರಚಿಸುವಾಗ ಭಾಷಾನುಗುಣವಾಗಿ ಪ್ರಾಂತಗಳ ಪುನರ್ರಚನೆ ಅತ್ಯಂತ ಅವಶ್ಯಕವಾಗಿದೆ. ಆದ್ದರಿಂದ ಘಟನಾ ಸಮಿತಿಯು ತನ್ನ ಪ್ರಥಮ ಸಭೆಯಲ್ಲೇ ಈ ವಿಷಯವನ್ನು ಕೈಗೆತ್ತಿಕೊಳ್ಳಬೇಕು' ಎಂದು ನಿರ್ಣಯ ಮಂಡಿಸಿದರು

ಘಟನಾ ಸಮಿತಿಯ ನಿರ್ಣಯ : ಸ್ವತಂತ್ರ ಭಾರತದ ಸಂವಿಧಾನವನ್ನು ಸಿದ್ಧಪಡಿಸಲು ರಚಿತವಾಗಿದ್ದ ಘಟನಾ ಸಮಿತಿಯು, ಭಾಷಾವಾರು ಪ್ರಾಂತ ರಚನೆಯ ವಿಚಾರವನ್ನೂ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬೇಕಾಗಿತ್ತು. ೧೯೪೬ ರ ಡಿಸೆಂಬರ್ ನಲ್ಲಿ ಘಟನಾ ಸಮಿತಿಯ ಸಭೆಯು ದೆಹಲಿಯಲ್ಲಿ ಒಂದು ವಾರ ಕಾಲ ನಡೆದಾಗ. ಭಾಷಾವಾರು ಪ್ರಾಂತ ರಚನೆಯನ್ನು ಕುರಿತು ಕರ್ನಾಟಕದ ಪರ ವಾದ ಮಂಡಿಸುವವರಿಗೆ ನೆರವಾಗಲು ನೆಗಳೂರು ರಂಗನಾಥ ಹೋಗಿದ್ದರು. ಇದ್ದಕ್ಕಿದ್ದಂತೆ ರಂಗನಾಥರು ಶ್ರೀರಂಗರನ್ನು ದೆಹಲಿಗೆ ಕರೆಸಿಕೊಂಡರು.

ಆ ಸಮಯದಲ್ಲಿ ಒಂದು ದಿನ ೨೫-೧-೧೯೪೭) ಶ್ರೀರಂಗರು ಕರ್ನಾಟಕದ ಇಬ್ಬರು ಕಾಂಗ್ರೆಸ್ ನಾಯಕರ ಜೊತೆಗೆ ನೆಹರೂ ಅವರನ್ನು ಕಂಡು, ಭಾಷಾವಾರು ಪ್ರಾಂತ ರಚನೆಯ ಅವಶ್ಯಕತೆ ಮತ್ತು ಅಗತ್ಯತೆಗಳನ್ನು ಕುರಿತು ವಿವರಿಸಿದರು. ಅಂದೇ ಘಟನಾ ಸಮಿತಿಯ ಸಭೆಯಲ್ಲಿ ಭಾಷಾವಾರು ಪ್ರಾಂತ ರಚನೆಯ ಬಗ್ಗೆ ಚರ್ಚೆ ನಡೆದು, ಆ ಸಂಬಂಧ ವರದಿಯನ್ನು ಸಿದ್ಧಪಡಿಸಲು ಎಂಟು ಜನರ ಉಪ ಸಮಿತಿಯೊಂದನ್ನು ರಚಿಸಲಾಯಿತು.

### ಬೆಂಗಳೂರು ಮತ್ತು ಬೀರೂರುಗಳ ಕಾಂಗ್ರೆಸ್ ಅಧಿವೇಶನ

೧೦-೮-೧೯೪೭ರಂದೇ ಮೈಸೂರಿನ ಮಹಾರಾಜರು ಭಾರತ ಒಕ್ಕೂಟದಲ್ಲಿ ಸೇರುವ ಒಪ್ಪಂದಕ್ಕೆ ಸಹಿ ಹಾಕಿದ್ದರು. ಆದರೆ ಭಾರತಕ್ಕೆ ಸ್ವಾತಂತ್ರ ಬಂದ ೧೫-೮-೧೯೪೭ರಂದು ಮೈಸೂರು ಸಂಸ್ಥಾನ ಅದರಲ್ಲಿ ಸೇರಲಿಲ್ಲ. ಮೈಸೂರು ಸಂಸ್ಥಾನದ ಜನತೆ ಮೈಸೂರು ಚಲೋ ಚಳವಳಿ ಮಾಡಿದರು. ೨೪-೧೦-೧೯೪೭ರಂದು ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರವು ಅಸ್ತಿತ್ವಕ್ಕೆ ಬಂದಿತು. ಕೆ.ಸಿ.ರೆಡ್ಡಿ ಅವರು ಮೊದಲ ಮುಖ್ಯ ಮಂತ್ರಿಯಾದರು.

೬-೧೧-೧೯೪೮ರಂದು ಬೀರೂರಿನಲ್ಲಿ ನಡೆದ ಅಖಿಲ ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ಕೆ.ಸಿ.ರೆಡ್ಡಿ ಅವರು ಕರ್ನಾಟಕ ಪ್ರಾಂತ ರಚನೆಗೆ ಮೈಸೂರು ರಾಜ್ಯವು ಅಡ್ಡಿಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಅದಕ್ಕೆ ಮೊದಲೇ ೧೯೪೬ರ ನವೆಂಬರ್ನಲ್ಲಿ, ಬೆಂಗಳೂರಿನ ಸುಭಾಷ್ ನಗರದಲ್ಲಿ ನಡೆದ ಮೈಸೂರು ಕಾಂಗ್ರೆಸ್ ಸಮಿತಿಯ ವಾರ್ಷಿಕ ಸಭೆಯಲ್ಲಿ, ಬೇರೆ ಬೇರೆ ಆಡಳಿತಗಳಲ್ಲಿ ಹರಿದು ಹಂಚಿಹೋಗಿರುವ ಭಾಗಗಳನ್ನೆಲ್ಲಾ ಒಗ್ಗೂಡಿಸಿ, ಶೀಘ್ರವೇ ಕರ್ನಾಟಕ ರಚನೆ ಆಗಬೇಕೆಂಬ ಗೊತ್ತುವಳಿ ಸ್ವೀಕರಿಸಿತ್ತು.

ಬೀರೂರಿನ ಕಾಂಗ್ರೆಸ್ ಅಧಿವೇಶನದಲ್ಲಿ ಆಗಿದ್ದ ನಿರ್ಣಯದಂತೆ ನೇಮಕಗೊಂಡ ಸಮಿತಿಯಲ್ಲಿ ಟಿ.ಸಿದ್ಧಲಿಂಗಯ್ಯ, ಟಿ.ಸುಬ್ರಹ್ಮಣ್ಯ, ಎಸ್.ಚನ್ನಯ್ಯ, ಕೆ.ಜಿ. ಒಡೆಯರ್, ಜಿ.ಬಂಡಿ ಗೌಡ ಮತ್ತು ನಾಮಕರಣಗೊಂಡಿದ್ದ ಬಿ.ಪಿ.ಹಾಲಪ್ಪ ಇದ್ದರು.ಈ ಸಮಿತಿಯು ಕರ್ನಾಟಕದ ಎಲ್ಲ ಭಾಗ ಗಳಲ್ಲಿ ಪ್ರವಾಸ ಮಾಡಿ ತನ್ನ ವರದಿಯನ್ನು ಸಲ್ಲಿಸಿತು.

### ಧರ್ ಆಯೋಗ

ಭಾರತದ ಘಟನಾ ಸಮಿತಿಯು ಭಾಷಾವಾರು ಪ್ರಾಂತ ರಚನೆಗೆ ಸಂಬಂಧಿಸಿದಂತೆ ವರದಿ ನೀಡಲು ಅಲಹಾಬಾದ್ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ ಎಸ್.ಕೆ.ಧರ್ ಅವರ ಅಧ್ಯಕ್ಷತೆಯಲ್ಲಿ ೧೭-೬-೧೯೪೮ ರಂದು ಆಯೋಗವೊದನ್ನು ನೇಮಕ ಮಾಡಿತು. ಆ ಆಯೋಗದಲ್ಲಿ ಕರ್ನಾಟಕದ ಪರವಾಗಿ ಟೇಕೂರು ಸುಬ್ರಹ್ಮಣ್ಯಂ ಮತ್ತು ಆರ್.ಆರ್.ದಿವಾಕರ್ ಸಹಾಯಕ ಸದಸ್ಯರಾಗಿದ್ದರು. ಆಂಧ್ರ, ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರ - ಇವುಗಳಲ್ಲಿ ಯಾವ ಹೊಸ ಪ್ರಾಂತಗಳ ರಚನೆ ಆಗಬೇಕು ಮತ್ತು ಇವುಗಳ ಖಚಿತ ಗಡಿಯ ನಿರ್ಧಾರ ಆಗುವವರೆಗೆ ತಾತ್ಕಾಲಿಕ ಗಡಿ ಯಾವುದಿರಬೇಕು ಹಾಗೂ ಈ ಪ್ರಾಂತಗಳ ನಿರ್ಮಾಣದಿಂದ ಅವುಗಳ ಆಡಳಿತ , ಆರ್ಥಿಕ ಮತ್ತು ಇತರ ವಿಷಯಗಳ ಮೇಲೆ ಆಗುವ ಪರಿಣಾಮಗಳೇನು ಎಂಬುದನ್ನು ಆಯೋಗ ಅಧ್ಯಯನ ಮಾಡಿ ವರದಿ ಸಲ್ಲಿಸಬೇಕಾಗಿತ್ತು.

೧೯-೭-೧೯೪೮ರಂದು ಮೊದಲ ಬಾರಿಗೆ ಹೊಸದೆಹಲಿಯಲ್ಲಿ ಸಭೆ ಸೇರಿದ ಆಯೋಗವು ಭಾಷಾವಾರು ಪ್ರಾಂತ ರಚನೆಯ ಅಗತ್ಯತೆ, ವಿಧಾನ, ಪರಿಣಾಮ ಇತ್ಯಾದಿಗಳ ಬಗ್ಗೆ ತಿಳಿಯಲು ಇಪ್ಪತ್ತು ಪ್ರಶ್ನೆಗಳನ್ನು ಸಿದ್ಧಪಡಿಸಿ, ೧೬-೮-೧೯೪೮, ಅಂದರೆ ೨೮ ದಿನಗಳ ಒಳಗಾಗಿ ಉತ್ತರವನ್ನು ದೆಹಲಿಗೆ ತಲುಪಿಸುವಂತೆ ಸೂಚಿಸಿ, ಪ್ರಶ್ನೆಗಳನ್ನು ಪ್ರಕಟಿಸಿತು. ಆಯೋಗದ ಕಾಟಾಚಾರದ ಕೆಲಸವನ್ನು ಜನತೆ ಹಗುರವಾಗಿ ಕಾಣಲಿಲ್ಲ. ಆಯೋಗದ ಪ್ರಶ್ನೆಗಳಿಗೆ ಗಂಬೀರವಾಗಿ ಉತ್ತರಿಸಿತು. ಆಗಸ್ಟ್ ತಿಂಗಳ ಕೊನೆಯ ವಾರದಲ್ಲಿ ಆಯೋಗವು ದೆಹಲಿಯಲ್ಲೇ ಕೆಲವು ಸಾಕ್ಷಿಗಳನ್ನು ಪರಿಶೀಲಿಸಿತು. ಸೆಪ್ಟೆಂಬರ್, ಅಕ್ಟೋಬರ್ ತಿಂಗಳುಗಳಲ್ಲಿ ವಿಶಾಖ ಪಟ್ಟಣ, ಮದರಾಸು, ಮದುರೆ, ಮಂಗಳೂರು, ಕಲ್ಲಿಕೋಟೆ, ಕೊಯಮತ್ತೂರು, ನಾಗಪುರ, ಹುಬ್ಬಳ್ಳಿ, ಪುಣೆ ಮತ್ತು ಮುಂಬಯಿಗಳಲ್ಲಿ ಸಾಕ್ಷಿಗಳನ್ನು ಸಂದರ್ಶಿಸಿ, ಮಾಹಿತಿ ಸಂಗ್ರಹಿಸಿ, ೧೦೦೦ದಷ್ಟು ಮನವಿಗಳನ್ನು ಸ್ವೀಕರಿಸಿ, ಸುಮಾರು ೭೦೦ ಸಾಕ್ಷಿಗಳನ್ನು ಪರೀಕ್ಷಿಸಿದ್ದಾಗಿ ತಿಳಿಸಿದ ಆಯೋಗವು ನವೆಂಬರ್ ೨೦ ಮತ್ತು ೨೧ ರಂದು ಸಭೆ ಸೇರಿ, ವಿಚಾರ ವಿನಿಮಯ ಮಾಡಿ ಡಿಸೆಂಬರ್ ೧೦ರಂದು ತನ್ನ ವರದಿಯನ್ನು ಘಟನಾ ಸಮಿತಿಗೆ ಸಲ್ಲಿಸಿತು.

ಧರ್ ಆಯೋಗದ ಪ್ರಶ್ನಾವಳಿಗೆ ದಕ್ಷಿಣ ಕನ್ನಡ ಜಿಲ್ಲೆ, ನೀಲಗಿರಿ ಜಿಲ್ಲೆ, ಕೊಯಮತ್ತೂರು, ಪೆನುಗೊಂಡ, ಬಳ್ಳಾರಿ, ಬೆಜವಾಡ, ಮದ್ರಾಸ್,ಕೊಳ್ಳೇಗಾಲ, ಹೊಸೂರು ಮತ್ತು ಕಾಸರಗೋಡಿನ ಹಲವು ನಾಯಕರು ಉತ್ತರ ಸಲ್ಲಿಸಿದ್ದರು. ಸೊಲ್ಲಾಪುರದ ಜನತೆಯೂ ಜಯದೇವಿ ತಾಯಿ ಲಿಗಾಡೆ ಅವರ ನೇತೃತ್ವದಲ್ಲಿ ತಾವು ಕರ್ನಾಟಕಕ್ಕೆ ಸೇರುವುದಾಗಿ

ಮನವಿ ಮಾಡಿತು. ಧರ್ ಆಯೋಗವು ಸಲ್ಲಿಸಿದ ವರದಿಯಲ್ಲಿ, ಭಾಷಾವಾರು ಪ್ರಾಂತ ರಚನೆಗೆ ವಿಶೇಷವಾಗಿ ಆಂಧ್ರ , ಕರ್ನಾಟಕ ಮತ್ತು ಕೇರಳಗಳಲ್ಲಿರುವ ಭಿನ್ನಾಭಿಪ್ರಾಯಗಳನ್ನು ಪ್ರಸ್ತಾಪಿಸಲಾಗಿತ್ತು.

ಈ ಭಿನ್ನಾಭಿಪ್ರಾಯಗಳು ಭಾಷಾವಾರು ಪ್ರಾಂತ ರಚನೆಗೆ ಅಡ್ಡಿಯಾಗಿವೆ ಎಂದು ತಿಳಿಸಿದ ಆಯೋಗವು ಕರ್ನಾಟಕ ಪ್ರಾಂತ ರಚನೆಯೇ ಹೆಚ್ಚು ತೊಡಕಾಗಿದೆ ಎಂದು ಸೂಚನೆ ನೀಡಿತ್ತು. ಆಯೋಗವು, 'ನಮ್ಮ ಅಭಿಪ್ರಾಯದಲ್ಲಿ ಸಧ್ಯಕ್ಕೆ ರಾಷ್ಟ್ರವು ಗಂಡಾಂತರ ಪರಿಸ್ಥಿತಿಯಲ್ಲಿದೆ. ಈಗಿನ ಕಾಲದಲ್ಲಿ ಹಿಂದುಸ್ಥಾನವನ್ನೊಂದು ರಾಷ್ಟ್ರವನ್ನಾಗಿಸುವುದು ಮೊದಲನೇ ಮತ್ತು ಕೊನೆಯ ಅವಶ್ಯಕತೆಯಾಗಿದೆ. ೫೫೫. ರಾಷ್ಟ್ರೀಯ ಭಾವನೆಗೆ ಪೋಷಕವಿದ್ದುದೆಲ್ಲವನ್ನೂ ಕೈಕೊಳ್ಳತಕ್ಕದ್ದು. ಅದರ ಮಾರ್ಗದಲ್ಲಿ ತೊಂದರೆಗಳನ್ನೊಡ್ಡುವ ಎಲ್ಲವನ್ನೂ ನಿರಾಕರಿಸತಕ್ಕದ್ದು ಅಥವಾ ತಡೆಹಿಡಿಯತಕ್ಕದ್ದು' ಎಂದು ತಿಳಿಸಿ ಸಧ್ಯದ ಪರಿಸ್ಥಿತಿಯಲ್ಲಿ ಭಾಷಾವಾರು ಪ್ರಾಂತ ರಚನೆ ಸಮರ್ಥನೀಯವಲ್ಲ ಎಂದು ತಿಳಿಸಿತು.

ಜೆ.ವಿ.ಪಿ. (ತ್ರಿಮೂರ್ತಿ) ಸಮಿತಿ

ಧರ್ ಆಯೋಗದ ವರದಿ ಸಲ್ಲಿಕೆ ಆದ ಒಂದು ವಾರದಲ್ಲೇ (ಡಿಸೆಂಬರ್ ೧೮, ೧೯) ರಾಷ್ಟ್ರೀಯ ಕಾಂಗ್ರೆಸ್ನ ಐವತ್ತೈದನೆಯ ಅಧಿವೇಶನವು ಜಯಪುರದಲ್ಲಿ ನಡೆಯಿತು. ಆಗ ಧರ್ ಆಯೋಗದ ವರದಿಯನ್ನು ಪರಿಶೀಲಿಸಿ, ಮೂರು ತಿಂಗಳ ಒಳಗೆ ವರದಿ ಮಾಡಲು ಮೂವರು ಸದಸ್ಯರ ಸಮಿತಿಯೊಂದನ್ನು ರಚಿಸಲಾಯಿತು. ಆ ಸಮಿತಿಯಲ್ಲಿ ಸರ್ದಾರ್ ವಲ್ಲಭ ಭಾಯಿ ಪಟೇಲ್, ಪಟ್ಟಾಭಿ ಸೀತಾರಾಮಯ್ಯ ಮತ್ತು ಜವಹರಲಾಲ್ ನೆಹರೂ ಇದ್ದರು. ಈ ತ್ರಿಮೂರ್ತಿ(ಜೆ.ವಿ.ಪಿ.)ಸಮಿತಿಯ ವರದಿಯು ೧-೪-೧೯೪೯ ರಂದು ಪ್ರಕಟವಾಯಿತು. ಧರ್ ಆಯೋಗದ ವರದಿಯನ್ನು ಜೆ.ವಿ.ಪಿ.ಸಮಿತಿಯೂ ಎತ್ತಿ ಹಿಡಿಯಿತು.

ಕೇರಳ ಮತ್ತು ಕರ್ನಾಟಕ ಪ್ರಾಂತ ರಚನೆಯು ಸಮಸ್ಯಾತ್ಮಕವಾಗಿದೆ ಎಂಬ ಅಭಿಪ್ರಾಯದಿಂದ, ಹೊಸದಾಗಿ ರಾಷ್ಟ್ರ ನಿರ್ಮಾಣವಾಗುತ್ತಿರುವ ಸಂದರ್ಭದಲ್ಲಿ ಭಾಷಾವಾರು ಪ್ರಾಂತ ರಚನೆಯು ರಾಷ್ಟ್ರದ ಐಕ್ಯತೆ ಹಾಗೂ ಆರ್ಥಿಕ ಪ್ರಗತಿಗೆ ಧಕ್ಕೆ ತರಬಹುದು ಎಂಬ ಸಂಶಯವನ್ನು ಜೆ.ವಿ.ಪಿ ಸಮಿತಿ ವ್ಯಕ್ತಪಡಿಸಿತು. ೮-೫-೧೯೪೯ರಂದು ಕರ್ನಾಟಕ ಪ್ರಾಂತಿಕ ಸಮಿತಿಯು ಹುಬ್ಬಳ್ಳಿಯಲ್ಲಿ ಸಭೆ ಸೇರಿ, ತ್ರಿಮೂರ್ತಿ ಸಮಿತಿಯ ವರದದಿಯ ಬಗ್ಗೆ ತನ ಅತೃಪ್ತಿ ವ್ಯಕ್ತಪಡಿಸಿತು. ಅಂತೆಯೇ ೨೦-೫-೧೯೪೯ರಂದು ಹುಬ್ಬಳ್ಳಿಯಲ್ಲೇ ಕರ್ನಾಟಕ ಏಕೀಕರಣ ಮಹಾ ಸಮಿತಿಯು ಸಭೆ ಸೇರಿ 'ಕರ್ನಾಟಕ ಪ್ರಾಂತ ನಿರ್ಮಾಣವಾಗದಿದ್ದರೆ ಕನ್ನಡ ನಾಡಿನಲ್ಲೆಲ್ಲಾ ಅತ್ಯಂತ ಅತೃಪ್ತಿ ಮತ್ತು ಅಸಂತೋಷಗಳುಂಟಾಗಿ ಜನತೆಯ ತಾಳ್ಮೆಯು ಕೊನೆಯ ಮಟ್ಟಕ್ಕೆ ಮುಟ್ಟುತ್ತದೆ ' ಎಂದು ಗೊತ್ತುವಳಿ ಸ್ವೀಕರಿಸಿತು.

ಅನಂತರ ೨೩-೫-೧೯೪೯ರಂದು ಎಂಟು ಸದಸ್ಯರ ಶಿಷ್ಟ ಮಂಡಳವು ಡೆಹರಾಡೂನ್ನಲ್ಲಿ ಕಾಂಗ್ರೆಸ್ ಸಮಿತಿಯನ್ನು ಕಂಡು ಕರ್ನಾಟಕದ ಜನತೆಗೆ ಆಗಿರುವ ಅತೀವ ನಿರಾಶೆಯನ್ನು ತಿಳಿಸಿ, ಭಾಷಾವಾರು ಪ್ರಾಂತ ರಚನೆಯು ಒಮ್ಮೆಗೇ ಆಗುವುದು ಅವಶ್ಯಕ ಮತ್ತು ನ್ಯಾಯಯುತ ಎಂದು ಮನವರಿಕೆ ಮಾಡಿತು. ಆದರೆ ಕೇಂದ್ರ ಕಾಂಗ್ರೆಸ್ ಸಮಿತಿಯು ೧೬-೧೧-೧೯೪೯ರಂದು ಕೇವಲ ಆಂಧ್ರಪ್ರದೇಶ ರಚನೆಗೆ ಗೊತ್ತುವಳಿ ಸ್ವೀಕರಿಸಿತು. ಇದನ್ನು ಪ್ರತಿಭಟಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ೩-೧೨-೧೯೪೯ರಂದು ಸಭೆ ಸೇರಿ ಕರ್ನಾಟಕ ಪ್ರಾಂತ ರಚನೆಗೆ ಅಡ್ಡಿಯಾಗಿರುವ ಕಾಂಗ್ರಸ್ನ ನಿರ್ಣಯವನ್ನು ವಿರೋಧಿಸಿ, ಕೇಂದ್ರ ಹಾಗೂ ಪ್ರಾಂತ ಶಾಸನ ಸಭೆಗಳಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿದ್ದ ೧೨ ಜನರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ, ರಾಜೀನಾಮೆ ಪತ್ರಗಳನ್ನು ಕೆ.ಪಿ.ಸಿ.ಸಿ. ಅಧ್ಯಕ್ಷರಿಗೆ ತಲುಪಿಸಿದರು.

ಆ ಹನ್ನೆರಡು ಜನರಲ್ಲಿ ಎಸ್.ನಿಜಲಿಂಗಪ್ಪನವರೂ ಒಬ್ಬರಾಗಿದ್ದರು.ಇದೇ ಸಂದರ್ಭದಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯೂ ಕರ್ನಾಟಕ ಪ್ರಾಂತ ರಚನೆಯಲ್ಲಿ ಮೈಸೂರು ಮಹಾರಾಜರು ಅಡ್ಡಿಯಾಗುವುದಿಲ್ಲ ಎಂದು ತಿಳಿಸಿತ್ತು. ೨೨-೧೨-೧೯೪೯ರಂದು ಕಾಂಗ್ರೆಸ್ ಪಕ್ಷದ ಕೇಂದ್ರ ಕಾರ್ಯಕಾರೀ ಸಮಿತಿಯು ಸಮಾವೇಶಗೊಂಡಾಗ ಹಾಜರಿದ್ದ ಕೆ.ಪಿ.ಸಿ.ಸಿ. ಅಧ್ಯಕ್ಷರಾದ ಎಸ್.ನಿಜಲಿಂಗಪ್ಪನವರು ಭಾಷಾವಾರು ಪ್ರಾಂತ ರಚನೆಯ ಬಗ್ಗೆ ಕನ್ನಡಿಗರ ಅಭಿಪ್ರಾಯಗಳನ್ನು ತಿಳಿಸಿ, ಆಗಲೇ ತಮ್ಮ ವಶಕ್ಕೆ ಬಂದಿದ್ದ ೧೨ ರಾಜೀನಾಮೆಗಳನ್ನು ಸಮಿತಿಗೆ ಸಲ್ಲಿಸಿದರು. ಸಮಿತಿಯು ರಾಜೀನಾಮೆಗಳನ್ನು ಸ್ವೀಕರಿಸಲಿಲ್ಲ. ಈ ಮಧ್ಯೆ ಆಂಧ್ರಪ್ರದೇಶದ ರಚನೆಯ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯ ವಿಭಜನೆಗೆ ಆಗುತ್ತಿದ್ದ ಸನ್ನಾಹವನ್ನು ಆದವಾನಿಯ ಜನ ವಿರೋಧಿಸಿದರು.

೯-೧-೧೯೫೦ರಂದು ಗದಗದಲ್ಲಿ ನಡೆದ ಕೆ.ಪಿ.ಸಿ.ಸಿ.ಸಭೆಯು ಆಂಧ್ರಪ್ರದೇಶದ ರಚನೆಗೆ ಮುಂದಾಗಿ ಕರ್ನಾಟಕ ಪ್ರಾಂತ ರಚನೆಗೆ ವಿಳಂಬ ಮಾಡುತ್ತಿರುವ ಕೇಂದ್ರ ಸರ್ಕಾರದ ಕ್ರಮವನ್ನು ವಿರೋಧಿಸಿ ರಾಜೀನಾಮೆ ಸಲ್ಲಿಕೆಗೆ ಅನುಮತಿ ಕೇಳಿದರು. ೨೬-೧-೧೯೫೦ರಂದು ಭಾರತವು ಗಣರಾಜ್ಯವಾಯಿತು. ಆದರೆ ಭಾಷಾವಾರು ಪ್ರಾಂತ ರಚನೆ ಆಗಲಿಲ್ಲ. ೨೦-೪-೧೯೫೧ರಂದು ರಾಷ್ಟ್ರೀಯ ಕಾಂಗ್ರೆಸ ಅಧ್ಯಕ್ಷರಾದ ಪುರುಷೋತ್ತಮ ದಾಸ್ ಟಂಡನ್ ಬೆಂಗಳೂರಿಗೆ ಬಂದಿದ್ದಾಗ, ಬೆಂಗಳೂರಿನ ಏಕೀಕರಣ ಸಂಘವು ನಗರದ ಪ್ರಮುಖರ ಜೊತೆಗೆ ಅವರನ್ನು ಸನ್ಮಾನಿಸಿ, ಕರ್ನಾಟಕ ಪ್ರಾಂತ ರಚನೆಗೆ ಅವಕಾಶ ಕಲ್ಪಿಸಲು ಮನವಿ ಮಾಡಿತು.

ಅದೇ ವರ್ಷ ಜುಲೈ ತಿಂಗಳ ೧೩ ರಂದು ಬೆಂಗಳೂರಿನ ಸರ್ ಕೆ.ಪಿ.ಪುಟ್ಟಣ್ಣ ಚೆಟ್ಟಿ ಟೌನ್ಹಾಲ್ನಲ್ಲಿ ಅಖಿಲ ಕರ್ನಾಟಕ ಪ್ರಾಂತ ರಚನಾ ಸಮ್ಮೇಳನ ನಡೆಯಿತು. ಅದೇ ಸಮಯದಲ್ಲಿ ಲಾಲ್ಬಾಗಿನ ಗಾಜಿನ ಮನೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯೂ ಸಮಾವೇಶಗೊಂಡಿತ್ತು. ಮಹಾರಾಷ್ಟ್ರ, ಮದ್ರಾಸ್ ಮತ್ತು ಆಂಧ್ರ ಪ್ರದೇಶದ ಪ್ರತಿನಿಧಿಗಳೆಲ್ಲ ಸೇರಿದ್ದ ಸಮಾವೇಶದಲ್ಲಿ ಎಲ್ಲರೂ ಕರ್ನಾಟಕ ಏಕೀಕರಣವನ್ನು ಬೆಂಬಲಿಸಿ ಮಾತನಾಡಿದರು.

## ಪಕ್ಷೇತರ ಕರ್ನಾಟಕ ಏಕೀಕರಣ ಪರಿಷತ್ತು

ಕರ್ನಾಟಕದ ಅನೇಕ ನಾಯಕರಿಗೆ ಕಾಂಗ್ರೆಸ್‌ಅನ್ನು ನಂಬಿದರೆ ಕರ್ನಾಟಕ ಏಕೀಕರಣವು ಕನಸಿನ ಮಾತಾಗಬಹುದೆಂದು ತೋರಿತು. ಆ ಕಾರಣದಿಂದ ಪಕ್ಷೇತರ ಕರ್ನಾಟಕ ಏಕೀಕರಣ ಪರಿಷತ್ತನ್ನು ನಡೆಸಲು ಮುಂದಾದರು. ಹೊಸಮನಿ ಸಿದ್ದಪ್ಪನವರ ನೇತೃತ್ವದಲ್ಲಿ ಮೊದಲ ಪಕ್ಷೇತರ ಕರ್ನಾಟಕ ಏಕೀಕರಣ ಪರಿಷತ್ತು ೧೯೫೧ರ ಮೇ ೨೫ ಮತ್ತು ೨೬ರಂದು ಸಮಾವೇಶಗೊಂಡಿತು. ಇದರಲ್ಲಿ ಕನ್ನಡ ಪ್ರದೇಶಗಳ ಬಹುತೇಕ ಎಲ್ಲ ರಾಜಕೀಯ ಪಕ್ಷಗಳೂ ಒಂದಾದವು. ಈ ಪರಿಷತ್ತಿನಲ್ಲಿ ಮುಂಬಯಿ, ಮದರಾಸು ಮತ್ತು ಹೈದರಾಬಾದ್ ಪ್ರಾಂತಗಳ ಕನ್ನಡ ಪ್ರದೇಶಗಳು, ಮೈಸೂರು ಮತ್ತು ಕೊಡಗು ರಾಜ್ಯಗಳನ್ನು ಸೇರಿಸಿ ಕೂಡಲೇ ಕರ್ನಾಟಕ ಪ್ರಾಂತ ರಚನೆ ಆಗಬೇಕು.

ಹಾಗೆ ಆಗದಿದ್ದರೆ ಮುಂಬರುವ ಚುನಾವಣೆಗಳಲ್ಲಿ ಕರ್ನಾಟಕ ಪ್ರಾಂತ ರಚನೆಯ ಉದ್ದಿಶ್ಯವನ್ನು ಮುಖ್ಯವಾಗಿ ಹೊಂದಿರುವ ರಾಜಕೀಯ ಪಕ್ಷಗಳಿಗೆ ಬೆಂಬಲ ನೀಡಲಾಗುವುದು ಹಾಗೂ ಪ್ರಸ್ತುತ ರಾಜಕೀಯ ಅಧಿಕಾರ ಸ್ಥಾನಗಳಲ್ಲಿರುವ ಕರ್ನಾಟಕದ ಪ್ರತಿನಿಧಿಗಳು ತಮ್ಮ ಸ್ಥಾನಗಳಿಗೆ ಕೂಡಲೇ ರಾಜೀನಾಮೆ ನೀಡಬೇಕು ಎಂಬ ಪ್ರಮುಖ ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು. ಗೊತ್ತುವಳಿಗಳ ಅನುಷ್ಠಾನಕ್ಕೆ ಸಮಿತಿಯೊಂದು ರಚಿತವಾಯಿತು ಮತ್ತು ೧೯೫೨ರಲ್ಲಿ ಚುನಾವಣೆಗಳು ನಡೆದಾಗ ಕರ್ನಾಟಕ ಏಕೀಕರಣ ಪಕ್ಷದ ಅಭ್ಯರ್ಥಿಗಳು ಗುಡಿಸಲಿನ ಗುರುತಿನ ಮೂಲಕ ಚುನಾವಣೆಯಲ್ಲಿ ಸ್ಪರ್ಧಿಸಿದರು.

## ಪೊಟ್ಟಿ ಶ್ರೀರಾಮುಲು ಉಪವಾಸ ಮತ್ತು ಮರಣ

ಈ ಮಧ್ಯೆ ಆಂಧ್ರ ಪ್ರಾಂತ ರಚನೆಗೆ ಒತ್ತಾಯ ತೀವ್ರವಾಗಿ ೧೫-೮-೧೯೫೧ರಿಂದ ಸ್ವಾಮಿ ಸೀತಾರಾಮರು ತಿರುಪತಿಯಲ್ಲಿ ಆಮರಣಾಂತ ಉಪವಾಸ ಕೈಗೊಂಡರು. ಕೇಂದ್ರ ಮತ್ತು ಆಂಧ್ರ ಶಾಸನ ಸಭೆಗಳಲ್ಲಿ ಆಂಧ್ರ ಪ್ರಾಂತ ರಚನೆಯ ವಿಷಯ ಪ್ರಸ್ತಾಪಕ್ಕೆ ಬಂದಿತಾದರೂ ನಿರ್ಣಯ ಗಳ ಸ್ವೀಕಾರ ಆಗಲಿಲ್ಲ. ೧೯೫೨ರ ಸಾರ್ವತ್ರಿಕ ಚುನಾವಣೆಗಳು ಮುಗಿದ ಅನಂತರ ಜುಲೈ ಎರಡನೆಯ ವಾರ ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಭಾಷಾವಾರು ಪ್ರಾಂತ ರಚನೆಯ ಗೊತ್ತುವಳಿಯನ್ನು ಮಂಡಿಸಿದವು. ಗೊತ್ತುವಳಿಯನ್ನು ವಿರೋಧಿಸಲು ಕಾಂಗ್ರೆಸ್ ಪಕ್ಷವು ತನ್ನ ಸದಸ್ಯ ರಿಗೆ ಆದೇಶ ನೀಡಿತು. ಆದರೆ ವಿಷಯದ ಬಗ್ಗೆ ಚರ್ಚೆ ನಡೆದಾಗ ಎಸ್.ನಿಜಲಿಂಗಪ್ಪನವರು ಭಾಷಾವಾರು ಪ್ರಾಂತ ರಚನೆಯ ಪರವಾಗಿಯೇ ವಿಚಾರಗಳನ್ನು ಮಂಡಿಸಿದರು.

ಲೋಕಸಭೆಯಲ್ಲಿ ಗೊತ್ತುವಳಿಯು ಅತ್ಯಧಿಕ ಬಹುಮತದಿಂದ ಬಿದ್ದುಹೋಯಿತು. ಆಂಧ್ರ ಪ್ರಾಂತ ರಚನೆ ವಿಳಂಬವಾಗುತ್ತಿರುವುದನ್ನು ಸಹಿಸದ ತೆಲುಗರು ಪುನಃ ಸತ್ಯಾಗ್ರಹ, ಚಳವಳಿ ಇತ್ಯಾದಿಗಳನ್ನು ಆರಂಭಿಸಿದರು. ಆಗಲೇ

ಆಂಧ್ರದ ಪೊಟ್ಟಿ ಶ್ರೀರಾಮುಲು ಅವರು ೫೮ ದಿನಗಳ ಉಪವಾಸದ ಅನಂತರ ೧೫-೧೨-೧೯೫೨ರಂದು ನಿಧನರಾದರು. ಕೇಂದ್ರ ಸರ್ಕಾರವು ಪರಿಸ್ಥಿತಿಯ ಗಂಭೀರತೆಯನ್ನು ಗಮನಿಸಿತು. ೧೯-೧೨-೧೯೫೨ರಂದು ಲೋಕಸಭೆಯಲ್ಲಿ ವಿಷಯದ ಪ್ರಸ್ತಾವನೆಯಾಗಿ, ಮದ್ರಾಸ್ ನಗರವನ್ನು ಹೊರತುಪಡಿಸಿ ಆಂಧ್ರ ಪ್ರಾಂತ ರಚನೆಗೆ ಮುಂದಾದ ಕೇಂದ್ರ ಸರ್ಕಾರವು, ಈ ಬಗ್ಗೆ ವರದಿ ನೀಡಲು ಕೆ.ಎನ್.ವಾಂಛೂ ಸಮಿತಿಯನ್ನು ನೇಮಿಸಿತು.

## ನಾನಲ್ ನಗರ ಅಧಿವೇಶನ

೧೯೫೩ರ ಜನವರಿ ತಿಂಗಳಿನಲ್ಲಿ ಹೈದರಾಬಾದ್ನ ನಾನಲ ನಗರದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ನ ವಾರ್ಷಿಕಾಧಿವೇಸನ ನಡೆದಾಗ ಮೈಸೂರು ರಾಜ್ಯದ ಮುಖ್ಯ ಮಂತ್ರಿ ಕೆ.ಹನುಮಂತಯ್ಯನವರು ಕರ್ನಾಟಕ ಪ್ರಾಂತ ರಚನೆಗೆ ಮೈಸೂರು ಸಂಸ್ಥಾನವು ಅಡ್ಡಿಯಾಗಿಲ್ಲ ಎಂದು ಸ್ಪಷ್ಟಪಡಿಸಿ ದರು. ಆ ಅಭಿಪ್ರಾಯವನ್ನು ಹಾರನಹಳ್ಳಿ ರಾಮಸ್ವಾಮಿ ಸಮರ್ಥಿಸಿದರು.

## ವಾಂಛೂ ಸಮಿತಿ

ಆಂಧ್ರ ಪ್ರಾಂತ ರಚನೆಯ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸಲು ಕೇಂದ್ರ ಸರ್ಕಾರವು ರಾಜಸ್ತಾನದ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಕೆ.ಎನ್.ವಾಂಛೂ ಅವರನ್ನು ೫-೧-೧೯೫೩ರಂದು ನೇಮಿಸಿತು. ೩೧-೧-೧೯೫೩ ಅಂದರೆ ಕೇವಲ ೨೬ ದಿನಗಳ ಒಳಗೆ ಆಯೋಗವು ವರದಿಯನ್ನು ಸಲ್ಲಿಸಬೇಕಾಗಿತ್ತು. ವಾಂಛೂ ಅನೆಕ ಸಂಘ-ಸಂಸ್ಥೆಗಳ ಮತ್ತು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಂದ ಮನವಿಗಳನ್ನು ಸ್ವೀಕರಿಸಿದರು.ವಾದ-ಪ್ರತಿ ವಾದಗಳನ್ನು ಕೇಳಿದರು. ಆಯೋಗವು ಕೆ.ಪಿ.ಸಿ.ಸಿ ಅಧ್ಯಕ್ಷ ಎಸ್.ನಿಜಲಿಂಗಪ್ಪ ಅವರನ್ನೂ ಭೇಟಿ ಮಾಡಿತ್ತು. *೭-೨-೨೯೫೩ರಂದು ವಾಂಛೂ ತಮ್ಮ ವರದಿಯನ್ನು ಸಲ್ಲಿಸಿದರು. ಹೈದರಾಬಾದ್ ಮತ್ತು ಮದ್ರಾಸ್ ರಾಜ್ಯಗಳಲ್ಲಿ ಸೇರಿರುವ, ತೆಲುಗೇ ಹೆಚ್ಚು ಜನರ ಮಾತೃಭಾಷೆ ಆಗಿರುವ ಹನ್ನೊಂದು ಜಿಲ್ಲೆಗಳನ್ನು ಮಾತ್ರ ಸೇರಿಸಿ ಆಂಧ್ರ ಪ್ರಾಂತ ರಚನೆ ಮಾಡಲು ಆಯೋಗವು ಶಿಫಾರ್ಸು ಮಾಡಿತು. ಬಳ್ಳಾರಿ ಜಿಲ್ಲೆಯು ಆಂಧ್ರದೊಡನೆ ಸೇರಲು ಹಲವು ತೊಂದರೆಗಳಿದ್ದುದನ್ನು ಆಯೋಗವು ತಿಳಿಸಿತು. ೧೯೨೧ರಲ್ಲಿ ಕೇಳಕರ್ ಅವರ ಶಿಪಾರ್ಸಿನ ಮೇಲೆ ಬಳ್ಳಾರಿ ಜಿಲ್ಲೆಯ ಆಲೂರು, ಆದವಾನಿ ಮತ್ತು ರಾಯದುರ್ಗ ತಾಲ್ಲೂಕುಗಳು ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿಯ ವ್ಯಾಪ್ತಿಗೆ ಸೇರಿತ್ತು.

## ಮಿಶ್ರಾ ಸಮಿತಿ

ಬಳ್ಳಾರಿ ಜಿಲ್ಲೆಯ ಬಗ್ಗೆ ಸ್ಪಷ್ಟ ತೀರ್ಮಾನ ಕೊಡಲು ವಿಫಲ ಆದ ವಾಂಛೂ ವರದಿಯನ್ನು ಆಧರಿಸಿ ೨೫-೩-೧೯೫೩ರಂದು ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ನೀಡಿದ ಪ್ರಕಟಣೆಯ ಪ್ರಕಾರ ಬಳ್ಳಾರಿ ಜಿಲ್ಲೆಯನ್ನು ಒಂದೇ

ಘಟಕವೆಂದು ಪರಿಗಣಿಸಲು ಸಾಧ್ಯವಿಲ್ಲವಾದ್ದರಿಂದ ಆಲೂರು, ಆದವಾನಿ ಮತ್ತು ರಾಯದುರ್ಗ ತಾಲ್ಲೂಕುಗಳನ್ನು ಆಂಧ್ರ ಪ್ರದೇಶಕ್ಕೂ, ಹರಪನಹಳ್ಳಿ , ಹಡಗಲಿ, ಕೂಡ್ಲಿಗಿ, ಸೊಂಡೂರು ಮತ್ತು ಸಿರಗುಪ್ಪ ತಾಲ್ಲೂಕುಗಳನ್ನು ಮೈಸೂರು ರಾಜ್ಯಕ್ಕೂ ಸೇರಿಸಬಹುದಾದರೂ, ಮಿಶ್ರ ಭಾಷೆಯ ಬಳ್ಳಾರಿ ತಾಲ್ಲೂಕಿನ ಸಮಸ್ಯೆಯು ಕೇವಲ ಭಾಷೆಗೆ ಮಾತ್ರ ಸೀಮಿತವಾಗಿರದೆ, ತುಂಗಭಧ್ರಾ ಅಣೆಕಟ್ಟೆಯ ಕಾರಣದಿಂದ ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳನ್ನೂ ಒಳಗೊಂಡಿರುವದರಿಂದ ಅದನ್ನು ಬಗೆಹರಿಸಲು ಭಾರತದ ರಾಷ್ಟ್ರಪತಿಗಳು ಹೈದರಾಬಾದ್ನ ಮುಖ್ಯ ನ್ಯಾಯಾಧೀಶ ಎಲ್.ಎಸ್.ಮಿಶ್ರಾ ಅವರನ್ನು ೨೧-೪-೧೯೫೩ರಂದು ನೇಮಿಸಿ, ೧೫-೫-೧೯೫೩ರ ಒಳಗೆ ವರದಿ ಸಲ್ಲಿಸಲು ಕೋರಿದರು.

ವಾಂಛೂ ಸಮಿತಿಯ ನೇಮಕವಾದಾಗಲೇ ಕರ್ನಾಟಕ ಪ್ರಾಂತ ರಚನೆ ವಿಳಂಬವಾಗುತ್ತಿದೆ ಎಂದು ಕರ್ನಾಟಕ ಏಕೀಕರಣ ವಾದಿಗಳಿಗೆ ಅತೃಪ್ತಿ ಮತ್ತು ಅಸಂತೋಷಗಳಾಗಿದ್ದವು. ಇದರಿಂದ ಬೇಸತ್ತ ಪಕ್ಷೇತರ ಕರ್ನಾಟಕ ಏಕೀಕರಣ ಪರಿಷತ್ತು ಕೇಂದ್ರ ಸರ್ಕಾರದ ಕ್ರಮವನ್ನು ಪ್ರತಿಭಟಿಸಿ ತು. ಸಮಾಜವಾದಿ ಮತ್ತು ಕಮ್ಯುನಿಸ್ಟ್ ಪಕ್ಷÀಗಳು ಏಕೀಕರಣ ಭೇಡಿಕೆಯನ್ನು ಪ್ರಧಾನ ಮಾಡಿದವು. ಈ ಬೇಡಿಕೆಗೆ ಹಿರಿಯ ರಾಜಕೀಯ ನಾಯಕರ ಮಾತ್ರವಲ್ಲದೆ ಜನತೆಯ ಬೆಂಬಲವೂ ದೊರೆಯಿತು.

### ಅದರಗುಂಚಿ ಶಂಕರಗೌಡ ಪಾಟೀಲರ ಉಪವಾಸ ಸತ್ಯಾಗ್ರಹ

ಮಿಶ್ರಾ ಸಮಿತಿಯ ನೇಮಕದಿಂದ ಜನತೆಗೆ ಆಗಿದ್ದ ಅಸಮಾಧಾನದ ಪ್ರತೀಕವಾಗಿ ಅದರಗುಂಚಿ ಶಂಕರಗೌಡ ಪಾಟೀಲರ ಆಮರಣಾಂತ ಉಪವಾಸ ಆರಂಭವಾಯಿತು. ಹುಬ್ಬಳ್ಳಿಯ ಸಮೀಪದ ಸಣ್ಣ ಹಳ್ಳಿಯಲ್ಲೇ ಯಾವ ಪೂರ್ವ ಪ್ರಚಾರವೂ ಇಲ್ಲದೆ ಆರಂಭವಾದ ಅದರಗುಂಚಿ ಶಂಕರ ಗೌಡ ಪಾಟೀಲರ ಆಮರಣಾಂತ ಉಪವಾಸ ಸತ್ಯಾಗ್ರಹ ಕ್ರಮೇಣ ರಾಜಕೀಯ ನಾಯಕರು ಮತ್ತು ಪತ್ರಿಕಾ ಮಾಧ್ಯಮದವರನ್ನು ಆಕರ್ಷಿಸಿತು. ೨೮-೩-೧೯೫೩ರಂದು ಅದರಗುಂಚಿಯ ಕಲ್ಮೇಶ್ವರ ದೇವಾಲಯದಲ್ಲೇ ಉಪವಾಸ ಸತ್ಯಾಗ್ರಹ ಆರಂಭವಾಯಿತು. ಎಸ್.ನಿಜಲಿಂಗಪ್ಪನವರೂ ಸೇರಿದಂತೆ ಹಲವಾರು ನಾಯಕರು ಅದರಗುಂಚಿಗೆ ಹೋಗಿ ಶಂಕರಗೌಡ ಪಾಟೀಲರನ್ನು ಕಂಡರು.

ಆ ಸಂದರ್ಭದಲ್ಲಿ ಬೆನ್ನಿನ ಮಣಿಶಿರದ ಶಸ್ತ್ರಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದ ಜಯದೇವಿ ತಾಯಿ ಲಿಗಾಡೆ ಅವರು, ತಮ್ಮ ಉಪವಾಸ ಸತ್ಯಾಗ್ರಹಕ್ಕೆ ಬೆಂಬಲ ಸೂಚಿಸಿ, ರಕ್ತಾಂಕಿತ ಪತ್ರವನ್ನು ಬರೆದಿದ್ದರೆಂದು ಶಂಕರಗೌಡ ಪಾಟೀಲರು ತಮ್ಮ ಅಪ್ರಕಟಿತ 'ನನ್ನ ದಿನಚರಿ'ಯಲ್ಲಿ ದಾಖಲಿಸಿದ್ದಾರೆ. ಶಂಕರಗೌಡ ಪಾಟೀಲರ ಉಪವಾಸ ಸತ್ಯಾಗ್ರಹದ ವಿಷಯವನ್ನು ಲೋಕಸಭೆಯಲ್ಲಿ ಪ್ರಸ್ತಾಪಿಸಿದ ಅಳವಂಡಿ ಶಿವಮೂರ್ತಿಸ್ವಾಮಿ ಅವರು, ಶೀಘ್ರವೇ ಕರ್ನಾಟಕ ಪ್ರಾಂತ ರಚನೆ ಆಗದಿದ್ದರೆ ಪರಿಸ್ಥಿತಿ ಉಲ್ಬಣಗೊಳ್ಳುತ್ತದೆ ಎಂಬ ಸೂಚನೆ ನೀಡಿದರು.ಮುಂಬಯಿ ಮತ್ತು ಹೈದರಾಬಾದ್

ಕರ್ನಾಟಕದ ಬಹುತೇಕ ಎಲ್ಲ ಭಾಗಗಳಿಂದ ಅನೇಕರು ಅದರಗುಂಚಿಗೆ ಬಂದು ತಮ್ಮ ಬೆಂಬಲ ಸೂಚಿಸಿದರು. ಕರ್ನಾಟಕ ಏಕೀಕರಣ ಸಮಸ್ಯೆಯು ಕೇವಲ ಕೆಲವು ರಾಜಕೀಯ ನಾಯಕರ ಸಮಸ್ಯೆ ಆಗಿ ಉಳಿಯದೆ ಇಡೀ ಜನತೆಯ ವಿಷಯವಾಗಿ ಪರಿಣಮಿಸಿತು.

## ಹುಬ್ಬಳ್ಳಿ ಗಲಭೆ

೧೯-೪-೧೯೫೩ರಂದು ಹುಬ್ಬಳ್ಳಿಯ ಪುರಸಭಾ ಭವನದಲ್ಲಿ ಕೆ.ಪಿ.ಸಿ.ಸಿ.ಯ ವಿಶೇಷ ಕಾರ್ಯಕಾರೀ ಸಮಿತಿ ಸಭೆ ನಡೆಯಲಿತ್ತು. ಇದು ಕಾಂಗ್ರೆಸ್ಸೇತರ ಪಕ್ಷಗಳ ನಾಯಕರಿಗೂ ತಿಳಿದಿತ್ತು. ರಾಜೀನಾಮೆ ನೀಡುತ್ತೇವೆ ಎಂದು ಕೇವಲ ಬಾಯಿ ಮಾತಿನಲ್ಲಿ ಹೇಳುತ್ತಾ, ಯಾವುದೇ ರೀತಿಯ ನಿರ್ಧಾರಕ್ಕೆ ಅವಕಾಶ ನೀಡದ ಕಾಂಗ್ರೆಸ್ ನಾಯಕರಿಂದ ರಾಜೀನಾಮೆ ಕೇಳಲು ಜನ ಸಿದ್ಧರಾದರು. ಹಳ್ಳಿ ಹಳ್ಳಿಗಳಿಂದ ಚಕ್ಕಡಿಗಳಲ್ಲಿ ಹುಲ್ಲು ಹೇರಿಕೊಂಡು ಬಂದ ಸುಮಾರು ಇಪ್ಪತ್ತೈದು ಸಾವಿರ ಜನ ಹುಬ್ಬಳ್ಳಿಯ ಗುಳಕವ್ವನ ಕಟ್ಟೆಯಲ್ಲಿ ಜಮಾಯಿಸಿದರು. ಅದೇ ಸಂದರ್ಭದಲ್ಲಿ ಅದೇ ಮೈದಾನದಲ್ಲಿ ಒಂದು ಸರ್ಕಸ್ ಕಂಪೆನಿ ಸಹ ಪ್ರದರ್ಶನ ನಡೆಸಿತ್ತು. ಬಹುತೇಕ ಕರ್ನಾಟಕದ ಎಲ್ಲ ಭಾಗಗಳ ಜನ ಅಲ್ಲಿ ಸೇರಿದ್ದರು. ಪುರಭವನಕ್ಕೆ ಕಾಂಗ್ರೆಸ್ ನಾಯಕರು ಆಗಮಿಸುತ್ತಿದ್ದಂತೆಯೇ ಜನರು ಧಿಕ್ಕಾರ ಹೇಳುತ್ತಾ ಸ್ವಾಗತಿಸುತ್ತಿದ್ದರು.

ಸಭೆ ನಡೆಯುತ್ತಿದ್ದ ಸ್ಥಳಕ್ಕೆ ಹೋದ ಕೆಲವರು ಕಾಂಗ್ರೆಸ್ ನಾಯಕರಿಗೆ ಅರಿಶಿನ-ಕುಂಕುಮ ಹಚ್ಚಿ, ಬಳೆ ತೊಡಿಸಿದರು. ಹಳ್ಳಿಕೇರಿ ಗುದ್ಲೆಪ್ಪನವರ ಜೀಪಿಗೆ ಯಾರೋ ಬೆಂಕಿ ಹಚ್ಚಿದರು. ಜನರನ್ನು ನಿಯಂತ್ರಿಸುವುದು ಕಷ್ಟ ಎಂದು ತಿಳಿದ ಪೋಲೀಸರು ಲಾಠೀಛಾರ್ಜ್ ಗೆ ಆಜ್ಞೆ ಮಾಡಿದರು. ಅದಕ್ಕೆ ಬೆದರದ ಜನ ಲಾಠಿಗಳಿಗೆ ಎದೆಯೊಡ್ಡಿ ನಿಂತರು. ಲಾಠೀಛಾರ್ಜ್ ಪರಿಣಾಮಕಾರಿ ಆಗಲಿಲ್ಲ ಎಂದು ಪೋಲೀಸರು ಗೋಲೀಬಾರ್ ಗೆ ಆದೇಶ ನೀಡಿದರು. ಜನರು ಅದಕ್ಕೂ ಎದೆಯೊಡ್ಡಿ ನಿಂತರು. ಈ ಎಲ್ಲ ವಿಷಯಗಳನ್ನು ಸ್ಥಳೀಯ ಪತ್ರಿಕೆಗಳಲ್ಲದೆ ನ್ಯೂಯಾರ್ಕ್ ಟೈಂಸ್ ಪತ್ರಿಕೆಯು ಮುಖ ಪುಟದಲ್ಲೇ ವರದಿ ಮಾಡಿತು. ಆ ಗಲಭೆಯಲ್ಲಿ ಕೆಲವರನ್ನು ಬಂಧಿಸಿ, ವಿಚಾರಣೆಗೆ ಗುರಿ ಪಡಿಸಲಾಯಿತು.

ಬಂಧಿತರಾಗಿದ್ದವರ ಪರವಾಗಿ ಎಸ್.ಆರ್.ಬೊಮ್ಮಾಯಿ ಅವರು ವಾದಿಸಿದರು. ಹುಬ್ಬಳ್ಳಿಯಲ್ಲಿ ಒಂದೆಡೆ ಗಲಭೆ ಆದರೆ, ಮತ್ತೊಂದೆಡೆ ಕೆ.ಪಿ.ಸಿ.ಸಿ. ಸಭೆ ನಡೆದು ಗದ್ದಲದ ನಡುವೆಯೇ ಕರ್ನಾಟಕ ಏಕೀಕರಣದ ಪರವಾಗಿ ನಿರ್ಣಯವನ್ನು ಸ್ವೀಕರಿಸಲಾಯಿತು. ಹುಬ್ಬಳ್ಳಿಯ ಗಲಭೆಯ ನಂತರ ಕರ್ನಾಟಕದ ಕಾಂಗ್ರೆಸ್ ನಾಯಕರು ಪ್ರಧಾನ ಮಂತ್ರಿ ನೆಹರೂ ಅವರನ್ನು ಏಕೀಕರಣಕ್ಕೆ ಒತ್ತಾಯಿಸತೊಡಗಿದರು. ಕಾಂಗ್ರೆಸ್ಸೇತರ ಪಕ್ಷಗಳ ಕೆಲವು ನಾಯಕರು ರಾಜ್ಯ ನಿರ್ಮಾಣವನ್ನೇ ಪ್ರಮುಖ ಗುರಿಯಾಗಿಟ್ಟುಕೊಂಡು ರೂಪಿಸಿದ ಸಂಸ್ಥೆಯೇ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು.

## ಮಿಶ್ರಾ ಸಮಿತಿ

ಈ ಮೊದಲೇ ಪ್ರಸ್ತಾಪಿಸಿರುವಂತೆ ೨೧-೪-೧೯೫೩ರಂದು, ಅಂದರೆ ಹುಬ್ಬಳ್ಳಿ ಗಲಭೆ ನಡೆದ ಎರಡು ದಿನಕ್ಕೆ ಬಳ್ಳಾರಿ ನಗರ ಮತ್ತು ತಾಲ್ಲೂಕಿನ ಸಮಸ್ಯೆಯ ಪರಿಶೀಲನೆಗೆ ಎಲ್.ಎಸ್.ಮಿಶ್ರಾ ಸಮಿತಿಯ ನೇಮಕ ಆಯಿತು. ಮಿಶ್ರಾ ಅವರು ೨೭-೪-೧೯೫೩ರಿಂದಲೇ ಬಳ್ಳಾರಿಯಲ್ಲಿ ವಿಚಾರಣೆಯನ್ನು ಆರಂಭಿಸಿದರು. ೧೦-೫-೧೯೫೩ರಂದು ಮಿಶ್ರಾ ವರದಿಯು ಸಲ್ಲಿಕೆಯಾಗಿ, ೧೩-೮-೧೯೫೩ರಿಂದ ೧೯-೮-೧೯೫೩ರವರೆಗೆ ಲೋಕಸಭೆಯಲ್ಲಿ ಆ ಬಗ್ಗೆ ಚರ್ಚೆನಡೆಯಿತು. ಚರ್ಚೆಯಲ್ಲಿ ಕರ್ನಾಟಕದ ಪರವಾಗಿ ಪ್ರಮುಖವಾಗಿ ಎಸ್.ನಿಜಲಿಂಗಪ್ಪ, ಅಳವಂಡಿ ಶಿವಮೂರ್ತಿ ಸ್ವಾಮಿ, ಟಿ.ಸುಬ್ರಹ್ಮಣ್ಯಂ, ಸ್ವಾಮಿ ರಮಾನಂದ ತೀರ್ಥ, ಎಂ.ಎಸ್.ಗುರುಪಾದ ಸ್ವಾಮಿ, ಎನ್.ರಾಚಯ್ಯ ಅವರು ಪಾಲ್ಗೊಂಡರು.

ಇವರೆಲ್ಲರ ಚರ್ಚೆಯಲ್ಲಿ ಬಳ್ಳಾರಿಯಂತೆಯೇ ಮದ್ರಾಸ್ ಸರ್ಕಾರಕ್ಕೆ ಸೇರಿಕೊಂಡ ದಕ್ಷಿಣ ಕನ್ನಡ, ನೀಲಗಿರಿ, ಕೊಳ್ಳೇಗಾಲ ಭಾಗಗಳೂ ಆ ಸಂದರ್ಭದಲ್ಲೇ ಮೈಸೂರು ಸಂಸ್ಥಾನಕ್ಕೆ ಸೇರುವುದು ಸೂಕ್ತ ಎಂಬ ವಿಚಾರವು ಪ್ರಮುಖವಾಗಿತ್ತು. ಸಚಿವ ಸಂಪುಟವು ಮಿಶ್ರಾ ವರದಿಯನ್ನು ೨೦-೫-೧೯೫೩ರಂದು ಸ್ವೀಕರಿಸಿತು. ಬಳ್ಳಾರಿ ತಾಲ್ಲೂಕು ಇಡಿಯಾಗಿ, ಕೆಲವು ತಾತ್ಕಾಲಿಕ ಏರ್ಪಾಡುಗಳಿಗೆ ಒಳಪಟ್ಟು ಮೈಸೂರು ಸಂಸ್ಥಾನಕ್ಕೆ ಸೇರಬೇಕು ಎಂಬುದು ಮಿಶ್ರಾ ವರದಿಯ ಪ್ರಮುಖ ಅಂಶವಾಗಿತ್ತು.

## ಅ.ಕ.ರಾ.ನಿ. ಪರಿಷತ್ತು

ಅ.ಕ.ರಾ.ನಿ.ಪರಿಷತ್ತಿನ ಮೊದಲ ಅಧಿವೇಶನ ೨೮-೫-೧೯೫೩ರಂದು ದಾವಣಗೆರೆಯಲ್ಲಿ ನಡೆಯಿತು. ಕೆ.ಆರ್.ಕಾರಂತ ಅದರ ಅಧ್ಯಕ್ಷತೆ ವಹಿಸಿದ್ದರು. ಉದ್ಘಾಟನೆ ಮಾಡಿದವರು ಅಳವಂಡಿ ಶಿವಮೂರ್ತಿ ಸ್ವಾಮಿ. ೧೯೫೩ರ ಸೆಪ್ಟೆಂಬರ್ ಮೊದಲ ವಾರದಲ್ಲಿ 'ಕರ್ನಾಟಕ ವಾರ'ವನ್ನು ಆಚರಿಸಲು ಅ.ಕ.ರಾ.ನಿ.ಪರಿಷತ್ತು ಕರೆ ನೀಡಿತು. ವಿದ್ಯಾರ್ಥಿಗಳು, ವ್ಯಾಪಾರಿಗಳು, ನಾಗರಿಕರು ಒಂದಾಗಿ ಹರತಾಳ, ಸಭೆ, ಮೆರವಣಿಗೆಗಳನ್ನು ನಡೆಸಿದರು. ಅ.ಕ.ರಾ.ನಿ.ಪರಿಷತ್ತಿನ ಹಲವು ಮುಖಂಡರನ್ನು ಮುಂಬಯಿ ಸರ್ಕಾರವು ಬಂಧಿಸಿತು. ಇದನ್ನು ಪ್ರತಿಭಟಿಸಿ ಅ.ಕ.ರಾ. ನಿ. ಪರಿಷತ್ತು ೨೬-೯-೧೯೫೩ರಂದು ಪ್ರತಿಭಟನಾ ದಿನವನ್ನು ಆಚರಿಸಿತು.

೧೪-೯-೧೯೫೩ರಂದು ಎಸ್.ನಿಜಲಿಂಗಪ್ಪನವರ ನೇತೃತ್ವದಲ್ಲಿ ಕೆ.ಪಿ.ಸಿ.ಸಿ.ನಿಯೋಗವು ಪ್ರಧಾನಿ ನೆಹರೂ ಅವರನ್ನು ಭೇಟಿ ಮಾಡಿ, ಹುಬ್ಬಳ್ಳಿಯ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೋಲಾಗಿ, ಕರ್ನಾಟಕ ಏಕೀಕರಣ ಪಕ್ಷದ ಅಭ್ಯರ್ಥಿಗೆ ಗೆಲುವಾಗಿರುವುದನ್ನು ಪ್ರಸ್ತಾಪಿಸಿದರು. ಆಗ ನೆಹರೂ ಅವರು ಇಡಿಯಾಗಿ ಭಾರತಕ್ಕೆ ಸಂಬಂಧಿಸಿದಂತೆಯೇ ರಾಜ್ಯ ಪುನರ್ವಿಂಗಡಣಾ ಆಯೋಗವೊಂದನ್ನು ಸಧ್ಯದಲ್ಲೇ ರಚಿಸುವುದಾಗಿ ಭರವಸೆ ನೀಡಿದರು.

ಮೈಸೂರಿಗೆ ಬಳ್ಳಾರಿ ಸೇರ್ಪಡೆ

೧-೧೦-೧೯೫೩ರಂದು ಆಂಧ್ರ ಪ್ರಾಂತದ ಉದಯವಾಯಿತು. ಅದೇ ದಿನ ಬಳ್ಳಾರಿಯು ಮೈಸೂರು ಸಂಸ್ಥಾನದೊಡನೆ ವಿಲೀನಗೊಂಡಿತು. ೨-೧೦-೧೯೫೩ರಂದು ಬಳ್ಳಾರಿಯ ಬಿ.ಡಿ.ಎ.ಎ. ಮೈದಾನದಲ್ಲಿ ಬಳ್ಳಾರಿ-ಮೈಸೂರು ವಿಲೀನ ಸಮಾರಂಭ ನಡೆಯಿತು. ಅದರಲ್ಲಿ ಮೈಸೂರು ರಾಜ್ಯದ ಮುಖ್ಯಮಂತ್ರಿ ಕೆ.ಹನುಮಂತಯ್ಯ ಪಾಲ್ಗೊಂಡು, ಬಳ್ಳಾರಿಯ ಜನತೆಯನ್ನು ಮೈಸೂರು ರಾಜ್ಯಕ್ಕೆ ಸ್ವಾಗತಿಸಿದರು. ಈ ಸಂತೋಷದ ಸಮಾರಂಭಕ್ಕೆ ಸಿದ್ಧತೆ ಮಾಡುತ್ತಿದ್ದ ರಂಜಾನ್ ಸಾಹೇಬ್ ಎಂಬ ಕನ್ನಡ ಪ್ರೇಮಿ ಕೆಲವು ದುಷ್ಟರ ಸಂಚಿಗೆ ಸಿಕ್ಕಿ ೩೦-೯-೧೯೫೩ರ ರಾತ್ರಿ ಆಸಿಡ್ ಬಲ್ಬ್ ಗೆ ಬಲಿಯಾದದ್ದು ಆ ಸಂದರ್ಭದ ಕಹಿ ನೆನಪಾಗಿದೆ.

ಅ.ಕ.ರಾ.ನಿ.ಪರಿಷತ್ತಿನ ಎರಡನೆಯ ಅಧಿವೇಶನವು ೩-೧೨-೧೯೫೩ರಂದು ಹಂಪೆಯಲ್ಲಿ ನಡೆಯಿತು. ಆ ಸಂದರ್ಭದಲ್ಲಿ ಅಳವಂಡಿ ಶಿವಮೂರ್ತಿ ಸ್ವಾಮಿಯವರನ್ನು ಪರಿಷತ್ತು ತನ್ನ 'ಡಿಕ್ಟೇಟರ್'ಎಂದು ನಾಮಕರಣ ಮಾಡಿತು. ೨೨-೧೨-೧೯೫೩ರಂದು ನೆಹರೂ ಅವರು ಲೋಕಸಭೆ ಯಲ್ಲಿ ಭಾರತದ ರಾಜ್ಯಗಳ ಪುನರ್ವಿಂಗಡನೆಗಾಗಿ ಫಜಲ್ ಆಲಿ ಅವರ ಅಧ್ಯಕ್ಷತೆಯಲ್ಲಿ ವರಿಷ್ಠ ಸಮಿತಿಯೊಂದನ್ನು ನೇಮಿಸಲಿರುವುದಾಗಿ ಘೋಷಿಸಿದರು. ೨೯-೧೨-೧೯೫೩ರಂದು ರಾಜ್ಯ ಪುನರ್ವಿಂಗಡಣಾ ಆಯೋಗದ ನೇಮಕವಾಯಿತು.

## ರಾಜ್ಯ ಪುನರ್ವಿಂಗಡಣಾ ಆಯೋಗ

ಆಯೋಗದ ಅಧ್ಯಕ್ಷರಾಗಿ ಒರಿಸ್ಸ ರಾಜ್ಯಪಾಲರಾಗಿದ್ದ ಫಜಲ್ ಅಲಿ ಮತ್ತು ಸದಸ್ಯರಾಗಿ ರಾಜ್ಯಸಭಾ ಸದಸ್ಯ ಹೃದಯನಾಥ ಕುಂಜ್ರೂ ಮತ್ತು ಈಜಿಪ್ಟಿನಲ್ಲಿ ಭಾರತದ ರಾಯಭಾರಿಯಾಗಿದ್ದ ಕೆ.ಎಂ.ಪಣಿಕ್ಕರ್ ನಾಮಕರಣಗೊಂಡಿದ್ದರು. ೩೦-೬-೧೯೫೫ರ ಒಳಗೆ ವರದಿಯನ್ನು ಸಲ್ಲಿಸಲು ಆಯೋಗಕ್ಕೆ ಸೂಚನೆ ನೀಡಲಾಯಿತು. ೨೩-೨-೧೯೫೪ರಂದು ಆಯೋಗವು ನೀಡಿದ ಪತ್ರಿಕಾ ಪ್ರಕಟಣೆಗೆ ಉತ್ತರವಾಗಿ ಸುಮಾರು ೧,೫೨,೨೫೦ ಮನವಿಗಳು ಸ್ವೀಕೃತವಾದುವು. ಅವುಗಳಲ್ಲಿ ಸುಮಾರು ೨೦೦೦ ಮನವಿಗಳು ವಿಸ್ತೃತವಾಗಿದ್ದವು. ಜೊತೆಗೆ ೧೯೫೪ರ ಮಾರ್ಚ್ ತಿಂಗಳಿನ ಆರಂಭದಲ್ಲಿ ಆರಂಭವಾದ ಗೌಪ್ಯ ಸಂದರ್ಶನ ಕಾರ್ಯಕ್ರಮ ಮುಗಿದದ್ದು ೧೯೫೪ರ ಅಂತ್ಯಕ್ಕೆ.

೮-೪-೧೯೫೪ರಿಂದ ದೇಶದ ವಿವಿಧ ಭಾಗಗಳಲ್ಲಿ ಸಂಚರಿಸಿದ ಆಯೋಗವು ಸುಮಾರು ೯೦೦೦ ವ್ಯಕ್ತಿಗಳನ್ನು ಸಂದರ್ಶಿಸಿತು. ಅಂತಿಮವಾಗಿ ಆಯೋಗವು ತನ್ನ ವರದಿಯನ್ನು ೩೦-೯-೧೯೫೫ ರಂದು ಸಲ್ಲಿಸಿತು. ನೇಮಕಗೊಂಡ ತಕ್ಷಣವೇ ತನ್ನ ಕಾರ್ಯವನ್ನು ಆರಂಭಿಸಿದ ಆಯೋಗವು ವಿಳಂಬಕ್ಕೆ ಅವಕಾಶವಿಲ್ಲದಂತೆ ಕಾರ್ಯತತ್ಪರವಾಯಿತು. ೧೯೫೪ರಲ್ಲಿ ಕಲ್ಕತ್ತೆಯಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ರಾಜ್ಯ ಪುನರ್ವಿಂಗಡಣೆಗೆ ಸಂಬಂಧಿಸಿದಂತೆ ಪ್ರಾಂತಿಯ ಕಾಂಗ್ರೆಸ್ ಸಮಿತಿಗಳು ಮನವಿಯನ್ನು ಸಲ್ಲಿಸಬಹುದೆಂದು ತೀರ್ಮಾನವಾಯಿತು.

ಅನಂತರ ಹುಬ್ಬಳ್ಳಿ ಯಲ್ಲಿ ೪-೨-೧೯೫೪ರಂದು ನಡೆದ ಕೆ.ಪಿ.ಸಿ.ಸಿ. ಮಹಾಸಭೆಯು, ೨೯-೪-೧೯೪೯ರಂದು ದಾವಣಗೆರೆಯಲ್ಲಿ ನಡೆದ ಅಖಿಲ ಕರ್ನಾಟಕ ಪ್ರತಿನಿಧಿಗಳ ಸಮ್ಮೇಳನದಲ್ಲಿ ಬಿ.ಬಸವಲಿಂಗಪ್ಪನವರು ಮಂಡಿಸಿ, ಕೋ.ಚೆನ್ನಬಸಪ್ಪನವರು ಅನುಮೋದಿಸಿದ್ದ ನಿರ್ಣಯದ ಪ್ರಕಾರ ಕೆ.ಪಿ.ಸಿ.ಸಿ.ಯು ಎಲ್ಲಾ ಕನ್ನಡಿಗರ ಪರವಾಗಿ ಮನವಿಯನ್ನು ಸಿದ್ಧಪಡಿಸಿ, ರಾಜ್ಯ ಪುನರ್ವಿಂಗಡಣಾ ಆಯೋಗಕ್ಕೆ ಸಲ್ಲಿಸಲು ವ್ಯವಸ್ಥೆ ಮಾಡುವ ಅಧಿಕಾರವನ್ನು ಎಸ್.ನಿಜಲಿಂಗಪ್ಪನವರಿಗೆ ನೀಡಿತು.

### ರಾಜ್ಯ ಪುನರ್ವಿಂಗಡಣಾ ಆಯೋಗಕ್ಕೆ ಮನವಿ ಸಲ್ಲಿಕೆ

ಆರ್.ಎ.ಜಹಗೀರದಾರ್ ಅವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಸಮಿತಿಯು, ಆ ವರೆಗಿನ ಎಲ್ಲಾ ಬೆಳವಣಿಗೆಗಳನ್ನೂ ಗಮನದಲ್ಲಿಟ್ಟುಕೊಂಡು, ಆವರೆಗಿನ ಎಲ್ಲಾ ಅಧ್ಯಯನಗಳನ್ನು ಆಧರಿಸಿ ಸಿದ್ಧಪಡಿಸಿದ ಮನವಿಯನ್ನು ಆಯೋಗಕ್ಕೆ ಸಲ್ಲಿಸಿತು. ಇಡಿಯಾಗಿ ಮೈಸೂರು ಸಂಸ್ಥಾನ, ಮುಂಬಯಿ ಕರ್ನಾಟಕದ ಧಾರವಾಡ, ಉತ್ತರ ಕನ್ನಡ ಜಿಲ್ಲೆ, ಬೆಳಗಾಂವಿ ಮತ್ತು ಬಿಜಾಪುರ ಜಿಲ್ಲೆಗಳು ಸಂಪೂರ್ಣವಾಗಿ ಮತ್ತು ಅವುಗಳಿಗೆ ಹೊಂದಿಕೊಂಡ ಕೆಲವು ಪ್ರದೇಶಗಳು, ಹೈದರಾಬಾದ್ ಭಾಗದ ಬೀದರ್, ಗುಲಬರ್ಗ ಮತ್ತು ರಾಯಚೂರು ಜಿಲ್ಲೆಗಳು, ಮದ್ರಾಸ್ ರಾಜ್ಯದ ದಕ್ಷಿಣ ಕನ್ನಡ ಹಾಗೂ ನೀಲಗಿರಿ ಜಿಲ್ಲೆಗಳು ಮತ್ತು ಹೊಂದಿಕೊಂಡ ಕೊಯಮತ್ತೂರು, ಸೇಲಂ ಜಿಲ್ಲೆಯ ಭಾಗಗಳು ಹಾಗೂ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆ ಮತ್ತು ಕರ್ನೂಲು ಜಿಲ್ಲೆಯ ಕೆಲವು ಭಾಗಗಳು ಮತ್ತು ಕೊಡಗು ಜಿಲ್ಲೆಯನನ್ನಿ ಸೇರಿಸಿ, ಕರ್ನಾಟಕ ರಾಜ್ಯವನ್ನು ನಿರ್ಮಿಸಲು ಕೆ.ಪಿ.ಸಿ.ಸಿ.ಯು ಮನವಿ ಮಾಡಿತು.

ಅಂತೆಯೇ ದಾವಣಗೆರೆಯ ಅಖಿಲ ಕರ್ನಾಟಕ ಪ್ರತಿನಿಧಿ ಸಮಾವೇಶ, ಗುಡಿಬಂಡೆ ಪುರಸಭೆ, ಹುಬ್ಬಳ್ಳಿಯ ಬಹುತೇಕ ಸಂಘ-ಸಂಸ್ಥೆಗಳು ಮತ್ತು ಗಣ್ಯರು, ಅ.ಕ.ರಾ.ನಿ. ಪರಿಷತ್ತು, ಮಂಗಳೂರಿನ ಅನೇಕ ಸಂಘ-ಸಂಸ್ಥಗಳು, ಬೆಳಗಾವಿಯಲ್ಲಿ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಸಮಿತಿ, ಬೆಳಗಾಂವಿ ನಗರ ಕಾಂಗ್ರೆಸ್ ಸಮಿತಿ, ಕೆ.ಎಲ್.ಇ.ಸೊಸೈಟಿ ಮುಂತಾದ ಸಂಘ-ಸಂಸ್ಥೆಗಳಲ್ಲದೆ ಅಲ್ಲಿಯ ಅಲ್ಪಸಂಖ್ಯಾತ ಜನಾಂಗದವರು ತಾವು ಕರ್ನಾಟಕದ ಪರ ಇರುವುದನ್ನು ತಿಳಿಸಿದರು. ಬೆಂಗಳೂರಿನಲ್ಲೂ ಆಯೋಗವು ಹಲವಾರು ಗಣ್ಯರನ್ನು ಕಂಡು ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿತು. ಇದೇ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಮುಖ್ಯಮಂತ್ರಿ ಕೆ.ಹನುಮಂತಯ್ಯನವರು, ರಾಜ್ಯದಾದ್ಯಂತ ಸಂಚರಿಸುತ್ತಾ ಸಂಸ್ಥಾನವು ಕರ್ನಾಟಕ ಏಕೀಕರಣದ ಪರ ಇರುವುದನ್ನು ಜನತೆಗೆ ಮನದಟ್ಟು ಮಾಡಿಕೊಡುತ್ತಿದ್ದರು.

೧೦-೧೦-೧೯೫೫ ರಂದು ಆಯೋಗವು ಕೇಂದ್ರ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ರಾ.ಪು.ಆಯೋಗವು ಶಿಫಾರಸು ಮಾಡಿದ್ದ ಪ್ರಕಾರ ಕರ್ನಾಟಕವು ಈ ಕೆಳಕಂಡ ಪ್ರದೇಶಗಳನ್ನು ಸೇರಿಸಿಕೊಂಡು ರಚನೆ ಆಗಬೇಕಾಗಿತ್ತು.

೧. ಹಾಲಿ ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಸಿರಗುಪ್ಪ, ಹೊಸಪೇಟೆ ತಾಲ್ಲೂಕುಗಳು ಮತ್ತು ತುಂಗಭದ್ರಾ ಅಣೆ ಕಟ್ಟು ಇರುವ ಮಲ್ಲಾಪುರ ಉಪ ತಾಲ್ಲೂಕಿನ ಸ್ವಲ್ಪ ಭಾಗಗಳನ್ನು ಬಿಟ್ಟು ಈಗ ಇರುವ ಮೈಸೂರು ರಾಜ್ಯ.

೨. ಮುಂಬಯಿ ರಾಜ್ಯದ ದಕ್ಷಿಣದ ಧಾರವಾಡ, ಬಿಜಾಪುರ, ಉತ್ತರ ಕನ್ನಡ ಮತ್ತು ಚಾಂದಗಡ ತಾಲ್ಲೂಕನ್ನುಳಿದು ಬೆಳಗಾಂವಿ - ಈ ನಾಲ್ಕೂ ಜಿಲ್ಲೆಗಳು

೩. ರಾಯಚೂರು ಮತ್ತು ಗುಲಬರ್ಗ ಜಿಲ್ಲೆಗಳು

೪. ಕಾಸರಗೋಡು ತಾಲ್ಲೂಕನ್ನುಳಿದು ದಕ್ಷಿಣ ಕನ್ನಡ ಜಿಲ್ಲೆ

೫. ಮದ್ರಾಸ್ ರಾಜ್ಯದ ಕೊಯಮತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು

೬. ಕೊಡಗು

ಈ ವರದಿಯಿಂದ ಕನ್ನಡಿಗರಿಗೆ ಆಘಾತವಾಯಿತು. ಕೇವಲ ಎರಡು ವರ್ಷದ ಹಿಂದೆ ಸೇರಿದ್ದ ಬಳ್ಳಾರಿ ಜಿಲ್ಲೆಯ ಮೂರು ತಾಲ್ಲೂಕುಗಳು ,ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು ತಾಲ್ಲೂಕು, ಇಡಿಯಾಗಿ ಬೀದರ್ ಜಿಲ್ಲೆ ಕರ್ನಾಟಕಕ್ಕೆ ಸೇರಿರಲಿಲ್ಲ. ಕಾಸರಗೋಡಿನ ಜನರಿಗೆ ನೋವಾಗಿತ್ತು. ಅದನ್ನು ಆ ಭಾಗದ ಕವಿ ಕಯ್ಯಾರ ಕಿಂಞ್ಞಣ್ಣರೈ ತಮ್ಮ 'ಬೆಂಕಿ ಬಿದ್ದಿದೆ ಮನೆಗೆ 'ಕವನದಲ್ಲಿ ಅಭಿವ್ಯಕ್ತಿ ಮಾಡಿದ್ದಾರೆ. ಬಳ್ಳಾರಿಯ ಭಾಗದ ಜನರು ೧೬-೧೧-೧೯೫೫ರಿಂದ ನೀರಿನ ಸತ್ಯಾಗ್ರಹವನ್ನು ಆರಂಭಿಸಿದರು. ಮಹಿಳೆ, ಮಕ್ಕಳೆನ್ನದೆ ಬಳ್ಳಾರಿಯ ಆಸುಪಾಸಿನ ಜನತೆ ಈ ಚಳವಳಿ ಯಲ್ಲಿ ಭಾಗವಹಿಸಿತು. ರಾ.ಪು. ಆಯೋಗದ ವರದಿಯ ಬಗ್ಗೆ ಸಾರ್ವಜನಿಕರಿಗೆ ಇದ್ದ ಅಭಿಪ್ರಾಯಗಳನ್ನು ಗಮನಿಸಿಯೇ ಲೋಕಸಭೆಯಲ್ಲಿ ಸುದೀರ್ಘ ಚರ್ಚೆ ನಡೆದು ೧೬-೩-೧೯೫೬ರಂದು ಭಾರತ ಸರ್ಕಾರವು ವಿಧೇಯಕವನ್ನು ಮಂಡಿಸಿತು.

ಆ ಪ್ರಕಾರ ಕೆಳಕಂಡ ಭಾಗಗಳು ಸೇರಿ ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕಾಗಿತ್ತು.

೧. ಇಡಿಯಾಗಿ ಮೈಸೂರು ರಾಜ್ಯ.

೨. ಮುಂಬಯಿ ರಾಜ್ಯದ ಬಿಜಾಪುರ, ಧಾರವಾಡ, ಉತ್ತರ ಕನ್ನಡ ಮತ್ತು ಬೆಳಗಾಂವಿ (ಚಾಂದಗಡ ತಾಲ್ಲೂಕನ್ನು ಬಿಟ್ಟು) ಜಿಲ್ಲೆಗಳು

೩. ಹೈದರಾಬಾದ್ ರಾಜ್ಯದ ಗುಲಬರ್ಗಾ ಜಿಲ್ಲೆ(ಕೋಡಂಗಲ್ಲು ಮತ್ತು ತಾಂಡೂರು ತಾಲ್ಲೂಕುಗಳನ್ನು ಬಿಟ್ಟು), ರಾಯಚೂರು ಜಿಲ್ಲೆ(ಆಲಂಪುರ ಮತ್ತು ಗದ್ವಾಲ ತಾಲ್ಲೂಕುಗಳನ್ನು ಬಿಟ್ಟು) ಮತ್ತು ಬೀದರ್ ಜಿಲ್ಲೆಯ ಬೀದರ್, ಭಾಲ್ಕಿ, ಔರಾದ್, ಹುಮನಾಬಾದ್ ತಾಲ್ಲುಕುಗಳು

೪. ಮದ್ರಾಸ್ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆ (ಕಾಸರಗೋಡು ತಾಲ್ಲೂಕು ಮತ್ತು ಅಮೀನ್ ದ್ವೀಪಗಳನ್ನು ಬಿಟ್ಟು) ಮತ್ತು ಕೊಯಮತ್ತೂರು ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕು

೫. ಕೊಡಗು

ರಾ.ಪು. ಆಯೋಗದ ಶಿಫಾರಸುಗಳ ಪ್ರಕಾರ ಬೀದರ್ ಜಿಲ್ಲೆಯ ಬಸವಕಲ್ಯಾಣ ಮಹಾರಾಷ್ಟ್ರ ಪ್ರಾಂತಕ್ಕೂ, ಗದ್ವಾಲ್ ತಾಲ್ಲೂಕು ಕರ್ನಾಟಕಕ್ಕೂ ಸೇರಬೇಕಾಗಿತ್ತು. ಆದರೆ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದ ನಾಯಕರ ನಡುವೆ ಸಮಾಲೋಚನೆ ನಡೆಸಿ, ಆದ ಒಪ್ಪಂದದ ಪ್ರಕಾರ ಬಸವಕಲ್ಯಾಣವು ಬೀದರ್ ಜಿಲ್ಲೆಗೂ ಗದ್ವಾಲ್ ತಾಲ್ಲೂಕನ್ನು ಆಂಧ್ರಕ್ಕೂ ಸೇರಿಸಲಾಯಿತು. ಲೋಕಸಭೆಯಲ್ಲಿ ವಿಧೇಯಕದ ಮಂಡನೆ ಮತ್ತು ಸ್ವೀಕಾರ : ವಿಧೇಯಕವನ್ನು ಎಲ್ಲಾ ರಾಜ್ಯಗಳ ವಿಧಾನ ಮಂಡಲಗಳೂ ಒಪ್ಪಿದ ನಂತರ, ೧೮-೪-೧೯೫೬ರಂದು ಗೃಹ ಸಚಿವ ಗೋವಿಂದ ವಲ್ಲಭ ಪಂತರು ಲೋಕಸಭೆಯಲ್ಲಿ ಮಂಡಿಸಿದರು. ಮೂರು ದಿನಗಳ ಚರ್ಚೆಯ ನಂತರ ವಿಧೇಯಕವನ್ನು ಸಂಯುಕ್ತ ಪರಿಶೀಲಕ ಸಮಿತಿಗೆ ಕಳುಹಿಸಲು ನಿರ್ಣಯ ಮಾಡಲಾಯಿತು. ಈ ನಿರ್ಣಯವನ್ನು ೨-೫-೧೯೫೬ರಂದು ರಾಜ್ಯಸಭೆಯೂ ಒಪ್ಪಿತು.

ಅರವತ್ತು ಜನರಿದ್ದ ಸಂಯುಕ್ತ ಪರಿಶೀಲನ ಸಮಿತಿಯಲ್ಲಿ ಕನ್ನಡಿಗರಾದ ಎಸ್.ನಿಜಲಿಂಗಪ್ಪ, ಬಿ.ಎನ್.ದಾತಾರ್ ಮತ್ತು ಶ್ರೀನಿವಾಸ ಮಲ್ಯ ಇದ್ದರು. ಪರಿಶೀಲಕ ಸಮಿತಿಯು ಪರಿಶೀಲಿಸಿದ ವಿಧೇಯಕವು ಲೋಕಸಭೆಯ ಮುಂದೆ ೨೬-೭-೧೯೫೬ರಂದು ಚರ್ಚೆಗೆ ಬಂದು ೧೦-೮- ೧೯೫ ೬ ರಂದು ಸ್ವೀಕರಿಸಲ್ಪಟ್ಟಿತು. ೧೬-೮-೧೯೫೬ರಿಂದ ೨೩-೮-೧೯೫೬ರವರೆಗೆ ವಿಧೇಯಕದ ಬಗ್ಗೆ ರಾಜ್ಯ ಸಭೆಯಲ್ಲೂ ಚರ್ಚೆ ನಡೆದು, ಅಲ್ಲಿಯೂ ಒಪ್ಪಿಗೆ ದೊರೆಯಿತು. ೩೧-೮-೧೯೫೬ರಂದು ರಾ.ಪು.ವಿಧೇಯಕಕ್ಕೆ ರಾಷ್ಟ್ರಪತಿಗಳ ಅಂಗೀಕಾರವೂ ದೊರೆಯಿತು. *೧೯೫೬ರ ನವೆಂಬರ್ ಒಂದರಂದು ಪುನರ್ವಿಂಗಡಣೆಗೊಂಡ ರಾಜ್ಯಗಳೆಲ್ಲವೂ ಅಸ್ತಿತ್ವಕ್ಕೆ ಬರುವುವೆಂಬ ಸಾರ್ವಜನಿಕ ಪ್ರಕಟಣೆ ಹೊರಬಿದ್ದಿತು. ಹೊಸದಾಗಿ ನಿರ್ಮಾಣಗೊಂಡ ಕನ್ನಡಿಗರ ರಾಜ್ಯದ ಹೆಸರು 'ಮೈಸೂರು' ಎಂದೇ ಉಳಿಯಿತು. ಕಾಸರಗೋಡು ಮತ್ತು ಸೊಲ್ಲಾಪುರಗಳು ಕರ್ನಾಟಕದಿಂದ ಹೊರಗುಳಿದದ್ದು ನೋವಿನ ವಿಷಯವಾಯಿತು. ಎಲ್ಲಾ ಕನ್ನಡ ಪ್ರದೇಶಗಳ ವಿಧಾನ ಸಭಾ ಸದಸ್ಯರೂ ೨೧-೧೦-೧೯೫೬ರಂದು ಬೆಂಗಳೂರಿನಲ್ಲಿ ಸಭೆ ಸೇರಿ ಎಸ್.ನಿಜಲಿಂಗಪ್ಪನವರನ್ನು ತಮ್ಮ ನಾಯಕನನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿಕೊಂಡರು. ಮೈಸೂರು ಸಂಸ್ಥಾನ ಮತ್ತು ಕರ್ನಾಟಕ

ಪ್ರದೇಶಗಳೆರಡರ ಜೊತೆಗೂ ಸಂಪರ್ಕ ಹೊಂದಿದ್ದ ನಿಜಲಿಂಗಪ್ಪನವರು ಏಕೀಕರಣಗೊಂಡ ಕರ್ನಾಟಕದ ಪ್ರಥಮ ಮುಖ್ಯಮಂತ್ರಿ ಆದರು.

## 'ವಿಶಾಲ ಮೈಸೂರು' ರಾಜ್ಯದ ಉದ್ಘಾಟನೆ

೧೯೫೬ರ ನವೆಂಬರ್ ಒಂದನೆಯ ತಾರೀಕು ಬೆಳಗ್ಗೆ ನಡೆದ ಸಮಾರಂಭದಲ್ಲಿ 'ವಿಶಾಲ ಮೈಸೂರು' ರಾಜ್ಯವನ್ನು ರಾಷ್ಟ್ರಪತಿ ಬಾಬೂ ರಾಜೇಂದ್ರ ಪ್ರಸಾದ್ ಉದ್ಘಾಟಿಸಿದರು. ಅಂದೇ ಹೊಸ ರಾಜ್ಯದ ರಾಜ್ಯಪಾಲರಾಗಿ ಜಯಚಾಮರಾಜ ಒಡೆಯರ್ ಮತ್ತು ಮುಖ್ಯಮಂತ್ರಿಯಾಗಿ ಎಸ್.ನಿಜಲಿಂಗಪ್ಪ ಅವರು ಅಧಿಕಾರ ಸ್ವೀಕರಿಸಿದರು. ಅದೇ ದಿನ ಹಂಪೆಯಲ್ಲಿ ವಿರೂಪಾಕ್ಷನ ಸನ್ನಿಧಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ, ಕರ್ನಾಟಕ ಕುಲ ಪುರೋಹಿತರೆನಿಸಿ ಖ್ಯಾತರಾದ ಆಲೂರು ವೆಂಕಟರಾಯರ ನೇತೃತ್ವದಲ್ಲಿ ರಾಜ್ಯೋತ್ಸವ ಕಾರ್ಯಕ್ರಮ ನಡೆಯಿತು.

ಕನ್ನಡಿಗರ ಬಹು ದಿನಗಳ ಕನಸು ನನಸಾದರೂ, ಅನಂತಪುರ, ಮಡಕಶಿರಾ, ನೀಲಗಿರಿ, ಹೊಸೂರು, ಸೊಲ್ಲಾಪುರ, ಅಕ್ಕಲಕೋಟೆ ಮತ್ತು ಕಾಸರಗೋಡು ಪ್ರದೇಶಗಳು ವಿಶಾಲ ಮೈಸೂರಿನಲ್ಲಿ ವಿಲೀನವಾಗದೆ ಉಳಿದದ್ದು ಒಂದು ನೋವಾಗಿ ಈಗಲೂ ಕಾಡುತ್ತಿವೆ. 'ಕರ್ನಾಟಕ' ವಾದ 'ವಿಶಾಲ ಮೈಸೂರು' ೧೯೭೩ರ ನವೆಂಬರ್ ಒಂದನೆಯ ತಾರೀಕು ರಾಜ್ಯದ ಹೆಸರು 'ಕರ್ನಾಟಕ' ಎಂದು ಬದಲಾಯಿತು.

## ಮಹಾಜನ್ ಆಯೋಗದ ವರದಿ

ಬೆಳಗಾಂವಿ ನಗರ ತಮಗೆ ಸೇರಬೇಕೆಂದು ಮಹಾರಾಷ್ಟ್ರದ ರಾಜಕಾರಣಿಗಳು ತಗಾದೆ ಆರಂಭಿಸಿದಾಗ, ಬೆಳಗಾಂವಿ ಮತ್ತು ಕಾಸರಗೋಡಿನ ಸಮಸ್ಯೆಯನ್ನು ಬಗೆಹರಿಸಲು, ಮೊದಲಿಗೆ ಪಾಟಸ್ಕರ್ ಆಯೋಗ ಮತ್ತು ಅದರ ವರದಿ ಸಮರ್ಪಕ ಎನಿಸದಿದ್ದಾಗ ಮಹಾಜನ್ ಆಯೋಗದ ನೇಮಕ ಆಯಿತು. ಮೊದಲಿಗೆ ಮೈಸೂರಿನವರು ಮಹಾಜನ್ ಆಯೋಗವನ್ನು ಒಪ್ಪಲಿಲ್ಲ. ಆದರೆ ಮಹಾರಾಷ್ಟ್ರದವರು ಮಹಾಜನ್ ಆಯೋಗವೇ ಬೇಕು ಎಂದರು. ಮಹಾಜನ್ ಆಯೋಗದ ವರದಿಯ ಪ್ರಕಾರ ಬೆಳಗಾಂವಿ ಕರ್ನಾಟಕದಲ್ಲೇ ಉಳಿಯುತ್ತದೆ ಎಂದು ತಿಳಿದಾಗ ಮಹಾರಾಷ್ಟ್ರ ದವರು, ತಮ್ಮ ಮಾತನ್ನೇ ಮರೆತು ಮಹಾಜನ್ ವರದಿಯನ್ನು ತಿರಸ್ಕರಿಸುತ್ತಿದ್ದಾರೆ.

ಈ ಮಧ್ಯೆ ಕಾಸರಗೋಡು ಅತಂತ್ರವಾಗಿದೆ. ಮಹಾರಾಷ್ಟ್ರ-ಕರ್ನಾಟಕ-ಕೇರಳ ಗಡಿ ವಿವಾದವನ್ನು ಬಗೆಹರಿಸಲು ರಾಜಕಾರಣಿಗಳಿಗೆ ಆಸಕ್ತಿ ಇಲ್ಲವಾಗಿದೆ. ಈ ಚದುರಂಗದಾಟದಲ್ಲಿ ಗಡಿ ಭಾಗದ ಕನ್ನಡಿಗರು ನೋವಿನಿಂದ ನರಳುತ್ತಿದ್ದಾರೆ ಎಂಬುದನ್ನು ರಾಜಕಾರಣಿಗಳು ಅಲ್ಲಗಳೆಯ ಬಹುದು; ಜನತೆಯ ಅಳಲಿಗೆ ಪರಿಹಾರ ನೀಡಬಲ್ಲ ಜನ ಪ್ರತಿನಿಧಿಗಳು ಯಾವಾಗ ದೊರೆಯುತ್ತಾರೋ ಕಾದು ನೋಡಬೇಕಾಗಿದೆ.

ಧನಂಜಯ ಪಿ ಎಸ್

**M.A, B.E d.**

**Mail ID:**

**Dhananjayaps4@gmail.com**

**Ph: 9844442161**

**ಪುರವರ, ಮಧುಗಿರಿ ತಾ॥, ತುಮಕೂರು ಜಿಲ್ಲೆ.**


